ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಪ್ರವೇಶಿಸಿದ ಮೊದಲ ಭಾರತೀಯ ಗಗನಯಾತ್ರಿ ಎಂಬ ಹೆಗ್ಗಳಿಕೆ ಹೊಂದಿರುವ ಶುಭಾಂಶು ಶುಕ್ಲಾ ಅವರನ್ನು ಮಂಗಳವಾರ ಬೆಂಗಳೂರಿನ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಸಚಿವರಾದ ಎನ್.ಎ.ಭೋಸರಾಜು, ಮಧು ಬಂಗಾರಪ್ಪ, ಡಾ.ಶರಣ ಪ್ರಕಾಶ್ ಪಾಟೀಲ್ ಇದ್ದರು.

ಸೊಂಪಾದ ಪುಟಗಳು

ಮೇಕೆದಾಟು ತೀರ್ಪಿನ ಬಗ್ಗೆ ಸಂಭ್ರಮ ಪಡುವಂಥದ್ದೇನಿದೆ?
ಜನಪಥ
ರಾಘವ ಶರ್ಮ ನಿಡ್ಲೆ 6

ಕಾರ್ಮಿಕ ಕಾನೂನು ಕಾರ್ಮಿಕರ ಹಿತ ಕಾಯಬಲ್ಲುದೇ?
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ದಾರಿಯೇ ಕಾಣದ ಕತ್ತಲೆಯಲ್ಲೂ ಒಂದು ಬೆಳಕಿರುತ್ತದೆ. ಆ ಕತ್ತಲಲ್ಲಿರುವ ಬೆಳಕನ್ನು ನೋಡುವ ಶಕ್ತಿ ಬೆಳೆಸಿಕೊಳ್ಳಬೇಕು. ಕಣ್ಣಿಗೆ ಕತ್ತಲ ಬೆಳಕು ಹೊಂದಿಕೆಯಾದರೆ, ಬೆಳಕಿನ ಕೊರತೆಯೇ ಇರುವುದಿಲ್ಲ.

ವಕ್ರತುಂಡೋಕ್ತಿ

ಏನೂ ಕೆಲಸವಿಲ್ಲದೇ ಸುಮ್ಮನೆ ಕುಳಿತವರ ಮುಂದೆ ಕತ್ತರಿಯನ್ನು ಇಡಬಾರದು.

ಇಸ್ರೇಲ್ ಪ್ರಧಾನಿ ಭಾರತ ಭೇಟಿ ಮತ್ತೆ ಮುಂದಕ್ಕೆ

ದೆಹಲಿ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಭಾರತ ಭೇಟಿ ಮತ್ತೆ ಮುಂದೆ ಹೋಗಿದೆ. ವರ್ಷಾಂತ್ಯದಲ್ಲಿ ದೆಹಲಿಯಲ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ಉದ್ದೇಶಿಸಿದ್ದರು. ನ.10ರಂದು ದೆಹಲಿಯಲ್ಲಿ ನಡೆದ ಕಾರು ಸ್ಫೋಟದ ಹಿನ್ನೆಲೆಯಲ್ಲಿ, ಭದ್ರತೆಯ ಕಾರಣಗಳಿಂದಾಗಿ ಇಸ್ರೇಲ್ ಪ್ರಧಾನಿ ಭೇಟಿಯಲ್ಲಿ ಬದಲಾವಣೆಯಾಗಿದೆ ಎನ್ನಲಾಗಿದೆ.

ಅಹಿಂದ ಮತ ಕೈ ಬಿಡುವ ಆತಂಕ, ಸಿದ್ದು ಬದಲಾವಣೆಗೆ ಹಿಂಜರಿಕೆ
ಪಟ್ಟುಬಿಡಲು ಸಿದ್ದರಾಮಯ್ಯ, ಡಿಕೆಶಿ ಸಿದ್ಧರಿಲ್ಲ: ರಾಹುಲ್‌ಗೆ ಇಕ್ಕಟ್ಟು

ಸೂತ್ರದ ಹುಡುಕಾಟದಲ್ಲಿ ಹೈಕಮಾಂಡ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ 15 ದಿನಗಳಿಂದ ಸೂತ್ರವಿಲ್ಲದ ಗಾಳಿಪಟವಾಗಿರುವ ರಾಜ್ಯ ಕಾಂಗ್ರೆಸ್‌ಗೆ 'ಸೂತ್ರ'ವೊಂದನ್ನು ಹುಡುಕುವ ಪ್ರಯತ್ನವನ್ನು ಹೈಕಮಾಂಡ್ ಮುಂದುವರಿಸಿದೆ. ಈ ನಡುವೆ ಎರಡೂ ಬಣಗಳಲ್ಲಿಯೂ ತಮ್ಮ ತಮ್ಮ ಪಟ್ಟನ್ನು ಸಡಿಲಿಕೆ ಮಾಡಲು ಸಿದ್ಧವಿಲ್ಲದೇ ಇರುವುದು ಇದೀಗ ಹೈಕಮಾಂಡ್ ನಾಯಕರಿಗೆ ಬಿಸಿ ತುಪ್ಪವಾಗಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಐತಿಹಾಸಿಕ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದರಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರ ಪಾತ್ರವೂ ಇದೆ. ಆದರೆ ಅಧಿಕಾರ ಹಂಚಿಕೆಯ ವಿಷಯದಲ್ಲಿ ಇಬ್ಬರೂ ರಾಜಿಯಾಗಲು ಸಿದ್ಧವಿಲ್ಲದೇ ಇರುವುದು ಈಗ ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿದೆ. ಈ ನಡುವೆ ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹೀನಾಯ ಸೋಲು, ಅಹಿಂದ ನಾಯಕ ನಿತೀಶ್ ಕುಮಾರ್ ಪರ ಬಿಹಾರಿಗಳು ನಿಂತಿರುವುದನ್ನು ಗಮನಿಸಿರುವ ಕಾಂಗ್ರೆಸ್ ಕರ್ನಾಟಕದಲ್ಲಿ ಈ ಹಂತದಲ್ಲಿ 'ಬದಲಾವಣೆ'ಯ ಹುತ್ತಕ್ಕೆ ಕೈಹಾಕಿದರೆ ಏನಾಗುವುದೋ ಎನ್ನುವ ಆತಂಕದಲ್ಲಿದೆ.

ಈ ನಡುವೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು, ಸದ್ಯದ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಬದಲಾವಣೆ ಮಾಡಿದರೆ ಪಕ್ಷಕ್ಕೆ 'ನಷ್ಟ'ವಾಗುವುದು ಸ್ಪಷ್ಟ. ಇದರೊಂದಿಗೆ ಸದ್ಯದ ರಾಜ್ಯ ಬಿಜೆಪಿ ಪರಿಸ್ಥಿತಿ ನೋಡಿದರೆ ಮುಂದಿನ ಬಾರಿಯೂ ಅಧಿಕಾರಕ್ಕೆ ಬರುವುದು ಕಷ್ಟ. → 4

ಹೈಕಮಾಂಡ್ ಹಿಂಜರಿತಕ್ಕೆ ಕಾರಣ?

- ಅಹಿಂದ ನಾಯಕತ್ವದ ಪರ ಮತದಾರರಿರುವುದು ಬಿಹಾರ ಚುನಾವಣೆ ಫಲಿತಾಂಶದಿಂದ ಸಾಬೀತು.
- ಅಹಿಂದ ನಾಯಕ ಸಿದ್ದು ವಿರೋಧ ಕಟ್ಟಿಕೊಂಡರೆ, ಸಂಖ್ಯಾಬಲಕ್ಕೆ ಡ್ಯಾಮೇಜ್ ಆಗುವ ಆತಂಕ
- ಡಿ.ಕೆ.ಶಿವಕುಮಾರ್ ನಾಯಕತ್ವವನ್ನು ಎಲ್ಲ ಶಾಸಕರೂ ಒಪ್ಪುವುದಿಲ್ಲ, ಆದ್ದರಿಂದ ಬದಲಾವಣೆ ಬೇಡ
- ಇನ್ನೊಂದು ವರ್ಷದಲ್ಲಿ ನಾಲ್ಕು ರಾಜ್ಯಗಳ ಚುನಾವಣೆ ಇರುವುದೂ ಅಗ್ರ ನಾಯಕರ ಹಿಂಜರಿಕೆಗೆ ಕಾರಣ

ಬದಲಾವಣೆಯ ಒತ್ತಡ ಏಕೆ?

- ರಾಜ್ಯದ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲು ಸಿದ್ದರಾಮಯ್ಯರಷ್ಟೆ ಶಿವಕುಮಾರ್ ಶ್ರಮವೂ ಇದೆ
- ಕಾಂಗ್ರೆಸ್ ಅಧ್ಯಕ್ಷ ಖರ್ಗೆ ನಿವಾಸದಲ್ಲಿ ಆಗಿದೆ ಎನ್ನಲಾದ ಒಪ್ಪಂದದಂತೆ ನಡೆಯಬೇಕು ಎನ್ನುವ ಒತ್ತಡ
- ಸಿದ್ದರಾಮಯ್ಯಗೆ ಪೂರ್ಣಾವಧಿ ಅವಕಾಶ ಕೊಟ್ಟು, ಮುಂದಿನ ಬಾರಿ ಪಕ್ಷ ಸೋತುಹೋದರೆ ಎಂಬ ಚಿಂತೆ
- ಮುಂದೆ ಚುನಾವಣೆ ನಡೆಯುವ ರಾಜ್ಯಗಳಿಗೆ 'ಶಕ್ತಿ' ತುಂಬಲು ಶಿವಕುಮಾರ್‌ಗೆ ಅವಕಾಶ ಅನಿವಾರ್ಯ

ಎಲ್ಲ ಗೊಂದಲಗಳಿಗೆ ಹೈಕಮಾಂಡ್ ಅಂತ್ಯ ಹಾಡಬೇಕು. ಹೈಕಮಾಂಡ್ ಭೇಟಿ ಮಾಡಿ ಅಭಿಪ್ರಾಯ ತಿಳಿಸುವ ಸ್ವಾತಂತ್ರ್ಯ ಶಾಸಕರಿಗಿದೆ. ಪಕ್ಷದ ವರಿಷ್ಠರು ಏನು ಹೇಳುತ್ತಾರೆ ನೋಡೋಣ. ಸಂಪುಟ ವಿಸ್ತರಣೆಯನ್ನು ವರಿಷ್ಠರು ಸೂಚನೆ ನೀಡಿದಾಗ ಕೈಗೊಳ್ಳಲಾಗುವುದು. ಸದ್ಯಕ್ಕೆ ರಾಹುಲ್ ಭೇಟಿ ಮಾಡುವ ಇರಾದೆ ಇಲ್ಲ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಧಿಕಾರ ಹಸ್ತಾಂತರದ ವಿಷಯ ಐದಾರು ಜನರ ನಡುವಿನ ಗುಟ್ಟಿನ ವಿಚಾರ. ಇದನ್ನು ನಾನು ಬಹಿರಂಗ ಮಾಡುವುದಿಲ್ಲ. ಮುಖ್ಯಮಂತ್ರಿಗಳು ಹಿರಿಯ ನಾಯಕರು, ನಮ್ಮ ಪಕ್ಷದ ಆಸ್ತಿ. ನಾನು ಆತ್ಮಸಾಕ್ಷಿಯನ್ನು ನಂಬಿದ್ದೇನೆ. ಆತ್ಮಸಾಕ್ಷಿಗೆ ತಕ್ಕಂತೆ ನಾವು ಕೆಲಸ ಮಾಡಬೇಕು. ಪಕ್ಷಕ್ಕೆ ಮುಜುಗರ ತರಲು, ಪಕ್ಷವನ್ನು ದುರ್ಬಲಗೊಳಿಸಲು ನನಗೆ ಇಷ್ಟವಿಲ್ಲ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

500 ವರ್ಷಗಳ ಗಾಯ ಈಗ ವಾಸಿಯಾಗಿದೆ
ಧ್ವಜಾರೋಹಣ ನೆರವೇರಿಸಿದ ಪ್ರಧಾನಿ ಮೋದಿ

ಶ್ರೀರಾಮಮಂದಿರದಲ್ಲಿ ರಾರಾಜಿಸಿದ ಧರ್ಮಧ್ವಜ

ಅಯೋಧ್ಯಾ: ಮಾರ್ಗಶಿರ ಮಾಸದ ಶುಕ್ಲ ಪಕ್ಷ ಪಂಚಮಿಯಂದು ಶ್ರೀರಾಮ ಸೀತಾಮಾತೆಯನ್ನು ವಿವಾಹವಾಗಿದ್ದು. ಅಯೋಧ್ಯಾ ರಾಮಮಂದಿರದ ಕಾಮಗಾರಿಗಳು ಮುಕ್ತಾಯವಾದ ಹಿನ್ನೆಲೆಯಲ್ಲಿ, ಅದೇ ದಿನವಾದ ಮಂಗಳವಾರ ಮಂದಿರದ ಗೋಪುರದ ಮೇಲೆ ಧರ್ಮ ಧ್ವಜಾರೋಹಣವನ್ನು ಪ್ರಧಾನಿ ನರೇಂದ್ರ ಮೋದಿ ನೆರವೇರಿಸಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉಪಸ್ಥಿತಿರಿದ್ದು, ಮೋದಿಗೆ ಜೊತೆಯಾದರು. ಈ ವೇಳೆ ಮಾತನಾಡಿದ ಮೋದಿ, ಹಲವು ಶತಮಾನಗಳ ಗಾಯ ಈಗ ವಾಸಿಯಾಗುತ್ತಿದೆ ಎಂದು ಹೇಳಿದ್ದಾರೆ.

ಈ ಧರ್ಮಧ್ವಜ ಕೇವಲ ಧ್ವಜವಲ್ಲ, ಇದು ಭಾರತದ ನಾಗರಿಕತೆ ಪುನರುತ್ಥಾನಗೊಂಡಿದ್ದರ ಸಂಕೇತ. ಶತಮಾನಗಳ ಗಾಯ ಈಗ ವಾಸಿಯಾಗುತ್ತಿದೆ. 500 ವರ್ಷಗಳ ಹಿಂದೆ ಈ ಯಜ್ಞದ ಅಗ್ನಿಯನ್ನು ಬೆಳಗಲಾಗಿತ್ತು. → 4

ಇಸ್ರೇಲ್ ಅಭಿನಂದನೆ

ರಾಮಮಂದಿರದಲ್ಲಿ ಧರ್ಮ ಧ್ವಜಾರೋಹಣ ಮಾಡಿದ್ದಕ್ಕೆ ಇಸ್ರೇಲ್‌ನ ಭಾರತೀಯ ರಾಯಭಾರಿ ರೀಯುವೆನ್ ಅಜರ್ ಭಾರತಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಇಂತಹ ಮಹತ್ವದ ನಾಗರಿಕತೆಯ ಸಂಕೇತವನ್ನು ಮರುಸ್ಥಾಪಿಸಿದ್ದಕ್ಕೆ ಭಾರತಕ್ಕೆ ಅಭಿನಂದನೆಗಳು ಎಂದು ಹೇಳುವ ಮೂಲಕ ರಾಮಮಂದಿರಕ್ಕೆ ಸಂಬಂಧಿಸಿದ ತಮ್ಮ ಚಿತ್ರಗಳನ್ನು ಹಂಚಿಕೊಂಡಿದ್ದಾರೆ.

ಅಮೆರಿಕ, ಸೌದಿ, ಆಸೀಸ್‌ಗೆ ನಂದಿನಿ ತುಪ್ಪ ರಫ್ತು ಶುರು

ಬೆಂಗಳೂರು: ದಿನದಿಂದ ದಿನಕ್ಕೆ ನಂದಿನಿ ತುಪ್ಪಕ್ಕೆ ಬೇಡಿಕೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಅಂತಾರಾಷ್ಟ್ರೀಯವಾಗಿ ಬ್ರ್ಯಾಂಡ್ ಮಾಡಲು ಕೆಎಂಎಫ್ ಮುಂದಾಗಿದೆ. ಅಮೆರಿಕ, ಆಸ್ಟ್ರೇಲಿಯಾ ಹಾಗೂ ಸೌದಿ ಅರೇಬಿಯಾಕ್ಕೆ ನಂದಿನಿ ತುಪ್ಪವನ್ನು ರಫ್ತು ಮಾಡಲು ಕೆಎಂಎಫ್ ಮುಂದಾಗಿದೆ. ಮಂಗಳವಾರ ರಫ್ತು ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಇಥಿಯೋಪಿಯಾದಲ್ಲಿ ಜ್ವಾಲೆ: ಭಾರತದಲ್ಲಿ ವಿಮಾನ ವ್ಯತ್ಯಯ

ದೆಹಲಿ: ಆಫ್ರಿಕಾ ಖಂಡದ ಇಥಿಯೋಪಿಯಾ ದೇಶದಲ್ಲಿರುವ 'ಹೇಲೀ ಗುಬ್ಬಿ' ಜ್ವಾಲಾಮುಖಿ ಭಾನುವಾರ ಸ್ಫೋಟಗೊಂಡಿದೆ. ಈ ಸ್ಫೋಟದಿಂದ ಹೊಮ್ಮಿದ ಬೂದಿ ಭಾರತದವರೆಗೂ ಹಾರಿಬಂದಿದ್ದು, ಉತ್ತರ ಭಾರತದಲ್ಲಿ ವಿಮಾನ ಸಂಚಾರ ವ್ಯತ್ಯಯವಾಗಿದೆ. ಗಂಟೆಗೆ 100 ಕಿಮೀ ವೇಗದಲ್ಲಿ ಬೂದಿ ತೂರಿ ಬರುತ್ತಿದೆ.

ಅಪಘಾತ: ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ನಿಧನ

ಜೇವರ್ಗಿ: ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ ಮಂಗಳವಾರ ಇನ್ನೋವಾ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಐಎಎಸ್ ಅಧಿಕಾರಿ ಮಹಾಂತೇಶ ಬೀಳಗಿ ಮೃತಪಟ್ಟಿದ್ದಾರೆ. ಜೇವರ್ಗಿ ಪಟ್ಟಣದ ಹೊರವಲಯದ ಗೌನಳ್ಳಿ ಕ್ರಾಸ್ ಹತ್ತಿರ ಘಟನೆ ಸಂಭವಿಸಿದೆ. ಮಹಾಂತೇಶ್ ಸಹೋದರ ಶಂಕರ್, ಈರಣ್ಣ ಶಿರಸಂಗಿ ಕೂಡ ಸಾವನ್ನಪ್ಪಿದ್ದಾರೆ.

ಟಿ20 ವಿಶ್ವಕಪ್: ಫೆ.15ಕ್ಕೆ ಭಾರತ-ಪಾಕಿಸ್ತಾನ ಪಂದ್ಯ

ದೆಹಲಿ: ಮುಂದಿನ ವರ್ಷ ಭಾರತ-ಶ್ರೀಲಂಕಾ ಆತಿಥ್ಯದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ವೇಳಾಪಟ್ಟಿಯನ್ನು ಐಸಿಸಿ ಪ್ರಕಟಿಸಿದೆ. ಫೆಬ್ರವರಿ 7ರಿಂದ ಕೂಟ ಆರಂಭವಾಗಲಿದ್ದು, ಮಾ.8ಕ್ಕೆ ಫೈನಲ್ ನಡೆಯಲಿದೆ. ಭಾರತ ತನ್ನ ಮೊದಲ ಪಂದ್ಯವನ್ನು ಫೆ.7ಕ್ಕೆ ಅಮೆರಿಕ ವಿರುದ್ಧ ಆಡಲಿದೆ. 15ರಂದು ಬಹು ನಿರೀಕ್ಷಿತ ಭಾರತ-ಪಾಕಿಸ್ತಾನ ಪಂದ್ಯ ನಡೆಯಲಿದೆ.

ಅಂಧರ ವಿಶ್ವಕಪ್ ಗೆದ್ದ ವನಿತೆಯರಿಗೆ ₹10 ಲಕ್ಷ

ಬೆಂಗಳೂರು: ಅಂಧರ ವಿಶ್ವಕಪ್ ವಿಜೇತ ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದ ಕರ್ನಾಟಕ ಆಟಗಾರ್ತಿಯರಿಗೆ 10 ಲಕ್ಷ ರು. ನಗದು ಮೊತ್ತದೊಂದಿಗೆ, ಸರಕಾರಿ ಉದ್ಯೋಗ ಕೊಡುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ. ಕಾವೇರಿ ನಿವಾಸದಲ್ಲಿ ಆಟಗಾರ್ತಿಯರನ್ನು ಭೇಟಿ ಮಾಡಿ ವೈಯಕ್ತಿಕವಾಗಿ ಮುಖ್ಯಮಂತ್ರಿ ಅಭಿನಂದಿಸಿದ್ದಾರೆ.



ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಸಂವಿಧಾನ ದಿನಾಚರಣೆ
ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಕ್ಕಾಗಿ

ಬೆಳಿಗ್ಗೆ 10.00 ಗಂಟೆಗೆ
ವಿಧಾನಸೌಧದ ಭವ್ಯ ಮೆಟ್ಟಿಲುಗಳಿಂದ
ಡಾ. ಬಿ.ಆರ್. ಅಂಬೇಡ್ಕರ್ ಭವನದವರೆಗೆ
ಹಮ್ಮಿಕೊಂಡಿರುವ "ಕಾಲ್ನಡಿಗೆ ಜಾಥಾ" ಕ್ಕೆ
ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಚಾಲನೆ

ವೇದಿಕೆ ಕಾರ್ಯಕ್ರಮ
ದಿನಾಂಕ: 26.11.2025 ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀ ಯು.ಟಿ. ಖಾದರ್ ಫರೀದ್
ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಅಧ್ಯಕ್ಷತೆ
ಡಾ॥ ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಅವರು ಭಾರತದ ಸಂವಿಧಾನ ಪೀಠಿಕೆಯ ಕುರಿತು ಮಾತನಾಡುತ್ತಿರುವುದು.

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು; - ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸರ್ವರಿಗೂ ಆದರದ ಸುಸ್ವಾಗತ

ರಂದೀಪ್ ಡಿ., ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು

ಡಾ. ರಾಕೇಶ್ ಕುಮಾರ್ ಕೆ., ಭಾ.ಆ.ಸೇ.,
ಆಯುಕ್ತರು

ಸಮಾಚಾರ ಸಣ್ಣದಲ್ಲ

ಅಕ್ರಮ ಸಂಬಂಧ: ಯುವಕನ ಹತ್ಯೆ

ಬೆಂಗಳೂರು: ವಿವಾಹಿತ ಮಹಿಳೆ ಜತೆ ಅಕ್ರಮ ಸಂಬಂಧ ಹೊಂದಿದ್ದಾನೆ ಎಂದು ಯುವಕನನ್ನು ಮಹಿಳೆಯ ಕುಟುಂಬಸ್ಥರು ಹತ್ಯೆ ಮಾಡಿದ ಘಟನೆ ಯಶವಂತಪುರದ ಮುತ್ಯಾಲಮ್ಮ ನಗರದಲ್ಲಿ ನಡೆದಿದೆ. ನರಸಿಂಹರಾಜು (32) ಕೊಲೆಯಾದ ಯುವಕ. ಈತ ಮದುವೆಯಾಗಿದ್ದ ಮಹಿಳೆಯ ಜತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ. ಆ ಮಹಿಳೆಯೂ ಆಗಾಗ ಯುವಕನ ಮನೆಗೆ ಬರುತ್ತಿದ್ದಳು. ಶನಿವಾರ (ನ.22) ಆ ಮಹಿಳೆ ನರಸಿಂಹರಾಜು ಮನೆಯಲ್ಲಿ ಇದ್ದರು. ಇದನ್ನು ತಿಳಿದ ಮಹಿಳೆಯ ಮನೆಯವರು ಬಂದಿದ್ದಾರೆ. ಬಳಿಕ ಮನೆ ಯಲ್ಲಿದ್ದ ನರಸಿಂಹರಾಜುನನ್ನು ಮನೆಯಿಂದ ಹೊರಗಡೆ ಎಳೆದುಕೊಂಡು ಬಂದು ರಸ್ತೆಯಲ್ಲಿ ನಾಲ್ಕೈದು ಜನ ಮನಸ್ಸೋ ಇಚ್ಚೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ಬಿಡಿಸಲು ಬಂದ ನರಸಿಂಹರಾಜು ತಾಯಿಯ ಮೇಲೂ ಹಲ್ಲೆ ಮಾಡಲಾಗಿದೆ. ಹಲ್ಲೆಯಿಂದ ಅಸ್ವಸ್ಥನಾಗಿದ್ದ ನರಸಿಂಹ ರಾಜುನನ್ನು ಕೂಡಲೇ ಕೆ.ಸಿ ಜನರಲ್ ಆಸ್ಪತ್ರೆಗೆ ಕರೆದೊ ಯ್ದಿದ್ದರು. ಆಸ್ಪತ್ರೆಯಲ್ಲಿ ಯುವಕ ಸಾವನ್ನಪ್ಪಿದ್ದಾಗಿ ವೈದ್ಯರು ತಿಳಿಸಿದ್ದಾರೆ. ಈ ಸಂಬಂಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಆರೋಪಿ ಗಳನ್ನು ಇನ್ನೂ ಬಂಧಿಸಿಲ್ಲ ಎಂದು ಕುಟುಂಬಸ್ಥರ ಆಕ್ರೋಶ ಹೊರಹಾಕಿದ್ದಾರೆ.

527 ಕೋಟಿ ರು.ಮೌಲ್ಯದ ಬ್ಯಾಂಕ್ ಖಾತೆ, ಬಾಂಡ್, ಮ್ಯೂಚುವಲ್ ಫಂಡ್‌ಗಳ ಜಪ್ತಿ ಮಾಡಿದ ಇಡಿ

ಗೇಮಿಂಗ್ ಆ್ಯಪ್‌ಗಳ ಮೇಲೆ ದಾಳಿ

ಬೆಂಗಳೂರು: ಅಕ್ರಮ ಹಣ ವರ್ಗಾವಣೆ ಕಾಯಿದೆಯಡಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಗೇಮಿಂಗ್ ಆ್ಯಪ್‌ಗಳ ಮೇಲೆ ದಾಳಿ ನಡೆಸಿ 527 ಕೋಟಿ ರು.ಗಿಂತ ಹೆಚ್ಚು ಮೌಲ್ಯದ ಬ್ಯಾಂಕ್ ಖಾತೆ, ಬಾಂಡ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳನ್ನು ಜಪ್ತಿ ಮಾಡಿದ್ದಾರೆ.

ಬೆಂಗಳೂರು, ಗುರುಗಾವ್‌ನಲ್ಲಿನ ಗೇಮಿಂಗ್ ಆ್ಯಪ್ 'ವಿಂಜೋ'ಗೆ ಸಂಬಂಧಿಸಿದ ಕಚೇರಿಗಳ ಮೇಲೆ ಕಾರ್ಯಾಚರಣೆ ನಡೆಸಿದೆ. ಈ ವೇಳೆ ಸುಮಾರು 505 ಕೋಟಿ ರು. ಮೌಲ್ಯದ ಬ್ಯಾಂಕ್ ಠೇವಣಿ, ಬಾಂಡ್‌ಗಳು ಮತ್ತು ಮ್ಯೂಚುವಲ್ ಫಂಡ್‌ಗಳನ್ನು ಇಡಿ ವಶಪಡಿಸಿಕೊಂಡಿದೆ. ವಿಂಜೋ ಗೇಮ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯು ಗ್ರಾಹಕರಿಗೆ ಮೋಸ ಮಾಡುತ್ತಿರುವುದು ತನಿಖೆಯಿಂದ ಗೊತ್ತಾಗಿದೆ. ಗೇಮಿಂಗ್ ಹೆಸರಲ್ಲಿ ಕಂಪನಿಯು ರಹಸ್ಯವಾಗಿ ಅಲ್ಗರಿದಮ್‌ಗಳು ಮತ್ತು ಸಾಫ್ಟ್‌ವೇರಗಳನ್ನು ಬಳಸಿ ಗ್ರಾಹಕರನ್ನು ಸೋಲಿಸುತ್ತಿತ್ತು ಎಂಬ ಆಘಾತಕಾರಿ ವಿಷಯ ತನಿಖೆಯಿಂದ ಬೆಳಕಿಗೆ ಬಂದಿದೆ ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

ವಿಂಜೋ ಯುಎಸ್ ಇಂಕ್ ಎಂಬ ನಕಲಿ ಕಂಪನಿ ಸೃಷ್ಟಿಸಿ, ಭಾರತದಿಂದ ಸುಮಾರು 55 ಮಿಲಿಯನ್ ಡಾಲರ್ (ಅಂದಾಜು 489.90 ಕೋಟಿ ರು.) ಅಮೆರಿಕ ಮತ್ತು ಸಿಂಗಾಪುರಕ್ಕೆ ಅಕ್ರಮವಾಗಿ ವರ್ಗಾಯಿಸಲಾಗಿದೆ. ಅಲ್ಲದೇ, ಕೇಂದ್ರ ಸರಕಾರವು ರಿಯಲ್ ಮನಿಗೇಮ್ಸ್ ಅನ್ನು ನಿಷೇಧಿಸಿದ ನಂತರವೂ ಕಂಪನಿಯು ಗ್ರಾಹಕರಿಗೆ ಹಿಂತಿರುಗಿಸಬೇಕಾದ 43 ಕೋಟಿ ರು. ಹಣ ತಡೆ ಹಿಡಿದಿದೆ. ಈ ಬಗ್ಗೆ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

18.57 ಕೋಟಿ ರು. ಇರುವ 8 ಬ್ಯಾಂಕ್ ಖಾತೆ ಮುಟ್ಟುಗೋಲು: ಈ ನಡುವೆ ಮತ್ತೆರೆಡು ಕಂಪನಿಗಳು ಸಹ ಇದೇ ರೀತಿ ವಂಚನೆ ಮಾಡುತ್ತಿದ್ದ ಆರೋಪದ ಮೇರೆಗೆ ಇಡಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ಕೈಗೊಂಡಿದ್ದಾರೆ. ಆನ್‌ಲೈನ್ ಗೇಮಿಂಗ್ ಹೆಸರಿನಲ್ಲಿ ಭಾರೀ ವಂಚನೆ ನಡೆಯುತ್ತಿದೆ ಎಂಬ ದೂರಿನ ಮೇರೆಗೆ ಇಡಿ ಅಧಿಕಾರಿಗಳು 'ಪಾಕೆಟ್-52' ಮತ್ತು 'ಗೇಮ್ ಸ್ಕ್ರಿಪ್ಟ್ ಟೆಕ್ನಾಲಜೀಸ್' ಕಚೇರಿಗಳ ಮೇಲೆ ದಾಳಿ ನಡೆಸಿದೆ. ಪಾಕೆಟ್-52 ಗೇಮಿಂಗ್ ಪ್ಲಾಟ್‌ಫಾರ್ಮ್‌ಗಲ್ಲಿ ಗೇಮ್‌ಗಳ ಫಲಿತಾಂಶವನ್ನು ಮೊದಲೇ ನಿರ್ಧರಿಸಲಾಗುತ್ತಿತ್ತು. ಮತ್ತು ತಾಂತ್ರಿಕ ದೋಷಗಳನ್ನು ಸೃಷ್ಟಿಸಿ ಬಳಕೆದಾರರನ್ನು ಸೋಲಿಸಲಾಗುತ್ತಿತ್ತು ಎಂದು ಆರೋಪಿಸಲಾಗಿದೆ. ವ್ಯವಸ್ಥಿತ ವಂಚನೆಯಿಂದಾಗಿ ಒಬ್ಬ ಬಳಕೆದಾರರೇ ಬರೋಬ್ಬರಿ 3 ಕೋಟಿ ರು. ಕಳೆದುಕೊಂಡಿದ್ದಾರೆ. ಕೇಂದ್ರ ಸರಕಾರವು 'ಪ್ರಮೋಷನ್ ಅಂಡ್ ರೆಗ್ಯುಲೇಷನ್ ಆಫ್ ಆನ್‌ಲೈನ್ ಗೇಮಿಂಗ್ ಆ್ಯಕ್ಟ್ - 2025' ಅಡಿಯಲ್ಲಿ ರಿಯಲ್ ಮನಿ ಗೇಮ್‌ಗಳನ್ನು ನಿಷೇಧಿಸಿದ್ದರೂ, ಈ ಕಂಪನಿಗಳು ಗ್ರಾಹಕರ 30 ಕೋಟಿ ರು. ಅಧಿಕ ಹಣವನ್ನು ವಾಪಸ್ ನೀಡದೆ ತಮ್ಮ ಎಸ್ಕ್ರೊ ಖಾತೆಗಳಲ್ಲಿ ಇರಿಸಿಕೊಂಡಿವೆ. ಮೊಬೈಲ್, ಲ್ಯಾಪ್‌ಟಾಲ್‌ಗಳನ್ನು ವಶಪಡಿಸಿ ಕೊಳ್ಳಲಾಗಿದ್ದು, ಸುಮಾರು 18.57 ಕೋಟಿ ರು. ಇರುವ 8 ಬ್ಯಾಂಕ್ ಖಾತೆ ಇ.ಡಿ ಮುಟ್ಟುಗೋಲು ಹಾಕಿಕೊಂಡಿದೆ.

23 ಕೋಟಿ ರು.ಡ್ರಗ್ಸ್ ವಶ: ಕಿಂಗ್‌ಪಿನ್ ವಿದೇಶಿಗ ಸೆರೆ

ಬೆಂಗಳೂರು: ಹೊಸ ವರ್ಷ ಸಮೀಪಿಸುತ್ತಿದ್ದಂತೆ ನಗರ ಪೊಲೀಸರು ಡ್ರಗ್ಸ್ ಪೆಡ್ಲರ್ಸ್ ವಿರುದ್ಧ ಸಮರ ಸಾರಿದ್ದಾರೆ. ಡ್ರಗ್ಸ್ ನಿಯಂತ್ರಣಕ್ಕಾಗಿ ಈಗಾಗಲೇ ವಿಶೇಷ ಅಭಿಯಾನವನ್ನೂ ಶುರು ಮಾಡಿದ್ದಾರೆ. ಇದರ ನಡುವೆ, ಸಿಸಿಬಿ ಪೊಲೀಸರ ಕೈಗೆ ಡ್ರಗ್ಸ್ ಕಿಂಗ್‌ಪಿನ್ ಎಜಿಕೆ ನೈಗೂ ಓಕಾಫಾರ್ (42) ಎಂಬಾತ ಸಿಕ್ಕಿಬಿದ್ದಿದ್ದಾನೆ. ಈತನಿಂದ ಅಂದಾಜು 23 ಕೋಟಿ ರು. ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಇವುಗಳಲ್ಲಿ 11.50 ಕೆ.ಜಿ ತೂಕದ ಎಂಡಿಎಂಎ ಕ್ರಿಸ್ಟಲ್, 1,040 ಎಕ್ಸ್‌ಟಿಸ್ ಪಿಲ್ಸ್ ಸೇರಿವೆ.

2017ರಲ್ಲಿ ಬ್ಯುಸಿನೆಸ್ ವೀಸಾದಡಿ ಭಾರತಕ್ಕೆ ಬಂದಿದ್ದ ಆರೋಪಿ, ಬಾಗಲೂರು ಠಾಣಾ ವ್ಯಾಪ್ತಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ. ದೆಹಲಿಯಿಂದ ಡ್ರಗ್ಸ್ ತರಿಸಿಕೊಂಡು ಮನೆಯಲ್ಲಿ ಶೇಖರಿಸಿಟ್ಟಿದ್ದ. ಕರ್ನಾಟಕ, ಚೆನ್ನೈ, ಹೈದರಾಬಾದ್ ಸೇರಿ ಹಲವೆಡೆ ಡ್ರಗ್ಸ್ ಡೀಲ್ ಮಾಡುತ್ತಿದ್ದ. ಪರಿಚಯಸ್ಥ ಪೆಡ್ಲರ್ಸ್, ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದ ಎಂಬ ವಿಚಾರಗಳು ತನಿಖೆಯಿಂದ ಗೊತ್ತಾಗಿವೆ.

ಹೊಸ ವರ್ಷಕ್ಕೆ ಕೋಟ್ಯಂತರ ಮೌಲ್ಯದ ಕೆ.ಜಿಗಟ್ಟಲೆ ಡ್ರಗ್ಸ್ ರೆಡಿಯಾಗಿತ್ತು. ಯುವ ಸಮೂಹವನ್ನು ಡ್ರಗ್ಸ್ ಅಮಲಿನಲ್ಲಿ ತೇಲಿಸುವ ಉದ್ದೇಶ ಹೊಂದಲಾಗಿತ್ತು. ಇದಕ್ಕಾಗಿ ಬಾಗಲೂರಿನ ಮನೆಯಲ್ಲಿ ಎಂಡಿಎಂಎ, ಎಕ್ಸ್‌ಟಿಸ್ ಮಾತ್ರೆಗಳನ್ನು ಒಂದೇ ರೂಮ್‌ನಲ್ಲಿ ಶೇಖರಿಸಿಡಲಾಗಿತ್ತು. ಹೊಸ ವರ್ಷಕ್ಕೆ ಒಂದು ತಿಂಗಳ ಮೊದಲೇ ಆರ್ಡರ್ ಬರುತ್ತದೆ ಎಂದು ಅಪಾರ ಪ್ರಮಾಣದಲ್ಲಿ ಸಂಗ್ರಹಿಸಲಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೊಸ ವರ್ಷದ ಸಂದರ್ಭದಲ್ಲಿ ದುಪ್ಪಟ್ಟು ಹಣಕ್ಕೆ ಡ್ರಗ್ಸ್ ಮಾರಾಟ ಮಾಡುವ ಪ್ಲಾನ್ ಮಾಡಿದ್ದು, ಈತನ ಮೂಲಕವೇ ಸಿಟಿ ಪೆಡ್ಲರ್ಸ್‌ಗೆ ತಯಾರಿ ನಡೆದಿತ್ತು. ನಗರದ ಹೊರವಲಯದಲ್ಲಿರುವ ರೆಸಾರ್ಟ್ ಹಾಗೂ ಸಿಟಿಯಲ್ಲಿ ಪಬ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಿಗೆ ಕಳುಹಿಸಲು ಸಿದ್ಧತೆ ನಡೆದಿತ್ತು. ತನ್ನ ವೀಸಾ ಅವಧಿ ಮುಗಿದಿದ್ದರೂ ಆರೋಪಿ ಡ್ರಗ್ಸ್ ಮಾರಾಟದಲ್ಲಿ ಸಕ್ರಿಯವಾಗಿದ್ದ. ರಾಜ್ಯ ಹಾಗೂ ಹೊರ ರಾಜ್ಯದಲ್ಲಿ ಡ್ರಗ್ಸ್ ಸೀಜ್ ಮಾಡುವ ದೊಡ್ಡ ಕಿಂಗ್‌ಪಿನ್ ಆಗಿ ಬೆಳೆದಿದ್ದ. ಇದೀಗ ಕಿಂಗ್‌ಪಿನ್ ಪೆಡ್ಲರ್‌ನನ್ನು ಪೊಲೀಸರು ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ದೆಹಲಿ, ಮುಂಬೈಯಿಂದ ಬೆಂಗಳೂರಿಗೆ ಕಳುಹಿಸು ತ್ತಿರುವುದರ ಕುರಿತು ಪತ್ತೆ ಕಾರ್ಯ ನಡೆಯುತ್ತಿದೆ.

ಚಾಲಕನ ಸಮೇತ ಕೆರೆಗೆ ಬಿದ್ದ ಲಾರಿ

ಬೆಂಗಳೂರು: ರಸ್ತೆಗುಂಡಿ ತಪ್ಪಿಸಲು ಹೋಗಿ ಜಲ್ಲಿ ತುಂಬಿದ್ದ ಲಾರಿಯೊಂದು ಚಾಲಕನ ಸಮೇತ ಕೆರೆಗೆ ಬಿದ್ದಿರುವ ಘಟನೆ ಆನೇಕಲ್ ತಾಲೂಕಿನ ಅತ್ತಿಬೆಲೆ ಸರ್ಜಾಪುರ ರಸ್ತೆಯಲ್ಲಿ ನಡೆದಿದೆ. ಬೆಂಗಳೂರು ಹೊರವಲಯದ ಆನೇಕಲ್ ತಾಲೂಕಿನ ಬಿದರಗುಪ್ಪೆ ಕೆರೆಯಲ್ಲಿ ಘಟನೆ ಸಂಭವಿಸಿದೆ. ಕಲಬುರಗಿ ಮೂಲದ ಲಾರಿ ಚಾಲಕ ಮಹೇಶ್ (37) ಕೆರೆಯಲ್ಲಿ ಮುಳುಗಿರುವ ಸಾಧ್ಯತೆಯಿದೆ. ಜಲ್ಲಿ ತುಂಬಿಕೊಂಡು ಬಂದಿದ್ದ 12 ಚಕ್ರದ ಲಾರಿ ಕಳೆದ ರಾತ್ರಿ 11:30ರ ಸುಮಾರಿಗೆ ಕೆರೆಗೆ ಬಿದ್ದಿರುವ ಶಂಕೆ ವ್ಯಕ್ತವಾಗಿದೆ. ಅತ್ತಿಬೆಲೆಯಿಂದ ಸರ್ಜಾಪುರ ಮಾರ್ಗವಾಗಿ ಹೋಗುತ್ತಿದ್ದ ಲಾರಿ ರಸ್ತೆಯಲ್ಲಿ ಗುಂಡಿ ತಪ್ಪಿಸಲು ಹೋಗಿ ನಿಯಂತ್ರಣ ಕಳೆದುಕೊಂಡು ಚಾಲಕನ ಸಮೇತವಾಗಿ ಕೆರೆಗೆ ಬಿದ್ದಿದೆ. ಘಟನೆಯಲ್ಲಿ ಚಾಲಕ ಜಲಸಮಾಧಿಯಾಗಿರುವ ಶಂಕೆ ವ್ಯಕ್ತವಾಗಿದೆ.

ನಗರದ ಯಲಹಂಕ ದಿನಪತ್ರಿಕೆ ವಿತರಕರ ಸಂಘದ ವತಿಯಿಂದ 70 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವೇಳೆ ಶಾಸಕ ಎಸ್.ಆರ್.ವಿಶ್ವನಾಥ್, ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷ ಶಂಕರ್, ಉಪಾಧ್ಯಕ್ಷ ವೀರಭದ್ರ, ಯಶೋದಾ ಸತೀಶ್, ಮಂಗಳ ಗೌರಿ ಸೇರಿದಂತೆ ಪತ್ರಿಕೆ ಹಾಕುವ ಹುಡುಗರು ಭಾಗವಹಿಸಿದ್ದರು.

ಮಚ್ಚು ತೋರಿಸಿ ಸುಲಿಗೆ: ಮೂವರ ಸೆರೆ

ಬೆಂಗಳೂರು: ಆರ್.ಎಂ.ಸಿ.ಯಾರ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಸಾರ್ವಜನಿಕರಿಗೆ ಮಚ್ಚು ತೋರಿಸಿ, ಸುಲಿಗೆ ಮಾಡುತ್ತಿದ್ದ ಪ್ರಕರಣ ಸಂಬಂಧ ಬಾಲಕ ಸೇರಿ ಮೂವರನ್ನು ಬಂಧಿಸಲಾಗಿದೆ. ಟಿಂಬರ್ ಲೇಔಟ್‌ನ ಆಕಾಶ್, ಬಾಪೂಜಿ ನಗರದ ಎಸ್.ಕಿಶನ್ ಹಾಗೂ ಬಾಲಕನನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಮಚ್ಚು ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನ. 11 ರಂದು ನವೀನ್ ಅವರು ತಮ್ಮ ಸ್ನೇಹಿತರಾದ ಗುರುಪ್ರಸಾದ್, ಶಿವಕುಮಾರ್ ಅವರೊಂದಿಗೆ ಜಿಕೆವಿಕೆಯಲ್ಲಿ ನಡೆಯುತ್ತಿದ್ದ ಕೃಷಿ ಮೇಳಕ್ಕೆ ಹೋಗಲು ಗೋವರ್ಧನ್ ಬಸ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುವ ವೇಳೆ ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಬಂದು ಅಡ್ಡಗಟ್ಟಿದ್ದರು. ಮಚ್ಚು ತೋರಿಸಿ, ಹಣ ನೀಡುವಂತೆ ಬೆದರಿಸಿ 100 ಕಿತ್ತುಕೊಂಡಿದ್ದರು. ಸಹಾಯಕ್ಕಾಗಿ ನವೀನ್ ಅವರು ಪೊಲೀಸ್ ಎಂದು ಕೂಗಿಕೊಂಡು ಓಡಲು ಶುರು ಮಾಡುತ್ತಿದ್ದಂತೆ ಆರೋಪಿಗಳು ಅಲ್ಲಿಂದ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು. ತನಿಖೆ ಕೈಗೊಂಡ ಪೊಲೀಸರು, ಕೃತ್ಯದ ಸ್ಥಳದಲ್ಲಿ ದೊರೆತ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ಹಾಗೂ ಬಾತ್ಮೀದಾರರ ಮಾಹಿತಿ ಆಧರಿಸಿ ಸ್ಯಾಟಲೈಟ್ ಬಸ್ ನಿಲ್ದಾಣ ಬಳಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಕೆ.ಜಿ ಹಳ್ಳಿಯಲ್ಲಿ ಮನೆಗಳ ನೆಲಸಮ: ಹೈ ನೋಟಿಸ್

ಬೆಂಗಳೂರು: ರೈಲ್ವೆ ಇಲಾಖೆಯು ಕಾಡುಗೊಂಡನ ಹಳ್ಳಿಯ ಲೇಔಟ್‌ನಲ್ಲಿ 29 ದಲಿತ ಕುಟುಂಬಗಳ ಮನೆ ನೆಲಸಮ ಮಾಡಿರುವುದನ್ನು ಪ್ರಶ್ನಿಸಿ ಸಂತ್ರಸ್ತರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮನೆ ಕಳೆದುಕೊಂಡಿರುವ ಕೆ.ಜಿ.ಹಳ್ಳಿಯ ಚುನಾ ಲೈನ್ ನಿವಾಸಿಗಳಾದ ಯು.ರಾಣಿ ಸೇರಿದಂತೆ 12 ಮಂದಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್.ಮೋಹನ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆ ಸೇರಿದಂತೆ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಸಂತ್ರಸ್ತ ಕುಟುಂಬಗಳಿಗೆ ಇದೇ 30ರ ನಂತರ ಹೆಚ್ಚುವರಿಯಾಗಿ 30 ದಿನಗಳ ತಾತ್ಕಾಲಿಕ ಆಶ್ರಯ ನೀಡುವ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 1985ರಲ್ಲಿ ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಹಂಚಿಕೆ ಮಾಡಿತ್ತು. 2015-16ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮನೆ ಕಟ್ಟಿಕೊಳ್ಳಲು ಪ್ರತಿಯೊಬ್ಬರಿಗೂ ?3 ಲಕ್ಷ ಸಹಾಯಧನ ನೀಡಿತ್ತು. ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ನಾವುಗಳು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದೆವು. ಬಿಬಿಎಂಪಿ ನಮಗೆ ಮೂಲಸೌಕರ್ಯ ಒದಗಿಸಿ ಹಕ್ಕುಪತ್ರಗಳನ್ನೂ ವಿತರಿಸಿದೆ.

ಎಲ್ಲೆಡೆ ಮೃತದೇಹಗಳ ಸಮಾಧಿಗೆ ಅವಕಾಶವಿಲ್ಲ

ಬೆಂಗಳೂರು: ನಿಗದಿತವಾಗಿ ಗೊತ್ತುಪಡಿಸಿದ ಸ್ಥಳ (ರುದ್ರಭೂಮಿ) ಹೊರತುಪಡಿಸಿ ಇತರೆ ಜಾಗಗಳಲ್ಲಿ ಅನುಮತಿ ಇಲ್ಲದೆ ಮೃತದೇಹಗಳನ್ನು ಸಮಾಧಿ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್ ಮೌಖಿಕವಾಗಿ ತಿಳಿಸಿದೆ.

ತಮ್ಮ ಒಪ್ಪಿಗೆಯಿಲ್ಲದೆ ಸೊಸೆಯ ಶವವನ್ನು ಮನೆಯ ಬಳಿ ಹೂಳಲಾಗಿದ್ದು, ಸಮಾಧಿ ಬೇರೆಡೆಗೆ ಸ್ಥಳಾಂತರಿಸುವಂತೆ ನಿರ್ದೇಶನ ನೀಡುವಂತೆ ಕೋರಿ ಬಂಗಾರಪೇಟೆಯ ತುರಾಂಡಹಳ್ಳಿಯ ಎಚ್.ಗೋಪಾಲಗೌಡ ಎಂಬವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿ ವಿಚಾರಣೆ ಮುಂದೂಡಿತು.

ಮೃತದೇಹಗಳನ್ನು ಎಲ್ಲೆಂದರಲ್ಲಿ ಸಮಾಧಿ ಮಾಡುವುದು ಅತ್ಯಂತ ಸೂಕ್ಷ್ಮ ವಿಷಯ. ಈ ಪ್ರಕರಣ ಒಂದು ಶವ ಸಮಾಧಿ ಮಾಡುವುದು ಮಾತ್ರವಲ್ಲ, ಇಂತಹ ಚಟುವಟಿಕೆಗಳಿಗೆ ಅವಕಾಶ ನೀಡಿದಲ್ಲಿ ಗಂಭೀರ ಪರಿಣಾಮ ಎದುರಾಗುತ್ತದೆ. ಎಲ್ಲೆಂದರಲ್ಲಿ ಸಮಾಧಿ ಮಾಡುವುದಕ್ಕೆ ಅವಕಾಶ ಸಿಕ್ಕಲ್ಲಿ ಕಾನೂನು ಸುವ್ಯವಸ್ಥೆ ಸಮಸ್ಯೆಯಾಗುತ್ತದೆ. ನಿಗದಿತ ಸ್ಥಳ (ರುದ್ರಭೂಮಿ)ದಲ್ಲಿ ಹೊರತುಪಡಿಸಿ ಬೇರೆ ಸ್ಥಳದಲ್ಲಿ ಶವ ಹೂಳಲು ಅವಕಾಶವಿಲ್ಲ.

ಇದಕ್ಕೆ ಅವಕಾಶ ನೀಡಿದಲ್ಲಿ ಮುಂದೊಂದಿನ ಕೊಲೆ ಪ್ರಕರಣಗಳಲ್ಲಿಯೂ ಮುಂದುವರಿಯುವ ಸಾಧ್ಯತೆ ಇರುತ್ತದೆ. ಇದರಿಂದ ಎದುರಾಗುವ ಪರಿಣಾಮಗಳನ್ನು ಅರ್ಥಮಾಡಿ ಕೊಳ್ಳಬೇಕು. ಇಂತಹ ಕೃತ್ಯಗಳಿಗೆ ಅನುಮತಿ ನೀಡಿದಲ್ಲಿ ಬೇರೊಬ್ಬ ವ್ಯಕ್ತಿ ಮತ್ತೊಬ್ಬರ ಆಸ್ತಿಯಲ್ಲಿ ಶವ ಹೂಳುವುದಕ್ಕೆ ಕಾರಣವಾಗಬಹುದು. ಆದ್ದರಿಂದ ಗೊತ್ತುಪಡಿಸಿದ ಸ್ಮಶಾನದಲ್ಲಿ ಮಾತ್ರ ದಹನ ಮಾಡಬೇಕು. ಅದನ್ನು ಹೊರತುಪಡಿಸಿ ಇತರೆಡೆ ಅಂತ್ಯಕ್ರಿಯೆ ಮಾಡುವುದಕ್ಕೆ ಅವಕಾಶವಿಲ್ಲ ಎಂದಿತು.

ಇದಕ್ಕೂ ಮುನ್ನ ನಡೆದ ವಿಚಾರಣೆ ವೇಳೆ ಸರಕಾರದ ಪರ ವಕೀಲರು, ಇದೊಂದು ವರದಕ್ಷಿಣೆ ಕಿರುಕುಳ ಆರೋಪದ ವಿಶೇಷ ಪ್ರಕರಣ. ಮೃತರು ಅರ್ಜಿದಾರರ ಸೊಸೆ. ಪ್ರಕರಣ ಸಂಬಂಧ ಆಕ್ಷೇಪಣೆ ಸಲ್ಲಿಸಬೇಕಾಗಿದ್ದು, ಕಾಲಾವಕಾಶ ನೀಡಬೇಕು ಎಂದು ಕೋರಿದರು.

ಪ್ರಕರಣದ ವಿವರ

ವೈವಾಹಿಕ ಭಿನ್ನಾಭಿಪ್ರಾಯಗಳಿಂದ ಸೊಸೆ ತವರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಆದರೆ 2024ರ ಆ.24ರಂದು ಮೃತರ ಸಹೋದರ ಮತ್ತು ಸಹೋದರಿ ಮತ್ತು ಅವರ ಸಂಬಂಧಿಕರು ಮಹಿಳಾ ಸಂಘಟನೆಗಳ ಬೆಂಬಲ ಮತ್ತು ಬಲದಿಂದ ತಮ್ಮ ವಾಸಸ್ಥಳದ ಆವರಣಕ್ಕೆ ಬಲವಂತವಾಗಿ ನುಗ್ಗಿ ಸೊಸೆಯ ಶವವನ್ನು ಸಮಾಧಿ ಮಾಡಿದ್ದಾರೆಂದು ಹೇಳಲಾಗಿದೆ. ಅರ್ಜಿದಾರರಿಗೆ ಯಾವುದೇ ಮಾಹಿತಿ ನೀಡದೆ ಮತ್ತು ಅರ್ಜಿದಾರರ ಅನುಮತಿ ಮತ್ತು ಒಪ್ಪಿಗೆ ಪಡೆಯದೆ ಇದನ್ನು ಮಾಡಲಾಗಿದೆ. ತಮ್ಮ ಒಪ್ಪಿಗೆಯಿಲ್ಲದೇ ಅಕ್ರಮವಾಗಿ ಸಮಾಧಿ ಕೂಡ ನಿರ್ಮಿಸಿದ್ದಾರೆ. ಹಾಗಾಗಿ ಆ ಸಮಾಧಿ ತೆರವಿಗೆ ಅರ್ಜಿ ಸಲ್ಲಿಸಿದ್ದರೂ ಉಪ ವಿಭಾಗಾಧಿಕಾರಿ ತಿರಸ್ಕರಿಸಿದ್ದಾರೆ ಎಂದು ಅರ್ಜಿ ಸಲ್ಲಿಸಲಾಗಿದೆ.

PUBLIC NOTICE
Ingersoll – Rand (India) Limited.
TO WHOEMSOEVER IT MAY CONCERN

This is to inform the General Public that following share certificate of **Ingersoll – Rand (India) Limited.** Having its Registered Office at **First Floor, Subramanya Arcade,,No. 12/1, Bannerghatta Road, Bengaluru, Karnataka – 560029** registered in the name of the following Shareholders has been lost by him.

Sr. No	Name of the holder	Folio No.	Face Value	Certificate Nos	Distinctive Numbers From	Distinctive Numbers To	No. of Shares
1.	Govind Jethmal Parasram	ISG0000679	10/-	A2964	830901	830925	25
2.	Govind Jethmal Parasram	ISG0000679	10/-	B1970	1784391	1784415	25
3.	Govind Jethmal Parasram	ISG0000679	10/-	C2404	3548990	3549039	50
4.	Govind Jethmal Parasram	ISG0000679	10/-	D4609	7093212	7093261	50
5.	Govind Jethmal Parasram	ISG0000679	10/-	D4610	7093262	7093311	50
6.	Govind Jethmal Parasram	ISG0000679	10/-	F18987	28405314	28405363	50
7.	Govind Jethmal Parasram	ISG0000679	10/-	F18988	28405364	28405413	50
8.	Govind Jethmal Parasram	ISG0000679	10/-	F18989	28405414	28405463	50
9.	Govind Jethmal Parasram	ISG0000679	10/-	F18990	28405464	28405513	50

The Public are hereby cautioned against purchasing or dealing in any way with the above referred share certificates.
Any person who has any claim in respect of the said share certificates should lodge such claim with the company or its Registrar and transfer Agents MUFG Intime India Pvt. Ltd. C 101, 247 Park, L.B.S. Marg, Vikhroli (West), Mumbai, Maharashtra – 400083 within 15 days of publication of this notice after which no claim will be entertained and the company shall proceed to issue Duplicate Share Certificates.

Place: Bangalore
Date: 26/11/2025

Name of the legal claimants:
Vijay Govind Budhrani
Mahesh Govind Budhrani

ನಮೂನೆ INC-26
[**ಕಂಪನಿಗಳ (ಸಂಸ್ಥಾಪನೆ) ನಿಯಮಗಳು, 2014 ರ ನಿಯಮ 30 ರ ಪ್ರಕಾರ**]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸಲು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು
ಕೇಂದ್ರ ಸರ್ಕಾರದ ಮುಂದೆ, ಆಗ್ನೇಯ ಪ್ರದೇಶ
ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 13 ರ ಉಪ-ವಿಭಾಗ (4) ಮತ್ತು ಕಂಪನಿಗಳ (ಸಂಸ್ಥಾಪನೆ) ನಿಯಮಗಳು, 2014 ರ ನಿಯಮ 30 ರ ಉಪ-ನಿಬಂಧನೆ (5) ರ ಷರತ್ತು (ಎ) ವಿಷಯದಲ್ಲಿ
ಮತ್ತು
ರಿಲೆವೆನ್ಸ್ ಲ್ಯಾಬ್ ಪ್ರೈವೇಟ್ ಲಿಮಿಟೆಡ್ (CIN: U72200KA2011PTC057258)
ವಿಷಯದಲ್ಲಿ ಸ್ಮಾರ್ಟ್‌ವರ್ಕ್ಸ್ ವೈಷ್ಣವಿ ಟೆಕ್ ಪಾರ್ಕ್, ಸೌತ್ ಬ್ಲಾಕ್, 10ನೇ ಮಹಡಿ, ಸರ್ವೆ ನಂ. 16/1 ಮತ್ತು 17/2, ಬೆಳ್ಳಂದೂರು ಗೇಟ್, ಸರ್ಜಾಪುರ ಮುಖ್ಯ ರಸ್ತೆ, ಅಂಬಲಿಪುರ, ಬೆಳ್ಳಂದೂರು, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ, 560103 (ಅರ್ಜಿದಾರರು).

ಸೂಚನೆ
ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "ಕರ್ನಾಟಕದ ಬೆಂಗಳೂರಿನಿಂದ ಗುಜರಾತ್ ರಾಜ್ಯಕ್ಕೆ" ಬದಲಾಯಿಸಲು ಅನುವು ಮಾಡಿಕೊಡಲು, ನವೆಂಬರ್ 14, 2025 ರಂದು ಶುಕ್ರವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾದ ವಿಶೇಷ ನಿರ್ಣಯದ ಪ್ರಕಾರ, ಕಂಪನಿಯ ಸಂಘದ ಜ್ಞಾಪಕ ಪತ್ರದ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿಯು 2013 ರ ಕಂಪನಿ ಕಾಯ್ದೆಯ ಸೆಕ್ಷನ್ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.
ಕಂಪನಿಯ ನೋಂದಾಯಿತ ಕಚೇರಿಯ ಪ್ರಸ್ತಾವಿತ ಬದಲಾವಣೆಯಿಂದ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಯಾವುದೇ ವ್ಯಕ್ತಿಯು MCA-21 ಪೋರ್ಟಲ್ (www.mca.gov.in) ನಲ್ಲಿ ಹೂಡಿಕೆದಾರರ ದೂರು ನಮೂನೆ ಅಥವಾ ವಿತರಣೆಗೆ ಕಾರಣವನ್ನು ಸಲ್ಲಿಸುವ ಮೂಲಕ ಅಥವಾ ನೋಂದಾಯಿತ ಅಂಚೆ ಮೂಲಕ ಕಳುಹಿಸುವ ಮೂಲಕ ತನ್ನ ಆಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳನ್ನು ತಿಳಿಸುವ ಅಫಿಡವಿಟ್‌ನಿಂದ ಬೆಂಬಲಿತವಾದ ತನ್ನ ಆಕ್ಷೇಪಣೆಗಳನ್ನು ತಲುಪಿಸಬಹುದು. ಆಗ್ನೇಯ ವಲಯ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಯನ್ನಾರಂ ಗ್ರಾಮ, ಹಯಾತ್ ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ ವಿಳಾಸದಲ್ಲಿರುವ ಪ್ರಾದೇಶಿಕ ನಿರ್ದೇಶಕರಿಗೆ, ಈ ಸೂಚನೆ ಪ್ರಕಟವಾದ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗೆ ಅರ್ಜಿದಾರರ ಕಂಪನಿಗೆ ಪ್ರತಿಯೊಂದಿಗೆ ಅರ್ಜಿದಾರರ ಕಂಪನಿಯ ಪ್ರತಿಯನ್ನು ಕೆಳಗೆ ತಿಳಿಸಲಾದ ನೋಂದಾಯಿತ ಕಚೇರಿಯಲ್ಲಿ ಅರ್ಜಿದಾರರ ಕಂಪನಿಯ ಪ್ರತಿಯೊಂದಿಗೆ ತಲುಪಿಸಬಹುದು: ನೋಂದಾಯಿತ ಕಚೇರಿ ವಿಳಾಸ ಸ್ಮಾರ್ಟ್‌ವರ್ಕ್ಸ್ ವೈಷ್ಣವಿ ಟೆಕ್ ಪಾರ್ಕ್, ಸೌತ್ ಬ್ಲಾಕ್, 10ನೇ ಮಹಡಿ, ಸರ್ವೆ ನಂ.16/1 ಮತ್ತು 17/2, ಬೆಳ್ಳಂದೂರು ಗೇಟ್, ಸರ್ಜಾಪುರ ಮುಖ್ಯ ರಸ್ತೆ, ಅಂಬಲಿಪುರ, ಬೆಳ್ಳಂದೂರು, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ, 560103

ರಿಲೆವೆನ್ಸ್ ಲ್ಯಾಬ್ ಪ್ರೈವೇಟ್ ಲಿಮಿಟೆಡ್ ಗಾಗಿ ಮತ್ತು ಪರವಾಗಿ
ವಿದುರ್ ಭೋಗಿಲಾಲ್ ನಿರ್ದೇಶಕ
ಡಿಐಎನ್: 00008036
ದಿನಾಂಕ: 26/11/2025
ಸ್ಥಳ : ಬೆಂಗಳೂರು

ಮಾನ್ಯ ಗೌರವಾನ್ವಿತ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 691/2025
ಅರ್ಜಿದಾರರು: 1. ಶ್ರೀಮತಿ.ಜಯಮ್ಮ ಕೋಂ ಲೇಟ್ ದೇವೆಗೌಡ ವಯಸ್ಸು 75 ವರ್ಷ, ವಾಸ: ಯಡಮಾರನಹಳ್ಳಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಸೀಲ್ದಾರ್, ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿ, ಯಡಮಾರನಹಳ್ಳಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಅತ್ತೆ, 2 ರಿಂದ 5ನೇ ಅರ್ಜಿದಾರರ ಅಜ್ಜಿ ಮತ್ತು 6 ಮತ್ತು 7ನೇ ಅರ್ಜಿದಾರರ ತಾಯಿ ಶ್ರೀಮತಿ ಸಿದ್ದಮ್ಮ ಕೋಂ ಲೇಟ್ ನಿಂಗೇಗೌಡ @ ಹುಳಕೇಗೌಡ ರವರು ಇದೇ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಯಡಮಾರನಹಳ್ಳಿ ಗ್ರಾಮದಲ್ಲಿ ದಿನಾಂಕ: 09.03.2014 ರಂದು ಮರಣ ಹೊಂದಿದ್ದು ಇವರ ಮರಣ ಪ್ರಮಾಣ ಪತ್ರವನ್ನು ಕೋರಿ ಎದುರುದಾರರಿಗೆ ನಿರ್ದೇಶನ ನೀಡುವಂತೆ ಈ ಅರ್ಜಿಯನ್ನು ಸಲಿಸಿದ್ದು. ಇವರ ಮರಣ ದಿನಾಂಕದ ಬಗ್ಗೆ ಬೇರೆ ಯಾರದ್ದಾದರು ತಕರಾರು ಇದ್ದ ಪಕ್ಷದಲ್ಲಿ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು, ಅಂದರೆ 30-01-2026 ರಂದು ಬೆಳಿಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ: 24-11-2025 ರಂದು ನನ್ನ ಸ್ವಹಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಕೀರ್ತಿರಾಜ್ .ಕೆ.ಆರ್, ವಕೀಲರು
ಸ್ಥಳ : ಕನಕಪುರ

ಮಾನ್ಯ ಗೌರವಾನ್ವಿತ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 690/2025
ಅರ್ಜಿದಾರರು: 1. ಶ್ರೀಮತಿ.ಜಯಮ್ಮ ಕೋಂ ಲೇಟ್ ದೇವೆಗೌಡ ವಯಸ್ಸು 75 ವರ್ಷ, ವಾಸ: ಯಡಮಾರನಹಳ್ಳಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
ವಿರುದ್ಧ
[illegible]

ಮಾನ್ಯ ಗೌರವಾನ್ವಿತ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 689/2025
ಅರ್ಜಿದಾರರು: 1. ಶ್ರೀಮತಿ.ಜಯಮ್ಮ ಕೋಂ ಲೇಟ್ ದೇವೆಗೌಡ ವಯಸ್ಸು 75 ವರ್ಷ, ವಾಸ: ಯಡಮಾರನಹಳ್ಳಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 688/2025
ಅರ್ಜಿದಾರರು: 1. ಶ್ರೀಮತಿ ಶಿವನಮ್ಮ ಕೋಂ ಲೇಟ್ ಶಿವನೇಗೌಡ ಕೋಂ ಗುಂಡಪ್ಪ ವಯಸ್ಸು 64 ವರ್ಷ ವಾಸ: ಹಂಚಗುಳಿ ಗ್ರಾಮ, ವೆಂಕಟರಾಯನದೊಡ್ಡಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ) ಮತ್ತು ಇತರರು
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಹಂಚಗುಳಿ ವೃತ್ತ, ಹಂಚಗುಳಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳುರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ)
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3ನೇ ಅರ್ಜಿದಾರರ ತಂದೆ ಮತ್ತು 4 & 5ನೇ ಅರ್ಜಿದಾರರ ಮಾವನವರಾದ ಶ್ರೀ ಶಿವನೇಗೌಡ ಬಿನ್ ಲೇಟ್ ಬೋಳಮಾದೇಗೌಡ ಮಾದೇಗೌಡ ರವರು, ದಿನಾಂಕ 10.06.2020 ರಂದು ಬೆಂಗಳೂರು ದಕ್ಷಿಣ ಜಿಲ್ಲೆ (ಹಿಂದೆ ರಾಮನಗರ ಜಿಲ್ಲೆ), ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹಂಚಗುಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 30/01/2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 24ನೇ ನವಂಬರ್ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿ.ಎಂ.ಜಗದೀಶ್, ವಕೀಲರು, ಕನಕಪುರ
ಸ್ಥಳ : ಕನಕಪುರ, ದಿನಾಂಕ: 25/11/2025

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 687/2025
ಅರ್ಜಿದಾರರು: 1. ಶ್ರೀಮತಿ ಶಿವನಮ್ಮ ಕೋಂ ಲೇಟ್ ಶಿವನೇಗೌಡ ಕೋಂ ಗುಂಡಪ್ಪ ವಯಸ್ಸು 64 ವರ್ಷ ವಾಸ: ಹಂಚಗುಳಿ ಗ್ರಾಮ, ವೆಂಕಟರಾಯನದೊಡ್ಡಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ) ಮತ್ತು ಇತರರು
ವಿರುದ್ಧ
[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 686/2025
ಅರ್ಜಿದಾರರು: 1. ಶ್ರೀಮತಿ ಶಿವನಮ್ಮ ಕೋಂ ಲೇಟ್ ಶಿವನೇಗೌಡ ಕೋಂ ಗುಂಡಪ್ಪ ವಯಸ್ಸು 64 ವರ್ಷ ವಾಸ: ಹಂಚಗುಳಿ ಗ್ರಾಮ, ವೆಂಕಟರಾಯನದೊಡ್ಡಿ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ, (ಹಿಂದೆ ರಾಮನಗರ ಜಿಲ್ಲೆ) ಮತ್ತು ಇತರರು
ವಿರುದ್ಧ
[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 685/2025
[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 684/2025
[illegible]

ಹೈಕೋರ್ಟ್ ಆದೇಶಕ್ಕೆ ತಡೆ ನೀಡಬೇಕೆಂದು ಕೋರಿಕೆ

ಸುಪ್ರೀಂ ಮೆಟ್ಟಿಲೇರಿದ ಬಿಎಸ್‌ವೈ

ಬೆಂಗಳೂರು: ಅಪ್ರಾಪ್ತ ಬಾಲಕಿಯ ಮೇಲಿನ ಲೈಂಗಿಕ

ದೌರ್ಜನ್ಯ ಆರೋಪಕ್ಕೆ (ಪೋಕ್ಸೋ) ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ.

ಪ್ರಕರಣದ ದೋಷಾರೋಪಣಾ ಪಟ್ಟಿ ಪರಿಗಣಿಸಿ ವಿಚಾರಣಾ ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿದ್ದ ಕ್ರಮವನ್ನು ನವೆಂಬರ್ 13ರಂದು ಹೈಕೋರ್ಟ್ ಎತ್ತಿ ಹಿಡಿದಿತ್ತು. ಈ ಆದೇಶಕ್ಕೆ ತಡೆ ನೀಡಬೇಕೆಂದು ಕೋರಿ ಯಡಿಯೂರಪ್ಪ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಹೈಕೋರ್ಟ್‌ನ ಏಕಸದಸ್ಯ ಪೀಠವು ವಿಚಾರಣಾ ನ್ಯಾಯಾಲಯದ ಕ್ರಮ ಸಿಂಧು ಎಂದು ಘೋಷಿಸಿದ ನಂತರ, ನವೆಂಬರ್ 18ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಯಡಿಯೂರಪ್ಪ ಸೇರಿದಂತೆ ನಾಲ್ವರು ಆರೋಪಿಗಳಿಗೆ ಹೊಸದಾಗಿ ಸಮನ್ಸ್ ಜಾರಿ ಮಾಡಿತ್ತು. ಡಿ.2ರಂದು ಆರೋಪಿಗಳು ಕಡ್ಡಾಯವಾಗಿ ನ್ಯಾಯಾಲಯದ ಮುಂದೆ ಹಾಜರಾಗಬೇಕು ಎಂದು ಸೂಚಿಸಿತ್ತು. ಪೋಕ್ಸೋ ಕಾಯಿದೆಯ ಸೆಕ್ಷನ್ 35ರ ಅನ್ವಯ, ಪ್ರಕರಣದ ಕಾಗ್ನಿಜೆನ್ಸ್ ತೆಗೆದುಕೊಂಡ 30 ದಿನಗಳ ಒಳಗಾಗಿ ಸಂತ್ರಸ್ತ ಬಾಲಕಿಯ ಸಾಕ್ಷ್ಯವನ್ನು ದಾಖಲಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ, ಡಿ.2ರಿಂದಲೇ ಅಧಿಕೃತ ವಿಚಾರಣೆ ಪ್ರಕ್ರಿಯೆಗಳು ಆರಂಭವಾಗುವ ಸಾಧ್ಯತೆಯಿದೆ. ಸದ್ಯ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯಲ್ಲಿ ಸಿಐಡಿ ಮತ್ತು ಬೆಂಗಳೂರು ಪೊಲೀಸರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದ್ದು, ಸುಪ್ರೀಂಕೋರ್ಟ್ ಈ ಅರ್ಜಿಯನ್ನು ಇನ್ನೂ ವಿಚಾರಣೆಗೆ ಪಟ್ಟಿ ಮಾಡಿಲ್ಲ.

ಏನಿದು ಪ್ರಕರಣ?

ಕಳೆದ ವರ್ಷ ಫೆಬ್ರವರಿ 2ರಂದು ಯಡಿಯೂರಪ್ಪ ಅವರು ತಮ್ಮ ನಿವಾಸದಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಬಾಲಕಿಯ ತಾಯಿ ದೂರು ನೀಡಿದ್ದರು. ಈ ದೂರಿನ ಅನ್ವಯ ಮಾರ್ಚ್ 14ರಂದು ಸದಾಶಿವ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾ ಗಿತ್ತು. ಪ್ರಕರಣದ ತನಿಖೆ ನಡೆಸಿದ ಸಿಐಡಿ ಪೊಲೀಸರು, ಜೂನ್ 27ರಂದು ಯಡಿಯೂರಪ್ಪ ಮತ್ತು ಅವರ ಆಪ್ತ ಸಹಾಯಕರಾದ ರುದ್ರೇಶ್ ಎಂ, ಅರುಣ್ ವೈ.ಎಂ. ಹಾಗೂ ಮಾರಿಸ್ವಾಮಿ ಜಿ. ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ನಿರ್ಬಂಧ ತೆರವು ಆದೇಶ ವಜಾಗೊಳಿಸಿದ ಹೈಕೋರ್ಟ್

ಕನ್ಹೇರಿ ಸ್ವಾಮೀಜಿ ಧಾರವಾಡ ಪ್ರವೇಶಕ್ಕೆ ಅಸ್ತು

ಬೆಂಗಳೂರು: ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕನ್ಹೇರಿ



ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗೆ ಮುಂದಿನ ವರ್ಷದ ಜನವರಿ 3ರವರೆಗೆ ಧಾರವಾಡ ಜಿಲ್ಲೆಗೆ ಪ್ರವೇಶ ನಿರ್ಬಂಧಿಸಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್‌ನ ಧಾರವಾಡ ಪೀಠವು ಮಂಗಳವಾರ ವಜಾಗೊಳಿಸಿದೆ. ಇದರಿಂದ ಕಾಡಸಿದ್ದೇಶ್ವರ ಸ್ವಾಮೀಜಿ ಧಾರವಾಡ ಜಿಲ್ಲಾ ಪ್ರವೇಶವು ಸುಗಮಗೊಂಡಿದೆ.

ಧಾರವಾಡ ಜಿಲ್ಲಾಧಿಕಾರಿಯು 05.11.2025ರಿಂದ 3.01.2026ರವರೆಗೆ ನಿರ್ಬಂಧ ವಿಧಿಸಿ ನ. 4ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಕಾಡಸಿದ್ದೇಶ್ವರ ಸ್ವಾಮೀಜಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಸ್ವಾಮೀಜಿಯನ್ನು ನಿರ್ಬಂಧಿಸಿ ಜಿಲ್ಲಾಡಳಿತ ಮಾಡಿರುವ ಆದೇಶವು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಪರೀಕ್ಷೆಯಲ್ಲಿ ನಪಾಸಾಗಿದೆ. ಅನುಮಾನದ ಆಧಾರದಲ್ಲಿ ಸ್ವಾಮೀಜಿಯನ್ನು ನಿರ್ಬಂಧಿಸಲಾಗಿದ್ದು, ಯಾವುದೇ ಕಾರಣಗಳನ್ನು ಸರಕಾರ ನೀಡಿಲ್ಲ. ಅರ್ಜಿದಾರ ಸ್ವಾಮೀಜಿಯು ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೆ. ಸ್ವಾತಂತ್ರ್ಯದ ಎಲ್ಲೆಯನ್ನು ಮೀರುವುದಿಲ್ಲ ಎಂಬ ಅವರ ಪರ ವಕೀಲ ಮುಚ್ಚಳಿಕೆಯನ್ನು ದಾಖಲೆಯಲ್ಲಿ ಸ್ವೀಕರಿಸಲಾಗಿದ್ದು, ಅರ್ಜಿ ಪುರಸ್ಕರಿಸಲಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ.

4.11.2025ರಂದು ಧಾರವಾಡ ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶವನ್ನು ವಜಾಗೊಳಿಸಲಾಗಿದೆ. ಆಕ್ಷೇಪಿತ ಆದೇಶದ ಪ್ರಕಾರ ಕೈಗೊಂಡಿದ್ದ ಕ್ರಮ ಹಾಗೂ ಕೈಗೊಳ್ಳಬಹುದಾದ ಕ್ರಮಗಳನ್ನೂ ವಜಾಗೊಳಿಸಲಾಗಿದೆ ಎಂದು ನ್ಯಾಯಾಲಯ ಆದೇಶಿಸಿತು.

ಪ್ರಕರಣದ ಹಿನ್ನೆಲೆ ಏನು?

ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಧಾರವಾಡದ ಅಣ್ಣಿಗೇರಿ ತಾಲೂಕಿನ ಹಳ್ಳಿಕೇರಿ ಗ್ರಾಮದಲ್ಲಿ 05.11.2025ರಿಂದ 07.11.2025ರವರೆಗೆ ನಡೆಯಲಿದ್ದ ಸಮರ್ಥ ಸಹಜಾನಂದ ಮಹಾರಾಜರ ಸಪ್ತಾದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬರಲಿದ್ದರು. ಇದನ್ನು ವಿರೋಧಿಸಿ, ಕಾಡಸಿದ್ದೇಶ್ವರ ಸ್ವಾಮೀಜಿ ಪ್ರವೇಶಕ್ಕೆ ನಿರ್ಬಂಧಿಸುವಂತೆ ಕೋರಿ ಧಾರವಾಡ ಜಿಲ್ಲೆಯ ಬಸವಪರ ಸಂಘಟನೆ ಮತ್ತು ಜಿಲ್ಲೆಯ ಸಮಸ್ತ ಲಿಂಗಾಯತರು ಜಿಲ್ಲಾಧಿಕಾರಿಗೆ ಮನವಿ ನೀಡಿದ್ದರು. ಇದನ್ನು ಕಾನೂನು ಸುವ್ಯವಸ್ಥೆ ಕಾರಣ ನೀಡಿ ಧಾರವಾಡ ಜಿಲ್ಲಾಧಿಕಾರಿಯು 04.11.2025ರಂದು ಬಿಎನ್‌ಎಸ್‌ಎಸ್ ಸೆಕ್ಷನ್ 163(4) ಅಡಿ ಸ್ವಾಮೀಜಿಗೆ ಧಾರವಾಡ ಜಿಲ್ಲೆಗೆ 05.11.2025ರಿಂದ 3.01.2026ರವರೆಗೆ ಪ್ರವೇಶಿಸದಂತೆ ನಿರ್ಬಂಧಿಸಿದ್ದರು.

ಸಮಾಚಾರ ಸಣ್ಣದಲ್ಲ

ಸುಸ್ಥಿರ ವಿಭಾಗದಲ್ಲಿ ಸ್ಥಾನ ಪಡೆದ ಟೆಫೆ

ಬೆಂಗಳೂರು: ವಿಶ್ವದ ಅತಿದೊಡ್ಡ ಟ್ರಾಕ್ಟರ್ ತಯಾರಕರಲ್ಲಿ ಒಂದಾದ ಟೆಫೆ (ಟ್ರಾಕ್ಟರ್ಸ್ ಮತ್ತು ಫಾರ್ಮ್ ಎಕ್ವಿಪ್ಮೆಂಟ್ ಲಿಮಿಟೆಡ್) ಇವಿಎಕ್ಸ್ 75 ಎಂಬ ತನ್ನ ಹೊಸ ಎಲೆಕ್ಟ್ರಿಕ್ ಹೈಬ್ರಿಡ್ ಟ್ರಾಕ್ಟರ್ ಮಾದರಿ ಅನಾವರಣಗೊಳಿಸಿತು. ಸುಸ್ಥಿರ ಟ್ರಾ ್ಯಕ್ಟರ್ ವಿಭಾಗದಲ್ಲಿ ವರ್ಷದ ಟ್ರಾ ್ಯಕ್ಟರ್ 2026 ಪ್ರಶಸ್ತಿಗೆ ಅಂತಿಮ ಸ್ಪರ್ಧಿಯಾಗಿ ಆಯ್ಕೆಯಾಗಿ ಟೆಫೆ ಇವಿ 28 ಎಲೆಕ್ಟ್ರಿಕ್ ಟ್ರಾಕ್ಟರ್ ಸಹ ಕಂಪನಿಗೆ ಮತ್ತೊಂದು ಗರಿಯನ್ನು ಸೇರಿಸಿತು. ಇವಿಎಕ್ಸ್75 ಜತೆಗೆ, ಟೆಫೆ ತನ್ನ ಹೊಸ ದೃಷ್ಟಿ ಮಾರ್ಗದರ್ಶನ ವ್ಯವಸ್ಥೆ ಮತ್ತು 100 ಎಚ್‌ಪಿ ಟ್ರಾಕ್ಟರ್ ಅನ್ನು ಹೊಸ ಕ್ಯಾಬ್, 74 ಎಚ್.ಪಿ ಆರ್ಚರ್ಡ್ ಮತ್ತು ಫ್ರೂಟ್ ಟ್ರಾಕ್ಟರ್ ಮತ್ತು ಕಾಂಪ್ಯಾಕ್ಟ್ ಯುಟಿಲಿಟಿ ಸರಣಿ, 65 ಎಚ್‌ಪಿ ಗಳನ್ನು ಒಳಗೊಂಡ ಹೊಸ ಶ್ರೇಣಿಯನ್ನು ಪ್ರದರ್ಶಿಸಿತು, ಪ್ರತಿಯೊಂದೂ ಯುರೋಪಿಯನ್ ರೈತರ ವೈವಿಧ್ಯಮಯ ಕಾರ್ಯಾಚರಣೆಗಳು ಮತ್ತು ಅವಶ್ಯಕತೆಗಳನ್ನು ಪೂರೈಸಲು ವಿನ್ಯಾಸಗೊಳಿಸಲಾಗಿದೆ.

ನಾಳೆ ನೀರಿನ ಅದಾಲತ್

ಬೆಂಗಳೂರು: ಜಲ ಮಂಡಳಿಯ ವಿವಿಧ ಉಪ ವಿಭಾಗಗಳಾದ ಆಗ್ನೇಯ -3, ಆಗ್ನೇಯ 6, ಪಶ್ಚಿಮ 1-3, ವಾಯುವ್ಯ -5, ಉತ್ತರ 2-3, ದಕ್ಷಿಣ 1-3, ನೈರುತ್ಯ - 3, ನೈರುತ್ಯ -6, ಮತ್ತು ಪೂರ್ವ 2-4, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನ.27ರಂದು ಬೆ. 9.30 ಗಂಟೆಯಿಂದ 11 ಗಂಟೆಯವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ. ಅದಾಲತ್ ಸೇವಾ ಠಾಣೆಗಳಾದ ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನಹಳ್ಳಿ, ಬಿ.ಟಿ.ಎಂ ಲೇಔಟ್, 1, 2 ಮತ್ತು 3, ವೆಸ್ಟ್ ಆಫ್ ಕಾರ್ಡ್ ರಸ್ತೆ, 1 ಮತ್ತು 2, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾಲಕ್ಷ್ಮೀ ಲೇಔಟ್, ಅಗ್ರಹಾರ ದಾಸರಹಳ್ಳಿ, ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು, ಜಿ.ಕೆ.ವಿ.ಕೆ, ಮಾನ್ಯತಾ ಟೆಕ್ ಪಾರ್ಕ್, ಅಂಜನಾಪುರ, ಬ್ಯಾಂಕ್ ಆಫೀಸರ್ಸ್ ಲೇಔಟ್, ಗೊಟ್ಟಿಗೆರೆ, ಎಂ.ಎನ್, ಪಾರ್ಕ್, ಬಿ.ಟಿ.ಆರ್, ಮೌಂಟ್ಜಾಯ್, ನಾಗೇಂದ್ರಬ್ಲಾಕ್, ಗಿರಿನಗರ, ಅಂಗಧೀರನಹಳ್ಳಿ, ಹೆಮ್ಮಿಗೆಪುರ, ಬನಶಂಕರಿ 6ನೇ ಹಂತ, ಕೆ.ಆರ್. ಪುರ, ಬಸವನಪುರ, ದೇವಸಂದ್ರ, ರಾಮಮೂರ್ತಿ ನಗರ, ವಿಜಿನಾಪುರ, ದೂರವಾಣಿನಗರ ಇಲ್ಲಿ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಮದ್ಯಪಾನ ನಿಷೇಧಿಸಿ: ಮಹಿಳೆಯರ ಆಗ್ರಹ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ನೀಡುತ್ತಿರುವ 2 ಸಾವಿರ ನಿಲ್ಲಿಸಿದರೂ ಪರವಾಗಿಲ್ಲ, ಬಿಹಾರದ ಮಾದರಿಯಲ್ಲಿ ಕರ್ನಾಟಕದಲ್ಲೂ ಮದ್ಯ ನಿಷೇಧ ಜಾರಿ ಮಾಡಬೇಕು ಎಂದು ಮದ್ಯ ನಿಷೇಧ ಆಂದೋಲನದಲ್ಲಿ ಭಾಗವಹಿಸಿದ್ದ ಮಹಿಳೆಯರು ಒತ್ತಾಯಿಸಿದರು. ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಮದ್ಯ ನಿಷೇಧ ಆಂದೋಲನ ಸಂಘಟಿಸಿದ್ದ ಬೆಂಗಳೂರು ಚಲೋದಲ್ಲಿ ಭಾಗವಹಿಸಿದ್ದ ರಾಜ್ಯದ ನಾನಾ ಭಾಗಗಳ ಆರು ಸಾವಿರಕ್ಕೂ ಅಧಿಕ ಮಹಿಳೆಯರು, 25ಕ್ಕೂ ಹೆಚ್ಚು ಸಂಘಟನೆಗಳ ಕಾರ್ಯಕರ್ತರು ಒಕ್ಕೊರಲಿನಿಂದ ಈ ಆಗ್ರಹ ಮಾಡಿದರು.ಶಾಸಕ ಬಿ.ಆರ್.ಪಾಟೀಲ ಮಾತನಾಡಿ, ಬಿಹಾರದಲ್ಲಿ ನಿತೀಶ್‌ಕುಮಾರ್ ಅವರು ಮದ್ಯ ನಿಷೇಧ ಮಾಡಿದ್ದಾರೆ. ಆ ರಾಜ್ಯದಲ್ಲಿ ಈಗ ಶೇ 70ರಷ್ಟು ಮದ್ಯ ಮಾರಾಟ ನಿಯಂತ್ರಣದಲ್ಲಿದೆ. ಇದೇ ಮಾದರಿಯಲ್ಲಿ ಸಿದ್ದರಾಮಯ್ಯ ಅವರೂ ಕರ್ನಾಟಕದಲ್ಲಿ ಮದ್ಯ ನಿಯಂತ್ರಣಕ್ಕೆ ಕಾನೂನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.ಇದು ಹಲವು ವರ್ಷಗಳಿಂದ ನಡೆದಿರುವ ಹೋರಾಟ. ಅಧಿವೇಶನದಲ್ಲೂ ಈ ವಿಚಾರ ಪ್ರಸ್ತಾಪಿಸಿದ್ದೇನೆ. ಸರಕಾರದ ಇತಿಮಿತಿ ಗೊತ್ತಿದ್ದರೂ ಜನರ ಹಿತದೃಷ್ಟಿಯಿಂದ ಇದು ಜಾರಿಯಾಗುವುದು ಒಳ್ಳೆಯದು. ಪ್ರಧಾನಿ ನರೇಂದ್ರ ಮೋದಿ ಅವರು ದೇಶದಾದ್ಯಂತ ಪಾನ ನಿಷೇಧ ಜಾರಿಗೊಳಿಸಲು ಯೋಚಿಸಬೇಕು ಎಂದು ಪಾಟೀಲ ಆಗ್ರಹಿಸಿದರು. ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜನರು ಸರಕಾರದಿಂದ ಸಿಗುವ ಲಾಭದ ಬದಲು ನೆಮ್ಮದಿಯ ಬದುಕು ಬಯಸುತ್ತಿದ್ದಾರೆ. ಯೋಜನೆಗಳನ್ನು ಜಾರಿ ಮಾಡುವ ನೆಪದಲ್ಲಿ ಸರಕಾರಗಳು ಮದ್ಯ ಮಾರಾಟ ಹೆಚ್ಚಿಸುತ್ತಿವೆ. ಜನರ ಹಣ, ಆರೋಗ್ಯ, ನೆಮ್ಮದಿ ಹಾಳು ಮಾಡುತ್ತಿರುವ ಮದ್ಯವನ್ನು ದೇಶದಾದ್ಯಂತ ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಕಾರ್ಯವೈಖರಿ ಕುರಿತ ಆರೋಪ ಪರಿಶೀಲಿಸಲಿ

ಬೆಂಗಳೂರು: ಡಾ. ಬಿ.ಆರ್.ಅಂಬೇಡ್ಕರ್ ಸಮಾಜ ಕಲ್ಯಾಣ ಸಂಶೋಧನಾ ಸಂಸ್ಥೆಯ ಮಾದರಿಯಲ್ಲಿ ಅಲ್ಪಸಂಖ್ಯಾತ ಸಮುದಾ ಯದ ಕಲ್ಯಾಣದ ಕುರಿತು ಸಂಶೋಧನೆ ಮತ್ತು ಚಟುವಟಿ ಕೆಗಳನ್ನು ಕೈಗೊಳ್ಳಲು ಅಲ್ಪಸಂಖ್ಯಾತ ಕಲ್ಯಾಣ ನಿರ್ದೇಶನಾಲಯದ ವತಿಯಿಂದ 2015ರಲ್ಲಿ ಸ್ಥಾಪಿಸಲಾಗಿರುವ ಸರ್ ಸೈಯದ್ ಅಹ್ಮದ್ ಖಾನ್ ಸಂಶೋಧನಾ ಕೇಂದ್ರದ ಕಾರ್ಯವೈಖರಿ ಕುರಿತು ಮಾಡಲಾಗಿರುವ ಆರೋಪ ಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವಂತೆ ರಾಜ್ಯ ಸರಕಾರಕ್ಕೆ ಕರ್ನಾಟಕ ಹೈಕೋರ್ಟ್ ನಿರ್ದೇಶನ ನೀಡಿದೆ.ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ವಜೀರ್ ಬೇಗ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿ ಎಂ ಪೂಣಚ್ಚ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲರು ಡಾ.ಬಿ.ಆರ್. ಅಂಬೇಡ್ಕರ್ ಸಮಾಜ ಕಲ್ಯಾಣ ಸಂಶೋಧನಾ ಸಂಸ್ಥೆ ಹಾಗೂ ಡಿ.ದೇವರಾಜ ಅರಸು ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮಾದರಿಯಲ್ಲಿ ಅಲ್ಪಸಂಖ್ಯಾತ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು, ಕಲ್ಯಾಣ ಕಾರ್ಯಕ್ರಮಗಳ ಕುರಿತು ಸಂಶೋಧನಾ ಅಧ್ಯಯನ ನಡೆಸಿ ವರದಿ ಸಲ್ಲಿಸಲು 2015ರಲ್ಲಿ ಸರ್ ಸೈಯದ್ ಅಹ್ಮದ್ ಖಾನ್ ಸಂಶೋಧನಾ ಕೇಂದ್ರ ಸ್ಥಾಪಿಸಲಾಗಿದೆ. ಈ ಸಂಸ್ಥೆಗೆ ವರ್ಷಕ್ಕೆ 4.5 ಕೋಟಿ ರು. ನೀಡಲಾಗುತ್ತಿದೆ. ಆದರೆ, ಕಳೆದ 10 ವರ್ಷಗಳಲ್ಲಿ ಒಂದೇ ಒಂದು ಸಂಶೋಧನೆ ನಡೆಸಿದ ಉದಾಹರಣೆ ಇಲ್ಲ. ನಿರ್ದೇಶಕರ ವಿರುದ್ಧ ತನಿಖೆಗೆ ಆದೇಶಿಸಲಾಗಿದೆ. ಸಂಶೋಧನಾ ಕೇಂದ್ರದ ಕಾರ್ಯವೈಖರಿ ಬಗ್ಗೆ ತನಿಖೆ ನಡೆಸಲು ಆದೇಶಿಸಬೇಕು ಎಂದು ಕೋರಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಗಗನಯಾನಿ ಶುಭಾಂಶು ಶುಕ್ಲಾ ಅಭಿಮತ

ಗಗನಯಾನಿಯಾಗಲು ಶಿಸ್ತು ಬಹಳ ಮುಖ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜತೆಗೆ ಜೀವನದಲ್ಲಿ ಶಿಸ್ತು ರೂಢಿಸಿಕೊಂಡಲ್ಲಿ, ನೀವು ನನ್ನ ರೀತಿ ಗಗನಯಾನಿ ಆಗಬಹುದು ಎಂದು ಗಗನಯಾನಿ ಶುಭಾಂಶು ಶುಕ್ಲಾ ತಿಳಿಸಿದರು.

ಕರ್ನಾಟಕ ಸರಕಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ಜವಾಹರಲಾಲ್ ನೆಹರು ತಾರಾಲಯದಲ್ಲಿ ಆಯೋಜಿಸಿದ್ದ ಆಕ್ಸಿಯಂ ಸ್ಪೇಸ್-4 ಮಿಷನ್ ಯಶಸ್ವಿಯ ರುವಾರಿಯಾಗಿರುವ ಗಗನ ಯಾತ್ರಿ ಶುಭಾಂಶು ಶುಕ್ಲಾ ಅವರಿಗೆ ಅಭಿನಂದನೆ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಈ ವೇಳೆ ವಿದ್ಯಾರ್ಥಿಗಳ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದರು. 'ನೀವು ಸಹ ನನ್ನಂತೆಯೇ ಗಗನಯಾನಿ ಆಗಬಹುದು. ಆದರೆ, ಇದೊಂದೇ ಆಗಬೇಕೆಂದು ಕನಸು ಕಾಣಬೇಡಿ. ಏಕೆಂದರೆ, ಈ ಅವಕಾಶ ಎಲ್ಲರಿಗೂ ಸಿಗುವುದಿಲ್ಲ, ನಾನು ಹೀರೋ ರೀತಿ ನಿಮಗೆ ಕಾಣಬಹುದು. ಆದರೆ, ನನ್ನ ಯಾತ್ರೆಗೆ ಸಾವಿರಾರೂ ಮಂದಿ ಕೆಲಸ ಮಾಡಿದ್ದಾರೆ. ಎಂಜಿನಿಯರ್, ವೈದ್ಯರು ಹೀಗೆ ಸಾಕಷ್ಟು ಮಂದಿ ಇದ್ದಾರೆ. ಅವರಂತೆ ನೀವು ಆಗಬಹುದು' ಎಂದರು.

ಸಾಕಷ್ಟು ಸ್ಫೂರ್ತಿ: ನನ್ನ ಗಗನಯಾನಕ್ಕೆ ಸಾಕಷ್ಟು ಜನರ ಸ್ಫೂರ್ತಿ ಇದೆ. ಹೀಗಾಗಿ ಒಬ್ಬಿಬ್ಬರ ಹೆಸರೇಳುವುದು ಕಷ್ಟ. ಗಗನಯಾನಿ ರಾಕೇಶ್ ಶರ್ಮಾ ಅವರಿಂದ ನಾನು ಸಾಕಷ್ಟು ಕಲಿತಿದ್ದೇನೆ. ನೀವು ಜೀವನದಲ್ಲಿ ಗುರಿ ಇಟ್ಟುಕೊಳ್ಳಬೇಕು. ಅದನ್ನು ಸಾಧಿಸುವ ಛಲ ಇರಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ತಾಳ್ಮೆ ಇರಬೇಕು. ಏಕೆಂದರೆ, ನಾನು 20 ದಿನಗಳ ಯಾತ್ರೆಗೆ 5 ವರ್ಷಗಳ ತರಬೇತಿ ಪಡೆದಿದ್ದೇನೆ' ಎಂದರು.

'ಗಗನಯಾನ ನೀವು ಅಂದುಕೊಂಡಷ್ಟು ಸುಲಭವಾಗಿಲ್ಲ. ಹೊಸ ವಾತಾವರಣಕ್ಕೆ ಹೊಂದುಕೊಳ್ಳುವುದು ತೀರಾ ಕಷ್ಟ. ಬಾಹ್ಯಾಕಾಶಕ್ಕೆ ಹೋದ ಮೇಲೆ ನಾನು ಗಾಳಿಯಲ್ಲಿ ತೇಲಾಡುವುದು ಅಭ್ಯಾಸ ಮಾಡಿಕೊಂಡೆ. ಅಲ್ಲಿ ಹಲವಾರು ಸಂಶೋಧನೆಗಳನ್ನು ಕೈಗೊಳ್ಳಲಾಯಿತು. ಭೂಮಿಗೆ ಬರುವಾಗ ತುಂಬಾ ಕಷ್ಟವಾಗಿತ್ತು. ಬಂದ ಮೇಲೆ ಒಂದು ವಾರದ ವರೆಗೆ ನನಗೆ ನೇರವಾಗಿ ನಿಂತುಕೊಳ್ಳುವುದಕ್ಕೆ ಸಹ ಆಗುತ್ತಿರಲಿಲ್ಲ ಎನ್ನುವ ಮೂಲಕ ತಮ್ಮ ಅನುಭವನ್ನು ವಿದ್ಯಾರ್ಥಿಗಳ ಎದುರು ಬಿಚ್ಚಿಟ್ಟರು..

ಈ ಸಮಾರಂಭದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುಳಾ, ಜವಾಹರಲಾಲ್ ನೆಹರು ತಾರಾಲಯದ ನಿರ್ದೇಶಕ ಡಾ.ಬಿ.ಆರ್.ಗುರುಪ್ರಸಾದ್ ಇತರರು ಇದ್ದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸರಕಾರಿ, ಖಾಸಗಿ ಶಾಲಾ ಮಕ್ಕಳು ಶುಭಾಂಶು ಶುಕ್ಲಾ ಅವರೊಂದಿಗೆ ಪ್ರಶ್ನೆಗಳನ್ನು ಕೇಳುವ ಮೂಲಕ ಸಂವಾದ ನಡೆಸಿದರು.

ಆಕ್ಸಿಯಂ ಸ್ಪೇಸ್-4 ಮಿಷನ್ ಯಶಸ್ವಿಯ ರುವಾರಿಯಾಗಿರುವ ಗಗನಯಾತ್ರಿ ಶುಭಾಂಶು ಶುಕ್ಲಾ ಅವರಿಗೆ ಅಭಿನಂದನೆ ಸಮಾರಂಭ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

> ನಮ್ಮ ಮಕ್ಕಳನ್ನು ನಿಮ್ಮಂತೆಯೇ ರೂಪಿಸಲು ನಾವು ಸಿದ್ಧರಾಗಿದ್ದೇವೆ. ಇದಕ್ಕಾಗಿ ನಾವು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಿದ್ದೇವೆ. ಸರಕಾರಿ ಶಾಲಾ ಮಕ್ಕಳಿಗಾಘಿ ಕಂಪ್ಯೂಟರ್ಗಳನ್ನು ನೀಡುತ್ತಿದ್ದೇವೆ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಪ್ರಾಮುಖ್ಯತೆ ಸಿಗಲಿದೆ. ಕನಸು ಕಾಣುವುದಕ್ಕೆ ಯಾವುದೇ ಮಿತಿ ಇಲ್ಲ ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು.
>
> - ಮಧು ಬಂಗಾರಪ್ಪ, ಸಚಿವ

ಜಿಫೋರ್ಸ್ ಪ್ರಭಾವ

ನಾನು 16-17 ವರ್ಷಗಳಿಂದ ಪೈಲೆಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಆದರೆ, ಎಂದಿಗೂ ಟಚ್‌ಸ್ಕ್ರೀನ್ ಬಳಕೆ ಮಾಡಿ ಏರ್‌ಕ್ರಾಫ್ಟ್, ಸ್ಪೇಸ್ ಕ್ರಾಫ್ಟ್ ಹಾರಾಟ ನಡೆಸಿರಲಿಲ್ಲ. ಆದರೆ, ಅಮೆರಿಕದ ಸ್ಪೇಸ್ ಎಕ್ಸ್‌ನ ಬಾಹ್ಯಾಕಾಶ ಯೋಜನೆಯು ಕ್ರೂ ಡ್ರ್ಯಾಗನ್ ಅನ್ನು ಕೇವಲ ಟಚ್ ಸ್ಕ್ರೀನ್‌ನಲ್ಲಿ ನಿಯಂತ್ರಿಸಬಹುದು. ಬಾಹ್ಯಕಾಶದಲ್ಲಿ ತುರ್ತು ಪರಿಸ್ಥಿತಿ ನಿರ್ಮಾಣವಾದರೆ, 18-20 ಜಿಫೋರ್ಸ್ ಮೈ ಮೇಲೆ ಬೀಳುತ್ತದೆ. ಅಂದರೆ, ಒಂದು ಮರಿಯಾನೆ ಎದೆಯ ಮೇಕಲೆ ಕುಳಿತಂತೆ ಭಾಸವಾಗುತ್ತದೆ ಎಂದು ಕ್ಲಿಷ್ಟಕರ ವಿಚಾರಗಳನ್ನು ತಿಳಿಸಿದರು.

> ನಿಮ್ಮ ಸಾಧನೆಗಳು ನಮಗೆ ಭಾರತದ ವೈಜ್ಞಾನಿಕ ಕಲ್ಪನೆಗೆ ಮಿತಿ ಇಲ್ಲ ಎಂಬುದನ್ನು ನೆನಪಿಸುತ್ತವೆ. ನೀವು ನಮ್ಮ ಜಾಗತಿಕ ಸ್ಥಾನಮಾನದಲ್ಲಿ ಹೊಸ ಅಧ್ಯಾಯವನ್ನು ಪ್ರತಿನಿಧಿಸುತ್ತೀರಿ. ಕರ್ನಾಟಕದ ಗ್ರಾಮೀಣ ಪ್ರದೇಶದ ಒಂದು ಮಗು ರಾತ್ರಿ ಆಕಾಶವನ್ನು ನೋಡಿದಾಗ, ಅದು ಮುಂದಿನ ಕಲ್ಪನಾ ಚಾವ್ಲಾ, ಮುಂದಿನ ಸುನಿತಾ ವಿಲಿಯಮ್ಸ್ ಅಥವಾ ಮುಂದಿನ ಶುಭಾಂಶು ಶುಕ್ಲಾ ಆಗುವ ಕನಸು ಕಾಣಬೇಕು. ಆ ಕನಸಿಗೆ ಸರಿಯಾದ ಬೆಂಬಲ ದೊರೆಯುವಂತೆ ಮಾಡುವುದು ಸರಕಾರ ಮತ್ತು ಸಮಾಜದ ಜವಾಬ್ದಾರಿಯಾಗಿದೆ.
>
> - ಭೋಸರಾಜು, ಸಚಿವ

25ರಿಂದ ಬೆಂಗಳೂರಲ್ಲಿ ಬಿ2ಬಿ ರೋಡ್ ಶೋ

ಬೆಂಗಳೂರು: ಕರ್ನಾಟಕ ಪ್ರವಾಸೋದ್ಯಮ ಸಂಸ್ಥೆ ವತಿಯಿಂದ ನ.25ರಿಂದ ದಕ್ಷಿಣ ಭಾರತದಾದ್ಯಂತ ಪ್ರಾದೇಶಿಕ ಬಿ2ಬಿ ರೋಡ್ ಶೋ ಅಭಿಯಾನವನ್ನು ಪ್ರಾರಂಭಿಸಲಿದೆ ಎಂದು ಕರ್ನಾಟಕ ಪ್ರವಾಸೋದ್ಯಮ ಸಂಘ ತಿಳಿಸಿದೆ.

ರ್‍ಯಾಲಿಗೆ ಕರ್ನಾಟಕ ಸರಕಾರದ ಪ್ರವಾಸೋದ್ಯಮ ಇಲಾಖೆ, ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಜಂಗಲ್ ಲಾಡ್ಜಸ್‌ರೆಸಾರ್ಟ್ಸ್ ಲಿಮಿಟೆಡ್ ಮತ್ತು ದಕ್ಷಿಣ ಭಾರತ ಹೋಟೇಲ್ ಮತ್ತು ರೆಸ್ಟೋರೆಂಟ್‌ಗಳ ಸಂಘದ ಸಹಯೋಗ ದೊಂದಿಗೆ ಆಯೋಜಿಸಲಾದ ಈ ರೋಡ್ ಶೋ ದಕ್ಷಿಣ ಭಾರತದ ಪ್ರಮುಖ ಮಾರುಕಟ್ಟೆಗಳಲ್ಲಿ ಕರ್ನಾ ಟಕದ ಸಾಂಸ್ಕೃತಿಕ, ನೈಸರ್ಗಿಕ ಮತ್ತು ಸಾಹಸ ಕೊಡುಗೆಗಳನ್ನು ಎತ್ತಿ ತೋರಿಸುತ್ತದೆ. ಕ್ಯುರೇಟೆಡ್ ಬಿ2ಬಿ ರೋಡ್ ಶೋಗಳು ತಮಿಳುನಾಡು ಮತ್ತು ಕೇರಳದಾದ್ಯಂತ ನಡೆಯಲಿದೆ.

ಈ ಸರಣಿಯು ನ.25 ರಂದು ಕೊಯಮತ್ತೂರಿನಲ್ಲಿ ಪ್ರಾರಂಭವಾಗಿ, ನಂತರ ನ.26 ರಂದು ಕೊಚ್ಚಿನ್‌ನಲ್ಲಿ, ನ.27 ರಂದು ಮಧುರೈನಲ್ಲಿ ಮತ್ತು ನ.28 ರಂದು ಸೇಲಂನಲ್ಲಿ ಮುಕ್ತಾಯ ಗೊಳ್ಳುತ್ತದೆ ಎಂದು ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

ವೃದ್ಧಾಪ್ಯ ಮಾದರಿ ಕೇಂದ್ರಗಳಿಗೆ ಜಾಗೃತಿ ಮೂಡಿಸುವ ಚಟುವಟಿಕೆ ಅಗತ್ಯ: ಪ್ರಿಯಾಂಕ್

ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ ಜಾಗೃತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗ್ರಾಮ ಪಂಚಾಯಿತಿಯ ಅರಿವು ಕೇಂದ್ರಗಳಲ್ಲಿ ಹಿರಿಯ ನಾಗರಿಕರಿಗಾಗಿ ಆರೋಗ್ಯಕರ ವಯೋವೃದ್ಧಾಪ್ಯ ಮಾದರಿ ರೂಪಿಸುವ ಉದ್ದೇಶದಿಂದ ಸರಕಾರ ಡಿಮೆನ್ಷಿಯಾ ಇಂಡಿಯಾ ಅಲಯನ್ಸ್ ಸಂಸ್ಥೆಯೊಂದಿಗೆ ಹಣ ಕಾಸು ರಹಿತ ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ಈ ವಿಷಯದ ಕುರಿತು ಜನರಿಗೆ ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಒಪ್ಪಂದದಡಿ ಡಿಐಎ ಸಂಸ್ಥೆ ಆಯ್ದ ಅರಿವು ಕೇಂದ್ರಗಳಲ್ಲಿ ಹಿರಿಯ ನಾಗರಿಕರಿಗೆ ಸಂಬಂಧಿಸಿದ ಚಟುವಟಿಕೆಗಳಿಂದ ಅವರ ದೈಹಿಕ, ಬೌದ್ಧಿಕ ಮತ್ತು ಸಾಮಾಜಿಕ ತೊಡಗಿಸಿಕೊಳ್ಳುವಿಕೆಯನ್ನು ಉತ್ತೇಜಿಸುವುದರ ಜೊತೆಗೆ ಆರೋಗ್ಯಕರ ವಯೋವೃದ್ಧಾಪ್ಯ ಚಟುವಟಿಕೆಗಳನ್ನು ನಡೆಸಲು ಗ್ರಂಥಾಲಯ ಮೇಲ್ವಿಚಾರಕರು ಮತ್ತು ಸಮುದಾಯ ಸ್ವಯಂಸೇವಕರಿಗೆ ತರಬೇತಿ ನೀಡಲು ಗ್ರಾಮೀಣಾಭಿವೃದ್ಧಿ ಇಲಾಖೆಯೊಂದಿಗೆ ಕೈಜೋಡಿಸಿದೆ ಎಂದರು.

ಈ ಯೋಜನೆ ಅಂಗವಾಗಿ ಸಮುದಾಯ ಮಟ್ಟದ ಸ್ಮರಣಾಶಕ್ತಿ, ತಪಾಸಣೆ ಶಿಬಿರಗಳು, ಜಾಗೃತಿ ಚಟುವಟಿಕೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಸಹಯೋಗದಲ್ಲಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ವೈದ್ಯಕೀಯ ಕಾಲೇಜುಗಳ ಸಹಕಾರದೊಂದಿಗೆ ಆಯೋಜಿಸಲಾಗುತ್ತದೆ ಮತ್ತು ಮಾನಸಿಕ ಆರೋಗ್ಯ ಸೇವೆಗಳೊಂದಿಗೆ ರೆಫೆರಲ್ ಸಂಪರ್ಕಗಳನ್ನು ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು. ರಾಜ್ಯದ ಆಯ್ದ ತಾಲೂಕು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಪ್ರಾಯೋಗಿಕವಾಗಿ ಮಾದರಿ ಕೇಂದ್ರಗಳನ್ನು ಸ್ಥಾಪಿಸುವುದರಿಂದ ಪ್ರಾರಂಭವಾಗುವ ಈ ಕಾರ್ಯಕ್ರಮವನ್ನು ಮುಂದಿನ ಮೂರು ವರ್ಷಗಳಲ್ಲಿ ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರ ನೇತೃತ್ವದ ಜಂಟಿ ಚಾಲನಾ ಸಮಿತಿಯು ಯೋಜನೆಯ ಅನುಷ್ಠಾನವನ್ನು ಮಾರ್ಗದರ್ಶನ ಮಾಡಿ, ಮೇಲ್ವಿಚಾರಣೆ ಮಾಡುತ್ತದೆ ಹಾಗೂ ಡಿಮೆನ್ಷಿಯಾ ಸ್ಪಂದನಶೀಲ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆಗಳಲ್ಲಿ ವ್ಯವಸ್ಥಿತವಾಗಿ ಅಳವಡಿಸುವುದನ್ನು ಖಾತ್ರಿಪಡಿಸುತ್ತದೆ ಎಂದರು.

ಗ್ರಾಮ ಡಿಜಿ ವಿಕಸನಾ ಕಾರ್ಯಕ್ರಮ

ಗ್ರಾಮ ಡಿಜಿ ವಿಕಸನಾ ಕಾರ್ಯಕ್ರಮವನ್ನು ಇನ್ನಷ್ಟು ಬಲಪಡಿಸಲು ಕರ್ನಾಟಕದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಶಿಕ್ಷಣ ಫೌಂಡೇಶನ್ನೊಂದಿಗೆ ಹೊಂದಿದ್ದ ಅನುದಾನ ರಹಿತ ಒಡಂಬಡಿಕೆಯನ್ನು ನವೀಕರಿಸಲಾಗಿದೆ. ನವೀಕರಿಸಿದ ಈ ಒಪ್ಪಂದವು ಸಂಸ್ಥೆಯ ಸಹಕಾರದ ವ್ಯಾಪ್ತಿಯನ್ನು ವಿಸ್ತರಿಸಿ, ರಾಜ್ಯದ ಎಲ್ಲಾ ಸಕ್ರಿಯ ಅರಿವು ಕೇಂದ್ರಗಳು ಹಾಗೂ ಇತ್ತೀಚೆಗೆ ಆರಂಭಿಸಲ್ಪಟ್ಟ ಅರಿವು ಕೇಂದ್ರಗಳಲ್ಲಿ ಉನ್ನತೀಕರಿಸಿದ ಡಿಜಿಟಲ್ ಮೂಲಸೌಕರ್ಯವನ್ನು ಒದಗಿಸಲಾಗುವುದು. ಈ ಕುರಿತು ಶಿಕ್ಷಣ ಫೌಂಡೇಶನ್ ತರಬೇತಿ ನೀಡಲಿದೆ ಎಂದು ಮಾಹಿತಿ ನೀಡಿದರು.

> ಮುಂದಿನ ಮೂರು ವರ್ಷಗಳಲ್ಲಿ ಹಂತ ಹಂತವಾಗಿ ರಾಜ್ಯದಾದ್ಯಂತ ಮಾದರಿ ಡಿಜಿಟಲ್ ಕೇಂದ್ರಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯಗಳಿಗೆ ತಂತ್ರಜ್ಞಾನ ಕೇಂದ್ರಗಳಾಗಿ ಮಾದರಿ ಡಿಜಿಟಲ್ ಕೇಂದ್ರಗಳು ಸೇವೆ ಸಲ್ಲಿಸುವ ವ್ಯವಸ್ಥೆಯನ್ನು ನಿರ್ಮಿಸಲಾಗುತ್ತದೆ.
>
> -ಪ್ರಿಯಾಂಕ್ ಖರ್ಗೆ

ಸುರಂಗ ರಸ್ತೆ ಯೋಜನೆ ಸ್ಥಗಿತಕ್ಕೆ ಆಗ್ರಹಿಸಿ 30ರಂದು ಸಮಾವೇಶ

ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ಉಳಿಸಿ ಸಮಿತಿಯ ಸಂಚಾಲಕ ಡಾ. ಶಶಿಕುಮಾರ್.ಜಿ ಮಾತನಾಡಿದರು.

ಬೆಂಗಳೂರು: ಬೆಂಗಳೂರು ಉಳಿಸಿ ಸಮಿತಿ ವತಿಯಿಂದ ನ.30ಕ್ಕೆ ಬೆ.10. 30ಕ್ಕೆ ಮಿಷನ್ ರಸ್ತೆಯ ಎಸ್‌ಸಿಎಂ ಹಾಲ್‌ನಲ್ಲಿ ಅವಳಿ ಸುರಂಗ ರಸ್ತೆ ಯೋಜನೆಯನ್ನು ಸ್ಥಗಿತಗೊಳಿಸಿ ಎಂಬ ವಿಚಾರವಾಗಿ ಜನರ ಸಮಾವೇಶ ಆಯೋಜಿಸಲಾಗಿದೆ ಎಂದು ಬೆಂಗಳೂರು ಉಳಿಸಿ ಸಮಿತಿಯ ಸಂಚಾಲಕ ಡಾ.ಶಶಿಕುಮಾರ್.ಜಿ ತಿಳಿಸಿದರು.

ರಾಜ್ಯ ಸರಕಾರ 17 ಕಿ.ಮೀ ಸುರಂಗ ರಸ್ತೆಗೆ 17 ಸಾವಿರ ಕೋಟಿ ರು. ವೆಚ್ಚಮಾಡಿ ನಿರ್ಮಾಣ ಮಾಡುತ್ತಿದೆ. ಇದರಿಂದ ಸಂಚಾರ ಸಮಸ್ಯೆಗೆ ಪರಿಹಾರ ಕೊಡಿಸಲಾಗುವುದು ಎಂದು ಸರಕಾರ ಜೋರಾಗಿ ಸುದ್ದಿ ಮಾಡುತ್ತಿದೆ. ಆದರೆ ನೈಜತೆಯಿಂದ ವಿಚಾರ ಮಾಡಿದರೆ ಈ ಅವಳಿ ಕ್ವಿನ್ ಟನಲ್ ರೋಡ್‌ನಲ್ಲಿ ಕೇವಲ ಕಾರು ಸಂಚರಿಸಲು ಮಾತ್ರ ಅವಕಾಶವಿದ್ದು, ಪ್ರತಿ ಕಾರ್ ದಿನಕ್ಕೆ 600 ರು.ಶುಲ್ಕ ವಿತರಿಸಿ ಸಂಚರಿಸಬೇಕು. ಅಂದರೆ ತಿಂಗಳಿಗೆ 18000 ರು. ಸಾರಿಗೆ ವರದಿ ಪ್ರಕಾರ ಬೆಂಗಳೂರಿನಲ್ಲಿ ಶೇ.19 ಕಾರಗಳಿದ್ದು ಅವರೆಲ್ಲರು ದಿನಕ್ಕೆ 600 ರು.ಶುಲ್ಕ ಕೊಟ್ಟು ಈ ಟನಲ್ ಬಳಸುತ್ತಾರಾ ಎಂಬುದನ್ನು ಸರಕಾರ ಯೋಚನೆ ಮಾಡಬೇಕು ಎಂದರು.

ಬಸ್‌ಸೇವೆ, ಮೆಟ್ರೋ ಮಾರ್ಗಗಳು, ವೃತ್ತಾಕಾರದ ರೈಲು ಇತ್ಯಾದಿ ಸಾರ್ವಜನಿಕ ಸಾರಿಗೆ ಸೌಲಭ್ಯಗಳಲ್ಲಿ ಸುಧಾರಣೆಯೊಂದಿಗೆ ರಸ್ತೆಗಳಲ್ಲಿ ಚಲಿಸುವ ಖಾಸಗಿ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡುವುದರಲ್ಲಿ ಸಂಚಾರ ದಟ್ಟಣೆಗೆ ಪರಿಹಾರವಿದೆ.ಸುರಂಗ ಯೋಜನೆಯು ಬೃಹತ್ ಪ್ರಮಾಣದಲ್ಲಿ ವಿನಾಶಕಾರಿಯಾಗಿದೆ ಮತ್ತು ಹಲವಾರು ಅಗ್ಗದ, ಜನಸ್ನೇಹ, ಪರಿಹಾರ ಸ್ನೇಹಿ ಮತ್ತು ಸುಸ್ಥರ ಪರ್ಯಾಯಗಳನ್ನು ಪ್ರಸ್ತಾಪಿಸಲಾಗುತ್ತಿದೆ ಎಂದು ತಜ್ಞರು ಎಚ್ಚರಿಸಿದ್ದರೂ ಸರಕಾರವು ಅವುಗಳಿಗೆ ಆಸಕ್ತಿ ತೋರಿಸುತ್ತಿಲ್ಲ ಎಂದರು.

ವೈದ್ಯರು ಕಡಿಮೆ ವೆಚ್ಚದಲ್ಲಿ ಉತ್ತಮ ಸೇವೆ ನೀಡಬೇಕು

ಬೆಂಗಳೂರು: ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕೈಗೆಟುಕುವ ದರದಲ್ಲಿ ಶಿಕ್ಷಣ ಪಡೆದು ವೈದ್ಯರಾಗಿರುವವರು ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಿ ಸಮಾಜಮುಖಿಯಾಗಿ ಕೆಲಸ ಮಾಡಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು. ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಸಮಾಜದ ಆರೋಗ್ಯ ಕಾಪಾಡುವಲ್ಲಿ ವೈದ್ಯರ ಪಾತ್ರ ಹಿರಿದು. ಅದರಲ್ಲೂ ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶಿಕ್ಷಣ ಪಡೆದವರಿಗೆ ಇದರ ಮಹತ್ವ ಹೆಚ್ಚಿರುತ್ತದೆ. ಸಮಾಜಮುಖಿಯಾಗಿ ಕೆಲಸ ಮಾಡುವುದರ ಜತೆಗೆ ವೃತ್ತಿಪರತೆ, ಬದ್ಧತೆ, ನೈತಿಕತೆ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಿವೆ. ಇದರಿಂದಾಗಿ ವೃತ್ತಿಯಲ್ಲಿ ಜ್ಞಾನ, ಕೌಶಲ ಹೆಚ್ಚಿಸಿಕೊಳ್ಳುವುದು ಅನಿವಾರ್ಯ. ಭಾರತ ಮಾತ್ರವಲ್ಲದೇ ಹೊರ ದೇಶಗಳ ವೈದ್ಯಕೀಯ ಕ್ಷೇತ್ರದಲ್ಲಿ ಏನೇನು ಆಗುತ್ತಿದೆ ಎನ್ನುವುದನ್ನೂ ತಿಳಿದುಕೊಂಡರೆ ವೃತ್ತಿಯಲ್ಲಿ ಸಾಧನೆ ಮಾಡಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಘಟಿಕೋತ್ಸವ ಸಮಾರಂಭದಲ್ಲಿ ಸಚಿವ ಶರಣ್ ಪ್ರಕಾಶ್ ಪಾಟೀಲ್ ಭಾಗಿಯಾಗದರು.

ದಿನದಲ್ಲಿ 13 ರೋಬೋಟಿಕ್ ಹರ್ನಿಯಾ ಯಶಸ್ವಿ ಶಸ್ತ್ರಚಿಕಿತ್ಸೆ

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಕಾವೇರಿ ಆಸ್ಪತ್ರೆಯಲ್ಲಿ ನ.22 ರಂದು ಒಂದೇ ದಿನ 13 ರೋಬೋಟಿಕ್ ಹರ್ನಿಯಾ ಶಸ್ತ್ರಚಿಕಿತ್ಸೆ ಯಶಸ್ವಿಗೊಳಿಸಿದ ಡಾ. ಗಣೇಶ್ ಶೆಣೈ ಅವರಿಗೆ ಹರ್ನಿಯಾ ಸೊಸೈಟಿ ಆಫ್ ಇಂಡಿಯಾದ ಮಾಜಿ ಅಧ್ಯಕ್ಷ ಡಾ. ದೀಪರಾಜ್ ಭಂಡಾರಕರ್ ಸೇರಿದಂತೆ ಇನ್ನಿತರರು ಶುಭಕೋರಿದರು.

ಬೆಂಗಳೂರು: ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಕಾವೇರಿ ಆಸ್ಪತ್ರೆಯಲ್ಲಿ ನ.22 ರಂದು ಒಂದೇ ದಿನ 13 ರೋಬೋಟಿಕ್ ಹರ್ನಿಯಾ ಶಸ್ತ್ರಚಿಕಿತ್ಸೆ ಯಶಸ್ವಿಗೊಳಿಸುವದರ ಮೂಲಕ ಗ್ಯಾಸ್ಟ್ರೋಎಂಟರಾಲಜಿ ಮತ್ತು ರೋಬೋಟಿಕ್ ಸರ್ಜರಿ ನಿರ್ದೇಶಕ ಡಾ. ಗಣೇಶ್ ಶೆಣೈ ವಿಶ್ವ ದಾಖಲೆ ನಿರ್ಮಿಸಿದ್ದಾರೆ.

ಈ ವೇಳೆ ಡಾ. ಗಣೇಶ್ ಶೆಣೈ ಮಾತನಾಡಿ, ಈ ಸಾಧನೆ ಕೇವಲ ಸಂಖ್ಯೆಯ ಬಗ್ಗೆ ಅಲ್ಲ , ತಂತ್ರಜ್ಞಾನ ಮತ್ತು ಕೌಶಲ್ಯ ಒಟ್ಟುಗೂಡಿದಾಗ ಏನು ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ. ಪ್ರತಿಯೊಬ್ಬ ರೋಗಿಯ ವೈಯಕ್ತಿಕ ಆರೈಕೆ ಮತ್ತು ಸಂಪೂರ್ಣ ಸುರಕ್ಷತೆಯೊಂದಿಗೆ ಡಾ ವಿನ್ಸಿ ರೋಬೋಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಯನ್ನು ಬಳಸಿ ಯಾವುದೇ ತೊಂದರೆಯಿಲ್ಲದೆ ಎಲ್ಲಾ ಶಸ್ತ್ರಚಿಕಿತ್ಸೆಗಳು ಪೂರ್ಣಗೊಂಡಿದೆ ಎಂದರು. ಹರ್ನಿಯಾ ಸೊಸೈಟಿ ಆಫ್ ಇಂಡಿಯಾದ ಮಾಜಿ ಅಧ್ಯಕ್ಷ ಡಾ. ದೀಪರಾಜ್ ಭಂಡಾರಕರ್ ಮಾತನಾಡಿ, ಡಾ. ಶೆಣೈ ಅವರ ಸಾಧನೆ ಶಸ್ತ್ರಚಿಕಿತ್ಸಾ ಕ್ಷೇತ್ರದ ದೃಷ್ಟಿಯಿಂದ ಸ್ಫೂರ್ತಿದಾಯಕ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸರ್ಜರಿ ನಿರ್ದೇಶಕ ಡಾ. ಗಣೇಶ್ ಶೆಣೈ, ಹರ್ನಿಯಾ ಸೊಸೈಟಿ ಆಫ್ ಇಂಡಿಯಾದ ಮಾಜಿ ಅಧ್ಯಕ್ಷ ಡಾ. ದೀಪರಾಜ್ ಭಂಡಾರಕರ್ ಸೇರಿದಂತೆ ಹಲವರು ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಅಂತರ್ ಕಾಲೇಜು ಕ್ರೀಡಾಕೂಟಕ್ಕೆ ಚಾಲನೆ

ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಬೆಳೆಯಲಿ: ಪುಟ್ಟಣ್ಣ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಜ್ಞಾನಭಾರತಿ ಆವರಣದ ಭಾರತೀಯ ಕ್ರೀಡಾ ಪ್ರಾಧಿಕಾರ ಕ್ರೀಡಾಂಗಣದಲ್ಲಿ 60ನೇ ಅಂತರ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್ ಕ್ರೀಡಾಕೂಟದ ಉದ್ಘಾಟನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಮಾತನಾಡಿ, ನಿರಂತರ ಅಭ್ಯಾಸ ಮತ್ತು ಪ್ರಯತ್ನದಿಂದ ಯಶಸ್ಸು ಸಾಧ್ಯ. ಕ್ರೀಡೆ ಕಠಿಣ ಪರಿಶ್ರಮವನ್ನು ಬಯಸುತ್ತದೆ. ಕ್ರೀಡಾಪಟುಗಳು ಆಹಾರ, ದಿನಚರಿ, ಶಿಸ್ತಿನಿಂದ ಕೂಡಿರುಬೇಕು.

ದೈಹಿಕ ಶಿಕ್ಷಣ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕ. ಕ್ರೀಡಾ ಕೂಟ ಸೋಲು ಗೆಲುವನ್ನು ಕಲಿಸುತ್ತದೆ. ಸೋಲೆ ಗೆಲುವಿನ ಮೊದಲ ಮೆಟ್ಟಿಲು, ಸೋಲು ಗೆಲುವನ್ನು ಹೊರತುಪಡಿಸಿ ವಿದ್ಯಾರ್ಥಿಗಳು ಕ್ರೀಡಾ ಮನೋಭಾವವನ್ನು ಬೆಳೆಸಿಕೊಂಡು ಕ್ರೀಡಾ ಸ್ಫೂರ್ತಿಯನ್ನು ರೂಪಿಸುವುದೇ ಕ್ರೀಡಾಕೂಟಗಳ ಮುಖ್ಯ ಉದ್ದೇಶವಾ ಗಬೇಕು ಎಂದು ತಿಳಿಸಿದರು.

ಕುಲಸಚಿವೆ ಕೆ.ಟಿ.ಶಾಂತಲಾ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆ ಸಾಕಷ್ಟು ಮಹತ್ವವನ್ನು ವಹಿಸುತ್ತದೆ. ಕ್ರೀಡೆಯಿಂದ ಶಿಸ್ತು, ಸಂಯಮ, ತಾಳ್ಮೆ, ಸೋಲು, ಸತತ ಪ್ರಯತ್ನಗಳನ್ನು ಕಲಿಯಬಹುದು.ಕ್ರೀಡೆ ನಾಯಕತ್ವ, ಗುಂಪಾಗಿ ಆಡುವ ಮನೋಭಾವ, ಗೆಲುವಿಗಾಗಿ ಶ್ರಮಿಸುವ ಗುಣ ಬೆಳೆಸುತ್ತದೆ.ದೈಹಿಕ ಮತ್ತು ಮಾನಸಿಕವಾಗಿ ಧೃಡವಾಗಿರಲು ಕ್ರೀಡೆ ಅತ್ಯವಶ್ಯಕವಾಗಿದೆ ಎಂದರು.

ಕ್ರೀಡಾಕೂಟದಲ್ಲಿ ವಿಶ್ವವಿದ್ಯಾಲಯದ ಸುಮಾರು 296 ಸಂಯೋಜಿತ ಕಾಲೇಜುಗಳಿಂದ 2000 ಕ್ರೀಡಾಪಟುಗಳಿಗೆ 54 ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಕುಲಸಚಿವ ಮೌಲ್ಯಮಾಪನ ಸಿ.ಎಸ್. ಕರಿಗಾರ್, ದೈಹಿಕ ಶಿಕ್ಷಣ ನಿರ್ದೇಶ ಡಾ.ಪಿ.ಸಿ.ಕೃಷ್ಣಸ್ವಾಮಿ, ಸಿಂಡಿಕೇಟ್ ಸದಸ್ಯರು ಡಿ.ಬಿ.ಗಂಗರಾಜು, ದಂಡಿಕೆರೆ ನಾಗರಾಜ್, ಕೆ.ಷರೀಫಾ, ಮಾಲಿನಿ , ಜಯಶ್ರೀ ಹೆಗಡೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ಜ್ಞಾನಭಾರತಿ ಆವರಣದ ಭಾರತೀಯ ಕ್ರೀಡಾ ಪ್ರಾಧಿಕಾರ ಕ್ರೀಡಾಂಗಣದಲ್ಲಿ 60ನೇ ಅಂತರ್ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್ ಕ್ರೀಡಾಕೂಟದ ಉದ್ಘಾಟನೆಯನ್ನು ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ನೆರವೇರಿಸಿದರು.

> ಸದೃಢ ದೇಹ ಮತ್ತು ದೇಶ ನಿರ್ಮಾಣಕ್ಕೆ ಕ್ರೀಡೆ ಅವಶ್ಯಕ.ವಿದ್ಯಾರ್ಥಿ ಜೀವನದ ದಿಕ್ಕನ್ನು ಬದಲಾಯಿಸುವ ಶಕ್ತಿಯನ್ನು ಕ್ರೀಡೆ ಹೊಂದಿದೆ .21ನೇ ಶತಮಾನದಲ್ಲಿ ಕ್ರೀಡೆ ಅದ್ಭುತ ಕೌಶಲ್ಯವಾಗಿದ್ದು, ವಿಶ್ವವಿದ್ಯಾಲಯ ಮಟ್ಟದಲ್ಲಿ ಮತ್ತಷ್ಟು ವಿದ್ಯಾರ್ಥಿಗಳು ಕ್ರೀಡೆಗೆ ಆಸಕ್ತಿ ತೋರಬೇಕು.
>
> -ಕೆ.ಟಿ.ಶಾಂತಲಾ, ಕುಲಸಚಿವೆ

ವಿಶ್ವಕಪ್ ವಿಜೇತ ಅಂಧ ಮಹಿಳಾ ಕ್ರಿಕೆಟ್ ತಂಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಶುಭ ಹಾರೈಸಿದರು. ಈ ವೇಳೆ ಮಹಿಳಾ ತಂಡ ಆಟಗಾರ್ತಿಯರು, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಎಚ್.ಸಿ. ಮಹದೇವಪ್ಪ, ಎಂ.ಸಿ. ಸುಧಾಕರ್ ಸೇರಿ ಹಲವರಿದ್ದರು.

ಕಾಡಾನೆ ದಾಳಿ: ನಾಲ್ಕು ಎಕರೆ ರಾಗಿ ನಾಶ

ಆನೇಕಲ್: ತಾಲೂಕಿನ ಲಕ್ಷ್ಮಿಪುರದಲ್ಲಿ ರಾಗಿ ಹೊಲದಲ್ಲಿ ಕಾಡಾನೆಗಳು ದಾಳಿ ನಡೆಸಿದ್ದು, ನಾಲ್ಕು ಎಕರೆ ಬೆಳೆ ನಾಶ ಆಗಿದೆ.

ಲಕ್ಷ್ಮೀಪುರದಲ್ಲಿ ಅಂದಾಜು 4ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದಿದ್ದ ರಾಗಿಯ ಬೆಳೆಯನ್ನು ಸಂಪೂರ್ಣವಾಗಿ ಆನೆಗಳು ಹಾಳು ಮಾಡಿದೆ. ಕಳೆದ ಆರೇಳು ತಿಂಗಳಿನಿಂದ ಮಗುವಿನಂತೆ ಸಾಕಿದ್ದ ರಾಗಿ ಬೆಳೆ ಒಂದೇ ರಾತ್ರಿಯಲ್ಲಿ ನೆಲಕಚ್ಚಿದೆ. ರಾಮಾಂಜಿನಪ್ಪ, ಪುಟ್ಟರಾಜು, ಮಂಜುನಾಥ್ ಅವರಿಗೆ ಸೇರಿದ ರಾಗಿ ಬೆಳೆ ನಾಶಗೊಂಡಿದೆ.

ಖರ್ಗೆ

ಅಧಿಕಾರಿ ಸತೀಶ್ ಕಟ್ಟಿಮನಿ ಆದಾಯಕ್ಕಿಂತ ಶೇ 145 ರಷ್ಟು ಹೆಚ್ಚು ಆಸ್ತಿ ಸಂಪಾದನೆ

ಭ್ರಷ್ಟ ಅಧಿಕಾರಿಗಳಿಗೆ ಲೋಕಾ ಶಾಕ್

ಬೆಂಗಳೂರು: ಮೈಸೂರು, ಬೆಂಗಳೂರು ಸೇರಿ ರಾಜ್ಯದ ಹತ್ತು ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ವಿವಿಧ ಇಲಾಖೆಯ ಅಧಿಕಾರಿಗಳ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಲಾಗಿದ್ದು, ಆ ಪೈಕಿ ಹಲವರ ಮನೆಯಲ್ಲಿ ರೇಡ್ ವೇಳೆ ಅಪಾರ ಪ್ರಮಾಣದ ಚಿನ್ನ-ಬೆಳ್ಳಿ, ನಗದು ಮತ್ತು ದಾಖಲೆ ಪತ್ರಗಳು ಲಭ್ಯವಾಗಿವೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಆರೋಪದ ಮೇಲೆ ಗದಗ ಜಿಲ್ಲೆ ಹುಯಿಲಗೋಳದ ಪ್ರಾಥಮಿಕ ಪಶುವೈದ್ಯಕೀಯ ಕ್ಲಿನಿಕ್‌ನ ಹಿರಿಯ ಪಶುವೈದ್ಯ ಪರೀಕ್ಷಕ ಸತೀಶ್ ಕಟ್ಟಿಮನಿಗೆ ಸೇರಿದ ಐದು ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಆದಾಯಕ್ಕಿಂತ ಶೇ 145 ಹೆಚ್ಚು ಆಸ್ತಿ ಸಂಪಾದನೆ ಮಾಡಿರುವುದನ್ನು ಪತ್ತೆ ಮಾಡಿದ್ದಾರೆ.

ದಾಳಿ ವೇಳೆ ಎರಡು ಮನೆಗಳು, ನಾಲ್ಕು ಎಕರೆ ಜಮೀನಿನ ದಾಖಲೆ ಪತ್ರಗಳು ಸಿಕ್ಕಿವೆ. ಸ್ಥಿರಾಸ್ತಿಗಳ ಒಟ್ಟು ಮೌಲ್ಯ 55.50 ಲಕ್ಷ ರು. ಪತ್ತೆಯಾಗಿದೆ ಎಂದು ಲೋಕಾಯಕ್ತ ಪೊಲೀಸರು ತಿಳಿಸಿದ್ದಾರೆ. 17.16 ಲಕ್ಷ ನಗದು, 72.11 ಲಕ್ಷ ಮೌಲ್ಯದ 705 ಗ್ರಾಮ ಚಿನ್ನ, ?2.68 ಲಕ್ಷ ಮೌಲ್ಯದ 1.871 ಕೆ.ಜಿ. ಬೆಳ್ಳಿ, 25 ಲಕ್ಷ ಮೌಲ್ಯದ ಎರಡು ಕಾರು, ನಾಲ್ಕು ಬೈಕ್‌ಗಳು ಸೇರಿದಂತೆ ಒಟ್ಟು 1.16 ಕೋಟಿ ಮೌಲ್ಯದ ಚರಾಸ್ತಿ ಪತ್ತೆಯಾಗಿದೆ. 10 ಸೈಟುಗಳನ್ನು ಖರೀದಿಸಿ, ಅಲ್ಲಿ 10 ಮನೆಗಳನ್ನು ನಿರ್ಮಿಸಿ ಬಳಿಕ ಮಾರಾಟ ಮಾಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ನಮೂದಿಸಿದ್ದಾರೆ. ಬೀದರ್ ಜಿಲ್ಲೆಯ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ಮುಖ್ಯ ಎಂಜಿನಿಯರ್ ಪ್ರೇಮ್ ಸಿಂಗ್ ರಾಥೋಡ್ ಎಂಬುವರ ಮನೆಯಲ್ಲಿ ಲೋಕಾಯುಕ್ತ ಪೊಲೀಸರು ಮಂಗಳವಾರ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.ಇಲ್ಲಿನ ಶಿವನಗರದ ನಿವಾಸ, ಬೀದರ್ ತಾಲೂಕಿನ ಬಗದಲ್, ಯಾದಗಿರಿ ಜಿಲ್ಲೆ ಶಹಾಪುರ ತಾಲೂಕಿನ ಭೀಮರಾಯನಗುಡಿಯ ಮನೆ, ಕಚೇರಿಯಲ್ಲಿ ಏಕಕಾಲಕ್ಕೆ ತೆರಳಿ ಶೋಧ ಕೈಗೊಂಡಿದ್ದಾರೆ. ಬೀದರ್ ತಾಲೂಕಿನ ಬಗದಲ್ ಗ್ರಾಮದ ನಿವಾಸಿಯಾಗಿರುವ ಪ್ರೇಮ್ ಸಿಂಗ್, ಎರಡು ವರ್ಷಗಳಿಂದ ಕೆಬಿಜೆಎನ್‌ಎಲ್ ಮುಖ್ಯ ಎಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಎಇಇ ಗಿರೀಶ್‌ಗೆ ಶಾಕ್: ಮಡಿಕೇರಿಯ ಲೋಕೋಪಯೋಗಿ ಇಲಾಖೆಯ ಎಇಇ ಗಿರೀಶ ಅವರ ಇಲ್ಲಿನ ವಸತಿ ಗೃಹ ಹಾಗೂ ಮೈಸೂರಿನ ನಿವಾಸದ ಮೇಲೆ ಲೋಕಾಯುಕ್ತರ ಪೊಲೀಸರು ಪರಿಶೀಲನೆ ನಡೆಸಿದರು. ಮೈಸೂರಿನ ಹೂಟಗಳ್ಳಿ ನಗರಸಭೆಯ ಕಂದಾಯ ನಿರೀಕ್ಷಕ ರಾಮಸ್ವಾಮಿ ಅವರ ತಿ.ನರಸೀಪುರದ ನಿವಾಸದ ಮೇಲೂ ದಾಳಿ ನಡೆಸಿ ಹಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಮೈಸೂರು ವಿಭಾಗದ ಲೋಕಾಯುಕ್ತ ಎಸ್.ಪಿ.ಉದೇಶ್, ಮಡಿಕೇರಿ ಲೋಕಾಯುಕ್ತ ಡಿವೈಎಸ್ಪಿ ದಿನಕರ ಶೆಟ್ಟಿ, ಇನ್‌ಸ್ಪೆಕ್ಟರ್ ವೀಣಾ ನಾಯಕ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ.

ಲೋಕಾ ದಾಳಿ ವೇಳೆ ಗದಗದ ಪಶುವೈದ್ಯ ಪರೀಕ್ಷಕ ಸತೀಶ್ ಕಟ್ಟಿಮನಿ ಅವರ ಮನೆಯಲ್ಲಿ ಪತ್ತೆಯಾದ ಚಿನ್ನಾಭರಣ, ನಗದು ಹಣ

ಪ್ರೊಫೆಸರ್ ಮನೆಯಲ್ಲಿ ದಾಖಲೆ ವಶ

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸುಭಾಷ ನಾಟಿಕರ್ ಅವರ ನಿವಾಸದಲ್ಲಿ ಲೋಕಾಯಕ್ತ ಪೊಲೀಸರು ಪರಿಶೀಲನೆಯಲ್ಲಿ ತೊಡಗಿದ್ದಾರೆ. ಯಾಲಕ್ಕಿ ಶೆಟ್ಟರ್ ಕಾಲೊನಿಯ ನಿವಾಸಕ್ಕೆ ಬೆಳ್ಳಂಬೆಳಿಗ್ಗೆಯೇ ದಾಳಿ ಮಾಡಿ ಲೋಕಾಯುಕ್ತ ಪೊಲೀಸರು ಹಲವು ದಾಖಲೆಗಳನ್ನು ನಡೆಸಿ ವಶಕ್ಕೆ ಪಡೆದುಕೊಂಡರು.

1 ಕೆ.ಜಿ.700 ಗ್ರಾಂ ಚಿನ್ನಾಭರಣ ಪತ್ತೆ

ದಾವಣಗೆರೆ ಎಪಿಎಂಸಿ ಮಾರಾಟ ವಿಭಾಗದ ಸಹಾಯಕ ನಿರ್ದೇಶಕ ಜೆ.ಪ್ರಭು ಮನೆ ಮೇಲೆ ಮಂಗಳವಾರ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರಿಗೆ 1 ಕೆ.ಜಿ.700 ಗ್ರಾಂ ಚಿನ್ನಾಭರಣ ಹಾಗೂ 10 ಕೆ.ಜಿ ಬೆಳ್ಳಿ ಸಾಮಗ್ರಿ ಪತ್ತೆಯಾಗಿದೆ.ನಗರದ ಆಂಜನೇಯ ಬಡಾವಣೆಯ ಮನೆ, ಚನ್ನಗಿರಿ ತಾಲೂಕಿನ ದೊಡ್ಡಘಟ್ಟ ಗ್ರಾಮದ ತೋಟದ ಮನೆ ಹಾಗೂ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಕೌಲಾಪೂರೆ ನೇತೃತ್ವದಲ್ಲಿ ದಾಳಿ ಮಾಡಲಾಗಿತ್ತು.ಮನೆಯಲ್ಲಿ 7.5 ಲಕ್ಷ ನಗದು ಪತ್ತೆಯಾಗಿದೆ. ಎರಡು ಮನೆ, 6 ನಿವೇಶನಗಳ ದಾಖಲೆಗಳು ಪತ್ತೆಯಾಗಿವೆ. ಕೆಲವನ್ನು ಇವರೇ ಖರೀದಿಸಿದ್ದು, ಇನ್ನು ಕೆಲವು ಸಂಬಂಧಿಕರಿಂದ ದಾನ ಪಡೆದಿರುವುದು ಪರಿಶೀಲನೆಯಲ್ಲಿ ಗೊತ್ತಾಗಿದೆ ಎಂದು ಲೋಕಾಯುಕ್ತ ಮೂಲಗಳು ಮಾಹಿತಿ ನೀಡಿವೆ.

ಶ್ರೀರಾಮಮಂದಿರದಲ್ಲಿ ರಾರಾಜಿಸಿದ ಧರ್ಮಧ್ವಜ

← ಮೊದಲ ಪುಟದಿಂದ

ಅದರ ಮುಕ್ತಾಯ ಇಂದು ಆಗಿದೆ. ಆ ಯಜ್ಞ ಕೇವಲ ಒಂದು ಸಂದರ್ಭದ ನಂಬಿಕೆಯಿಂದ ಶುರುವಾಗಿದ್ದಲ್ಲ, ಒಂದು ಘಟನೆಯಿಂದ ತನ್ನ ನಂಬಿಕೆಯನ್ನು ಕಳೆದುಕೊಳ್ಳುವುದೂ ಇಲ್ಲ ಎಂದು ಮೋದಿ ಹೇಳಿದ್ದಾರೆ. ನಾವು ರಾಮನನ್ನು ಅರಿಯಬೇಕು, ಅವನ ವ್ಯಕ್ತಿತ್ವವನ್ನು ತಿಳಿಯಬೇಕು. ಅವನ ವರ್ತನೆ ಗಳನ್ನು ನಮ್ಮೊಳಗೆ ತಂದು ಕೊಳ್ಳಬೇಕು. 2047ರಲ್ಲಿ ದೇಶ 100ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸು ವಾಗ ನಾವು ವಿಕಸಿತ ಭಾರತವನ್ನು ನಿರ್ಮಿಸಬೇಕು. ಮುಂದಿನ ಸಾವಿರ ವರ್ಷಗಳಿಗೆ ಭಾರತದ ಬುನಾದಿಯನ್ನು ನಿರ್ಮಿಸಬೇಕು ಎಂದು ಮೋದಿ ಹೇಳಿದ್ದಾರೆ. ಯಾರು ಇವತ್ತಿನ ಬಗ್ಗೆ ಮಾತ್ರ ಯೋಚಿಸುತ್ತಾರೋ, ಅವರು ಭವಿಷ್ಯದ ಪೀಳಿಗೆಗಳಿಗೆ ಅನ್ಯಾಯವೆಸಗುತ್ತಾರೆ. ಹಿಂದೆ ನಾವಿಲ್ಲದಿದ್ದಾಗಲೂ ಈ ದೇಶವಿತ್ತು. ಮುಂದೆ ನಾವು ಹೋದ ಮೇಲೆಯೂ ದೇಶವಿರುತ್ತದೆ. ಒಂದು ಜಾಗೃತ ಸಮಾಜಕ್ಕೆ ಸ್ಪಷ್ಟ ದೃಷ್ಟಿಕೋನವಿರಬೇಕು. ಇನ್ನು 10 ವರ್ಷಗಳಲ್ಲಿ ಮೆಕಾಲೆಯ ಗುಲಾಮಿ ಮನಸ್ಥಿತಿಯಿಂದ ಭಾರತ ಹೊರಬರಬೇಕು ಎಂದು ಕೆಲವು ದಿನಗಳ ಹಿಂದೆಯೇ ನಾನು ಹೇಳಿದ್ದೆ. ನಮ್ಮದೆಲ್ಲ ಕನಿಷ್ಠ, ವಿದೇಶದ್ದು ಶ್ರೇಷ್ಠ ಎನ್ನುವುದು ಗುಲಾಮಿ ಮನಸ್ಥಿತಿ ಎಂದು ಮೋದಿ ಹೇಳಿದ್ದಾರೆ.

ಸೂತ್ರದ ಹುಡುಕಾಟದಲ್ಲಿ ಹೈಕಮಾಂಡ್

← ಮೊದಲ ಪುಟದಿಂದ

ಆದ್ದರಿಂದ ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿಯೇ ಐದು ವರ್ಷ ಸರಕಾರ ನಡೆಯಲಿ. 2028ರ ಚುನಾವಣೆಗೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಹೋಗಿ, ಮತ್ತೊಮ್ಮೆ ಅಧಿಕಾರಕ್ಕೆ ಬಂದು ಆ ಅವಧಿಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರಾಗಲಿ ಎನ್ನುವ ಸೂತ್ರವನ್ನು ನಾಯಕರಿಗೆ ರವಾನಿಸುವ ಸಾಧ್ಯತೆ ದಟ್ಟವಾಗಿದೆ ಎಂದು ಮೂಲಗಳು ತಿಳಿಸಿವೆ.

ಎರಡೂವರೆ ವರ್ಷದ ಬಳಿಕ ಒಪ್ಪಂದದಂತೆ ಅಧಿಕಾರ ಬೇಕು ಎನ್ನುವ ಹಠಕ್ಕೆ ಬಿದ್ದಿರುವ ಡಿ.ಕೆ.ಶಿವಕುಮಾರ್ ಅವರು ಈ ಹಿಂದೆ ರಾಜಿಯಾದಂತೆ ಈ ಬಾರಿ ಆಗಲು ತಯಾರಿಲ್ಲ. ಈ ಅವಕಾಶ ಬಿಟ್ಟರೆ ಮುಂದೆ ಸಿಗುವುದೋ ಇಲ್ಲವೋ? 2028ರಲ್ಲಿ ಕಾಂಗ್ರೆಸ್ ಪರ ಜನ ನಿಲ್ಲುವರೋ ಇಲ್ಲವೋ ಅನುಮಾನವಿರುವುದರಿಂದ ಈಗಲೇ ತಮಗೆ 'ಸಿಎಂ ಕುರ್ಚಿ' ಬೇಕೆಂಬ ಹಠಕ್ಕೆ ಬಿದ್ದಿದ್ದಾರೆ. ಸದ್ಯ ಸ್ಪಷ್ಟ ತೀರ್ಮಾನ ತಗೆದುಕೊಳ್ಳುವ ಪರಿಸ್ಥಿತಿಯಲ್ಲಿ ರಾಹುಲ್ ಗಾಂಧಿ ಇಲ್ಲದಿರುವುದು ಈ ಸಮಸ್ಯೆ ಮತ್ತಷ್ಟು ಜಟಿಲವಾಗಲು ಕಾರಣವಾಗಿದೆ.

ಒಪ್ಪಂದದ ಬಗ್ಗೆಯೇ ಹಲವರ ಗೊಂದಲ: ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಕೇಳಿಬರುತ್ತಿರುವ ಒಪ್ಪಂದದ ಗೊಂದಲ ಈಗಲೂ ಮುಂದುವರೆದಿದೆ. ಡಿ.ಕೆ.ಶಿವಕುಮಾರ್ ಆಪ್ತರು, ಸಿದ್ದರಾಮಯ್ಯ ಅವರು ಎರಡೂವರೆ ವರ್ಷದ ಬಳಿಕ ಅಧಿಕಾರ ಬಿಟ್ಟುಕೊಡುವುದಾಗಿ ಭರವಸೆ ನೀಡಿದ್ದರು ಎನ್ನುವ ಮಾತನ್ನು ತೇಲಿಬಿಡುತ್ತಿದ್ದಾರೆ. ಆದರೆ ಇನ್ನೊಂದೆಡೆ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಸ್ಥಾನದೊಂದಿಗೆ ಡಿಸಿಎಂ ಹುದ್ದೆಯನ್ನು ಡಿ.ಕೆ.ಶಿವಕುಮಾರ್ ಅವರಿಗೆ ನೀಡುವುದು. ಎರಡೂವರೆ ವರ್ಷದ ಬಳಿಕ 'ಪರಿಸ್ಥಿತಿ ನೋಡಿಕೊಂಡು ತೀರ್ಮಾನ' ತಗೆದುಕೊಳ್ಳೋಣ ಎಂದಿದ್ದರು ಎನ್ನಲಾಗುತ್ತಿದೆ. ಈ ನಡುವೆ ಸಿದ್ದು ಹಾಗೂ ಡಿಕೆ ನಡುವೆ ನಡೆದಿರುವ 'ಆಣೆ' ಪ್ರಮಾಣ ನಡೆಯುವ ಸಮಯದಲ್ಲಿ ಹೈಕಮಾಂಡ್‌ನ ಯಾವ ನಾಯಕರೂ ಇರಲಿಲ್ಲ ಎನ್ನುವುದು ಇದೀಗ ಕೇಳಿಬರುತ್ತಿರುವ ಹೊಸ ಸುದ್ದಿ. ಒಂದು ವೇಳೆ ಒಪ್ಪಂದವಾಗಿ ಅದಕ್ಕೆ ಸಿದ್ದರಾಮಯ್ಯ ಅವರು ಎಲ್ಲರ ಸಮ್ಮುಖದಲ್ಲಿ ಒಪ್ಪಿಕೊಂಡಿದ್ದರೆ ಈ ಪ್ರಮಾಣದಲ್ಲಿ ಹೈಕಮಾಂಡ್ ಹಗ್ಗಜಗ್ಗಾಟ ನಡೆಸುವ ಅವಶ್ಯವೇನಿತ್ತು ಎನ್ನುವುದು ಹಲವರ ಪ್ರಶ್ನೆಯಾಗಿದೆ.

ಸಂದೇಶ ಹೊತ್ತು ತಂದ ಪ್ರಿಯಾಂಕ್

ಈ ನಡುವೆ ಮಹತ್ವದ ಬೆಳವಣಿಗೆಯೊಂದರಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಮಂಗಳವಾರ ಭೇಟಿ ಮಾಡಿ ಒಂದು ಗಂಟೆಗೂ ಹೆಚ್ಚು ಕಾಲ ಚರ್ಚಿಸಿದ್ದಾರೆ. ಸೋನಿಯಾ ಗಾಂಧಿ ಅವರ ನಿವಾಸಕ್ಕೆ ಭೇಟಿ ನೀಡಿದ ಪ್ರಿಯಾಂಕ್ ಅವರು ಆರ್‌ಎಸ್‌ಎಸ್ ಗಲಾಟೆ, ತಮ್ಮ ಇಲಾಖೆಯ ಸಾಧನೆ ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಈ ಎಲ್ಲದರ ಬಳಿಕ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಈ ವೇಳೆ ನಾಯಕತ್ವ ಬದಲಾವಣೆ ಆದರೆ, ಆಗದಿದ್ದರೆ ಏನು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಕೆಲ 'ಪ್ರಸ್ತಾಪ'ವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಿಎಂ ಸಿದ್ದರಾಮಯ್ಯ ಅವರಿಗೆ ಪ್ರಿಯಾಂಕ್ ಮೂಲಕ ರಾಹುಲ್ ಕಳುಹಿಸಿದ್ದಾರೆ. ಈ ಸಂದೇಶವನ್ನು ಹೊತ್ತು ಪ್ರಿಯಾಂಕ್ ಡಿಸಿಎಂ ಹಾಗೂ ಸಿಎಂ ಜತೆ ಪ್ರತ್ಯೇಕ ಸಭೆ ನಡೆಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–2/ಟೆಂಡರ್–21/2025–26 ದಿನಾಂಕ: 24.11.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ವಸತಿ ನಿಲಯಗಳ ನಿರ್ಮಾಣ ಹಾಗೂ ಸಿವಿಲ್ ದುರಸ್ತಿ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 705/call-2, 710/call-2, 711/call-2, 719/call-2, 562/call-2, 563/call-2, 470/call-3, 749, 745, 746, 744, 786, 759, 791, 757, 778, 780, 781, 753, 752, 750, 773, 795, 758, 777, 776, 772, 774, 754, 775 ಮತ್ತು 783**) ಇ–ಪೋರ್ಟಲ್ ಮುಖಾಂತರ ದಿನಾಂಕ: **24.11.2025ರಂದು** ಟೆಂಡರ್‌ನ್ನು ಕರೆಯಲಾಗಿದ್ದು, **ಕ್ರಮವಾಗಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 24.12.2025 ಮತ್ತು 09.12.2025ರಂದು ನಿಗದಿಪಡಿಸಲಾಗಿದೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–2
ಕ.ವ.ಶಿ.ಸಂ.ಸಂಘ
DIPR/CP/YC/4010/2025-26

ನಗರಸಭೆ ಕಾರ್ಯಾಲಯ ರಾಣೇಬೆನ್ನೂರು
ನಂ:ನಸರಾ/ಕಾವಿ/ಅಮೃತ 2.0/ವಹಿ–13/2025–26 ದಿನಾಂಕ: 21–11–2025

ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಜಲ್–ಹೀ ಅಮೃತ ಯೋಜನೆಯಡಿ ರೂ. 75.00 ಲಕ್ಷಗಳಲ್ಲಿ 01 ಕಾಮಗಾ–ರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು / ಏಜನ್ಸಿದಾರರು / ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ವೆಬ್ ಸೈಟ್ www.kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ಪ್ರಕಟಣೆಯ ವಿವರಗಳನ್ನು ನಗರಸಭೆಯ – ಕಛೇ–ರಿಯ ವೆಬ್ ಸೈಟ್ http// www.ranebennurcity.mrc.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ನಗರಸಭೆಯ ಕಛೇರಿ ವೇಳೆಯಲ್ಲಿ ಹಾಗೂ ಇ–ಪ್ರಕ್ಯೂರ್ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91 80 46010000, +91 80 68948777 ರಿಂದ, DMA/2025-26/OW/WORK_INDENT 51983

ಸೂಚನೆ : ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ	: 01–12–2025 ಸಮಯ: 17:30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	: 06–12–2025 ಸಮಯ: 17:30
ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	: 08–12–2025 ಸಮಯ: 17:30
ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ ಅಥವಾ ಸಕ್ಷಮ ಪ್ರಾಧಿಕಾರದ ಅನುಮೋದನೆ ನಂತರ	: 10–12–2025 ಸಮಯ: 17:30

ಸಹಿ/– ಪೌರಾಯುಕ್ತರು
ನಗರಸಭೆ ರಾಣೇಬೆನ್ನೂರು
ಪ್ರಕಟಣೆ ಸಂಖ್ಯೆ: dipr/hvr/523/2025-26

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ

REQUEST FOR PROPOSAL

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ **"OPERATING BERTH AT MALPE PORT, KARNATAKA UNDER PUBLIC PRIVATE PARTNERSHIP (PPP) MODEL ON RENOVATE, OPERATE, MAINTAIN AND TRANSFER (ROMT) BASIS"** ಕಾಮಗಾರಿಯನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು **https://kppp.karnataka.gov.in/kppp** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು.

RFP ಮತ್ತು ಇತರ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 24.11.2025 ರಂದು ಡೌನ್‌ಲೋಡ್ ಮಾಡಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.12.2025 @ 17.30 ಆಗಿರುತ್ತದೆ. RFP ಗೆ ಸಂಬಂಧಿಸಿದ ಯಾವುದೇ ಹೆಚ್ಚಿನ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಂಪರ್ಕ ವಿವರ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಅಲಿಗದ್ದಾ, ಬೈತ್ ಖೋಲ್, ಕಾರವಾರ–581302

Phone: 08382-221494; & Email: piwtdev.wks@gmail.com/ ceokmb2019@gmail.com

ಸಹಿ/– ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ
DIPR/KWR/KSMCA/754/25-26 Dt: 24.11.2025

ಅರ್ಜಿ ಆಹ್ವಾನ

ಬೆಂಗಳೂರು: ಬಾಗಲಕೋಟ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ತೋಟಗಾರಿಕೆ, ಕೃಷಿ ಇಲಾಖೆ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ತೋಟಗಾರಿಕೆ ಮೇಳ–2025 ನ್ನು ಮೌಲ್ಯವರ್ಧನೆ ಮತ್ತು ರಫ್ತು ಅವಕಾಶಗಳಿಗಾಗಿ ನಿಖರ ತೋಟಗಾರಿಕೆ ಎಂಬ ಧ್ಯೆಯ ವಾಕ್ಯದೊಂದಿಗೆ ಬಾಗಲಕೋಟೆಯ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ 2025ನೇ ಡಿ.21, 22 ಮತ್ತು 23 ರವರೆಗೆ ಹಮ್ಮಿಕೊಳ್ಳಲಾಗಿದೆ. ಈ ಮೂರು ದಿನಗಳ ಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು, ಶಾಸಕರು ಹಾಗೂ ಐದು ಲಕ್ಷಕ್ಕೂ ಹೆಚ್ಚು ರೈತರು ಆಗಮಿಸಲಿದ್ದಾರೆ. ಸದರಿ ಮೇಳದಲ್ಲಿ ಯಂತ್ರೋಪಕರಣಗಳ ಮಳಿಗೆ, ಸುಸಜ್ಜಿತ ಮಳಿಗೆ, ಮಿತವ್ಯಯ ಮಳಿಗೆ ಹಾಗೂ ಆಹಾರ ಮಳಿಗೆಗಳನ್ನು ಕಾಯ್ದಿರಿಸಲು/ನೊಂದಾಯಿಸಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯು ಳ್ಳವರು ತಮ್ಮ ಮಳಿಗೆಯನ್ನು 28ರೊಳಗೆ ಕಾಯ್ದಿರಿ ಸಬಹುದು. ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಬಾಗಢಲಕೋಟ ತೋಟಗಾರಿಕಾ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

<table>
<tr><th>ಕ್ರ. ಸಂ</th><th>ಸಾಲಗಾರರ ಹೆಸರು ಮತ್ತು ವಿಳಾಸ</th><th>ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ</th><th>ನೋಟೀಸ್ ದಿನಾಂಕ</th><th>ಬರಬೇಕಾದ ಬಾಕಿ (ರೂ.ಗಳಲ್ಲಿ)</th></tr>
<tr><td>1</td><td>(1) ಮೆ॥ ಸಂತೋಷ್ ಎಂಟರ್‌ಪ್ರೈಸಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ದ್ವಾರಕಾನಾಥ್ ಬಿ.ಎನ್ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ ಬಿ.ಲಕ್ಷ್ಮೀಪತಿ, ಬಿಡದಿ ಹೋರೋಹಳ್ಳಿ ರಸ್ತೆ, ಬೈರಮಂಗಲ ಗ್ರಾಮ, ಬಿಡದಿ ನಂತರ, ರಾಮನಗರ ತಾಲ್ಲೂಕು, ಹೋಬಳಿ, ಬೆಂಗಳೂರು–562109.
(2) ಶ್ರೀ ದ್ವಾರಕಾನಾಥ್ ಬಿನ್ ಶ್ರೀ ಬೈರಮಂಗಲ ವೆಂಕಟನರಸಪ್ಪ ನರಸಿಂಹಯ್ಯ, ನಂ.96, ಅಂಚೆ ಕಚೇರಿ ರಸ್ತೆ, ಬೈರಮಂಗಲ, ರಾಮನಗರ–562109.
(3) ಶ್ರೀ ಲಕ್ಷ್ಮೀಪತಿ ಬಿನ್ ಶ್ರೀ ಬೋಗಣ್ಣನಂಜಪ್ಪ .ಬಿ.ಎಸ್ ನಂ.127, ಅಂಗಡಿ ಬೀದಿ, ಬೈರಮಂಗಲ, ರಾಮನಗರ–562109.</td><td>ಶ್ರೀ ಬಿ ಲಕ್ಷ್ಮೀಪತಿ ಅವರಿಗೆ ಸೇರಿದ ಆಸ್ತಿಯ ವಿವರ
ಷೆಡ್ಯೂಲ್ ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಉತ್ತರ ಭಾಗದ ವಾಸಯೋಗ್ಯ ಆಸ್ತಿಯ ನಿವೇಶನ ನಂ.83/ಎ (ಎಂಭತ್ತಮೂರು ಎ ವಿಭಾಗ), ಎಂಐಸಿಒ ಶ್ರಮಜೀವಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರಿನಲ್ಲಿ ರಚಿಸಲಾಗಿದ್ದು, ಸರ್ವೆ ನಂ.79, ವಿಸ್ತೀರ್ಣ (06 ಎಕರೆ 11 ಗುಂಟೆಗಳು), ಹೊಂಗಸಂದ್ರ ಗ್ರಾಮ, ದಿನಾಂಕ 07.06.1991ರಂದು ಅಂಗೀಕರಿಸಿರುವ ಆದೇಶ ನಂ.B.DIS.N32(S) ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ ಮತ್ತು ಸರ್ಕಾರದಿಂದ ಅನುಮೋದನೆಗೊಂಡಿರುವ ಮಾರಾಟ ಆಸ್ತಿಯ Vide Order No. HUD 2, EC 91, Dated 25-11-1991, and No. ULC(2)52/1991-92, dated 25-03-1992 ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಹೊಂಗಸಂದ್ರ ವ್ಯಾಪ್ತಿಯಲ್ಲಿದ್ದು, ವಾರ್ಡ್ ನಂ.189 ಮತ್ತು ಖಾತಾ ನಂ.32/1088/1065/79/83ಎ, ಈ ಆಸ್ತಿಯು ಹೊಂಗಸಂದ್ರ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು–560068, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 18.6 ಅಡಿ, ಒಟ್ಟು ವಿಸ್ತೀರ್ಣ 744 ಚದರ ಅಡಿ, ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಷೆಡ್ಯೂಲ್ ಆಸ್ತಿಯಲ್ಲಿ ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿಯ ನಿವೇಶನ ನಂ.80 & 78, ಉತ್ತರಕ್ಕೆ: ಆಸ್ತಿಯ ನಿವೇಶನ ನಂ.82ಎ, ದಕ್ಷಿಣಕ್ಕೆ: ದಕ್ಷಿಣ ಭಾಗದ ಅದೇ ಆಸ್ತಿಯ ಉಳಿಕೆ ಭಾಗ.
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.8880041234 ನ್ನು ಸಂಪರ್ಕಿಸಿ.</td><td>27.10.2025
ಎನ್‌ಪಿಎ ದಿನಾಂಕ : 27.12.2023</td><td>SBB OVER DRAFT (OVER DRAFT)
Loan A/c No. 917030031547763
Amount Rs.11,00,000/-
ಒಟ್ಟು ಬಾಕಿ ಮೊತ್ತ ರೂ. 8,02,547/–
(ದಿನಾಂಕ: 27.10.2025 ರವರೆಗಿನ ಬಡ್ಡಿ ಸೇರಿದೆ.)</td></tr>
<tr><td>2.</td><td>(1) ಶ್ರೀ. ಜಸ್ಟಿನ್ ದಿರಾವಿಯಂ ಅಲಂಗಾರಂ ಬಿನ್ ಶ್ರೀ ಪಿಳ್ಳೈ ಅಲಂಗಾರಂ ಅಡ್ಕೈಕಲಂ,
(2) ಶ್ರೀಮತಿ ಅರುಲ್ ಮೇರಿ ಕೋಂ ಶ್ರೀ ಪಿಳ್ಳೈ ಅಲಂಗಾರಂ ಅಡ್ಕೈಕಲಂ, ಇವರಿಬ್ಬರ ವಿಳಾಸ: ನಂ.3/3, 1ನೇ ಮಹಡಿ, 1ನೇ ಮೇನ್, ಮಸೀದಿ ಬೀದಿ, ಟ್ಯಾನರಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು ಉತ್ತರ, ಬೆಂಗಳೂರು–560005.
ಮತ್ತೊಂದು ವಿಳಾಸ: ನಿವೇಶನ ನಂ.28, ಆಸ್ತಿ ನಂ.16, ಹೆಣ್ಣೂರು ಗ್ರಾಮ, ಕಸಬಾ ಹೋಬಳಿ, ಬೆಂಗಳೂರು–5600043.</td><td>ಶ್ರೀ ಜಸ್ಟಿನ್ ದಿರಾವಿಯಂ ಅಲಂಗಾರಮ್ ಮತ್ತು ಶ್ರೀಮತಿ ಅರುಲ್ ಮೇರಿ ಅವರಿಗೆ ಸೇರಿದ ಆಸ್ತಿಯ ವಿವರ
ಷೆಡ್ಯೂಲ್ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಿವೇಶನ ನಂ.28, ಆಸ್ತಿ ನಂ.16, ಬಿಬಿಎಂಪಿ ಖಾತಾ ನಂ.505/1/16/28, ಈ ಆಸ್ತಿಯು ಹೆಣ್ಣೂರು ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರಿನಲ್ಲಿದೆ. ಪ್ರಸ್ತುತ ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದ ಕಡೆ: 35 ಅಡಿ, ಪಶ್ಚಿಮದ ಕಡೆ: 35 ಅಡಿ, ಉತ್ತರದ ಕಡೆ: 44 ಅಡಿ, ದಕ್ಷಿಣದ ಕಡೆ: 43 ಅಡಿ, ಒಟ್ಟು ವಿಸ್ತೀರ್ಣ 1522.5 ಚದರ ಅಡಿ ಜೊತೆಗೆ ಆರ್‌ಸಿಸಿ ಕಟ್ಟಡದಲ್ಲಿ 14 ಚದರ ನೆಲ ಮಹಡಿ ಜೊತೆಗೆ ಪಾರ್ಕಿಂಗ್, ಆರ್‌ಸಿಸಿ ಕಟ್ಟಡದಲ್ಲಿ 14 ಚದರ ಮೊದಲನೇ ಮಹಡಿ, ಆರ್‌ಸಿಸಿ ಕಟ್ಟಡದಲ್ಲಿ 14 ಚದರ ಎರಡನೇ ಮಹಡಿ ಮತ್ತು ಆರ್‌ಸಿಸಿ ಕಟ್ಟಡದಲ್ಲಿ 5 ಚದರ ಮೂರನೇ ಮಹಡಿಯನ್ನು ನಿರ್ಮಿಸಲಾಗಿದೆ ಜೊತೆಗೆ ಇಟ್ಟಿಗೆ ಮತ್ತು ಸಿಮೆಂಟ್, ವಿಟ್ರಿಫೈಡ್ ಫ್ಲೋರಿಂಗ್, ಕಾಡಿನ ಮರದಿಂದ ಮಾಡಿದ ಬಾಗಿಲುಗಳು ಮತ್ತು ಕಿಟಕಿಗಳು ಜೊತೆಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಆಸ್ತಿ ನಂ.16, ದಕ್ಷಿಣಕ್ಕೆ: ನಿವೇಶನ ನಂ.27.
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.8880041234 ನ್ನು ಸಂಪರ್ಕಿಸಿ.</td><td>21.10.2025
ಎನ್‌ಪಿಎ ದಿನಾಂಕ : 07.10.2025</td><td>SUPER SAVER
Loan A/c No. 923030008148633
Amount Rs.1,52,00,000/-
ಒಟ್ಟು ಬಾಕಿ ಮೊತ್ತ ರೂ.1,44,59,628/–
ದಿನಾಂಕ: 27.10.2025 ರಂದು ಇದ್ದಂತೆ.</td></tr>
<tr><td>3.</td><td>(1) ಶ್ರೀ ಆದಿತ್ಯ ಎಸ್ ಜಗದೀಶ್ ಬಿನ್ ಶ್ರೀ ಎಸ್.ಎನ್. ಜಗದೀಶ್, (2) ಶ್ರೀ ಎಸ್.ಎನ್. ಜಗದೀಶ್ ಬಿನ್ ಶ್ರೀ ನರಸೇಗೌಡ, ಇವರಿಬ್ಬರ ವಿಳಾಸ: 1012, 27ನೇ ಎ ಮುಖ್ಯರಸ್ತೆ, ಜಯನಗರ, 9ನೇ ಬ್ಲಾಕ್, ಬೆಂಗಳೂರು–560069.
ಮತ್ತೊಂದು ವಿಳಾಸ: ನಿವೇಶನ ನಂ.106, ಗುಲ್ಮೊಹರ್ ಪಾರ್ಕ್, ಹೊಸಕೋಟೆ ಗ್ರಾಮ, ಹಾರೋಹಳ್ಳಿ, ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ, ಬೆಂಗಳೂರು–562112.</td><td>ಶ್ರೀ ಆದಿತ್ಯ ಎಸ್ ಜಗದೀಶ್ ಮತ್ತು ಶ್ರೀ ಎಸ್.ಎನ್. ಜಗದೀಶ್ ಅವರಿಗೆ ಸೇರಿದ ಆಸ್ತಿಯ ವಿವರ
ಆಸ್ತಿಯ ವಿವರ: ಷೆಡ್ಯೂಲ್ 'ಎ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ಥಿರಾಸ್ತಿ ಭೂಮಿಯ ವಿಸ್ತೀರ್ಣ 12 ಎಕರೆ ಮತ್ತು 11.08 ಗುಂಟೆಗಳು, ಸರ್ವೆ ನಂ.93/1ಎ1 (ಹಳೆ ನಂ.93/1ಎ, 93/1ಬಿ1 (ಹಳೆ ನಂ.93/1ಬಿ), 93/2, 93/5 ಮತ್ತು 104, ಹೊಸಕೋಟೆ ಗ್ರಾಮ, ಕನಕಪುರ ತಾಲ್ಲೂಕು ಮತ್ತು ರಾಮನಗರ ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಭೂಮಿ ಸರ್ವೆ ನಂ.33, 105, 95/3, ಪಶ್ಚಿಮಕ್ಕೆ: ಭೂಮಿ ಸರ್ವೆ ನಂ.95/1, 95, 93/1ಎ2, 93/2, 94, ಉತ್ತರಕ್ಕೆ: ಭೂಮಿ ಸರ್ವೆ ನಂ.99,103,95, 95/3,95/2,93/1ಎ2, ದಕ್ಷಿಣಕ್ಕೆ: ಭೂಮಿ ಸರ್ವೆ ನಂ.105, 89, 93/3, 93/2, 93/142.
ಷೆಡ್ಯೂಲ್ 'ಬಿ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಪ್ಲಾಟ್ ನಂ:106, ಸರ್ವೆ ನಂ.93/1ಎ & 93/1ಬಿ, ಗುಲ್ಮೊಹರ್ ಪಾರ್ಕ್, ಅಭಿವೃದ್ಧಿಗೊಂಡಿರುವ ಭೂಮಿಯ ಸರ್ವೆ ನಂ.93/1ಎ1 (ಹಳೆ ನಂ. 93/1ಎ, 93/1ಬಿ1 (ಹಳೆ ನಂ. 93/1ಬಿ), 93/2, 93/5 ಮತ್ತು 104 ಹೊಸಕೋಟೆ ಗ್ರಾಮ, ಕನಕಪುರ ತಾಲ್ಲೂಕು ಮತ್ತು ರಾಮನಗರ ಜಿಲ್ಲೆಯಲ್ಲಿದೆ, ಪಿಐಡಿ ನಂ.152900200401920521, ಖಾತಾ ನಂ.122/72/106, ಕಗ್ಗಲಹಳ್ಳಿ ಗ್ರಾಮ ಪಂಚಾಯಿತಿಯಿಂದ ಹೊರಡಿಸಿದ್ದಾರೆ, ವಿಸ್ತೀರ್ಣ 1500 ಚದರ ಅಡಿ ಅಥವಾ 139.35 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.17, 18 & 19, ಉತ್ತರಕ್ಕೆ: ಪ್ಲಾಟ್ ನಂ.06, ದಕ್ಷಿಣಕ್ಕೆ: ಪ್ಲಾಟ್ ನಂ.08.
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.8880041234 ನ್ನು ಸಂಪರ್ಕಿಸಿ.</td><td>21.10.2025
ಎನ್‌ಪಿಎ ದಿನಾಂಕ: 08.10.2025</td><td>POWER HOME VANILLA BRE
Loan A/c No. PHR056107516045
Amount Rs.14,51,250/-
ಒಟ್ಟು ಬಾಕಿ ಮೊತ್ತ ರೂ.14,21,232/–
ದಿನಾಂಕ: 16.10.2025 ರಂದು ಇದ್ದಂತೆ.</td></tr>
<tr><td>4</td><td>(1) ಶ್ರೀ ಸಂತೋಷ್.ಎಲ್.ಬಿ. ಬಿನ್ ಶ್ರೀ.ಎಲ್.ಬಸವರಾಜ್, (2) ಶ್ರೀಮತಿ ಪೂಜಾ ಎಸ್.ಕೆ. ಕೋಂ ಶ್ರೀ. ಸಂತೋಷ್.ಎಲ್.ಬಿ., ಇವರಿಬ್ಬರ ವಿಳಾಸ: ನಂ.32, 2ನೇ ಮಹಡಿ, ಕುಂದವಾಡ ರಸ್ತೆ, ಜೈನ್ ಲೇಔಟ್, ವಿನಾಯಕ ನಗರ, ಹೆಚ್.ಪಿ.ಗ್ಯಾಸ್ ಗೋಡೌನ್ ಹತ್ತಿರ, ದಾವಣಗೆರೆ–577004. ಮತ್ತೊಂದು ವಿಳಾಸ: ನಂ.1287/2, 1ನೇ ಮುಖ್ಯರಸ್ತೆ, 9ನೇ ಕ್ರಾಸ್, ವಿನೋಭ ನಗರ, ದಾವಣಗೆರೆ–577006.
ಮತ್ತೊಂದು ವಿಳಾಸ: ಪ್ಲಾಟ್ ನಂ.28, ಬಾಗಿಲು ನಂ.369/28, ಸರ್ವೆ ನಂ.25, ಆನೆಕೊಂಡ ಗ್ರಾಮ, ಬಿದಿರು ಬಜಾರ್, ವಿನಾಯಕ ತಾಲಿಕೇಸ್ ಹತ್ತಿರ, ದಾವಣಗೆರೆ–577001.</td><td>ಶ್ರೀ ಸಂತೋಷ್ ಎಲ್ ಬಿ ಅವರಿಗೆ ಸೇರಿದ ಆಸ್ತಿಯ ವಿವರ
ಆಸ್ತಿಯ ವಿವರ: ಷೆಡ್ಯೂಲ್ 'ಎ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ಪ್ಲಾಟ್ ನಂ.28, ಡೋರ್ ನಂ.369/28, ಸರ್ವೆ ನಂ.25, ವಿಸ್ತೀರ್ಣ 98'x30', ಈ ಆಸ್ತಿಯು ಆನೆಕೊಂಡ ವಿಭಾಗ, ದಾವಣಗೆರೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: 30' ರಸ್ತೆ, ಪಶ್ಚಿಮಕ್ಕೆ: ಇತರರ ಆಸ್ತಿ, ಉತ್ತರಕ್ಕೆ: ಅದೇ ನಿವೇಶನದ ಉಳಿಕೆ ಭಾಗ, ದಕ್ಷಿಣಕ್ಕೆ: ಇತರರ ಆಸ್ತಿ.
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.8880041234 ನ್ನು ಸಂಪರ್ಕಿಸಿ.</td><td>27.10.2025
ಎನ್‌ಪಿಎ ದಿನಾಂಕ : 15.08.2023</td><td>POWER HOME
Loan A/c No. PHR022501564094
Amount Rs.10,00,000/-
ಒಟ್ಟು ಬಾಕಿ ಮೊತ್ತ ರೂ.11,52,092/–
ದಿನಾಂಕ: 22.10.2025 ರಂದು ಇದ್ದಂತೆ.</td></tr>
<tr><td>5</td><td>(1) ಮೆ॥ ಶೇಷಾದ್ರಿ ಟ್ರೇಡರ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಎಸ್ ಕಿರಣ್ ಕುಮಾರ್ ಮತ್ತು ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ ಬಿ ಭೀಮಶೇನ ಸೆಟ್ಟಿ, ಡೋರ್ ನಂ.ಬಿ 25, ಎಪಿಎಂಸಿ ಕಛೇರಿ ಹತ್ತಿರ, ಬೆಂಗಳೂರು ರಸ್ತೆ, ಬಳ್ಳಾರಿ–583101.
(2) ಶ್ರೀ ಎಸ್ ಕಿರಣ್ ಕುಮಾರ್ ಬಿನ್ ಶ್ರೀ ಸುಂಕು ಶ್ರೀನಿವಾಸುಲು ಸೆಟ್ಟಿ, ವಾರ್ಡ್ ನಂ.16, ಅಗಡಿ ಮರೆಡ್ಡ ಕಾಂಪೌಂಡ್, ರಾಘವೇಂದ್ರ ಚಿತ್ರಮಂದಿರದ ಹತ್ತಿರ, ಬಳ್ಳಾರಿ–583101.
(3) ಶ್ರೀ ಬಿ. ಭೀಮಶೇನ ಸೆಟ್ಟಿ ಬಿನ್ ಶ್ರೀ ಬಸಪ್ಪ ಸೆಟ್ಟಿ ವಾರ್ಡ್ ನಂ.8, ಪಿಡಬ್ಲ್ಯೂಡಿ ಕಚೇರಿ ಪಕ್ಕ, ಎಸ್.ಎನ್.ಪೇಟೆ, ಕಂಪ್ಲಿ, ಮುದ್ದಾಪುರ, ನಂ.10, ಬಳ್ಳಾರಿ–583132.</td><td>ಶ್ರೀ ಭೀಮಶೇನ ಸೆಟ್ಟಿ ಅವರಿಗೆ ಸೇರಿದ ಆಸ್ತಿಯ ವಿವರ
ಷೆಡ್ಯೂಲ್–I: ಬಳ್ಳಾರಿ ಜಿಲ್ಲೆ ಮತ್ತು ಕಂಪ್ಲಿ ಉಪ ನೋಂದಣಿ, ಟೌನ್ ಮುನಿಸಿಪಲ್ ಕೌನ್ಸಿಲ್, ಕಂಪ್ಲಿ, ಹಳೆ ವಾರ್ಡ್ ನಂ.8, ಹೊಸ ವಾರ್ಡ್ ನಂ.19, ಜಿ.ಎಫ್. ಮನೆಯ ನಂ.150, ಅಸೆಸ್‌ಮೆಂಟ್ ನಂ.4548 ಮತ್ತು ಎಫ್.ಎಫ್. ಮನೆ 150/1, ಅಸೆಸ್‌ಮೆಂಟ್ ನಂ.4548/1, ಫಾರ್ಮ್ ನಂ.2ರ ಪ್ರಕಾರ ಉತ್ತರ ದಿಕ್ಕಿನ ಮನೆಯ ಆಸ್ತಿಯ ಪಿಐಡಿ ನಂ.5–103–13, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 3.657607 ಚದರ ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 8.717297 ಚದರ ಮೀಟರ್‌ಗಳು, ಒಟ್ಟು ವಿಸ್ತೀರ್ಣ 31.88430960 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್. 41.17925480 ಚದರ ಮೀಟರ್‌ಗಳು, ಎಫ್.ಎಫ್.31.772826, ಸಾಮಾನ್ಯ ಚಕ್ಕುಬಂದಿ: ಪೂರ್ವಕ್ಕೆ: ಬಿ.ಹೆಚ್.ಎಂ. ಗುರುಶಾಂತಪ್ಪ ಶೆಟ್ಟಿ, ಕಾಂಪ್ಲೆಕ್ಸ್, ಪಶ್ಚಿಮಕ್ಕೆ: 'ಎ' ಷೆಡ್ಯೂಲ್ ಆಸ್ತಿ ಬಿ. ನಾರಾಯಣ ಶೆಟ್ಟಿ ಅವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಮುಖ್ಯರಸ್ತೆ, ದಕ್ಷಿಣಕ್ಕೆ: ಬಿ.ರಾಜೇಶ್ವರಿ ಅವರ ಆಸ್ತಿ ಮತ್ತು ಓಣಿ.
ಷೆಡ್ಯೂಲ್–II: ಕೃಷಿಯೇತರ ವಾಸಯೋಗ್ಯ ಆಸ್ತಿಯು ಬಳ್ಳಾರಿ ಎಸ್‌ಆರ್‌ಒ ನಲ್ಲಿ ನೋಂದಣಿಗೊಂಡಿದೆ, ಕಾರ್ಪೋರೇಷನ್ ವಾರ್ಡ್ ನಂ.9, ಎನ್.ಎ. ಸರ್ವೆ ನಂ.14/2, ನಂತರದ ಉಪ ವಿಭಾಗದ ಸರ್ವೆ ನಂ.14/3, ಪ್ಲಾಟ್ ನಂಬರ್‌ಗಳು.1, 2, 3, 4, 5, 6, 7, 8, 9, 10, 11, 12, 13, 14 & 15, ಅಸೆಸ್‌ಮೆಂಟ್ ನಂ.10133/14/3, ತೆರೆದ ನಿವೇಶನಗಳು, ಪ್ರತಿಯೊಂದರ ವಿಸ್ತೀರ್ಣ 20 X 30 ಚದರ ಅಡಿ, ಈ ಆಸ್ತಿಯು ಅಂದ್ರಾಳು ಗ್ರಾಮ, ಬಳ್ಳಾರಿಯಲ್ಲಿದ್ದು, ಬಳ್ಳಾರಿ ಸಿಟಿ ಕಾರ್ಪೋರೇಷನ್, ಬಳ್ಳಾರಿ, ಕರ್ನಾಟಕ–583101ರ ವ್ಯಾಪ್ತಿಯಲ್ಲಿದೆ.
<table>
<tr><th>ಕ್ರ. ಸಂ.</th><th>ಸರ್ವೆ ನಂ.</th><th>ಪ್ಲಾಟ್ ನಂ.</th><th>ವಿಸ್ತೀರ್ಣ</th><th>ಚಕ್ಕುಬಂದಿಗಳು (ಮಾರಾಟ ಪತ್ರದ ಪ್ರಕಾರ)</th></tr>
<tr><td>1</td><td>14/3</td><td>ಪ್ಲಾಟ್ ನಂ.1, 2, 3, 4 ಮತ್ತು 5</td><td>ಒಟ್ಟು ವಿಸ್ತೀರ್ಣ 3000 ಚದರ ಅಡಿ</td><td>ಪೂರ್ವಕ್ಕೆ: ಇಂಬ್ರಾಹಿಂಪುರ ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 6–ಸೈಯದ್ ಫೈರೋಜ್‌ರವರ ಆಸ್ತಿ, ಉತ್ತರಕ್ಕೆ: ಅಂದೋನಿ ಮುದ್ದಬಸವನ ಗೌಡರವರ ಭೂಮಿ, ದಕ್ಷಿಣಕ್ಕೆ: 20 ಅಡಿ ರಸ್ತೆ.</td></tr>
<tr><td>2</td><td>14/3</td><td>ಪ್ಲಾಟ್ ನಂ.12 & 13</td><td>ಒಟ್ಟು ವಿಸ್ತೀರ್ಣ 1200 ಚದರ ಅಡಿ</td><td>ಪೂರ್ವಕ್ಕೆ: ಪ್ಲಾಟ್ ನಂ.11, ಪಶ್ಚಿಮಕ್ಕೆ: ಪ್ಲಾಟ್ ನಂ.14, ಉತ್ತರಕ್ಕೆ: ಅಂದೋನಿ ಮುದ್ದಬಸವನ ಗೌಡರವರ ಭೂಮಿ, ದಕ್ಷಿಣ: ರಸ್ತೆ.</td></tr>
<tr><td>3</td><td>14/3</td><td>ಪ್ಲಾಟ್ ನಂಬರ್ಸ್.6, 7, 8, 9, 10 & 11</td><td>ಒಟ್ಟು ವಿಸ್ತೀರ್ಣ 3000 ಚದರ ಅಡಿ</td><td>ಪೂರ್ವಕ್ಕೆ: ಪ್ಲಾಟ್ ನಂ.12, ಪಶ್ಚಿಮಕ್ಕೆ: ಪ್ಲಾಟ್ ನಂ.5, ಉತ್ತರಕ್ಕೆ: 20 ಅಡಿ ರಸ್ತೆ, ದಕ್ಷಿಣಕ್ಕೆ: ರಸ್ತೆ.</td></tr>
<tr><td></td><td></td><td>14 & 15</td><td>ಒಟ್ಟು ವಿಸ್ತೀರ್ಣ 1200 ಚದರ ಅಡಿ</td><td>ಪೂರ್ವಕ್ಕೆ: ಪ್ಲಾಟ್ ನಂ.16, ಪಶ್ಚಿಮಕ್ಕೆ: ಪ್ಲಾಟ್ ನಂ.13, ಉತ್ತರಕ್ಕೆ: 20 ಅಡಿ ರಸ್ತೆ, ದಕ್ಷಿಣಕ್ಕೆ: ಬಸವರಾಜಪ್ಪ ಹತ್ತಿ ಗಿರಣಿಗಳ ಪ್ಲಾಟ್‌ಗಳು.</td></tr>
</table>
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರಕಾಶ್ ಕೆ, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.9986326545 ನ್ನು ಸಂಪರ್ಕಿಸಿ.</td><td>17.10.2025
ಎನ್‌ಪಿಎ ದಿನಾಂಕ : 28.08.2025</td><td>SBB OVER DRAFT (OVER DRAFT)
Loan A/c No. 921030034650450
Amount Rs.58,00,000/-
ಒಟ್ಟು ಬಾಕಿ ಮೊತ್ತ ರೂ.13,15,851/–
ದಿನಾಂಕ: 23.10.2025 ರಂದು ಇದ್ದಂತೆ.</td></tr>
<tr><td>6</td><td>(1) ಮೆ॥ ಲಕ್ಷ್ಮಿ ಕಿರಣ ಮತ್ತು ಜನರಲ್ ಸ್ಟೋರ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ. ಭನರಾಮ್, ಅಂಗಡಿ ನಂ.2–11–460/20, ಸರಸ್ವತಮ್ಮ ಲೇಔಟ್, ಬಸ್ ನಿಲ್ದಾಣದ ಹಿಂಭಾಗ, ಲಿಂಗಸುಗೂರು, ರಾಯಚೂರು–584122.
(2) ಶ್ರೀ. ಭನರಾಮ್ ಬಿನ್ ಶ್ರೀ ಬಾಬುಜೀ ಪಟೇಲ್, ಲಕ್ಷ್ಮಿ ಕಿರಣ ಮತ್ತು ಜನರಲ್ ಸ್ಟೋರ್, ವೆಂಕಟೇಶ್ವರ ಕಾಲೋನಿ, ಹೊಸ ಬಸ್ ನಿಲ್ದಾಣದ ಹಿಂಭಾಗ, ಲಿಂಗಸುಗೂರು, ರಾಯಚೂರು–584122.</td><td>ಶ್ರೀ ಭನರಾಮ್ ಅವರಿಗೆ ಸೇರಿದ ಆಸ್ತಿಯ ವಿವರ
ಷೆಡ್ಯೂಲ್
<table>
<tr><td>Plot/Survey/G. No./Khasra No.</td><td colspan="3">ಆಸ್ತಿಯ ಪ್ಲಾಟ್ ನಂ.2, ವಿಸ್ತೀರ್ಣ 135 ಚದರ ಮೀಟರ್‌ಗಳು, ಸರ್ವೆ ನಂ.188/1, ಇ–ಸ್ವತ್ತಿನ ನಂ.35–518–89, ವಾರ್ಡ್ ನಂ.7, ಮುನಿಸಿಪಲ್ ವಾರ್ಡ್ ನಂ.58, ಈ ಆಸ್ತಿಯು ಲಿಂಗಸುಗೂರು ಗ್ರಾಮ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿದ್ದು, ಲಿಂಗಸುಗೂರು ಟಿಎಂಸಿ ವ್ಯಾಪ್ತಿಯಲ್ಲಿದೆ ಮತ್ತು ಜೊತೆಗೆ ಲಿಂಗಸುಗೂರು ಉಪ–ನೋಂದಣಿ ಅಧಿಕಾರಿಗಳ ವ್ಯಾಪ್ತಿಯಲ್ಲಿದೆ.</td></tr>
<tr><td>Road/Colony/Sector/Locality/ Landmark</td><td colspan="3">Lingsugur</td></tr>
<tr><td>Village/Town/City</td><td colspan="3">Lingsugur</td></tr>
<tr><td>Tehsil, District, State</td><td colspan="3">Raichur</td></tr>
<tr><td>Admeasuring (in Area Sq Mt only)</td><td colspan="3">135 Sq.Mtrs</td></tr>
<tr><td colspan="4">Boundaries of the Plot</td></tr>
<tr><td>East</td><td>West</td><td>North</td><td>South</td></tr>
<tr><td>Plot No.3</td><td>Plot No.1</td><td>Road</td><td>Plot No.5</td></tr>
</table>
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರಕಾಶ್ ಕೆ, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.9986326545 ನ್ನು ಸಂಪರ್ಕಿಸಿ.</td><td>17.10.2025
ಎನ್‌ಪಿಎ ದಿನಾಂಕ: 15.09.2025</td><td>SBB CASH CREDIT (CASH CREDIT),
Loan A/c No. 923030052889034
Amount Rs. 1,20,00,000/-
ಒಟ್ಟು ಬಾಕಿ ಮೊತ್ತ ರೂ. 1,21,70,425/–
ದಿನಾಂಕ: 23.10.2025 ರಂದು ಇದ್ದಂತೆ.</td></tr>
<tr><td>7</td><td>1) ಶ್ರೀ ಅನಿಲ್ ಬಿನ್ ಶ್ರೀ ವಲೇರಿಯನ್ ಡೋರ್ ನಂ.2–157–8, ಹಾಲಿ ಗ್ರೋವ್ ವ್ಯಾಲಿ ವ್ಯೂ ಲೇಔಟ್, ಗುರುನಗರ, ಮೇರಿಹಿಲ್, ಬೆಂಗಳೂರು–575008.
ಮತ್ತೊಂದು ವಿಳಾಸ: ನಂ.177, ಕಕ್ಕೇನ ಪೋಸ್ಟ್, ಬೆಳ್ತಂಗಡಿ, ದಕ್ಷಿಣ, ಕನ್ನಡ, ಸರ್ವಿಸ್ ಬಸ್ಸ್ಟ್ಯಾಂಡ್ ಹತ್ತಿರ–574214. ಮತ್ತೊಂದು ವಿಳಾಸ: ಡೋರ್ ನಂ. 4–ಇ–168, ಡೋರ್ ನಂ. ಇಡಬ್ಲ್ಯೂಎಸ್.168, ಶ್ರೀ ಲಕ್ಷ್ಮಿ ನಿವಾಸ, 7ನೇ ಕ್ರಾಸ್, ಕೆಹೆಚ್‌ಬಿ ಕಾಲೋನಿ, ಬೊಂಡೆಲ್ಕೊಂಚಾಡಿ–575008.
(2) ಶ್ರೀಮತಿ ಕವಿತಾ ಕೋಂ ಶ್ರೀ ಅನಿಲ್, ಡೋರ್ ನಂ.2–157–8, ಹಾಲಿ ಗ್ರೋವ್ ವ್ಯಾಲಿ ವ್ಯೂ ಲೇಔಟ್, ಗುರುನಗರ, ಮೇರಿಹಿಲ್, ಬೆಂಗಳೂರು–575008.
ಮತ್ತೊಂದು ವಿಳಾಸ: ನಂ.261–ಎ, 2ನೇ ವಾರ್ಡ್, ಖಾರ್ವಿ ಕೆಲ ಕೇರಿ, ರಂಜಿತಾ ನಿಲಯ, ಕುಂದಾಪುರ, ಉಡುಪಿ, ಯೂನಿಯನ್ ಬ್ಯಾಂಕ್ ಹತ್ತಿರ–576201.
ಮತ್ತೊಂದು ವಿಳಾಸ: ಡೋರ್ ನಂ.4–ಇ–168, ಡೋರ್ ನಂ. ಇಡಬ್ಲ್ಯೂಎಸ್.168, ಶ್ರೀ ಲಕ್ಷ್ಮಿ ನಿವಾಸ, 7ನೇ ಕ್ರಾಸ್, ಕೆಹೆಚ್‌ಬಿ ಕಾಲೋನಿ, ಬೊಂದೇಲ್ಕೊಂಚಾಡಿ–575008.</td><td>ಶ್ರೀ ಅನಿಲ್ ಅವರಿಗೆ ಸೇರಿದ ಆಸ್ತಿಯ ವಿವರ
ಷೆಡ್ಯೂಲ್ : ಆಸ್ತಿಯ ವಿವರ: ವಾಸಯೋಗ್ಯ ಮನೆಯ ನಂ.ಇಡಬ್ಲ್ಯೂಎಸ್ 168, ಡೋರ್ ನಂ.4–ಇ–168, ಸರ್ವೆ ನಂ.57/1, ವಿಸ್ತೀರ್ಣ 200 ಚದರ ಅಡಿ, ಈ ಆಸ್ತಿಯು ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿದೆ ಮತ್ತು ನೋಂದಣಿ ಉಪ–ಜಿಲ್ಲೆ ಮಂಗಳೂರು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 14.3 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 36.00 ಅಡಿ, ಒಟ್ಟು ಪ್ಲಾಟ್ ಪ್ರದೇಶ 47.61 ಚದರ ಮೀಟರ್‌ಗಳು ಅಥವಾ 1.18 ಸೇಂಟ್ಸ್ ಜೊತೆಗೆ ದ.ಕ. ನೋಂದಣಿ ಉಪ–ಜಿಲ್ಲೆಯ ಅಧಿಕಾರ ವ್ಯಾಪ್ತಿಯಲ್ಲಿದೆ ಮತ್ತು ಚಕ್ಕುಬಂದಿ: ಉತ್ತರಕ್ಕೆ: ರಸ್ತೆ, ಪೂರ್ವಕ್ಕೆ: ಮನೆಯು ನಂ.ಇಡಬ್ಲ್ಯೂಎಸ್ 169, ದಕ್ಷಿಣಕ್ಕೆ: ಖಾಸಗಿ ಭೂಮಿ, ಪಶ್ಚಿಮಕ್ಕೆ: ಮನೆಯ ನಂ.ಇಡಬ್ಲ್ಯೂಎಸ್ 167.
ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರೇಮ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ.8880041234 ನ್ನು ಸಂಪರ್ಕಿಸಿ.</td><td>27.10.2025
ಎನ್‌ಪಿಎ ದಿನಾಂಕ: 16.06.2022</td><td>POWER HOME VANILLA BRE
Loan A/c No. PHR007710056161
Amount Rs.10,26,930/-
ಒಟ್ಟು ಬಾಕಿ ಮೊತ್ತ ರೂ.9,78,502/–
ದಿನಾಂಕ: 29.10.2025 ರಂದು ಇದ್ದಂತೆ.</td></tr>
</table>

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 24.11.2025
ಸ್ಥಳ : ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಡಿಕೆಶಿ ಅವರನ್ನು ಬಿಜೆಪಿಗೆ ಸೇರಿಸಲ್ಲ

ಬೀದರ್: ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳುವುದಿಲ್ಲ. ಅವರ ಗೋಜಿಗೆ ನಾವು ಹೋಗುವುದಿಲ್ಲ. ಏನಾದರೂ ಆಗಿ ಸರಕಾರ ಬಿದ್ದರೆ ಬಿಜೆಪಿ ಚುನಾವಣೆಗೆ ಹೋಗುತ್ತದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಎನ್.ರವಿಕುಮಾರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿಎಂ ಹುದ್ದೆ ಗಿಟ್ಟಿಸಲು ಕಾಂಗ್ರೆಸ್ ಶಾಸಕರ ಸೆಳೆಯಲು ಕೋಟಿ ಗಟ್ಟಲೇ ವ್ಯವಹಾರ ನಡೆಯುತ್ತಿದೆ. ಈಗಾಗಲೇ ಜೈಲಿನಲ್ಲಿರುವ ಇಬ್ಬರು ಶಾಸಕರನ್ನು ಭೇಟಿ ಮಾಡಿದ್ದಾರೆ. ಬಿಜೆಪಿ ಯಾವುದೇ ರೀತಿಯ ಆಪರೇಷನ್ ನಡೆಸುತ್ತಿಲ್ಲ. ನಮ್ಮ ಯಾವ ಶಾಸಕರೂ ಕಾಂಗ್ರೆಸ್‌ಗೆ ಹೋಗಲ್ಲ. ಅವರು ಕೂಡ ನಮ್ಮ ಶಾಸಕರನ್ನು ಸಂಪರ್ಕಿಸಿಲ್ಲ. ಕಾಂಗ್ರೆಸ್ ಪಕ್ಷದಲ್ಲಿರುವ ಶಾಸಕರನ್ನು ಸೆಳೆಯುವುದಕ್ಕಾಗಿ ಆಪರೇಷನ್ ನಡೆಸುತ್ತಿದ್ದಾರೆ. ಇದಕ್ಕಾಗಿ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಸಿಎಂ ಕುರ್ಚಿ ಜಗಳದಲ್ಲಿ ರಾಜ್ಯದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳಾಗುತ್ತಿಲ್ಲ ಎಂದು ಟೀಕಿಸಿದರು.

ಸಿಎಲ್‌ಪಿ ಸಭೆಯಲ್ಲಿ ಷರತ್ತು ಹಾಕಿರಲಿಲ್ಲ

ಹೊಸಪೇಟೆ: ಕಾಂಗ್ರೆಸ್ ಸರಕಾರ ರಚನೆಯಾಗುವ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ಸಭೆಯ ವೇಳೆ ನಾವೆಲ್ಲ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಿದ್ದೆವು. ಆಗ ಇಂತಿಷ್ಟು ಸಮಯಕ್ಕೆ ಸಿಎಂ ಎಂಬ ಷರತ್ತು ಇರಲಿಲ್ಲ, ಸದ್ಯಕ್ಕಂತೂ ಸಿಎಂ ಕುರ್ಚಿ ಖಾಲಿ ಇಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಲ್‌ಪಿ ಸಭೆಯ ಹೊರತಾಗಿ ಪಕ್ಷದ ವರಿಷ್ಠರು ಅಧಿಕಾರ ಹಂಚಿಕೆ ಬಗ್ಗೆ ಹೇಳಿದ್ದರೆ ಅದು ನನಗೆ ಗೊತ್ತಿಲ್ಲ, ಅದರ ಬಗ್ಗೆ ವರಿಷ್ಠರೇ ಹೇಳುತ್ತಾರೆ ಎಂದರು. ನಮ್ಮೊಳಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ಸಿಎಂ, ಡಿಸಿಎಂ ಇಬ್ಬರೂ ಹೇಳಿದ್ದಾರೆ. ವರಿಷ್ಠರ ಸೂಚನೆಯಂತೆ ನಡೆದುಕೊಳ್ಳುವುದಾಗಿ ಹೇಳಿದ್ದಾರೆ. ಕಾಂಗ್ರೆಸ್‌ನ ಯಾವ ಶಾಸಕರೂ ಮಾರಾಟಕ್ಕಿಲ್ಲ, ಬರೀ ಬೆಂಕಿ ಹಚ್ಚುವುದಷ್ಟೇ ಬಿಜೆಪಿ ಕೆಲಸ ಎಂದರು.

ಬಸ್ ಚಕ್ರಕ್ಕೆ ಸಿಲುಕಿ ಕಂಡಕ್ಟರ್ ಸಾವು

ಯಾದಗಿರಿ: ವಿಶ್ವವಾಣಿ ಕಲಬುರಗಿ ಜಿಲ್ಲಾ ವರದಿಗಾರ ದೇವೇಂದ್ರ ಜಾಡಿ ಅವರ ಸೋದರ ಮಾವ ಕೆಎಸ್‌ಆರ್‌ಟಿಸಿ ನಿರ್ವಾಹಕ ಬಾಬು ಭೀಮಶಾ ಡ್ಯೂಟಿಗಿ (45) ಬಸ್ ಹರಿದು ಮೃತಪಟ್ಟಿದ್ದಾರೆ. ಶಹಾಪುರ ನಗರದ ಹೊಸ ಬಸ್ ನಿಲ್ದಾಣದಲ್ಲಿ ಮಂಗಳವಾರ ದುರಂತ ನಡೆದಿದೆ. ಕಲಬುರಗಿ-ಸುರಪುರ ಮಾರ್ಗಮಧ್ಯೆ ಸಂಚರಿಸುತ್ತಿದ್ದ ಬಸ್‌ನ ಕಲಬುರಗಿ ಒಂದನೇ ಡಿಪೋದಲ್ಲಿ ಮೃತ ಬಾಬು ಭೀಮಶಾ ಡ್ಯೂಟಿಗಿ ನಿರ್ವಾಹಕರಾಗಿದ್ದರು. ಚಾಲಕನ ಬೇಜವಾಬ್ದಾರಿಯಿಂದ ಅವಘಡ ಸಂಭವಿಸಿದೆ ಎನ್ನಲಾಗಿದೆ. ಶಹಾಪುರ ನಗರದ ನಿಲ್ದಾಣದಿಂದ ಸುರಪುರದ ಕಡೆ ಬಸ್ ಹೋಗುತ್ತಿದ್ದ ವೇಳೆ ಬಸ್‌ನ್ನು ಚಾಲಕ ಹಿಂದಕ್ಕೆ ತೆಗೆದುಕೊಂಡಿದ್ದಾನೆ. ಈ ವೇಳೆ ಧಾವಂತದಲ್ಲಿ ಬಸ್ ಹತ್ತಲು ಮುಂದಾಗಿದ್ದ ನಿರ್ವಾಹಕ ಬಾಬು ಆಯ ತಪ್ಪಿ ಕೆಳಗೆ ಬಿದ್ದಿದ್ದಾರೆ. ಕೆಳಗೆ ಬಿದ್ದಿರುವುದನ್ನು ಗಮನಿಸದೆ ಚಾಲಕ ಬಸ್ ಚಲಾಯಿಸಿದ್ದು, ಮುಂದಿನ ಚಕ್ರಕ್ಕೆ ಸಿಲುಕಿ ನಿರ್ವಾಹಕ ಬಾಬು ಭೀಮಶಾ ಮೃತಪಟ್ಟಿದ್ದಾರೆ. ತೀವ್ರ ರಕ್ತಸ್ರಾವ ಆಗಿದ್ದರಿಂದ ಆಸ್ಪತ್ರೆಗೆ ಸಾಗಿಸುವ ವೇಳೆಗೆ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಕೆಎಸ್‌ಆರ್‌ಟಿಸಿ ಜಿಲ್ಲಾಧಿಕಾರಿ ಮಂಜುನಾಥ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಾಪತ್ತೆ ಯುವಕರು ಶವವಾಗಿ ಪತ್ತೆ

ದಾವಣಗೆರೆ: 2 ದಿನಗಳ ಹಿಂದೆ ನಾಪತ್ತೆ ಆಗಿದ್ದ ಇಬ್ಬರು ಯುವಕರು ಕುಂದವಾಡ ಕೆರೆಯಲ್ಲಿ ಶವವಾಗಿ ಪತ್ತೆ ಆಗಿದ್ದಾರೆ. ಶಾಂತಿನಗರದ ಚೇತನ್ (22), ಮನು(23) ಮೃತರು. ಮೇಲ್ನೋಟಕ್ಕೆ ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎನ್ನಲಾಗಿದ್ದು, ವಿದ್ಯಾ ನಗರ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಎರಡು ದಿನಗಳ ಹಿಂದೆ ಕಾಣೆಯಾಗಿದ್ದ ಇಬ್ಬರನ್ನು ಕುಟುಂಬಸ್ಥರು ಹಲವೆಡೆ ಹುಡುಕಾಟ ನಡೆಸಿದ್ದರು. ಆದರೆ, ಮಂಗಳವಾರ ಕೆರೆಯಲ್ಲಿ ಶವವಾಗಿ ಪತ್ತೆಯಾಗಿದ್ದು, ಹಲವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ವಿಶ್ವವಾಣಿ ಕ್ಲಬ್ ಹೌಸ್
26.11.2025
ಸಂಜೆ: 06.55 ರಿಂದ 08.05 ರವರೆಗೆ
ಬುಧವಾರದ ಅತಿಥಿ



ಡಾ. ಸುಮನ್
ವಿಷಯ
ಮಧುಮೇಹ ನಿರ್ವಹಣೆ
vishwavani.news

ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೃಹತ್ ಬಾರುಕೋಲು ಚಳವಳಿಗೆ ವಿಜಯೇಂದ್ರ ಚಾಲನೆ

ಕುರ್ಚಿ ಕಾದಾಟ ಕೈಬಿಟ್ಟು ರೈತರಿಗೆ ಸ್ಪಂದಿಸಿ

ವಿಶ್ವವಾಣಿ ಸುದ್ದಿಮನೆ ದಾವಣಗೆರೆ

ಮೆಕ್ಕೆಜೋಳ ಮತ್ತು ಭತ್ತ ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದು, ಕಬ್ಬು ಬೆಳೆಗಾರರ ಹಿತ ಕಾಪಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕದ ಶಕ್ತಿ ಕೇಂದ್ರ, ದಾವಣಗೆರೆಯಲ್ಲಿ ಬಿಜೆಪಿ ಮಂಗಳವಾರ ಬೃಹತ್ ಪ್ರತಿಭಟನಾ ಮೆರವಣಿಗೆ, ಬಾರುಕೋಲು ಚಳವಳಿ ನಡೆಸಿ, ಸರಕಾರ ರೈತರ ನೆರವಿಗೆ ಧಾವಿಸುವಂತೆ ಆಗ್ರಹಿಸಿತು.

ಕುರ್ಚಿಗಾಗಿ ಪೈಪೋಟಿ, ಕಾದಾಟ ಕೈಬಿಟ್ಟು ರೈತರ ಕೈಹಿಡಿಯದಿದ್ದರೆ ಮುಂದೆ ಅನ್ನದಾತರೇ ಕಾಂಗ್ರೆಸ್ ನೇತೃತ್ವದ ಸರಕಾರ ಕೆಡವುತ್ತಾರೆ. ರೈತರನ್ನು ಕಡೆಗಣಿಸಿದ ಯಾವ ಸರಕಾರವೂ ಉಳಿದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸರಕಾರದ ವಿರುದ್ಧ ಗುಡುಗಿದರು.

ನಗರದಲ್ಲಿ ಬಾರುಕೋಲು ಚಳವಳಿಗೆ ಚಾಲನೆ ನೀಡಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಸಂಕಷ್ಟದಲ್ಲಿರುವ ರೈತರಿಗೆ ಸ್ಪಂದಿಸದೇ ಇರುವುದು ಅಕ್ಷಮ್ಯ ಅಪರಾಧ. ರಾಜ್ಯದಲ್ಲಿರುವ ದುಷ್ಟ, ಅನಿಷ್ಟ ರೈತವಿರೋಧಿ ಕಾಂಗ್ರೆಸ್ ಸರಕಾರವು ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಕಬ್ಬು ಬೆಳೆಗಾರರ ಸಮಸ್ಯೆ ಇತ್ಯರ್ಥವಾಗಿಲ್ಲ. ಹಾಗಾಗಿ, ರೈತ ವಿರೋಧಿ ಕಾಂಗ್ರೆಸ್ ಸರಕಾರದ ವಿರುದ್ಧ ಇಂದು ಹೋರಾಟಕ್ಕೆ ಚಾಲನೆ ನೀಡಿದ್ದೇವೆ ಎಂದರು.

ರಾಜ್ಯದಲ್ಲಿ ಕೃಷಿ ಸಚಿವರನ್ನು, ಉಸ್ತುವಾರಿ ಸಚಿವರನ್ನು, ಕಂದಾಯ ಸಚಿವರನ್ನು ಹುಡುಕುವಂತಾಗಿದೆ. ಅತಿವೃಷ್ಟಿ, ಅನಾವೃಷ್ಟಿಗೆ ರೈತರು ನಲುಗಿದ್ದಾರೆ. ಅವರಿಗೆ ಪರಿಹಾರ ಕಲ್ಪಿಸಬೇಕಾದ ಸರಕಾರ ಕುರ್ಚಿ ಕಾದಾಟದಲ್ಲಿ ತೊಡಗಿದೆ. ಇದೇ ರೀತಿ ಮುಂದುವರಿದರೆ ರೈತರೇ ಸರಕಾರದ ಕುರ್ಚಿಯನ್ನು ಕೆಡವುತ್ತಾರೆ ಎಂದು ಹೇಳಿದರು.

ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಾವಣಗೆರೆಯಲ್ಲಿ ಬಿಜೆಪಿ ನೇತೃತ್ವದಲ್ಲಿ ಮಂಗಳವಾರ ಬೃಹತ್ ಪ್ರತಿಭಟನಾ ಮೆರವಣಿಗೆ, ಬಾರುಕೋಲು ಚಳವಳಿ ನಡೆಯಿತು.

ಕಬ್ಬು ಬೆಳೆಗಾರರು ವೈಜ್ಞಾನಿಕ ಬೆಲೆಗಾಗಿ ಬೀದಿಗಿಳಿದು ಹೋರಾಟ ಮಾಡಿದರೆ ಅಲ್ಲಿರುವ ಉಸ್ತುವಾರಿ ಸಚಿವರಾಗಲೀ, ಸಕ್ಕರೆ ಖಾತೆ ಸಚಿವರು ಬರಲಿಲ್ಲ. ನಾವು ರೈತರ ಪರ ನಿಂತು ಆಹೋರಾತ್ರಿ, ಧರಣಿ ನಡೆಸಿದೆವು. ರಾಜ್ಯದಲ್ಲಿ 17.5 ಲಕ್ಷ ಹೆಕ್ಟೇರ್‌ನಲ್ಲಿ ಮೆಕ್ಕೆಜೋಳ, 45 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಉತ್ಪಾದನೆಯಾಗುತ್ತಿದೆ. ಕೇಂದ್ರ ಸರಕಾರ ಬೆಂಬಲ ಬೆಲೆ ನೀಡಿದ್ದರೂ ರಾಜ್ಯ ಸರಕಾರ ಖರೀದಿ ಕೇಂದ್ರ ತೆರೆಯದೇ ರೈತರ ಜೀವನಕ್ಕೆ ಕೊಳ್ಳಿಯಿಡುವ ಕೆಲಸ ಮಾಡುತ್ತಿದ್ದು, ಇಂತಹ ದೃಷ್ಟ, ಭ್ರಷ್ಟ ಸರಕಾರ ಬಡಿದೆಬ್ಬಿಸುವ ಕಾರ್ಯ ಮಾಡಲು ಹೋರಾಟಕ್ಕೆ ಕರೆ ನೀಡಿದ್ದೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಸರಕಾರಕ್ಕೆ ರೈತರ ಮೇಲಿನ ಕಾಳಜಿಗಿಂತ ಕುರ್ಚಿ ಮೇಲಿನ ಕಾಳಜಿ ಹೆಚ್ಚಿದೆ. ಕುರ್ಚಿಯಲ್ಲಿ ಕೂರಿಸಿದವರಿಗೆ ಕುರ್ಚಿಯಿಂದ ಇಳಿಸುವುದು ಗೊತ್ತು. 1983ರಲ್ಲಿ ಗುಂಡೂರಾವ್ ಸಿಎಂ ಆಗಿದ್ದಾಗ ನರಗುಂದದಲ್ಲಿ ರೈತರ ಹೋರಾಟಕ್ಕೆ ವಿರೋಧಿಯಾಗಿ ನಡೆದುಕೊಂಡಿದ್ದರಿಂದ ತಕ್ಷಣವೇ ಗುಂಡೂರಾವ್ ಸರಕಾರ ಕಳಚಿಬಿದ್ದಿತ್ತು ಎಂಬುದನ್ನು ಅರಿತು, ಈ ಕೂಡಲೇ ಖರೀದಿ ಕೇಂದ್ರ ಆರಂಭಿಸಿ ಎಂದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಾಜಶೇಖರ್, ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎನ್.ಆರ್. ನಡಹಳ್ಳಿ, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಮಾಜಿ ಶಾಸಕ ಎಸ್.ವಿ.ರಾಮಚಂದ್ರಪ್ಪ, ಬಸವರಾಜ ನಾಯ್ಕ, ಮಾಡಾಳ್ ವಿರೂಪಾಕ್ಷಪ್ಪ, ವಕ್ತಾರ ಕೊಳೇನಹಳ್ಳಿ ಬಿ.ಎಂ. ಸತೀಶ್, ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್, ಬಿ.ಜಿ.ಅಜಯ್‌ಕುಮಾರ್ ಇದ್ದರು.

> ನಾವು ರೈತರ ಮೆಕ್ಕೆಜೋಳ, ಭತ್ತ ಖರೀದಿ ಕೇಂದ್ರ ತೆರೆಯಿರಿ ಎಂದಿದ್ದು. ಆದರೆ, ನೀವು ಶಾಸಕರ ಖರೀದಿ ಕೇಂದ್ರ ಆರಂಭಿಸಿದ್ದೀರಿ. ನಿಮಗೆ ಮಾನ ಮಾರ್ಯದೆ ಇದೆಯೇ? ಇದಕ್ಕಾಗಿಯೇ ನಿಮಗೆ ರಾಜ್ಯದ ಜನ 130 ಸೀಟು ಕೊಟ್ಟಿದ್ದಾ? ನೀವು ಒಂದು ರೀತಿ ರೈತರ ಪಾಲಿಗೆ ಬದುಕಿದ್ದೂ ಸತ್ತಂತಾಗಿದ್ದಿರಿ. ನೀವು ಬದುಕಿರುವಂತೆ ತೋರಿಸಬೇಕಾದರೆ ಮೆಕ್ಕೆಜೋಳ, ಭತ್ತ, ಕಬ್ಬಿಗೆ ಬೆಂಬಲ ಬೆಲೆ ನಿಗದಿಪಡಿಸಿ.
>
> – ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

> ಹೊನ್ನಾಳಿಯಲ್ಲಿ ಬಿಜೆಪಿ ಶಾಂತಿಯುತ ಹೋರಾಟ ನಡೆಸುತ್ತಿದ್ದಾಗ ಕಾಂಗ್ರೆಸ್‌ನ ರಾಜಕೀಯ ಪುಢಾರಿಗಳು ದಾದಾಗಿರಿ ಮಾಡಿದ್ದನ್ನು ಸಹಿಸಲ್ಲ. ದರ್ಪ, ದೌಲತ್ತು ತೋರಿಸಿದ್ರೆ ನಾವು ಒಪ್ಪಲ್ಲ. ನಾವು ಹೋರಾಟಕ್ಕೆ ಇಳಿದರೆ ನಿಮ್ಮನ್ನು ಯಾವ ಸರಕಾರ ಬಂದರೂ ಕಾಪಾಡಲು ಸಾಧ್ಯವಿಲ್ಲ.
>
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

> ಬೆಂಬಲ ಬೆಲೆ, ಖರೀದಿ ಕೇಂದ್ರ ಸ್ಥಾಪನೆಗೆ ರೈತರು ನಿರಂತರ ಹೋರಾಟ ನಡೆಸುತ್ತಿದ್ದರೂ ಕುಂಭಕರ್ಣ ನಿದ್ದೆಯಲ್ಲಿರುವ ರಾಜ್ಯ ಸರಕಾರ ಎಚ್ಚೆತ್ತುಕೊಳ್ಳುತ್ತಿಲ್ಲ. ಇಂತಹ ಭಂಡ ಸರಕಾರವನ್ನು ಬಡಿದೆಬ್ಬಿಸುವ ನಿಟ್ಟಿನಲ್ಲಿ ಇಂದು ಆರಂಭವಾದ ಬಾರುಕೋಲು ಚಳವಳಿ ರಾಜ್ಯಾದ್ಯಂತ ಬಿಜೆಪಿ ನೇತೃತ್ವದಲ್ಲಿ ಮುಂದುವರಿಯಲಿದ್ದು, ಸರಕಾರದ ಕಣ್ತೆರೆಸುವವರೆಗೆ ನಮ್ಮ ಹೋರಾಟ ನಿಲ್ಲಲ್ಲ.
>
> -ಎನ್.ಆರ್.ನಡಹಳ್ಳಿ, ರಾಜ್ಯ ರೈತ ಮೋರ್ಚಾ ಅಧ್ಯಕ್ಷ

224 ಕ್ಷೇತ್ರಗಳಲ್ಲಿ ಹೋರಾಟ

ಸಿದ್ದರಾಮಯ್ಯರಾದರೂ ಸಿಎಂ ಆಗಲಿ, ಡಿಕೆಶಿಯಾದರೂ ಆಗಲಿ. ಮುಖ್ಯಮಂತ್ರಿ ಯಾರೆಂಬುದು ನಮಗೆ ಸಂಬಂಧವಿಲ್ಲ. ಆದರೆ, ರೈತರ ಸಮಸ್ಯೆಗೆ ಮಾತ್ರ ತಕ್ಷಣ ಪರಿಹಾರ ನೀಡಬೇಕೆಂದು ಆಗ್ರಹಿಸಿದ ಅವರು, ನ. 27, 28ರಂದು ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ಹೋರಾಟಕ್ಕೆ ಕರೆ ನೀಡಿದ್ದು, ಡಿ.1 ಮತ್ತು 2ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಬಿಜೆಪಿ ರೈತ ಮೋರ್ಚಾ ಹೋರಾಟ ಮಾಡಲಿದೆ ಎಂದು ವಿಜಯೇಂದ್ರ ತಿಳಿಸಿದರು.

ಅಕ್ಕಸಾಲಿಗನಿಂದ ಚಿನ್ನಾಭರಣ ಸುಲಿಗೆ ಮಾಡಿದ ಆರೋಪ

ಇಬ್ಬರು ಪಿಎಸ್‌ಐ ಸೇರಿ ನಾಲ್ವರು ವಶಕ್ಕೆ

ದಾವಣಗೆರೆ: ಆಭರಣ ತಯಾರಕರೊಬ್ಬರಿಂದ 7.5 ಲಕ್ಷ ರು. ಮೌಲ್ಯದ ಚಿನ್ನಾಭರಣ ಸುಲಿಗೆ ಮಾಡಿದ ಆರೋಪದ ಮೇರೆಗೆ ಇಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಸೇರಿ ನಾಲ್ವರನ್ನು ಕೆಟಿಜೆ ನಗರ ಠಾಣೆಯ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪೂರ್ವ ವಲಯದ ಐಜಿಪಿ ಕಚೇರಿಯ ಇಬ್ಬರು ಪಿಎಸ್‌ಐಗಳು ಸೇರಿ ನಾಲ್ವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಕಾರವಾರದ ಆಭರಣ ತಯಾರಕ ವಿಶ್ವನಾಥ್ ಅರ್ಕಸಾಲಿ ಅವರನ್ನು ಸೋಮವಾರ ನಸುಕಿನಲ್ಲಿ ಸುಲಿಗೆ ಮಾಡಿದ ಆರೋಪ ಇವರ ಮೇಲಿದೆ.

ವಿಶ್ವನಾಥ್ ಅವರು ಮಂಡಿಪೇಟೆ, ಹಳೆಪೇಟೆಯ ಕೆಲ ಆಭರಣ ಮಾರಾಟಗಾರರಿಂದ ಚಿನ್ನದ ಗಟ್ಟಿ ಹಾಗೂ ಹಳೆಯ ಉಂಗುರುಗಳನ್ನು ಸಂಗ್ರಹಿಸಿ ಭಾನುವಾರ ಮಧ್ಯರಾತ್ರಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದಿದ್ದರು. ಕಾರವಾರಕ್ಕೆ ಮರಳಲು ಹುಬ್ಬಳ್ಳಿ ಮಾರ್ಗದ ಬಸ್ ಏರಿದ ಅವರನ್ನು ಪಿಎಸ್‌ಐಗಳು ವಶಕ್ಕೆ ಪಡೆದಿದ್ದರು ಎಂದು ಮೂಲಗಳು ಮಾಹಿತಿ ನೀಡಿವೆ.

ಪೊಲೀಸ್ ಅಧಿಕಾರಿಗಳೆಂದು ಪರಿಚಯಿಸಿಕೊಂಡು ಸಮೀಪದ ಕೆಟಿಜೆ ನಗರ ಪೊಲೀಸ್ ಠಾಣೆಯ ಬಳಿಗೆ ವಿಶ್ವನಾಥ್ ಅವರನ್ನು ಕರೆತಂದಿದ್ದಾರೆ. ಠಾಣೆಯ ಹೊರಭಾಗದಲ್ಲಿ ಕಾರು ನಿಲ್ಲಿಸಿ ಕೆಲಹೊತ್ತು ಠಾಣೆಯಲ್ಲಿದ್ದ ಪೊಲೀಸರೊಂದಿಗೆ ಚರ್ಚಿಸಿದ್ದಾರೆ. ಬಳಿಕ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ವಿಶ್ವನಾಥ್ ಅವರನ್ನು ಬೆದರಿಸಿದ್ದಾರೆ. ಅವರ ಬಳಿ ಇದ್ದ 78 ಗ್ರಾಂ ಚಿನ್ನಾಭರಣ ಹಾಗೂ ಚಿನ್ನದ ಗಟ್ಟಿಗಳನ್ನು ಕಸಿದುಕೊಂಡು ಊರಿಗೆ ಮರಳುವಂತೆ ಸೂಚಿಸಿದ್ದರು ಎಂದು ಮೂಲಗಳು ವಿವರಿಸಿವೆ.

ಅನುಮಾನಗೊಂಡ ವಿಶ್ವನಾಥ್ ಘಟನೆಯ ಕುರಿತು ಮನೆಗೆ ಮಾಹಿತಿ ನೀಡಿದ್ದಾರೆ. ಸೋಮವಾರ ರಾತ್ರಿ ಠಾಣೆಗೆ ಧಾವಿಸಿ ಪ್ರಕರಣ ದಾಖಲಿಸಿದ್ದಾರೆ. ತನಿಖೆ ಆರಂಭಿಸಿದ ಕೆಟಿಜೆ ನಗರ ಠಾಣೆಯ ಪೊಲೀಸರು ಇಬ್ಬರು ಪಿಎಸ್‌ಐಗಳು ಸೇರಿದಂತೆ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ.

ರಾಹುಲ್, ಸೋನಿಯಾ ಗಾಂಧಿ ಬಲಹೀನರು: ಪ್ರತಾಪ್ ಸಿಂಹ

ಡಿಕೆಶಿಗೆ ಸಿಎಂ ಸ್ಥಾನ ಸಿಗಬೇಕಿತ್ತು

ಮಂಡ್ಯ: ಡಿ.ಕೆ.ಶಿವಕುಮಾರ್‌ಗೆ ನ್ಯಾಯಯುತವಾಗಿ ಮುಖ್ಯಮಂತ್ರಿ ಸ್ಥಾನ ಸಿಗಬೇಕಿತ್ತು. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಬಲಹೀನರಾಗಿದ್ದು, ಎಲ್ಲರಿಗೂ ಹೆದರಿಕೊಳ್ಳುವ ಹೈಕಮಾಂಡ್ ಆಗಿದೆ. ಅದಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯನವರು ಡಿ.ಕೆ.ಶಿವಕುಮಾರ್ ಅವರಿಗೆ ಸೀಟು ಬಿಟ್ಟು ಕೊಡ್ತಾರೆ ಅಂತ ಅನಿಸುತ್ತಿಲ್ಲ. ದೇವೇಗೌಡರ ಗರಡಿಯಲ್ಲಿ ಪಳಗಿದ ಸಿದ್ದರಾಮಯ್ಯನವರು ಅಭಿವೃದ್ಧಿ ಕೆಲಸ ಕಲಿತಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತಿತ್ತು. ಆದರೆ, ಬರೀ ಪಾಲಿಟಿಕ್ಸ್ ಕಲಿತರು. ಎರಡೂವರೆ ವರ್ಷ ಒಳ್ಳೆಯ ಕೆಲಸ ಮಾಡಿದರೆ, ಸಿದ್ದರಾಮಯ್ಯ ಮುಂದುವರಿಯಲಿ ಅಂತ ಜನರೇ ಧ್ವನಿ ಎತ್ತುತ್ತಿದ್ದರು. ಕೆಟ್ಟ ಆಡಳಿತ ನೀಡಿದರೂ ಸೀಟು ಬಿಟ್ಟು ಕೊಡುವ ಮನಸಿಲ್ಲ ಎಂದು ಕಿಡಿಕಾರಿದರು.

> ರಾಜ್ಯದಲ್ಲಿ ಸರಕಾರ ಸತ್ತು ಹೋಗಿದೆ. ಸಿದ್ದರಾಮಯ್ಯ ಮತ್ತು ಡಿಕೆಶಿ ಇಬ್ಬರೂ ಹೆಣವನ್ನು ಹೊರುತ್ತಿದ್ದಾರೆ. ಕಬ್ಬು ಬೆಳೆಗಾರರಿಗೆ ಬೆಂಬಲ ಬೆಲೆ ಕೊಡುವಲ್ಲಿ ಸರಕಾರ ವಿಫಲವಾಗಿದೆ. 38 ಸಾವಿರ ಕೋಟಿ ಮದ್ಯದಿಂದ ಬರ್ತಿದೆ. ರೈತರಿಗೆ ಯಾಕೆ ಮೋಸ ಮಾಡ್ತಿರಿ? ಭತ್ತ ಖರೀದಿ ಕೇಂದ್ರ ಆರಂಭವಾಗಿಲ್ಲ. ಪಂಚ ಗ್ಯಾರಂಟಿಗಳು ಕೂಡ ಜನರನ್ನು ಸರಿಯಾಗಿ ತಲುಪುತ್ತಿಲ್ಲ. ಸಾಲದ ಹೊರೆ ಹೆಚ್ಚಾಗಿದೆ.
>
> -ಪ್ರತಾಪ್ ಸಿಂಹ ಮಾಜಿ ಸಂಸದ

2013ರಲ್ಲಿ ಡಾ.ಜಿ.ಪರಮೇಶ್ವರ್ ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಮೂಲ ಕಾಂಗ್ರೆಸ್ಸಿಗರಾದ ಪರಮೇಶ್ವರ್‌ಗೆ ಅವಕಾಶ ಸಿಗುತ್ತೆ ಅಂತ ಸಿದ್ದರಾಮಯ್ಯನವರು ಸ್ವಜಾತಿಯವರನ್ನು ಛೂ ಬಿಟ್ಟು ಸೋಲಿಸಿ, ಇವರು ಸಿಎಂ ಆಗ್ಬಿಟ್ರು. 2023ರಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಡಿಕೆಶಿ ಹುಟ್ಟು ಹೋರಾಟಗಾರ, ರಾಜಕಾರಣ ಚೆನ್ನಾಗಿ ಮಾಡ್ತಾರೆ ಎಂದರು.

ಮುಡಾ ಹಗರಣ ವಿರುದ್ಧ ಪಾದಯಾತ್ರೆ ಸೇರಿದಂತೆ ವಿಜಯೇಂದ್ರ ಮತ್ತು ಆರ್. ಅಶೋಕ ನೇತೃತ್ವದಲ್ಲಿ ಹಲವಾರು ಹೋರಾಟಗಳು ನಡೆದಿವೆ. ಬಿಜೆಪಿ ರೈತ ಮೋರ್ಚಾ ನೇತೃತ್ವದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹೋರಾಟ ನಡೆಯಲಿದೆ. ರೈತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ್ದ ಯಡಿಯೂರಪ್ಪನವರು 2008ರಲ್ಲಿ ರೈತರಿಗೆ ಕೃಷಿ ಬಜೆಟ್ ಕೊಟ್ಟಿದ್ದರು. ಭಾಗ್ಯಲಕ್ಷ್ಮಿ, ಸೈಕಲ್, ಹಾಲಿಗೆ ಪ್ರೋತ್ಸಾಹಧನ ಕೊಟ್ಟಿದ್ದು ಬಿಎಸ್‌ವೈ. ರೈತರ ಸಾಲ ಮತ್ತು ಬಡ್ಡಿ ಮನ್ನಾ ಮಾಡಿದ್ದು ಕುಮಾರಸ್ವಾಮಿ ಎಂದರು.

ಬೆಳಗಾವಿಯ ರಾಣಿ ಚನ್ನಮ್ಮ ವಿವಿಯ 14ನೇ ಘಟಿಕೋತ್ಸವದಲ್ಲಿ ಮೂವರು ಸಾಧಕರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಪರಿಸರ ಹಾಗೂ ಗ್ರಾಮೀಣಾಭಿವೃದ್ಧಿ ಕ್ಷೇತ್ರದ ಸಾಧನೆಗಾಗಿ ಶಿವಾಜಿ ಛತ್ರು ಕಾಗಣೀಕರ, ಶಿಕ್ಷಣ, ಸಮಾಜ ಸೇವೆಗಾಗಿ ವಿನೋದ ದೊಡ್ಡಣವರ, ಸಾಹಿತ್ಯ, ಸಾರ್ವಜನಿಕ ಸೇವೆಗಾಗಿ ಪೊಲೀಸ್ ಅಧಿಕಾರಿ ಬಸವರಾಜ ಯಲಿಗಾರ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಯಿತು. ಈ ವೇಳೆ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್, ರಾಣಿ ಚನ್ನಮ್ಮ ವಿವಿ ಕುಲಪತಿ ಪ್ರೊ.ಸಿ.ಎಂ.ತ್ಯಾಗರಾಜ, ಕುಲಸಚಿವ ಸಂತೋಷ ಕಾಮಗೌಡ, ಪ್ರೊ.ಡಿ.ಎನ್.ಪಾಟೀಲ, ಹಣಕಾಸು ಅಧಿಕಾರಿ ಎಂ.ಎ.ಸ್ವಪ್ನ ಸೇರಿ ಇತರರಿದ್ದರು.

ಕ್ರಾಂತಿ ಆಗಬಹುದು, ಕಾದು ನೋಡೋಣ: ಸುಮಲತಾ

ಮಂಡ್ಯ: ಎರಡೂವರೆ ವರ್ಷದಿಂದಲೇ ರಾಜ್ಯದ ಅಭಿವೃದ್ಧಿ ಕುಂಠಿತ ಆಗಿದೆ. ನವೆಂಬರ್ ಕ್ರಾಂತಿ ಆಗಬಹುದು, ಕಾದು ನೋಡಬೇಕಷ್ಟೆ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಶ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅವರ ಪಕ್ಷದ ಆಂತರಿಕವಾದ ವಿಷಯದ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡಲ್ಲ. ಸಿಎಂ ಹುದ್ದೆಗೆ ಗುದ್ದಾಟ ಅವರ ಪಕ್ಷದ ವಿಚಾರ. ಒಳಗೆ ಏನು ಗುದ್ದಾಟ ಆಗ್ತಿದೆ ನಮಗೆ ಮಾಹಿತಿ ಇಲ್ಲ ಎಂದರು.

ಬಿಜೆಪಿಯಿಂದ ಸುಮಲತಾ ಅಂಬರೀಶ್ ಸೈಡ್ ಲೈನ್ ಆಗಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿ, ಸ್ಥಾನಮಾನ ಮಾತ್ರ ಬೇಕಿದ್ದರೆ ನನ್ನ ಹೆಜ್ಜೆ ಬೇರೆ ತರ ಇರೋದು. ಇಂಡಿಪೆಂಡೆಂಟ್ ಎಂಪಿ ಸ್ಪರ್ಧೆ ವೇಳೆಯೇ ಎಂಎಲ್‌ಸಿ ಆಫರ್ ಇತ್ತು. ಅದನ್ನೇ ತಿರಸ್ಕರಿಸಿದವಳು ನಾನು. ಸ್ಥಾನಮಾನಕ್ಕೆ ಆಸೆ ಪಡುವ ಅಭ್ಯಾಸ ನಮ್ಮ ಕುಟುಂಬದಲ್ಲಿಯೇ ಇಲ್ಲ. ಅದನ್ನು ಅಂಬರೀಶ್ ಅವರಿಂದ ನಾವು ಕಲಿತಿದ್ದೇವೆ. ನಾನು, ಮೋದಿ ಮೇಲಿನ ವಿಶ್ವಾಸ, ಅವರ ಲೀಡರ್‌ಶಿಪ್, ದೇಶದ ಅಭಿವೃದ್ಧಿ, ಬಿಜೆಪಿ ಸಿದ್ಧಾಂತ ಇಷ್ಟಪಟ್ಟು ಪಕ್ಷಕ್ಕೆ ಸೇರ್ಪಡೆ ಆಗಿದ್ದೇನೆ. ಮುಂದಿನ ದಿನಗಳಲ್ಲಿ ಪಕ್ಷ ನನಗೆ ಸೂಕ್ತ ಸ್ಥಾನ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಟಿವಿಯಲ್ಲಿ ಮಾತ್ರ ಸಿಎಂ ಗದ್ದುಗೆಗಾಗಿ ಗುದ್ದಾಟ

ಬಾಗಲಕೋಟೆ: ಸಿಎಂ ಗದ್ದುಗೆಗೆ ಗುದ್ದಾಟ ವಿಚಾರ ಟಿವಿಯಲ್ಲಿ ಮಾತ್ರ ನಡೆದಿದೆ. ರಾಜಕಾರಣದಲ್ಲಿ ಏನೂ ನಡೆದಿಲ್ಲ, ಯಾರ‍್ಯಾರು ಎಲ್ಲಿ ಇದ್ದಾರೆ ಎನ್ನುವುದು ಮಹತ್ವವಲ್ಲ. ಸರಕಾರ ಭದ್ರವಾಗಿದ್ದು, ಸಿಎಂ ಬದಲಾವಣೆಯ ಯಾವುದೇ ಸುಳಿವಿಲ್ಲ. ಸಿಎಂ ಬದಲಾವಣೆ ವಿಚಾರ ಇದ್ದಿದ್ದರೇ ಹೈ ಕಮಾಂಡ್ ತಿಳಿಸುತ್ತಿತ್ತು ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಪಕ್ಷದಲ್ಲಿ ಹೈಕಮಾಂಡೇ ಫೈನಲ್, ಅದಕ್ಕೆಲ್ಲರೂ ಬದ್ಧರಾಗಿರುತ್ತಾರೆ. ಅದನ್ನೇ ಸಿಎಂ ಹೇಳಿದ್ದಾರೆ ಎಂದರು. ಗೃಹ ಸಚಿವ ಡಾ.ಜಿ.ಪರಮೇಶ್ವರ ನಾನು ಸಿಎಂ ಆಕಾಂಕ್ಷಿ, ಸಿಎಂ ರೇಸ್‌ನಲ್ಲಿ ನಾನು ಯಾವಾಗಲೂ ಇರ್ತೇನೆ ಎಂದಿರುವ ವಿಚಾರಕ್ಕೆ ಉತ್ತರಿಸಿದ ಅವರು, ಯಾಕಿರಬಾರದು? ಒಂದು ವೇಳೆ ಚೇಂಜ್ ಮಾಡಿದರೆ ನಾನು ರೇಸ್‌ನಲ್ಲಿ ಇರುತ್ತೇನೆ ಎಂದು ಹೇಳಿದ್ದಾರೆ ಎಂದು ಅವರ ಹೇಳಿಕೆಯನ್ನು ಸಮರ್ಥನೆ ಮಾಡಿಕೊಂಡರು. ದಲಿತ ಸಿಎಂ ವಿಚಾರಕ್ಕೆ ಉತ್ತರಿಸಿ, ಯಾವುದೂ ಇಲ್ಲ, ಹೈಕಮಾಂಡ್ ಯಾರನ್ನು ಸಿಎಂ ಮಾಡುತ್ತಾರೆ ಅವರೇ ಆಗುವುದು ಎಂದರು.

ಆತ್ಮಸಾಕ್ಷಿಗೆ ತಕ್ಕಂತೆ ನಾವೆಲ್ಲರೂ ನಡೆದುಕೊಳ್ಳಬೇಕು: ಡಿಕೆಶಿ ಪರೋಕ್ಷ ಅಸಮಾಧಾನ

ಸಿಎಂ ಕುರ್ಚಿಗೆ ಸಂಬಂಧಿಸಿದಂತೆ ಮಾತನಾಡಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕೀಯದಲ್ಲಿನ ಹಲವು ಗೊಂದಲಗಳ ನಡುವೆಯೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ತವರು ಕ್ಷೇತ್ರ ಕನಕಪುರದಲ್ಲಿ 'ಆತ್ಮಸಾಕ್ಷಿಯ' ಮಾತಾಡಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಕನಕಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಆತ್ಮಸಾಕ್ಷಿಯನ್ನು ನಂಬಿದ್ದೇನೆ. ಆತ್ಮಸಾಕ್ಷಿಗೆ ತಕ್ಕಂತೆ ನಾವು ಕೆಲಸ ಮಾಡಬೇಕು. ಪಕ್ಷಕ್ಕೆ ಮುಜುಗರ ತರಲು, ಪಕ್ಷವನ್ನು ದುರ್ಬಲಗೊಳಿಸಲು ನನಗೆ ಇಷ್ಟವಿಲ್ಲ. ಪಕ್ಷ ಹಾಗೂ ಕಾರ್ಯಕರ್ತರು ಇದ್ದರೆ ನಾವು ಎಂದು ಸ್ಪಷ್ಟಪಡಿಸಿದರು.

ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ನಡುವೆ ಚರ್ಚೆ ನಡೆಯುವ ಬಗ್ಗೆ ನನಗೆ ಗೊತ್ತಿಲ್ಲ. ಇದು ನಮ್ಮ ಐದಾರು ಜನರ ನಡುವಿನ ಗುಟ್ಟಿನ ವಿಚಾರ. ಇದನ್ನು ನಾನು ಬಹಿರಂಗ ಮಾಡುವುದಿಲ್ಲ. ಮುಖ್ಯಮಂತ್ರಿಗಳು ಹಿರಿಯ ನಾಯಕರು, ನಮ್ಮ ಪಕ್ಷದ ಆಸ್ತಿ. ಅವರು ಸಿಎಂ ಆಗಿ ಏಳೂವರೆ ವರ್ಷಗಳ ಕಾಲ ಅಧಿಕಾರ ನಡೆಸಿದ್ದಾರೆ. ಮುಂದಿನ ಬಜೆಟ್ ಅನ್ನು ಅವರೇ ಮಂಡಿಸುವುದಾಗಿ ಹೇಳಿದ್ದಾರೆ. ಬಹಳ ಸಂತೋಷ. ಅವರು ಪ್ರತಿಪಕ್ಷದ ನಾಯಕರಾಗಿ ಶ್ರಮಿಸಿದ್ದಾರೆ. ಪಕ್ಷ ಕಟ್ಟಿದ್ದಾರೆ. ನಾವೆಲ್ಲರೂ ಸೇರಿ 2028 ಹಾಗೂ 2029ರ ಚುನಾವಣೆ ಗುರಿಯತ್ತ ಗಮನ ಹರಿಸಬೇಕು ಎಂದು ತಿಳಿಸಿದರು.

ಕಷ್ಟದಲ್ಲಿ ಪ್ರಾರ್ಥನೆ ಮರೆಯುವುದಿಲ್ಲ: ನನಗೆ ಅಧಿಕಾರ ಸಿಗಲಿ ಎಂದು ಈಗ ಪೂಜೆ ಮಾಡುತ್ತಿರುವುದಕ್ಕಿಂತ, ನಾನು ಜೈಲಿಗೆ ಹೋದಾಗ ನನ್ನ ತಾಯಂದಿರು, ಯುವಕರು, ಹಿರಿಯರು ದೇವಾಲಯದ ಅರ್ಚಕರು ಮಾಡಿದ ಪ್ರಾರ್ಥನೆಯನ್ನು ಮರೆಯಲು ಸಾಧ್ಯವಿಲ್ಲ. ಬಿಜೆಪಿ ಅವಧಿಯಲ್ಲಿ ನಾನು ಜೈಲಿಂದ ಬಿಡುಗಡೆ ಆದಾಗ ಪೊಲೀಸರ ಬೆದರಿಕೆಗೂ ಹಿಂಜರಿಯದೇ ನನ್ನನ್ನು ಜನ ಸ್ವಾಗತಿಸಿದರು. ನಾನು ಜೈಲಲ್ಲಿ ಇದ್ದಾಗ ಕರವೇ ನಾರಾಯಣ ಗೌಡರಿಗೆ ಪ್ರತಿಭಟನೆ ನಡೆಸದಂತೆ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್ ಅವರು ಬೆದರಿಕೆ ಹಾಕಿದ್ದರು. ಕೆಲವು ಸ್ವಾಮೀಜಿಗಳು ಬಂದರು, ಕೆಲವರು ಬರಲಿಲ್ಲ. ಚನ್ನಪಟ್ಟಣದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಬೇರೆ ಹೇಳಿಕೆ ಕೊಟ್ಟರು. ಅನೇಕರು ನಮ್ಮ ಮನೆಗೆ ಬಂದು ನನ್ನ ಪತ್ನಿ ಹಾಗೂ ಮಕ್ಕಳ ಜೊತೆ ಮಾತನಾಡಿ ಧೈರ್ಯ ತುಂಬಿದ್ದರು. ಅಂದು ಜನ ಹರಕೆ ಹೊತ್ತು ಪ್ರಾರ್ಥಿಸಿದ್ದರು. ಆಗ ಕಟ್ಟಿಕೊಂಡ ಹರಕೆ ಮುಗಿಸಲು ಇನ್ನೂ ನನಗೆ ಆಗುತ್ತಿಲ್ಲ. ಅನೇಕರು ನಾನು ಬಿಡುಗಡೆಯಾಗುವವರೆಗೂ ಕಾಲಿಗೆ ಚಪ್ಪಲಿ ಹಾಕಿರಲಿಲ್ಲ. ನಾನು ಇಂದು ಡಿಸಿಎಂ ಆಗಿದ್ದು, ಪಕ್ಷದ ಅಧ್ಯಕ್ಷನಾಗಿದ್ದೇನೆ. ಕಷ್ಟಕಾಲದಲ್ಲಿದ್ದಾಗ ಮಾಡಿದ ಪ್ರಾರ್ಥನೆ, ಆಗ ಅವರು ನನಗೆ ಆತ್ಮಸ್ಥೈರ್ಯ ತುಂಬಿದ್ದು ನನಗೆ ಬಹಳ ವಿಶೇಷ ಎಂದು ತಿಳಿಸಿದರು.

ಡಿ.ಕೆ.ಶಿವಕುಮಾರ್ ಅವರು ಸ್ವಕ್ಷೇತ್ರ ಕನಕಪುರದಲ್ಲಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

> ಸಚಿವ ಸ್ಥಾನದ ಆಕಾಂಕ್ಷೆ ಇರುವವರು ಹೋಗಿದ್ದಾರೆ, ನನ್ನನ್ನು ಸಿಎಂ ಮಾಡುವ ಪ್ರಯತ್ನದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವರಿಗೆ ಕರೆ ಮಾಡಿಲ್ಲ, ಅವರನ್ನು ಕಳುಹಿಸಿಲ್ಲ. ಯಾಕೆ ಹೋದಿರಿ? ಅಧಿಕಾರ ಹಂಚಿಕೆ ಒಪ್ಪಂದವಾಗಿರುವ ಬಗ್ಗೆ ಏಕೆ ಮಾತನಾಡಲಿ, ನೀವುಗಳೇ (ಮಾಧ್ಯಮಗಳು) ಏನೇನೋ ಬರೆಯುತ್ತಿದ್ದೀರಿ. ಕಾಂಗ್ರೆಸ್ ಹಾಗೂ ಬಿಜೆಪಿಗರು ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಿದ್ದು, ಅದರ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ.
>
> – ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಾರು ಅಪಘಾತ: ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಸಾವು

ಕಲಬುರಗಿ: ಕರ್ನಾಟಕ ರಾಜ್ಯ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಸೇರಿ ಮೂವರು ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಸಂಬಂಧಿಕರ ವಿವಾಹ ಕಾರ್ಯಕ್ರಮಕ್ಕೆಂದು ವಿಜಯಪುರದಿಂದ ಕಲಬುರಗಿಗೆ ತೆರಳುತ್ತಿದ್ದ ವೇಳೆ ಜೇವರ್ಗಿ ತಾಲೂಕಿನ ಗೌನಳ್ಳಿ ಕ್ರಾಸ್ ಬಳಿ ಏಕಾಏಕಿ ಅಡ್ಡ ಬಂದ ಶ್ವಾನವನ್ನು ಉಳಿಸಲು ಹೋಗಿ ಚಾಲಕನ ನಿಯಂತ್ರಣ ತಪ್ಪಿದ ಕೆಎ 04, ಎನ್‌ಸಿ 7982 ಸಂಖ್ಯೆಯ ಇನ್ನೋವಾ ಕಾರು ಪಲ್ಟಿಯಾಗಿದೆ. ಕಾರಿನಲ್ಲಿದ್ದ ಮಹಾಂತೇಶ್ ಸಹೋದರರಾದ ಶಂಕರ ಬೀಳಗಿ ಹಾಗೂ ಈರಣ್ಣ ಶಿರಸಂಗಿ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರು ಕಲಬುರಗಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಮಹಾಂತೇಶ್ ಬೀಳಗಿ ಸಾವಿನ ಸುದ್ದಿ ತಿಳಿಯುತ್ತಿದ್ದಂತೆಯೇ ಆಸ್ಪತ್ರೆಗೆ ಐಜಿಪಿ ಶಾಂತನು ಸಿನ್ಹಾ ಸೇರಿ ಅಧಿಕಾರಿಗಳು ಭೇಟಿ ನೀಡಿದ್ದಾರೆ.

ಅಪಾರ ಅಭಿಮಾನಿಗಳ ಬಳಗ: ಮಹಾಂತೇಶ್ ಬೀಳಗಿ ಅವರು ವಿದ್ಯಾರ್ಥಿಗಳಿಗೆ ಸಮಯ ಸಿಕ್ಕಾಗೆಲ್ಲಾ ಪ್ರೋತ್ಸಾಹ ಕೊಡುವುದನ್ನು ತಪ್ಪಿಸುತ್ತಿರಲಿಲ್ಲ. ಜ್ಞಾನ ಬೆಳೆಸಿಕೊಳ್ಳಿ ಅಂತ ಎಲ್ಲರಿಗೂ ಸಲಹೆ ಮಾಡುತ್ತಿದ್ದರು. ಕಷ್ಟದ ಬದುಕಿನಲ್ಲೂ ಶ್ರಮದಿಂದ ಓದಿ ಉನ್ನತ ಹುದ್ದೆಗೆ ಏರಿದ ಅವರು ತಮ್ಮ ಕೆಲಸಗಳಿಂದ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. 'ಸಮಾಜದಿಂದ ಪಡೆದದ್ದನ್ನು ಸಮಾಜಕ್ಕೆ ವಾಪಸ್ ಕೊಡಬೇಕು,' ಅನ್ನೋದು ಅವರು ಅನುಸರಿಸುತ್ತಿದ್ದ ತತ್ವಗಳಲ್ಲಿ ಒಂದಾಗಿತ್ತು.

- ಕರ್ನಾಟಕದ ಜನಸ್ನೇಹಿ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅಪಘಾತದಲ್ಲಿ ಸಾವು
- ವಿಜಯಪುರದಿಂದ ಕಲಬುರಗಿಗೆ ಆಗಮಿಸುತ್ತಿದ್ದ ವೇಳೆ ಜೇವರ್ಗಿ ತಾಲೂಕಿನ ಗೌನಹಳ್ಳಿ ಬಳಿ ಅಪಘಾತ

ಬೆಸ್ಕಾಂ ಬಳಿಕ ಖನಿಜ ನಿಗಮದ ಎಂಡಿ: ಬೆಳಗಾವಿ ಜಿಲ್ಲೆಯ ರಾಮದುರ್ಗದವರಾದ ಬೀಳಗಿಯವರು 2012 ಕರ್ನಾಟಕ ಕೇಡರ್ ಐಎಎಸ್ ಅಧಿಕಾರಿಯಾಗಿದ್ದರು. ಹಲವು ಜಿಲ್ಲೆಗಳ ಸಿಇಒ, ಡಿಸಿ ಆಗಿ ಕಾರ್ಯ ನಿರ್ವಹಿಸಿದ್ದಾರೆ. ನಾಲ್ಕು ವರ್ಷಗಳ ಹಿಂದೆ ದಾವಣಗೆರೆ ಜಿಲ್ಲಾಧಿಕಾರಿ ಸ್ಥಾನದಿಂದ ವರ್ಗಾವಣೆಗೊಂಡು ಬೆಸ್ಕಾಂ ಎಂಡಿಯಾಗಿ ಜವಾಬ್ದಾರಿ ನಿರ್ವಹಿಸಿದ್ದರು. ಇತ್ತೀಚೆಗೆ ಅಲ್ಲಿಂದಲೂ ವರ್ಗಾವಣೆಯಾಗಿ ಕರ್ನಾಟಕ ರಾಜ್ಯ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು.

ವಿಶ್ವವಾಣಿ

ಸಂಪಾದಕೀಯ

ಸಾಂಕೇತಿಕ ಅಭಿವ್ಯಕ್ತಿಯಾಗಲಿ

ಅಯೋಧ್ಯೆಯ ಶ್ರೀರಾಮ ಮಂದಿರದ ಮೇಲ್ಭಾಗದಲ್ಲಿ ಕೇಸರಿ ಧ್ವಜಾರೋಹಣವಾಗಿದೆ. ಈ ಧರ್ಮಧ್ವಜದ ಆರೋಹಣ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಹಾಜರಿದ್ದು ಕಾರ್ಯಕ್ರಮವನ್ನು ಕಳೆಗಟ್ಟಿಸಿದ್ದಾರೆ. ಚಿತ್ತಾಕರ್ಷಕ ರಂಗೋಲಿಗಳು, ಹೂವುಗಳಿಂದ ಅಲಂಕೃತಗೊಂಡಿದ್ದ ಅಯೋಧ್ಯೆ ನಗರಿಯಲ್ಲಿ 'ಜೈ ಶ್ರೀರಾಮ್' ಎಂಬ ಉದ್ಘೋಷ ಶ್ರದ್ಧಾವಂತರಿಂದ ಅನುರಣನಗೊಂಡಿದೆ. ಶ್ರೀರಾಮಚಂದ್ರ ಕೇವಲ ರಾಜನಾಗಿರದೆ 'ಆದರ್ಶವ್ಯಕ್ತಿ', 'ಮರ್ಯಾದಾ ಪುರುಷೋತ್ತಮ' ಎಂದು ಕರೆಸಿಕೊಂಡವನು. ಹೀಗಾಗಿ ಶ್ರೀರಾಮ ಮಂದಿರದ ಶಿಖರವೇರಿರುವ ಧರ್ಮಧ್ವಜವು ಕೇವಲ ಧಾರ್ಮಿಕ ನೆಲೆಯಲ್ಲಿ ಮಾತ್ರವಲ್ಲದೆ, ಭಾರತೀಯರ ಆದರ್ಶ, ಅಸ್ಮಿತೆ, ಮರ್ಯಾದೆ, ಸ್ವಾಭಿಮಾನ, 'ವಸುಧೈವ ಕುಟುಂಬಕಂ' ಪರಿಕಲ್ಪನೆಯ ಆಶಯದಂತೆ ಮಿಕ್ಕ ದೇಶಗಳ ಜನರನ್ನೂ ತಮ್ಮವರೆಂದೇ ಪರಿಭಾವಿಸುವ ಭಾರತೀಯರ ಹೃದಯವೈಶಾಲ್ಯ, ಸನಾತನ ಧರ್ಮದ ಶ್ರೇಷ್ಠತೆ ಮುಂತಾದವನ್ನು ವಿಶ್ವಕ್ಕೇ ಸಾರಿ ಹೇಳುವ ಸಾಂಕೇತಿಕ ಅಭಿವ್ಯಕ್ತಿಯಾಗಬೇಕು. ಭಾರತವು ಇಂಥ ಉತ್ತಮಿಕೆಗಳ ನೆಲೆವೀಡು ಎಂಬುದು ವಿವಿಧ ರಾಷ್ಟ್ರಗಳಿಗೆ ಗೊತ್ತಿರುವಂಥದ್ದೇ; ಜಗತ್ತನ್ನು ಕೋವಿಡ್ ಪಿಡುಗು ಅಮರಿಕೊಂಡಾಗ ಯಾವ ಭೇದ-ಭಾವವನ್ನೂ ಮಾಡದೆ ಹಲವು ದೇಶಗಳಿಗೆ ಲಸಿಕೆಯನ್ನು ಒದಗಿಸುವ ಔದಾರ್ಯ ತೋರಿದ ಭಾರತವು, ವಿಶ್ವದ ಯಾವುದೇ ಮೂಲೆಯಲ್ಲಿ ಭೂಕಂಪ, ಚಂಡಮಾರುತದಂಥ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ, ಸಂಕಷ್ಟದಲ್ಲಿ ಸಿಲುಕಿರುವವರ ಸಂರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದಿದೆ. ಇಷ್ಟಾಗಿಯೂ, ಭಾರತವನ್ನು ಜಾಗತಿಕ ಸಮುದಾಯದ ದೃಷ್ಟಿಯಲ್ಲಿ 'ಖಳನಾಯಕ'ನಂತೆ ಬಿಂಬಿಸಲು ಮಗ್ಗುಲು ಮುಳ್ಳು ದೇಶಗಳು ಕಸರತ್ತು ಮಾಡುತ್ತಿರುವುದೂ ಇದೆ. ಹೀಗಾಗಿ, ಭಾರತ ಮತ್ತು ಭಾರತೀಯ ಎಂಬ ಅಸ್ತಿತ್ವಗಳ ಅರ್ಥವೇನು ಎಂಬುದನ್ನು ಜಗತ್ತಿನೆದುರು ಮತ್ತೊಮ್ಮೆ ಹರವಿಡುವ ಕಾಲ ಬಂದಿದೆ. ಶ್ರೀರಾಮ ಮಂದಿರದ ಶಿಖರದಲ್ಲಿ ಹಾರುತ್ತಿರುವ ಧರ್ಮಧ್ವಜವು ಈ ನಿಟ್ಟಿನಲ್ಲಿ ನಿತ್ಯಸ್ಫೂರ್ತಿಯಾಗಿ ಒದಗಲಿ...

ಸೊಂಪಾದಕೀಯ

ಪಟ್ಟಕ್ಕೆ ಪಟ್ಟು

ತಮ್ಮ ಹೆಸರಿನ ಹಿಂದೆ ಅಂಟಿಕೊಂಡಿರುವ 'ಡಿಸಿಎಂ' ಎಂಬ ಗುಚ್ಛದಿಂದ 'ಡಿ' ಅನ್ನು ತೆಗೆದುಹಾಕಿ 'ಸಿಎಂ' ಆಗಬೇಕು ಅಂತ ಡಿ.ಕೆ. ಶಿವಕುಮಾರ್ ಅವರು ಶತಪ್ರಯತ್ನ ಮಾಡ್ತಾ ಇದ್ರೆ, ಅತ್ತ ಸಿದ್ದರಾಮಯ್ಯ ಕೂಡಾ, 'ಡಿ' ಅನ್ನೋದು 'ಡಿಕೆಶಿ' ಅನ್ನೋ ನಿಮ್ಮ ಹೆಸರಲ್ಲೇ ಇದೆ. ಅದು ಹಾಗೇ ಇರ್ಲಿ, ನಾನು ಸಿಎಂ ಆಗಿ ಹೀಗೇ ಇರ್ತೀನಿ ಅಂತ ಹಠ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ರಾಜ್ಯದ ಪಟ್ಟದ ಗಲಾಟೆ ಮಾತ್ರ ತಾರಕಕ್ಕೇರಿದೆ. ಕೆಲ ದಿನಗಳ ಹಿಂದೆ ಹೈಕಮಾಂಡ್ ಇಬ್ಬರಿಗೂ ಸುಮ್ಮನಿರಲು ಹೇಳಿ, ಸದ್ಯಕ್ಕೆ ನಾಯಕತ್ವ ಬದಲಾವಣೆ, ಸಂಪುಟ ವಿಸ್ತರಣೆ ಎರಡೂ ಇಲ್ಲ ಅಂತ ಹೇಳಿ ಕಳಿಸಿದಾಗ ಎಲ್ಲವೂ ಪರಿಹಾರ ಆಯ್ತು ಅಂತ ನಿಟ್ಟುಸಿರು ಬಿಡುವಂತಾಗಿತ್ತು. ಆದರೆ ಸಮಸ್ಯೆ ಇನ್ನೂ ಮುಂದುವರಿದಿದೆ ಅನ್ನೋದು ಈಗ ಗೊತ್ತಾಗ್ತಾ ಇದೆ. ಇಬ್ಬರೂ ದೊಡ್ಡ ನಾಯಕರು ಪಟ್ಟದ ಪಟ್ಟು ಬಿಟ್ಟುಕೊಡುತ್ತಿಲ್ಲ ಅನ್ನೋ ವಿಷಯ ಈಗ ಗುಟ್ಟಾಗಿ ಉಳಿದಿಲ್ಲ. ಇಬ್ಬರ ಪರ ಇರೋ ಶಾಸಕರೂ ದಿಲ್ಲಿಗೆ ಪ್ರಯಾಣ ಬೆಳೆಸಿ ತಮ್ಮ ತಮ್ಮ ನಾಯಕರ ವರ್ಚಸ್ಸನ್ನು ತೋರಿಸುವ ಪ್ರಯತ್ನ ಮಾಡ್ತಾ ಇದ್ದಾರೆ. ಅತ್ತ ಹೈಕಮಾಂಡ್‌ಗೂ ಇದರ ಬಿಸಿ ತಾಗಿದೆ. ಹಾಗಾಗಿ ಇದು ಅಂದುಕೊಂಡಷ್ಟು ಸರಳವಾಗಿಲ್ಲ ಅಂತ ಅರಿತಿರುವ ರಾಹುಲ್ ಗಾಂಧಿ ತಮ್ಮ ವಿದೇಶ ಪ್ರವಾಸ ಮೊಟಕುಗೊಳಿಸಿ ದೇಶದಲ್ಲಿ ಅಧಿಕಾರದಲ್ಲಿರುವ ತಮ್ಮ ಪವರ್ ಫುಲ್ ಸರಕಾರವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡ್ತಾ ಇದ್ದಾರೆ. ಇನ್ನೊಂದೆರಡು ದಿನಗಳಲ್ಲಿ ಸಿಎಂ, ಡಿಸಿಎಂ ಇಬ್ಬರಿಗೂ ದೆಹಲಿಯಿಂದ ಬುಲಾವ್ ಬರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಅಲ್ಲಿ ಏನಾಗುತ್ತೋ ಅನ್ನೋ ಕುತೂಹಲ ಎಲ್ಲರದ್ದೂ. ಆದರೆ ಈ ಸಿಎಂ ಬದಲಾವಣೆಯ ವಿಷಯದಲ್ಲಿ ಏನೇ ಭಿನ್ನಾಭಿಪ್ರಾಯ/ತೊಡಕುಗಳು ಇದ್ದರೂ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಇಬ್ಬರೂ ಒಟ್ಟಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಕಾಣಿಸಿಕೊಂಡಾಗ ಮಾತ್ರ ಕೈ ಕೈ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಅಪ್ಪಿತಪ್ಪಿಯೂ ಒಬ್ಬರು ಇನ್ನೊಬ್ಬರಿಗೆ ಘಾಸಿ ಆಗುವಂಥ ಹೇಳಿಕೆಗಳನ್ನು ಕೊಡ್ತಾ ಇಲ್ಲ ಅನ್ನೋದೇ ಹೈಕಮಾಂಡ್‌ಗೆ ಸದ್ಯಕ್ಕೆ ಇರೋ ಸಮಾಧಾನ. ಹಾಗಾಗಿ ಅದು ಮಿತಿಮೀರಿ ಮಾತಾಡುವ ಹಂತಕ್ಕೆ ಬರುವ ಮುನ್ನ ಏನಾರಾ ಒಂದು ಡಿಸೈಡ್ ಮಾಡಿಬಿಡುವ ಅನ್ನೋ ಇರಾದೆ ಕಾಂಗ್ರೆಸ್ ಹೈಕಮಾಂಡ್‌ನದ್ದು.

ಸಂಪಾದಕರ ಸದ್ಯಶೋಧನೆ

ಒಂದು ತಮಾಷೆಯ ಪ್ರಸಂಗ

ವಿಮಾನ ಪ್ರಯಾಣ ಎಂದರೆ ಕೆಲವರಿಗೆ ಸಂಭ್ರಮ, ಇನ್ನು ಕೆಲವರಿಗೆ ಆತಂಕ. ಆದರೆ ದೀರ್ಘಾವಧಿಯ ಪ್ರಯಾಣದಲ್ಲಿ ಎಲ್ಲರಿಗೂ ಸಮಾನವಾಗಿ ಕಾಡುವ ಒಂದು ವಿಷಯವೆಂದರೆ ಅದು 'ಹಸಿವು'. ಅದರಲ್ಲೂ ಗಂಟೆಗಟ್ಟಲೆ ಆಕಾಶದಲ್ಲಿ ಹಾರುವಾಗ, ವಿಮಾನಯಾನ ಸಂಸ್ಥೆಗಳು ನೀಡುವ ಊಟದ ಮೇಲೆ ಪ್ರಯಾಣಿಕರಿಗೆ ಎಲ್ಲಿಲ್ಲದ ನಿರೀಕ್ಷೆ ಇರುತ್ತದೆ. ಹೆಲ್ಸಿಂಕಿಯಿಂದ ಟೊರೊಂಟೊಗೆ ಹೊರಟಿದ್ದ ವಿಮಾನವೊಂದರಲ್ಲಿ ನಡೆದ ಈ ಪ್ರಸಂಗ, ಬಿಕ್ಕಟ್ಟಿನ ಸಮಯವನ್ನು ಹೇಗೆ ಹಾಸ್ಯವಾಗಿ ಮತ್ತು ಲಾಭದಾಯಕವಾಗಿ ಬದಲಾಯಿಸಬಹುದು ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಅದು ಫಿನ್‌ಲ್ಯಾಂಡ್‌ನ ಹೆಲ್ಸಿಂಕಿಯಿಂದ ಕೆನಡಾದ ಟೊರೊಂಟೊಗೆ ಹೊರಟಿದ್ದ ಅಂತಾರಾಷ್ಟ್ರೀಯ ವಿಮಾನ. ಸುಮಾರು 8ರಿಂದ 9 ಗಂಟೆಗಳ ದೀರ್ಘ ಪ್ರಯಾಣ. ವಿಮಾನದಲ್ಲಿ ಒಟ್ಟು 200 ಪ್ರಯಾಣಿಕರಿದ್ದರು. ವಿಮಾನ ಟೇಕಾಫ್ ಆಗಿ ಆಕಾಶದಲ್ಲಿ ಹಾರಲು ಆರಂಭಿಸಿತು. ಎಲ್ಲವೂ ಸರಿಯಾಗಿಯೇ ಇದೆ ಎಂದುಕೊಳ್ಳುವಷ್ಟರಲ್ಲಿ, ವಿಮಾನದ ಅಡುಗೆ ವಿಭಾಗದಲ್ಲಿ ಸಿಬ್ಬಂದಿಗಳಿಗೆ ಒಂದು ಆಘಾತಕಾರಿ ಸತ್ಯ ತಿಳಿದುಬಂತು. ವಿಮಾನದಲ್ಲಿ 200 ಪ್ರಯಾಣಿಕರಿದ್ದರೂ, ಕ್ಯಾಟರಿಂಗ್ ವಿಭಾಗದವರು ಮಾಡಿದ ಭಾರಿ ಎಡವಟ್ಟಿನಿಂದಾಗಿ 100 ಊಟದ ಪ್ಯಾಕೆಟ್‌ಗಳು ಮಾತ್ರ ಲೋಡ್ ಆಗಿದ್ದವು! ಅಂದರೆ, ಅರ್ಧದಷ್ಟು ಜನರಿಗೆ ಊಟವೇ ಇರಲಿಲ್ಲ. ಇದು ಸಾಮಾನ್ಯ ವಿಷಯವಾಗಿರಲಿಲ್ಲ. ದೀರ್ಘ ಪ್ರಯಾಣದಲ್ಲಿ ಹಸಿದ ಪ್ರಯಾಣಿಕರಿಗೆ ಊಟ ಇಲ್ಲ ಎಂದು ಹೇಳುವುದು ಸಿಂಹದ ಗುಹೆಗೆ ಹೋಗಿ ಅದನ್ನು ಕೆಣಕಿದಂತೆ. ಹಸಿದ ಮನುಷ್ಯ ಕೋಪಗೊಳ್ಳುವುದು ಸಹಜ. ಪ್ರಯಾಣಿಕರು ಗಲಾಟೆ ಮಾಡಬಹುದು, ವಿಮಾನಯಾನ ಸಂಸ್ಥೆಯ ವಿರುದ್ಧ ದೂರು ನೀಡಬಹುದು ಅಥವಾ ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದು ಎಂಬ ಭಯ ಸಿಬ್ಬಂದಿಗಳನ್ನು ಕಾಡತೊಡಗಿತು. ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ, ಏನು ಮಾಡುವುದೆಂದು ತೋಚದೇ ಸಿಬ್ಬಂದಿ ಕಂಗಾಲಾಗಿದ್ದರು. ಆಗ ಒಬ್ಬ ಅನುಭವಿ ಮತ್ತು ಚುರುಕು ಬುದ್ಧಿಯ ಗಗನಸಖಿ ಮುಂದೆ ಬಂದಳು. ಸಮಸ್ಯೆಯನ್ನು ನೇರವಾಗಿ ಹೇಳಿ ಬೈಗುಳ ತಿನ್ನುವ ಬದಲು, ಮನುಷ್ಯರ ಸಹಜ ದೌರ್ಬಲ್ಯ ಮತ್ತು ಆಸೆಯನ್ನು ಬಳಸಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಲು ನಿರ್ಧರಿಸಿದಳು. ಅವಳು ಒಂದು ಅದ್ಭುತವಾದ ಯೋಜನೆಯನ್ನು ರೂಪಿಸಿದಳು. ವಿಮಾನ ಹಾರಾಟ ಆರಂಭಿಸಿ ಸುಮಾರು ಅರ್ಧ ಗಂಟೆಯಾಗಿತ್ತು. ಆ ಗಗನಸಖಿ ಮೈಕ್ ತೆಗೆದುಕೊಂಡು ಪ್ರಯಾಣಿಕರನ್ನು ಉದ್ದೇಶಿಸಿ ಮಾತನಾಡಲು ಶುರು ಮಾಡಿದಳು. ಅವಳ ಧ್ವನಿಯಲ್ಲಿ ಆತಂಕವಿರಲಿಲ್ಲ, ಬದಲಿಗೆ ಒಂದು ಆಕರ್ಷಕ ಆಫರ್ ಇತ್ತು. ಆಕೆ ಹೀಗೆ ಘೋಷಿಸಿದಳು– ''ಗಮನಿಸಿ ಪ್ರಯಾಣಿಕರೇ, ಇದೇಗೆ ಸಂಭವಿಸಿತು ಎಂದು ನಮಗೆ ಗೊತ್ತಿಲ್ಲ. ಆದರೆ ನಮ್ಮ ವಿಮಾನದಲ್ಲಿ ಒಂದು ಸಣ್ಣ ಸಮಸ್ಯೆಯಾಗಿದೆ. ನಮ್ಮಲ್ಲಿ 200 ಪ್ರಯಾಣಿಕರಿದ್ದಾರೆ, ಆದರೆ ಊಟವಿರುವುದು 100 ಜನರಿಗೆ ಮಾತ್ರ. ನಮ್ಮ ಬಳಿ ಊಟದ ಕೊರತೆಯಿದೆ''. ಇದನ್ನು ಕೇಳಿ ಪ್ರಯಾಣಿಕರು ಮುಖಮುಖ ನೋಡಿಕೊಳ್ಳಲು ಆರಂಭಿಸಿದರು. ಆದರೆ ಗಗನಸಖಿ ಮಾತು ಮುಂದುವರಿಸಿ, ತನ್ನ ಮಾಸ್ಟರ್ ಸ್ಟ್ರೋಕ್ ಅನ್ನು ಪ್ರಯೋಗಿಸಿದಳು– ''ಹಾಗಾಗಿ, ನಮ್ಮದೊಂದು ವಿನಂತಿ ಮತ್ತು ಆಫರ್ ಇದೆ. ನಿಮ್ಮಲ್ಲಿ ಯಾರಾದರೂ ದಯೆತೋರಿ, ತಮ್ಮ ಸಹಪ್ರಯಾಣಿಕರಿಗಾಗಿ ತಮ್ಮ ಊಟವನ್ನು ತ್ಯಾಗ ಮಾಡಲು ಸಿದ್ಧರಿದ್ದರೆ, ಅಂಥ 'ತ್ಯಾಗಜೀವಿ'ಗಳಿಗೆ ಈ ಸಂಪೂರ್ಣ ಪ್ರಯಾಣದ ಅವಧಿಯಲ್ಲಿ ನಮ್ಮ ಕಡೆಯಿಂದ ಅನಿಯಮಿತವಾಗಿ ಉಚಿತ ವೈನ್ ನೀಡಲಾಗುವುದು! ನೀವು ಎಷ್ಟು ಬೇಕಾದರೂ ಕುಡಿಯಬಹುದು''. ಈ ಘೋಷಣೆ ಕೇಳಿದ ತಕ್ಷಣ ವಿಮಾನದ ವಾತಾವರಣವೇ ಬದಲಾಯಿತು. ಪ್ರಯಾಣಿಕರ ಮನಸ್ಸಿನಲ್ಲಿದ್ದ ಹಸಿವು ಮಾಯವಾಗಿ, ಅದರ ಜಾಗದಲ್ಲಿ 'ಉಚಿತ ವೈನ್'ನ ಆಸೆ ಚಿಗುರೊಡೆಯಿತು. ಪ್ರಯಾಣಿಕರು ಹೀಗೆ ಲೆಕ್ಕಾಚಾರ ಹಾಕಲು ಶುರುಮಾಡಿದರು– 'ವಿಮಾನದ ಊಟ ಹೇಗೂ ಸಾಧಾರಣವಾಗಿರುತ್ತದೆ, ಅದರ ಬೆಲೆ ಹೆಚ್ಚೆಂದರೆ ಹತ್ತು ಡಾಲರ್ ಇರಬಹುದು. ಆದರೆ ಹೆಲ್ಸಿಂಕಿಯಿಂದ ಟೊರೊಂಟೊ ತಲುಪಲು ಇನ್ನೂ 6-7 ಗಂಟೆಗಳಿವೆ. ಅಷ್ಟು ಹೊತ್ತು ಉಚಿತವಾಗಿ, ನಮಗಿಷ್ಟ ಬಂದಷ್ಟು ದುಬಾರಿ ವೈನ್ ಕುಡಿಯುವ ಅವಕಾಶ ಸಿಗುವುದು ಅಪರೂಪದಲ್ಲಿ ಅಪರೂಪ....'. ಮುಂದಿನ 6 ಗಂಟೆಗಳ ಕಾಲ ವಿಮಾನದಲ್ಲಿ ಹಬ್ಬದ ವಾತಾವರಣವಿತ್ತು. ಸಿಬ್ಬಂದಿಗಳು ಅಂದುಕೊಂಡಂತೆ ಯಾರು ಕೂಡ ಊಟ ಕೇಳಲಿಲ್ಲ, ಬದಲಿಗೆ ಎಲ್ಲರೂ ವೈನ್ ಗ್ಲಾಸ್ ಹಿಡಿದು ಚಿಲ್ ಮಾಡುತ್ತಿದ್ದರು. ಸಮಸ್ಯೆಯಾಗಬೇಕಿದ್ದ ಸನ್ನಿವೇಶ ಒಂದು ಪಾರ್ಟಿಯಂತೆ ಬದಲಾಗಿತ್ತು.

ಮೇಕೆದಾಟು ತೀರ್ಪಿನ ಬಗ್ಗೆ ಸಂಭ್ರಮ ಪಡುವಂಥದ್ದೇನಿದೆ?

ರಾಜ್ಯದ ಹೊಸ ಸಮಗ್ರ ಯೋಜನಾ ವರದಿಗೆ ತಮಿಳುನಾಡು ಆಕ್ಷೇಪ ತೆಗೆಯುವುದರಲ್ಲಿ ಅನುಮಾನವಿಲ್ಲ. ಮುಂದಿನ ಹಂತಗಳಲ್ಲೂ ಕಾನೂನಾತ್ಮಕ ಅಡೆತಡೆಗಳನ್ನು ಕರ್ನಾಟಕ ಎದುರಿಸುವುದು ಖಚಿತ. ಹೀಗಾಗಿ, ಸದ್ಯದ ಭವಿಷ್ಯದಲ್ಲಿ ಮೇಕೆದಾಟು ಜಲಾಶಯ ನಿರ್ಮಾಣ ಕಾಮಗಾರಿ ಆರಂಭವಾಗಿಯೇಬಿಡುತ್ತದೆ ಎಂದು ಭಾವಿಸುವುದು ಮೂರ್ಖತನವಾದೀತು.

ಜನಪಥ

ರಾಘವ ಶರ್ಮ ನಿಡ್ಲೆ
vveditoped@gmail.com

ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತರಾದ ಬಿ.ಆರ್. ಗವಾಯಿ ಅವರು ತಮ್ಮ ಅಧಿಕಾರಾವಧಿಯ ಕೊನೆಯ ದಿನಗಳಲ್ಲಿ ಕರ್ನಾಟಕದ ಮಟ್ಟಿಗೊಂದು ಸಣ್ಣ ಅನುಕೂಲ ಮಾಡಿಕೊಟ್ಟಿದ್ದಾರೆ. ರಾಜ್ಯದ ಉದ್ದೇಶಿತ ಮೇಕೆದಾಟು ಜಲಾಶಯ ನಿರ್ಮಾಣ ಯೋಜನೆಗೆ ಸಂಬಂಧಿಸಿ 7 ವರ್ಷಗಳಿಂದ ಬಾಧಿಸುತ್ತಿದ್ದ ಕಾನೂನಾತ್ಮಕ ಅಡೆತಡೆಯೊಂದನ್ನು ಅವರು ನಿವಾರಣೆ ಮಾಡಿದ್ದಾರೆ. ಕೇಂದ್ರ ಜಲ ಆಯೋಗಕ್ಕೆ ಮೇಕೆದಾಟು ಯೋಜನೆಯ ಸಮಗ್ರ ಯೋಜನಾ ವರದಿಯ (ಡಿಪಿಆರ್) ಸಲ್ಲಿಕೆಗೆ ಕರ್ನಾಟಕಕ್ಕಿದ್ದ ಸಮಸ್ಯೆಯನ್ನು ಅವರು ಪರಿಹರಿಸಿದ್ದಾರೆ.

ಹಾಗಂತ, ಇದು ಭಾರಿ ಸಂಭ್ರಮಪಡುವಂಥ ವಿಚಾರವೇನಲ್ಲ. ಏಕೆಂದರೆ, ಮೇಕೆದಾಟು ಯೋಜನೆಗೆ ಸುಪ್ರೀಂಕೋರ್ಟ್‌ನಿಂದಾಗಲೀ ಅಥವಾ ಕೇಂದ್ರ ಸರಕಾರದಿಂದಾಗಲೀ ಅಂತಿಮ ಅನುಮೋದನೆಯೇನೂ ಸಿಕ್ಕಿಲ್ಲ. ಯೋಜನೆ ಕುರಿತು ಡಿಪಿಆರ್ ಸಿದ್ಧಪಡಿಸಲು ಕೇಂದ್ರ ಜಲ ಆಯೋಗ 2018ರ ನವೆಂಬರ್ ತಿಂಗಳಲ್ಲಿ ನೀಡಿದ್ದ ಅನುಮತಿಯನ್ನು ಪುರಸ್ಕರಿಸಿ, ತಮಿಳುನಾಡಿನ ತಕರಾರು ಅರ್ಜಿಯನ್ನು ಅವರು ವಜಾಗೊಳಿಸಿದ್ದಾರೆ.

ಡಿಪಿಆರ್ ಸಲ್ಲಿಕೆಗೆ ಕರ್ನಾಟಕಕ್ಕೆ ನೀಡಿದ ಅನುಮತಿಯನ್ನು ಈ ಹಂತದಲ್ಲಿ ರದ್ದುಪಡಿಸಿದರೆ ಅದು ತರಾತುರಿಯ ನಿರ್ಧಾರವಾದೀತು. ಆದರೆ, ಯೋಜನೆಯ ಡಿಪಿಆರ್ ಕುರಿತು ಏನೇ ಆಕ್ಷೇಪಣೆಗಳಿದ್ದರೂ, ಅದನ್ನು ಕಾನೂನಾತ್ಮಕವಾಗಿ ತಮಿಳುನಾಡು ಪ್ರಶ್ನಿಸಬಹುದು ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ. ಕರ್ನಾಟಕ ಈ ಹಿಂದೆ ತನ್ನ ಡಿಪಿಆರ್ ಅನ್ನು ಕೇಂದ್ರ ಜಲ ಆಯೋಗಕ್ಕೆ (ಸಿಡಬ್ಲ್ಯುಸಿ) ಸಲ್ಲಿಸಿದ್ದರೂ, ಅದನ್ನು ತಮಿಳುನಾಡು ಪ್ರಶ್ನಿಸಿದ್ದ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದ್ದುದರಿಂದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಅಥವಾ ಜಲ ಆಯೋಗಕ್ಕೆ ಡಿಪಿಆರ್ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಸುಪ್ರೀಂಕೋರ್ಟ್‌ನ ಈ ತೀರ್ಪಿನಿಂದ ಸಿಡಬ್ಲ್ಯುಸಿ ಮತ್ತು ಸಿಡಬ್ಲ್ಯುಎಂಎ ಮೇಕೆದಾಟು ವಿಷಯದಲ್ಲಿ ಕಾರ್ಯೋನ್ಮುಖವಾಗುವುದು ಅನಿವಾರ್ಯವಾಗಿದೆ. ರಾಜ್ಯ ಸರಕಾರ ಕೂಡ ಕೆಲವೇ ದಿನಗಳಲ್ಲಿ ತನ್ನ ಪರಿಷ್ಕೃತ ಡಿಪಿಆರ್ ಅನ್ನು ಕೇಂದ್ರ ಜಲಶಕ್ತಿ ಆಯೋಗಕ್ಕೆ ಸಲ್ಲಿಸುವುದಾಗಿ ಹೇಳಿದೆ.

ರಾಜ್ಯದ ಹೊಸ ಡಿಪಿಆರ್‌ಗೆ ತಮಿಳುನಾಡು ಆಕ್ಷೇಪ ತೆಗೆಯುವುದರಲ್ಲಿ ಅನುಮಾನವಿಲ್ಲ. ಮುಂದಿನ ಹಂತಗಳಲ್ಲೂ ಕಾನೂನಾತ್ಮಕ ಅಡೆತಡೆಗಳನ್ನು ಕರ್ನಾಟಕ ಎದುರಿಸುವುದು ಖಚಿತ. ಹೀಗಾಗಿ, ಸದ್ಯದ ಭವಿಷ್ಯದಲ್ಲಿ ಮೇಕೆದಾಟು ಜಲಾಶಯ ನಿರ್ಮಾಣ ಕಾಮಗಾರಿ ಆರಂಭವಾಗಿಯೇ ಬಿಡುತ್ತದೆ ಎಂದು ಭಾವಿಸುವುದು ಮೂರ್ಖತನವಾದೀತು.

ಭೌಗೋಳಿಕವಾಗಿ ಕಾವೇರಿ ನದಿ ನೀರನ್ನು ಬಳಸುವ ಮೇಲ್ಭಾಗದ ರಾಜ್ಯ ಕರ್ನಾಟಕ. ತಮಿಳುನಾಡಿಗೆ ಕಾವೇರಿಯ ಪಾಲನ್ನು ಹರಿಸಿ, ಉಳಿದ ಹೆಚ್ಚುವರಿ ನೀರನ್ನು ಮೇಕೆದಾಟು ಜಲಾಶಯದಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು ರಾಜ್ಯದ ಉದ್ದೇಶ. ಜೂನ್-ಜುಲೈ ತಿಂಗಳಲ್ಲಿ ತಮಿಳುನಾಡಿಗೆ ಹೋಗುವ ಅನಿಯಂತ್ರಿತ ಹರಿವನ್ನು ಮೇಕೆದಾಟುವಿನಲ್ಲಿ ತಡೆಹಿಡಿದು, ಜಲಬಾಧೆ ಎದುರಾಗುವ ಜಲವರ್ಷವೊಂದರ ಮೇ-ಜೂನ್ ತಿಂಗಳಲ್ಲಿ ಅದನ್ನು ಬಳಸಬಹುದು. ಆಗ ತಮಿಳುನಾಡಿಗೂ ಅದರ ಪಾಲಿನ ಹರಿವನ್ನು ಮೇ-ಜೂನ್‌ನಲ್ಲಿ ಖಚಿತಪಡಿಸಬಹುದು. ಮೇಕೆದಾಟುವಿನಲ್ಲಿ ಕನಿಷ್ಠ 10 ಟಿಎಂಸಿ ಹೆಚ್ಚುವರಿ ನೀರು ಸಂಗ್ರಹವಾದರೂ, ಮೇ-ಜೂನ್ ತಿಂಗಳ ಜಲಸಂಕಟದಿಂದ ತಪ್ಪಿಸಿಕೊಳ್ಳಬಹುದು ಎಂದು ಯೋಚಿಸಿರುವ ರಾಜ್ಯ ಸರಕಾರ, ಅಲ್ಲಿ 500 ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದನೆ ಮಾಡುವ ಮಹತ್ವದ ಉದ್ದೇಶವನ್ನೂ ಹೊಂದಿದೆ.

ಈ ಅಂಶಗಳನ್ನೊಳಗೊಂಡ ಡಿಪಿಆರ್ ಅನ್ನು 2018ರಲ್ಲಿ ಕರ್ನಾಟಕವು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತ್ತು ಮತ್ತು ಆಯೋಗ ಇದನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದಿಟ್ಟಿತ್ತು. ನಂತರ ಪ್ರಾಧಿಕಾರವು 11 ಸದಸ್ಯರ ಸ್ಕ್ರೀನಿಂಗ್ ಕಮಿಟಿಗೆ (ತಜ್ಞರ ಪರಿಶೀಲನಾ ಸಮಿತಿ) ಯೋಜನೆ ಕುರಿತು ಅಭಿಪ್ರಾಯ ಸಲ್ಲಿಸುವಂತೆ ನಿರ್ದೇಶನ ನೀಡಿತ್ತು. ಕೇಂದ್ರ ಜಲ ಆಯೋಗದ ಮುಖ್ಯ ಎಂಜಿನಿಯರ್

ಸಿ.ಕೆ.ಎಲ್. ದಾಸ್ ನೇತೃತ್ವದ ಸಮಿತಿಯು, ತಮಿಳುನಾಡಿನ ಆಕ್ಷೇಪಣೆಗಳ ಹೊರತಾಗಿಯೂ ಕರ್ನಾಟಕದ ಮೇಕೆದಾಟು ಯೋಜನೆಗೆ ಅನುಮತಿ ನೀಡಿದ ತನ್ನ ಅಧ್ಯಯನಾ ವರದಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸಲ್ಲಿಸಿತು. ಈ ವರದಿಯನ್ನು ಪರಿಗಣಿಸಿಯೇ ಸಮಗ್ರ ಯೋಜನಾ ವರದಿ ಸಲ್ಲಿಸಲು ಕರ್ನಾಟಕಕ್ಕೆ ಕೇಂದ್ರ ಜಲ ಆಯೋಗ 2018ರ ನವೆಂಬರ್‌ನಲ್ಲಿ ಅನುಮತಿ ನೀಡಿತ್ತು. ಈ ಅನುಮತಿಯನ್ನು ತಮಿಳುನಾಡು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರಿಂದ, ಮೇಕೆದಾಟು ಸಂಬಂಧಿತ ಕರ್ನಾಟಕದ ಪ್ರಸ್ತಾವನೆಗಳು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಜಲ ಆಯೋಗದಲ್ಲೇ ಧೂಳು ತಿನ್ನುತ್ತಿದ್ದವು.

ಕಾವೇರಿಯ ಅನಿಯಂತ್ರಿತ ನೀರಿನ ಹರಿವನ್ನು ತನ್ನದಾಗಿಸಿಕೊಳ್ಳುವ ಹಕ್ಕು ನಮಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ, ಕರ್ನಾಟಕ ಈಗಾಗಲೇ ಕೃಷ್ಣರಾಜಸಾಗರ ಸೇರಿ ವಿವಿಧ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿದೆ. ಪ್ರಸ್ತಾವಿತ ಮೇಕೆದಾಟು ಜಲಾಶಯ ನಿರ್ಮಾಣವಾದರೆ, ಅನಿಯಂತ್ರಿತ ನೀರಿನ ಹರಿವನ್ನು ಪಡೆಯುವ ತಮಿಳುನಾಡಿನ ಹಕ್ಕಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಹೀಗಾಗಿ, ಮೇಕೆದಾಟು ಅಣೆಕಟ್ಟು ನಿರ್ಮಾಣ ಮಾಡುವ ಹಕ್ಕು ಕರ್ನಾಟಕಕ್ಕಿಲ್ಲ. ತನ್ನ ಅರ್ಹ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನು ಬಳಸುವ ಕೆಟ್ಟ ಚಾಳಿ ಕರ್ನಾಟಕಕ್ಕಿದೆ ಎನ್ನುವುದು ತಮಿಳುನಾಡಿನ ಆಕ್ಷೇಪ. ಇದಕ್ಕೆ ಪ್ರತಿಯಾಗಿ, ತನ್ನ ಪಾಲಿನಲ್ಲಿ ಹಂಚಿಕೆಯಾದ ನೀರನ್ನು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವ ಹಕ್ಕನ್ನು ಕರ್ನಾಟಕ ಹೊಂದಿದೆ. ಮೇಕೆದಾಟು ಅಣೆಕಟ್ಟು ನಿರ್ಮಾಣ, ತಮಿಳುನಾಡು ಮತ್ತು ಪುದುಚೇರಿಗೆ ಸಾಗುವ ನೀರಿನ ಅನಿಯಂತ್ರಿತ ಹರಿವಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕರ್ನಾಟಕ ವಿವರಣೆ ನೀಡುತ್ತಾ ಬಂದಿದೆ.

ಮಳೆಗಾಲದಲ್ಲಿ ಸಮುದ್ರದ ಪಾಲಾಗುವ ಅಂದಾಜು 65-67 ಟಿಎಂಸಿ ಹೆಚ್ಚುವರಿ ನೀರನ್ನು ಮೇಕೆದಾಟು ಜಲಾಶಯದಲ್ಲಿ ಸಂಗ್ರಹಿಸಿ, ಅದನ್ನು ಕುಡಿಯಲು ಮತ್ತು ಜಲವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಬೇಕು ಎಂದುಕೊಂಡಿರುವ ಕರ್ನಾಟಕ, ಈ ಸಂಗ್ರಹ ಪ್ರಮಾಣದಲ್ಲಿ ಅರ್ಧಾಂಶ ಕಡಿಮೆ ಮಾಡಿದರೆ (65ರ ಬದಲು 30-35 ಟಿಎಂಸಿ) ಕೇಂದ್ರ ಸರಕಾರ ಮತ್ತು ನ್ಯಾಯಾಲಯಗಳ ಮನವೊಲಿಸಬಹುದು. 65 ಟಿಎಂಸಿಗೇ ಪಟ್ಟು ಹಿಡಿದರೆ ನ್ಯಾಯಮೂರ್ತಿಗಳು ಒಪ್ಪುವ ಸಾಧ್ಯತೆ ಕಡಿಮೆ. ಅಂಥಾ ಸಂದರ್ಭದಲ್ಲಿ ಈ ವ್ಯಾಜ್ಯಗಳನ್ನು ಪರಿಹರಿಸಲು ಮತ್ತೆ ನ್ಯಾಯಾಧಿಕರಣದ ಮುಂದೆ ಹೋಗಿ ಎನ್ನುವ ಅಪಾಯವೂ ಇದೆ ಎಂಬುದು ಕಾನೂನು ಪಂಡಿತರ ಆತಂಕ. ಹೀಗಾಗಿ, ಮೇಕೆದಾಟು ವಿಷಯದಲ್ಲಿ ಅತಿಯಾಗಿ ಸಂಭ್ರಮ ಪಡುವ ಬದಲು ಮುಂದೆರಗುವ ಕಠಿಣ ಸವಾಲುಗಳನ್ನು ಹೇಗೆ ನಿರ್ವಹಿ

ಸಬೇಕು ಎಂಬ ಬಗ್ಗೆ ಸರಕಾರ ಗಂಭೀರ ಚಿಂತನೆ ನಡೆಸಬೇಕಿದೆ. ಕಾಂಗ್ರೆಸ್-ಬಿಜೆಪಿ ಪಕ್ಷಗಳು ರಾಜಕಾರಣದ ಲಾಭ-ನಷ್ಟಗಳನ್ನು ಬದಿಗಿಟ್ಟು ವಾಸ್ತವಿಕತೆಯ ನೆಲೆಯಲ್ಲಿ ಜಲ ಬಿಕ್ಕಟ್ಟುಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಮತ್ತು ದಿಲ್ಲಿ ದೊರೆಗಳ ಮುಂದೆ ನಡುಗಿಕೊಂಡು ಕೈ ಕಟ್ಟಿ ನಿಲ್ಲುವ ಬದಲು, ತಮ್ಮನ್ನು ಆಯ್ಕೆ ಮಾಡಿದ ಜನರ ಪರವಾಗಿ, ಜಲ-ಹಕ್ಕಿನ ಪ್ರತಿಪಾದನೆಯನ್ನು ಬಲವಾಗಿ ಮಾಡಬೇಕು.

ತಮಿಳುನಾಡಿನ ಅರ್ಜಿ ವಜಾಗೊಳಿಸಿದ ತೀರ್ಪಿನಲ್ಲಿ ನಿವೃತ್ತ ಸಿಜೆಐ ಬಿ.ಆರ್. ಗವಾಯಿ ದಾಖಲಿಸಿದ ಕೆಲ ಅಂಶಗಳು ಗಮನಸೆಳೆದಿವೆ. ನೀರು ಹಂಚಿಕೆ, ಜಲಾಶಯ ನಿರ್ಮಾಣ ಸೇರಿದಂತೆ ಇಂಥ ತಾಂತ್ರಿಕ ವಿಚಾರಗಳಲ್ಲಿ ನ್ಯಾಯಮೂರ್ತಿಗಳಿಗಿಂತ ವಿಷಯ ತಜ್ಞರು ನೀಡುವ ಅಭಿಪ್ರಾಯಗಳೇ ಮುಖ್ಯ. ವಾಸ್ತವಾಂಶಗಳನ್ನು ಆಳವಾಗಿ ತಿಳಿದುಕೊಂಡಿರುವ ಅವರು ಸಲಹೆ ನೀಡುವುದೇ ನಿರ್ಣಾಯಕ ಎಂದ ಜಸ್ಟಿಸ್ ಗವಾಯಿ, ಮೇಕೆದಾಟು ಜಲಾಶಯ ನಿರ್ಮಾಣದ ಬಗ್ಗೆಯೂ ಜಲ ಆಯೋಗ, ನೀರು ನಿರ್ವಹಣಾ ಪ್ರಾಧಿಕಾರ, ಕಾವೇರಿ ನೀರು ನಿಯಂತ್ರಣ ಸಮಿತಿಯ (ಸಿಡಬ್ಲ್ಯುಆರ್‌ಸಿ) ತಜ್ಞರೇ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಮುಂದಿನ ದಿನಗಳಲ್ಲಿ ಕರ್ನಾಟಕ ಸಲ್ಲಿಸಲಿರುವ ಡಿಪಿಆರ್ ಅನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಅನುಮೋದಿಸಿದರೆ ಮಾತ್ರ ಕೇಂದ್ರ ಜಲ ಆಯೋಗ ಪರಿಗಣಿಸಿ ಮುಂದಿನ ಕ್ರಮಕ್ಕೆ ಶಿಫಾರಸು ಮಾಡಲಿದೆ. 2018ರ ನವೆಂಬರ್ 22ರ ಪತ್ರದಲ್ಲೂ ನೀರು ನಿರ್ವಹಣಾ ಪ್ರಾಧಿಕಾರದ ಪೂರ್ವಾನುಮೋದನೆ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಿರುವುದನ್ನು ಗಮನಿಸಬಹುದು.

ಸುಪ್ರೀಂಕೋರ್ಟ್ ತೀರ್ಪಿನಿಂದ ಆಗಿರುವ ಅನುಕೂಲವೆಂದರೆ - ಮೇಕೆದಾಟು ಕೇಸ್ ನ್ಯಾಯಾಲಯದಲ್ಲಿದೆ ಎಂಬ ಕುಂಟು ನೆಪವನ್ನು ಕೇಂದ್ರ ಸರಕಾರ ಇನ್ನು ಹೇಳುವಂತಿಲ್ಲ. ಪ್ರಕರಣವು ನ್ಯಾಯಾಲಯದ ಮುಂದಿದ್ದಾಗ ನಾವು ತೀರ್ಮಾನ ಮಾಡಲು ಬರುವುದಿಲ್ಲ ಎನ್ನುತ್ತಲೇ ಈವರೆಗೆ ಬೀಸುವ ದೊಣ್ಣೆಗಳಿಂದ ತಪ್ಪಿಸಿಕೊಳ್ಳುತ್ತಿದ್ದ ಕೇಂದ್ರ ಸರಕಾರ, ಕರ್ನಾಟಕದ ಡಿಪಿಆರ್ ಮೇಲೆ ತ್ವರಿತಗತಿಯಲ್ಲಿ ತೀರ್ಮಾನ ತೆಗೆದುಕೊಳ್ಳಿ ಎಂದು ಜಲ ಆಯೋಗ ಮತ್ತು ನೀರು ನಿರ್ವಹಣಾ ಪ್ರಾಧಿಕಾರಗಳಿಗೆ ಇನ್ನಾದರೂ ಸೂಚನೆ ನೀಡಬೇಕು. ಇದಕ್ಕಾಗಿ, ಯಾವುದೇ ವಿಳಂಬ ಮಾಡದೆ ರಾಜ್ಯ ಸರಕಾರವು ಡಿಪಿಆರ್ ಅನ್ನು ಕೇಂದ್ರ ಜಲಶಕ್ತಿ ಇಲಾಖೆಗೆ ಸಲ್ಲಿಸಬೇಕು.

2024ರ ಫೆಬ್ರವರಿ 1ರಂದು ಕಾವೇರಿ ಪ್ರಾಧಿಕಾರದ ಸಭೆಯಲ್ಲಿ ಪುದುಚೇರಿ ಸರಕಾರದ ಅಧಿಕಾರಿಗಳು, 'ಮೇಕೆದಾಟು ವಿಷಯದಲ್ಲಿ ತಾಂತ್ರಿಕ ಪರಿಶೀಲನೆ ನಡೆಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸಮರ್ಥ ಸಂಸ್ಥೆಯಲ್ಲ. ಇದಕ್ಕೆ ಕೇಂದ್ರ ಜಲ ಆಯೋಗ ಸಕ್ಷಮ ಪ್ರಾಧಿಕಾರವಾಗಿದ್ದು, ಹೆಚ್ಚಿನ ಪರಾಮರ್ಶೆ ನಡೆಸಬಹುದು' ಎಂದು ಆಕ್ಷೇಪಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹೀಗಾಗಿ, ಭವಿಷ್ಯದಲ್ಲಿ ಮೇಕೆದಾಟು ಡಿಪಿಆರ್ ವಿಚಾರವು ಪ್ರಾಧಿಕಾರದ ಸಭೆ ಮುಂದೆ ಬಂದಾಗ ಪುದುಚೇರಿ ಇಂಥದ್ದೇ ಕ್ಯಾತೆ ತೆಗೆಯಬಹುದು ಮತ್ತು ಇದರ ಹಿಂದೆ ತಮಿಳುನಾಡು ಕೈವಾಡವಿದ್ದೇ ಇರುತ್ತದೆ. ಮೇಕೆದಾಟು ಬಗ್ಗೆ ಚರ್ಚೆ ಮಾಡಬೇಕು ಎಂಬ ಅಜೆಂಡಾ ಸಿದ್ಧಪಡಿಸಿಕೊಂಡು ನೀರು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಬಂದಿದ್ದ ಈ ಹಿಂದಿನ ನಾಲ್ಕೈದು ಸಂದರ್ಭಗಳಲ್ಲಿ, ಈ ಕುರಿತ ಚರ್ಚೆಗೆ ನಮ್ಮ ಸಮ್ಮತಿ ಇಲ್ಲ ಎಂದು ತಮಿಳುನಾಡು, ಕೇರಳ, ಪುದುಚೇರಿ ರಾಜ್ಯಗಳು ವಿರೋಧ ಹೊರಹಾಕಿದ್ದವು. ಈ ಕಾರಣದಿಂದಲೇ, ಮೇಕೆದಾಟು ವಿಷಯದಲ್ಲಿ ನಾಲ್ಕೂ ರಾಜ್ಯಗಳೊಂದಿಗೆ ಚರ್ಚೆ-ಸಮಾಲೋಚನೆ ನಡೆಸಲು ಪ್ರಾಧಿಕಾರಕ್ಕೆ ಇದುವರೆಗೆ ಸಾಧ್ಯವೇ ಆಗಿಲ್ಲ.

ಡಿಪಿಆರ್ ಸಲ್ಲಿಕೆಗೆ ಜಲ ಆಯೋಗ ನೀಡಿದ್ದ ಅನುಮತಿಯನ್ನು ಸುಪ್ರೀಂಕೋರ್ಟ್ ಪುರಸ್ಕರಿಸಿದ್ದರೂ, ತಮಿಳುನಾಡಿನ ಮತ್ತು ಪುದುಚೇರಿಯ ವರ್ತನೆಗಳಲ್ಲಿ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ. ಹಿಂದಿನ ಪ್ರಾಧಿಕಾರದ ಸಭೆಗಳಲ್ಲಿ ಹೇಗೆ ಅಡಚಣೆ ಉಂಟು ಮಾಡಿದ್ದವೋ ಅದೇ ರೀತಿಯಲ್ಲಿ ಅವು ಮತ್ತೆ ವಿರೋಧ ಒಡ್ಡಲಿವೆ. ಅಲ್ಲದೆ, ರಾಜ್ಯದ ಡಿಪಿಆರ್‌ಗೆ ಆಕ್ಷೇಪಣೆ ತೆಗೆದು ತಮಿಳುನಾಡು ರಾಜ್ಯವು ಸುಪ್ರೀಂಕೋರ್ಟ್ ಮೆಟ್ಟಿಲೇರುವುದೂ ನಿಶ್ಚಿತ. ಜಲಸಂಬಂಧಿ ಬಿಕ್ಕಟ್ಟುಗಳನ್ನು ತೀರ್ಮಾನ ಮಾಡಲು ನಾವು ಜಲ-ವಿಷಯ ತಜ್ಞರಲ್ಲ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಹೇಳುತ್ತಿರುವುದರಿಂದ, ಈ ವ್ಯಾಜ್ಯ ಇತ್ಯರ್ಥವಾಗುವುದು ಎಲ್ಲಿ ಎಂಬ ಪ್ರಶ್ನೆ ಎದುರಾಗುತ್ತದೆ. ಕೇಂದ್ರ ಸರಕಾರದ ಅಂಗಳದಲ್ಲಿನ ತೀರ್ಮಾನಕ್ಕೆ ಉಳಿದ ಕಣಿವೆ ರಾಜ್ಯಗಳು ಒಪ್ಪುವುದಿಲ್ಲ ಮತ್ತು ಒಂದು ರಾಜ್ಯದ ಪರ ತೀರ್ಮಾನ ನೀಡುವ ಅಪಾಯಕಾರಿ ಸಾಹಸಕ್ಕೆ ಕೈ ಹಾಕಲು ಕೇಂದ್ರವೂ ಬಯಸುವುದಿಲ್ಲ. ಹೀಗಾಗಿ, ರಾಜ್ಯಗಳು ಮೇಕೆದಾಟು ವ್ಯಾಜ್ಯವನ್ನು ಹೊತ್ತುಕೊಂಡು ಮತ್ತದೇ ಜಲ ನ್ಯಾಯಾಧಿಕರಣದತ್ತ ಮುಖ ಮಾಡಬೇಕಾಗಿ ಬಂದರೂ ಅಚ್ಚರಿ ಇಲ್ಲ.

ಸಂವಿಧಾನದ ಆಶಯಗಳನ್ನು ಸೋಲಿಸಿದವರಾರು?

ತನ್ನಿಮಿತ್ತ

ಎನ್. ಮಹೇಶ್
vveditoped@gmail.com

ಕೇಂದ್ರ ಸರಕಾರವು ನವೆಂಬರ್ 26ರ ದಿನವನ್ನು 'ಸಂವಿಧಾನ ದಿನ' ಎಂದು 2016ರಲ್ಲಿ ಘೋಷಣೆ ಮಾಡಿ, ಸಂವಿಧಾನ ಕುರಿತಾದ ಜಾಗೃತಿ ಕಾರ್ಯಕ್ರಮಗಳನ್ನು ಆಚರಿಸಿಕೊಂಡು ಬರುತ್ತಿದೆ.

ನಿಮಗೆ ಗೊತ್ತಿರಲಿ, 1950ರಿಂದ 2016ರವರೆಗೆ ಸರಿಸುಮಾರು 66 ವರ್ಷಗಳ ಕಾಲ ನವೆಂಬರ್ 26ರ ದಿನವನ್ನು 'ರಾಷ್ಟ್ರೀಯ ಕಾನೂನು ದಿನ' ಎಂದು ಆಚರಿಸಲಾಗುತ್ತಿತ್ತು. 'ರಾಷ್ಟ್ರೀಯ ಕಾನೂನು ದಿನ' ಎಂದರೆ, ಅದು ಸಂವಿಧಾನ ಮಂಡನೆಯಾದ ದಿನ ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ, ಇದನ್ನು ನೇರವಾಗಿ ರಾಷ್ಟ್ರದ ಜನತೆಗೆ ಅರ್ಥಮಾಡಿಸುವ ದೃಷ್ಟಿಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು 2016ರಲ್ಲಿ ನವೆಂಬರ್ 26ರ ದಿನವನ್ನು 'ಸಂವಿಧಾನ ದಿನ' ಎಂದು ಘೋಷಣೆ ಮಾಡಿದರು. ಸಂಸತ್ತಿನಲ್ಲಿ ಪ್ರಪ್ರಥಮ ಬಾರಿಗೆ ಎರಡು ದಿನಗಳ ಕಾಲ ಸಂವಿಧಾನದ ಕುರಿತು ಚರ್ಚೆ ಮಾಡಲಾಯಿತು. ಅಂದಿನಿಂದ ಪ್ರತಿವರ್ಷದ ನವೆಂಬರ್ 26ರಂದು ಸಂವಿಧಾನ ದಿನವನ್ನು ಆಚರಿಸಲಾಗುತ್ತಿದೆ. ಪರಿಣಾಮವಾಗಿ, ಇಡೀ ರಾಷ್ಟ್ರದಲ್ಲಿ ಆ ದಿನದಂದು ಶಾಲಾ-ಕಾಲೇಜುಗಳು, ಸರಕಾರಿ ಕಚೇರಿಗಳು ಮತ್ತು ಸಾರ್ವಜನಿಕರ ನಡುವೆ ಸಂವಿಧಾನದ ಮಹತ್ವದ ಕುರಿತು ಚರ್ಚೆಗಳು ನಡೆಯುತ್ತಿವೆ.

1949ರ ನವೆಂಬರ್ 25ರಂದು ಸಂವಿಧಾನ ರಚನಾ ಸಭೆಯಲ್ಲಿ ಬಾಬಾಸಾಹೇಬ್ ಅಂಬೇಡ್ಕರರು ಭಾಷಣ ಮಾಡುತ್ತಾ, ''1950ರ ಜನವರಿ 26ರಿಂದ, ಭಾರತೀಯರಾದ ನಾವು ಅನೇಕ ವೈರುಧ್ಯಗಳನ್ನು ಒಳಗೊಂಡ ಒಂದು ಹೊಸ ಜೀವನವನ್ನು ಪ್ರವೇಶಿಸುತ್ತಿದ್ದೇವೆ. 'ಒಬ್ಬ ವ್ಯಕ್ತಿಗೆ ಒಂದು ವೋಟು, ಒಂದು ವೋಟಿಗೆ ಒಂದು ಮೌಲ್ಯ' ಎಂಬ ರಾಜಕೀಯ ಸಮಾನತೆಯನ್ನು ಗಳಿಸಿಕೊಂಡಿದ್ದೇವೆ. ಆದರೆ, ಸಾಮಾಜಿಕ-ಆರ್ಥಿಕ ಅಸಮಾನತೆ ಹಾಗೆಯೇ ಉಳಿದುಕೊಂಡಿದೆ. ಇನ್ನೆಷ್ಟು ದಿನ ಈ ಪರಿಸ್ಥಿತಿಯನ್ನು ಹೀಗೇ ಮುಂದುವರಿಸೋಣ? ಆದಷ್ಟು ಬೇಗ ಈ ಅಸಮಾನತೆಯನ್ನು ಹೋಗಲಾಡಿಸಬೇಕು. ಇಲ್ಲದಿದ್ದರೆ ಅಸಮಾನತೆಗೆ ಒಳಗಾದ ಜನರು ನಾವು ತುಂಬಾ ಶ್ರಮಪಟ್ಟು ಗಳಿಸಿಕೊಂಡಿರುವ ಈ ಪ್ರಜಾತಂತ್ರ ವ್ಯವಸ್ಥೆಯನ್ನು ಧ್ವಂಸ ಮಾಡುತ್ತಾರೆ'' ಎಂದು ಎಚ್ಚರಿಸಿದರು. ಆ ಎಚ್ಚರಿಕೆಯ ಮಾತುಗಳನ್ನು ಅಂದಿನ ಕಾಂಗ್ರೆಸ್ ಸರಕಾರ ಕೇಳಿಸಿಕೊಳ್ಳಲೇ ಇಲ್ಲ. ಬಾಬಾಸಾಹೇಬರು ಬದುಕಿರುವಾಗಲೇ ಕಾಂಗ್ರೆಸ್ಸಿಗರು ಸಂವಿಧಾನದ ಆಶಯಗಳನ್ನು ಹೇಗೆ ಸೋಲಿಸಿದರು ನೋಡಿ!

ಜಾತಿ, ಧರ್ಮ, ಜನಾಂಗ, ಲಿಂಗ ಮತ್ತು ಜನ್ಮಸ್ಥಳಗಳ ಆಧಾರದ ಮೇಲೆ ಯಾರನ್ನೂ ಶೋಷಣೆ ಮಾಡಬಾರದು; ದೇಶದ ಜನಸಂಖ್ಯೆಯ ಶೇ.50ರಷ್ಟು ಭಾಗವಿರುವ ಹಿಂದೂ ಮಹಿಳೆಯರಿಗೆ, ಪುರುಷರಿಗೆ ಸರಿಸಮಾನವಾದ ಹಕ್ಕುಗಳನ್ನು ಕೊಡಬೇಕು ಎಂಬುದು ಸಂವಿಧಾನದ ಅನುಚ್ಛೇದ 15ರ ಆಶಯ. ಈ ಆಶಯವನ್ನು ಒಳಗೊಂಡ 'ಹಿಂದೂ ಕೋಡ್ ಬಿಲ್' ಅನ್ನು ಕಾನೂನು ಸಚಿವರಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರರು ಸಂಸತ್ತಿನಲ್ಲಿ ಮಂಡಿಸಿದರು. ಆದರೆ ನೆಹರು ನೇತೃತ್ವದ ಕಾಂಗ್ರೆಸ್ ಸರಕಾರವು ಆ ವಿಧೇಯಕವು ಅನುಮೋದನೆಗೊಳ್ಳಲು ಬಿಡದೆ ಸೋಲಿಸಿತು. ಇದು ಸಂವಿಧಾನದ ಸಮಾನತೆಯ ಆಶಯಕ್ಕೆ ಆದ ಮೊದಲ ಸೋಲು. ಈ ಕಾರಣಕ್ಕೆ ಅಂಬೇಡ್ಕರರು 1951ರಲ್ಲಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

● ಸಾರ್ವಜನಿಕ ಸೇವೆಗಳಲ್ಲಿ ಸಮಾನ ಅವಕಾಶದ ಹಕ್ಕು

ಕಾನೂನು ಮಂತ್ರಿಯಾಗಿ ಅಂಬೇಡ್ಕರರು ಹೇಳಿದ್ದಿಷ್ಟು: ಸಂವಿಧಾನ ಜಾರಿಯಾಗಿ ಒಂದು ವರ್ಷವಾದರೂ, ಎಸ್‌ಸಿ/ಎಸ್‌ಟಿಗಳಷ್ಟೇ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಇತರೆ ದುರ್ಬಲ ವರ್ಗಗಳಿಗೂ ಸಾರ್ವಜನಿಕ ಸೇವೆಗಳಲ್ಲಿ ಸೂಕ್ತ ಮೀಸಲಾತಿ ಒದಗಿಸಬೇಕು ಹಾಗೂ ಅವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಸಮೀಕ್ಷೆ ನಡೆಸಲು ಸಂವಿಧಾನದ ಅನುಚ್ಛೇದ 340ರ ಪ್ರಕಾರ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಕ ಮಾಡಬೇಕು ಎಂದು ಅಂಬೇಡ್ಕರರು ಆಗ್ರಹಿಸಿದರು. ಆದರೆ ಬಾಬಾಸಾಹೇಬರ ಬೇಡಿಕೆಗೆ ನೆಹರು ಸರಕಾರ ಕಿವಿಗೊಡಲಿಲ್ಲ. ಇದರ

ಪರಿಣಾಮ, 1990ರವರೆಗೆ ಸುಮಾರು 40 ವರ್ಷಗಳ ಕಾಲ, ದೇಶದ ಜನಸಂಖ್ಯೆಯ ಶೇ.52ರಷ್ಟು ಭಾಗವಿರುವ ಒಬಿಸಿ ಸಮುದಾಯಗಳಿಗೆ ಮೀಸಲಾತಿಯನ್ನು ವಂಚಿಸಿ, ಸಂವಿಧಾನದ 16 ಮತ್ತು 240 ಅನುಚ್ಛೇದಗಳನ್ನು ಉಲ್ಲಂಘನೆ ಮಾಡಲಾಯಿತು. ಆ ಕಾರಣದಿಂದಲೇ ಬಾಬಾಸಾಹೇಬರು ಪ್ರತಿಭಟಿಸಿ 1951ರಲ್ಲಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು.

ಎಸ್‌ಸಿ/ಎಸ್‌ಟಿ ಮತ್ತು ಇತರೆ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು ಉತ್ತೇಜನ ಕೊಡುವ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವಂತೆ ಅನುಚ್ಛೇದ 46 ಸೂಚಿಸಿದೆ. ಬಾಬಾಸಾಹೇಬರು ಕಾನೂನು ಮಂತ್ರಿಯಾಗಿ ಸಂವಿಧಾನ ರಚನಾ ಕಾರ್ಯವನ್ನು ಮುಗಿಸಿ, ದೇಶದ ದುರ್ಬಲ ವರ್ಗಗಳ ಅಭಿವೃದ್ಧಿಗೆ ಸೂಕ್ತ ಯೋಜನೆಗಳನ್ನು ರೂಪಿಸಲು ತಮಗೆ ಯೋಜನಾ ಖಾತೆಯನ್ನು ನೀಡಬೇಕೆಂದು ಒತ್ತಾಯಿಸಿದರು. ಪ್ರಧಾನಿ ನೆಹರು ಭರವಸೆ ನೀಡಿ ವಂಚಿಸಿದರು. ಅಂಬೇಡ್ಕರರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಕ್ಕೆ ಇದೂ ಒಂದು ಕಾರಣವಾಗಿತ್ತು. ಇದರ ಪರಿಣಾಮ, ಅಂದಿನ ಸರಕಾರಗಳು ಜಾರಿಗೆ ತಂದ ಮೊದಲ 6 ಪಂಚವಾರ್ಷಿಕ ಯೋಜನೆಗಳಲ್ಲಿ 30 ವರ್ಷಗಳ ಕಾಲ, ಶೋಷಿತ ವರ್ಗಗಳ ಆರ್ಥಿಕ ಅಭಿವೃದ್ಧಿಗೆ ಯಾವ ಯೋಜನೆಗಳೂ ರೂಪುಗೊಳ್ಳಲಿಲ್ಲ. ಹೀಗಾಗಿ ಶೋಷಿತ ವರ್ಗಗಳ ಜನರು ಇಂದಿಗೂ ಆರ್ಥಿಕವಾಗಿ ದುರ್ಬಲರಾಗೇ ಉಳಿದಿದ್ದಾರೆ.

ದೇಶದ ಪ್ರತಿಯೊಂದು ಮಗುವಿಗೂ ಉಚಿತ, ಕಡ್ಡಾಯ ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂದು ಅನುಚ್ಛೇದ 21 ಮತ್ತು 45 ಸೂಚಿಸುತ್ತವೆ. ಆದರೆ ನಮ್ಮ ದೇಶವನ್ನು ಆಳಿದ ಕಾಂಗ್ರೆಸ್ ಸರಕಾರ ಮೊದಲ 20 ವರ್ಷಗಳ ಕಾಲ ಒಂದು ಸಮಗ್ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲೇ ಇಲ್ಲ. ಇದರಿಂದಾಗಿ ಇಂದಿನ ಶಿಕ್ಷಣ ವ್ಯವಸ್ಥೆಯು ಹಳಿತಪ್ಪಿ, ವಿದ್ಯಾವಂತ ನಿರುದ್ಯೋಗಿಗಳನ್ನು ಸೃಷ್ಟಿಸುವ ಕಾರ್ಖಾನೆಯಾಗಿದೆ. ಅನುಚ್ಛೇದ 19, 20, 21ಮತ್ತು 22ರ ಪ್ರಕಾರ, ಅಭಿವ್ಯಕ್ತಿ ಸ್ವಾತಂತ್ರ್ಯ, ಜೀವಿಸುವ ಹಕ್ಕು, ಸಂಘಟನೆ ಮಾಡುವ ಹಕ್ಕು, ಕಾನೂನುಬಾಹಿರ ದಸ್ತಗಿರಿ ವಿರುದ್ಧದ ರಕ್ಷಣೆಯ ಹಕ್ಕು ಇತ್ಯಾದಿ ಮೂಲಭೂತ ಹಕ್ಕುಗಳನ್ನು ಭಾರತದ ಎಲ್ಲಾ ಪ್ರಜೆಗಳಿಗೆ ನೀಡಲಾಗಿದೆ. 1971ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರು ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರದಲ್ಲಿ 'ವೋಟು ಚೋರಿ' ಮಾಡಿ, ಸರಕಾರಿ ಯಂತ್ರವನ್ನು ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಗೆದ್ದಿದ್ದಾರೆ ಎಂದು ಆರೋಪಿಸಿ ರಾಜ್‌ನಾರಾಯಣ್ ಅವರು ಅಲಹಾಬಾದ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದರು. ವಿಚಾರಣೆ ನಡೆಸಿದ ನ್ಯಾಯಾಲಯ, 1975ರ ಜೂನ್ 12ರಂದು ಇಂದಿರಾ ಗಾಂಧಿಯವರ ಆಯ್ಕೆಯನ್ನು ಅಸಿಂಧುಗೊಳಿಸಿ, ಮುಂದಿನ 6 ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ಷರತ್ತು ವಿಧಿಸಿತು. ಆಗ ಇಂದಿರಾ ಗಾಂಧಿಯವರು ತಮ್ಮ ಪ್ರಧಾನಿ ಸ್ಥಾನವನ್ನು ಉಳಿಸಿಕೊಳ್ಳಲು ತುರ್ತು ಪರಿಸ್ಥಿತಿಯನ್ನು ಅಕ್ರಮವಾಗಿ ಜಾರಿಗೊಳಿಸಿ, ಸಂವಿಧಾನಕ್ಕೆ ಅತ್ಯಂತ ಕ್ರೂರಿಯಾದ 5 ತಿದ್ದುಪಡಿಗಳನ್ನು ಮಾಡಿ, ಪ್ರಜೆಗಳ ಮೂಲಭೂತ ಹಕ್ಕುಗಳನ್ನು ದಮನಗೊಳಿಸಿದರು. ಸಂಸತ್ತು ಮತ್ತು ಮಂತ್ರಿಮಂಡಲವನ್ನು ತಮ್ಮ ಕೈಗೊಂಬೆ ಮಾಡಿಕೊಂಡು, ಸಂವಿಧಾನವನ್ನು ಅಮಾನತಿನಲ್ಲಿಟ್ಟು, 5 ವರ್ಷಗಳ ಸಂಸತ್ತಿನ ಅವಧಿಯನ್ನು 6 ವರ್ಷ ಮಾಡಿಕೊಂಡು, 21 ತಿಂಗಳುಗಳ ಅವಧಿಯಲ್ಲಿ 1,20,000 ಜನರನ್ನು ಜೈಲಿಗಟ್ಟಿ ಸರ್ವಾಧಿಕಾರಿ ಆಡಳಿತವನ್ನು ನಡೆಸಿದರು.

ಇಂದು ಸಂವಿಧಾನ ದಿನ

ಬಾಬಾಸಾಹೇಬ್ ಅಂಬೇಡ್ಕರರ ವಿರೋಧದ ನಡುವೆಯೂ, ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿಯನ್ನು ಅಂದಿನ ನೆಹರು ಸರಕಾರವು ಸಂವಿಧಾನದಲ್ಲಿ ಸೇರಿಸಿತು. 'ತಾತ್ಕಾಲಿಕ' ಎಂದು ಸೇರ್ಪಡೆಯಾದ ಈ ವಿಧಿಯು 70 ವರ್ಷಗಳ ಕಾಲ ಜಾರಿಯಲ್ಲಿತ್ತು! ಇದರ ಪರಿಣಾಮವಾಗಿ, ಜಮ್ಮು ಮತ್ತು ಕಾಶ್ಮೀರದಲ್ಲಿ ಎಂಥ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಿ ಬಂತು, ಎಷ್ಟು ನಾಗರಿಕರ ಪ್ರಾಣ ಮತ್ತು ಆಸ್ತಿಪಾಸ್ತಿಗಳ ನಷ್ಟವಾದವು ಎಂಬುದನ್ನು ಯೋಚಿಸಿ. 70 ವರ್ಷಗಳ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರಕಾರವು ಈ 370ನೇ ವಿಧಿಯನ್ನು ರದ್ದುಗೊಳಿಸುವ ಮೂಲಕ ಜಮ್ಮು-ಕಾಶ್ಮೀರ ಪ್ರದೇಶದಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೊಳಿಸಿದೆ.

(ಲೇಖಕರು ಮಾಜಿ ಸಚಿವರು)

ಒದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸತ್ಯಕ್ಕೆ ದೂರವಾದುದು

ರಾಷ್ಟ್ರಪತಿಯವರ ನಿವಾಸಕ್ಕೆ ಭೇಟಿ ನೀಡಿದ ಶ್ರೀ ವಿಧುಶೇಖರ ಭಾರತಿಯವರ ನಡೆಯ ಬಗ್ಗೆ ವೇದಬ್ರಹ್ಮರು ಪುರೋಗಾಮಿ ನಡೆ ಎನ್ನುತ್ತಲೇ ಆಕ್ಷೇಪವನ್ನು ವ್ಯಕ್ತಪಡಿಸಿದರು ಎನ್ನಬಹುದು. ಇಂಥ ಸತ್ಯದೂರವಾದ ಲೇಖನವನ್ನು ಮುಖಪುಟದ ಅಗ್ರಲೇಖನವಾಗಿ (ನ.23)ಪ್ರಕಟಿಸಿದ್ದರಿಂದ ನನ್ನ ಪ್ರತಿಕ್ರಿಯೆಯನ್ನು ನೀಡಬೇಕಾಯಿತು.

ವಿಧುಶೇಖರರು ತಮ್ಮ 'ಪರಿವಾರ ಪಟಾಲಮ್ಮಿನೊಂದಿಗೆ' ರಾಷ್ಟ್ರಪತಿ ಭವನಕ್ಕೆ ಚಿತ್ತೈಸಿದ್ದು ಶಾಸ್ತ್ರಿಗಳ ಚಿತ್ತಕ್ಕೆ ಸರಿಕಾಣಲಿಲ್ಲ. ಶಾಸ್ತ್ರಿಗಳು ಬಳಸಿದ ಭಾಷೆಯಲ್ಲಿಯೇ ಅವರ ಪೂರ್ವಗ್ರಹ ಎದ್ದು ಕಾಣಿಸುವಂತಿದೆ. ಶೃಂಗೇರಿ ಸಂಸ್ಥಾನದ ಇತಿಹಾಸವನ್ನು ಅವರು ಅವಲೋಕಿಸಿದ್ದರೆ ಇಂಥ ಅಗ್ರಲೇಖನವನ್ನು ಬರೆದು ಮಠದ ಬಗ್ಗೆ ಜನರನ್ನು ಹಾದಿತಪ್ಪಿಸುವ ಕೆಲಸ ಮಾಡುತ್ತಿರಲಿಲ್ಲ.

ಕರ್ನಾಟಕದ ಪ್ರಖ್ಯಾತ ವಿದ್ವಾಂಸರಾದ ಸಾ.ಕೃ. ರಾಮಚಂದ್ರ ರಾವ್ ಅವರು 'ಶಾರದಾ ಪೀಠದ ಮಾಣಿಕ್ಯ' ಎಂಬ ಪುಸ್ತಕ ಬರೆದಿದ್ದಾರೆ. ಅದರ 10ನೇ ಪುಟದಲ್ಲಿ 1854ರಲ್ಲಿ ಶೃಂಗೇರಿಯ ಜಗದ್ಗುರುಗಳಾಗಿದ್ದ (ಉಗ್ರ) ನರಸಿಂಹ ಭಾರತಿ ಸ್ವಾಮಿಗಳು ಮೈಸೂರಿಗೆ ಬಂದು ಅರಸರನ್ನು ನೋಡಿದರು ಎಂದು ಬರೆದಿದೆ. ಅಷ್ಟೇ ಅಲ್ಲ, ಅವರು ನಾಲ್ಕು ವರ್ಷಗಳ ನಂತರ ಬೆಂಗಳೂರಿನಲ್ಲಿ ಆಗ ರಾಜ್ಯ ಕಮಿಷನರ್ ಆಗಿದ್ದ ಬೌರಿಂಗನನ್ನೂ ನೋಡಿದ್ದರು ಎಂದು ಬರೆದಿದ್ದಾರೆ. ಅದೇ ಪುಸ್ತಕದ 16ನೇ ಪುಟದಲ್ಲಿ ಸ್ವಾಮಿಗಳು ಬೆಂಗಳೂರಿಗೆ ಬಂದು ಮಾಧವರಾಯರ ಮನೆಯಾದ ಪಾಠಣ ಭವನದಲ್ಲೇ ಬಿಡಾರ ಮಾಡಿದರು ಎಂದೂ ದಾಖಲಿಸಿದ್ದಾರೆ. ಪುಟ 65ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಚಂದ್ರಶೇಖರ ಭಾರತಿ ಸ್ವಾಮಿಗಳನ್ನು ವೈಭವದಿಂದ ಎದುರುಗೊಂಡು ಅರಮನೆಯ ಬಂಗಾರು ತೊಟ್ಟಿಯಲ್ಲಿ ಅವರಿಗೆ ಪೂಜೆ ನಜರುಗಳನ್ನು ಒಪ್ಪಿಸಿದರು ಎಂದೂ ಬರೆದಿದ್ದಾರೆ.

ಅದೇ ಪುಸ್ತಕದಲ್ಲಿ ಮೈಸೂರು ಅರಸೊತ್ತಿಗೆಯಲ್ಲಿ ಶೃಂಗೇರಿಗೆ ಬಂದ ಅರಸರಲ್ಲಿ ಇವರೇ (ಚಾಮರಾಜ ಒಡೆಯರರು) ಮೊದಲಿಗರು ಎಂದೂ ಬರೆದಿದ್ದರು. ಇದು 1885ರ ಡಿಸೆಂಬರ್ 7ರಂದು. ಹೀಗಾಗಿ, ಶಾಸ್ತ್ರಿಗಳು ಹೇಳುವ ''ಶೃಂಗೇರಿಯ ಜಗದ್ಗುರುಗಳು ಅಧಿಕಾರದಲ್ಲಿರುವವರನ್ನೇ ಯಾವಾಗಲೂ ತಮ್ಮ ಬಳಿಗೆ ಕರೆಸುತ್ತಿದ್ದರು'' ಎಂಬ ಮಾತೂ ಸರಿಯಲ್ಲ. ಶೃಂಗೇರಿ ಜಗದ್ಗುರುಗಳು ರಾಜಕಾರಣಿಗಳು ಮತ್ತು ಅಧಿಕಾರಸ್ಥರಿಂದ ದೂರವಿರುವ ಪರಿಪಾಠ ಹೊಂದಿದ್ದರು ಎಂಬ ಮಾತೂ ಸತ್ಯದೂರವಾದುದು. ಶ್ರೀಮಠಕ್ಕೆ ಮೈಸೂರರಸರ ರಕ್ಷೆ ಸದಾಕಾಲ ಇದ್ದಿತ್ತು. ಅವರಿಗೆ ಮೊದಲು ವಿಜಯನಗರ ಸಾಮ್ರಾಜ್ಯದ ಹಾಗೂ ಬಿದನೂರು ಸಂಸ್ಥಾನದ ರಕ್ಷಣೆ ಇತ್ತು ಎಂಬುದೂ ಸರ್ವವಿದಿತ. ಹೈದರಾಲಿಯ ಜತೆ ಭಿನ್ನಾಭಿಪ್ರಾಯ ಮೂಡಿದಾಗ ಅಂದಿನ ಸ್ವಾಮಿಗಳಾಗಿದ್ದ ಸಚ್ಚಿದಾನಂದ ಭಾರತಿಯವರು ಪೇಶ್ವೆ ಮಾಧವರಾಯನ ಆಳ್ವಿಕೆಯಲ್ಲಿದ್ದ ನಾಸಿಕ್‌ನಲ್ಲಿ ವಾಸ ಮಾಡಿ ಅಲ್ಲಿಂದಲೇ ಮಠದ ಆಡಳಿತವನ್ನು ನಡೆಸುತ್ತಿದ್ದರು ಎಂಬುದಕ್ಕೂ ದಾಖಲೆಯಿದೆ. ಲೇಖನದಲ್ಲಿ ಮೋದಿಯವರ ಹೆಸರನ್ನು ಎಳೆದು ತಂದದ್ದೇಕೋ ತಿಳಿಯದು. ಅವರು ಅನೇಕ ಸ್ವಾಮಿಗಳಿಗಿಂತ ನಿಮ್ನ ಸ್ಥಾನದಲ್ಲಿ ಕುಳಿತು ಭಾಗವಹಿಸಿದ್ದನ್ನು ನಾವೇ ನೋಡಿದ್ದೇವೆ. ರಾಷ್ಟ್ರಪತಿ ಭವನಕ್ಕೆ ಮಠದ ರಜತಪೀಠವನ್ನೇ ಕೊಂಡೊಯ್ದು ಅದರಲ್ಲಿ ಕುಳಿತಿದ್ದರು ಎಂಬರ್ಥದ ಉಲ್ಲೇಖವೂ ಅಗತ್ಯವಿರಲಿಲ್ಲ. ಇಂಥ ವ್ಯವಸ್ಥೆಗೆ ರಾಷ್ಟ್ರಪತಿಗಳ ಭದ್ರತಾ ವ್ಯವಸ್ಥೆಯಲ್ಲಿ ಅವಕಾಶವಿದೆಯೇ ಎಂಬುದು ನನ್ನ ಸಂದೇಹ.

– ಕೆ. ಜನಾರ್ದನ ತುಂಗ, ಬೆಂಗಳೂರು

ಭಟ್ಟರ್ ಸ್ಕಾಚ್

- **ಶಾಮಸುಂದರ ದಂಡಿನ, ಧಾರವಾಡ**
ಎಕ್ಸಾಮ್ ಹಾಲಲ್ಲಿ ಟೀಚರ್ ಕಡೆ ನೋಡೋದು ಯಾಕೆ?
– **ಆನ್ಸರ್ ಗೊತ್ತಿಲ್ಲ ಅಂತಲ್ಲ, ಅವರು ನಮ್ಮನ್ನ ನೋಡ್ತಿದಾರಾ ಇಲ್ವಾ ಅಂತ ಕನ್ಫರ್ಮ್ ಮಾಡ್ಕೊಳೋಕೆ!**

- **ಸುಷ್ಮಾ, ಗದಗ**
ಭಟ್ರೇ, ಸಿಲಬಸ್ ಅಂದ್ರೆ ಏನು?
– **ವರ್ಷವಿಡೀ ಪುಸ್ತಕದಲ್ಲಿ ನಿದ್ದೆ ಮಾಡಿ, ಎಕ್ಸಾಮ್ ಹಿಂದಿನ ದಿನ ಹಾರಾಡೋದು!**

- **ನರೇಂದ್ರ ಪೈ, ರಾಯಚೂರು**
ಭಟ್ರೇ, ರಾಜಕಾರಣಿಗಳು ಎಲೆಕ್ಷನ್ ಹತ್ತಿರ ಬಂದಾಗ ಮಾತ್ರ ಮನೆ ಮನೆಗೆ ಯಾಕೆ ಬರ್ತಾರೆ?
– **ಮತ್ತೆ ಐದು ವರ್ಷ ನಿಮ್ಮ ಮುಖ ನೋಡೋಕಾಗಲ್ಲ ಅಂತ ಅಡ್ವಾನ್ಸ್ ಆಗಿ ಹೇಳೋಕೆ!**

- **ಯಶೋದಾ ರಾವ್, (ಇಮೇಲ್ ಮೂಲಕ)**
ಭಟ್ರೇ, ಗಂಡ–ಹೆಂಡತಿ ಜಗಳಕ್ಕೂ ಮತ್ತು ಕ್ರಿಕೆಟ್ ಮ್ಯಾಚ್‌ಗೂ ಏನು ವ್ಯತ್ಯಾಸ?
– **ಕ್ರಿಕೆಟ್‌ನಲ್ಲಿ ಅಂಪೈರ್ ಇರ್ತಾರೆ, ದಾಂಪತ್ಯದಲ್ಲಿ ನೆರೆಹೊರೆಯವರು ಅಂಪೈರ್ ಆಗ್ತಾರೆ!**

- **ಸುಂದರ ಕೆ. ಶಾಂತಾರಾಮ, ಬೀರೂರು**
ಭಟ್ರೇ, 'ಪ್ರೀತಿ ಕುರುಡು' ಅಂತ ಯಾಕೆ ಹೇಳ್ತಾರೆ?
– **ಮತ್ತೆ ಮದುವೆಯಾದ ಮೇಲೆ ಕಣ್ಣು 'ತೆರೆಯಬೇಕಲ್ಲ', ಅದಕ್ಕೆ!**

- **ರಾಮಚಂದ್ರ, ಉಡುಪ, (ಇಮೇಲ್ ಮೂಲಕ)**
ಹುಡುಗರು ಲವ್ ಅಲ್ಲಿ ಬಿದ್ದಾಗ ಫ್ರೆಂಡ್ಸ್ ಯಾಕೆ ನೆನಪಾಗಲ್ಲ?
– **ಸರಕಾರಿ ಕೆಲಸ ಸಿಕ್ಕ ಮೇಲೆ ಪ್ರೈವೇಟ್ ಕೆಲಸ ಯಾರಿಗೆ ಬೇಕು ಹೇಳಿ?**

- **ಸುಶೀಲಾ ಪವಾರ, ಬೆಂಗಳೂರು**
ಭಟ್ರೇ, ರಾಜಕಾರಣಿಗಳ ಭಾಷಣಕ್ಕೂ ಮತ್ತು ಚೈನೀಸ್ ಪ್ರಾಡಕ್ಟ್‌ಗೂ ಏನು ಸಾಮ್ಯತೆ?
– **ಎರಡಕ್ಕೂ ಗ್ಯಾರಂಟಿ ಇಲ್ಲ, ಯಾವಾಗ ಕೈ ಕೊಡುತ್ತೋ ಗೊತ್ತಿಲ್ಲ!**

ಕಾರ್ಮಿಕ ಕಾನೂನು ಕಾರ್ಮಿಕರ ಹಿತ ಕಾಯಬಲ್ಲುದೇ ?

ಲೋಕಮತ

ಲೋಕೇಶ್ ಕಾಯರ್ಗ

vveditoped@gmail.com

ಮೂರ್ನಾಲ್ಕು ದಶಕಗಳ ಹಿಂದೆ ಈ ಕಾನೂನು ಜಾರಿಯಾಗಿದ್ದರೆ ದೇಶದಲ್ಲಿ ದೊಡ್ಡ ಮಟ್ಟದ ಸಂಚಲನ ಸೃಷ್ಟಿಯಾಗುತ್ತಿತ್ತು. ಒಂದೋ ದೊಡ್ಡ ಮಟ್ಟದಲ್ಲಿ ಸ್ವಾಗತಿಸುತ್ತಿದ್ದರು,ಇಲ್ಲವೇ ದೊಡ್ಡ ಮಟ್ಟದ ಹೋರಾಟಕ್ಕೆ ಅಣಿಯಾಗುತ್ತಿದ್ದರು. ಈಗ ಇವೆರಡೂ ಕಾಣಿಸುತ್ತಿಲ್ಲ. ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ಉದ್ದಿಮೆಗಳಿಗೆ ಸಂಬಂಧಿಸಿದ ಹೊಸ ಕಾರ್ಮಿಕ ಸಂಹಿತೆಯನ್ನು ಕೇಂದ್ರ ಸರಕಾರ ಜಾರಿಗೊಳಿಸಿದೆ. ದೇಶದ ಅರ್ಧಕ್ಕಿಂತ ಹೆಚ್ಚು ಜನಸಂಖ್ಯೆಗೆ ನೇರವಾಗಿ ಸಂಬಂಧಿಸಿದ ಸುದ್ದಿಯಾದರೂ ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರ ಸಿಗಲಿಲ್ಲ. ನಮ್ಮ ನೇತಾರರಿಗೂ ಇದು ಮಹತ್ವದ್ದೆನಿಸಲಿಲ್ಲ. ಎಡ–ಬಲ ನಿಲುವಿನ ಕಾರ್ಮಿಕ ಸಂಘಟನೆಗಳು ತಮ್ಮ ನಿಲುವಿಗೆ ತಕ್ಕಂತೆ ಹೇಳಿಕೆ ನೀಡಿದ್ದನ್ನು ಬಿಟ್ಟರೆ ಹೊಸ ಕಾಯಿದೆಯ ಇನ್ನೂ ವಿಶದವಾಗಿ ಮಾತನಾಡಿಲ್ಲ.

ಬ್ರಿಟಿಷರ ಅವಧಿಯ ಕಾನೂನುಗಳೂ ಸೇರಿದಂತೆ 29 ಹಳೆಯ ಕಾರ್ಮಿಕ ಕಾನೂನುಗಳನ್ನು ಪರಿಷ್ಕರಿಸಿ ಕೇಂದ್ರ ಸರಕಾರ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಿದೆ. 2025ರ ನವೆಂಬರ್ 21ರಿಂದ ಜಾರಿಗೆ ಬಂದಿರುವ ಈ ಸಂಹಿತೆ ಐತಿಹಾಸಿಕ ಎನ್ನುವುದು ಕೇಂದ್ರ ಸರಕಾರದ ಘೋಷಣೆ. 29 ಹಳೆಯ ಕಾನೂನುಗಳನ್ನು 4 ಸಂಹಿತೆಗಳಾಗಿ ಪರಿವರ್ತಿಸಿರುವುದರಿಂದ ಉದ್ಯೋಗದಾತರಿಗೆ ಮತ್ತು ಕಾರ್ಮಿಕರಿಗೆ ಕಾನೂನು ಪಾಲನೆ ಪ್ರಕ್ರಿಯೆ ಸುಲಭವಾಗಲಿದೆ. ಬದಲಾದ ಉದ್ಯಮ ಜಗತ್ತಿಗೆ ಪೂರಕವಾದ ಈ ಸಂಹಿತೆ ಕಾರ್ಮಿಕರು ಮತ್ತು ಉದ್ಯೋಗಿಗಳ ಹಿತ ಕಾಯಲಿದೆ ಎನ್ನುವುದು ಕೇಂದ್ರ ಕಾರ್ಮಿಕ ಸಚಿವಾಲಯದ ಅಭಿಮತ. ಬಿಹಾರ ಚುನಾವಣೆ ಆಘಾತದಿಂದ ಇನ್ನೂ ಚೇತರಿಸಿಕೊಳ್ಳದ ಪ್ರತಿಪಕ್ಷ ನಾಯಕರು, 'ಸಂಹಿತೆ ಕಾರ್ಮಿಕ ವಿರೋಧಿ' ಎನ್ನುವುದನ್ನು ಬಿಟ್ಟರೆ ಮಹತ್ವದ ಹೇಳಿಕೆಯನ್ನೇನೂ ನೀಡಿಲ್ಲ. ಕಾರ್ಮಿಕರ ಉದ್ಯೋಗ ಸುರಕ್ಷತೆಯನ್ನು ಈ ಕಾನೂನು ಮತ್ತಷ್ಟು ಅಪಾಯಕ್ಕೆ ತಳ್ಳಿದೆ ಎನ್ನುವುದು ಎಡಪಕ್ಷಗಳ ಬೆಂಬಲಿತ ಕಾರ್ಮಿಕ ಸಂಘಟನೆಗಳ ವಾದ.

ಐದು ವರ್ಷಗಳಿಂದ ಬಾಕಿ ಉಳಿದಿದ್ದ ನಾಲ್ಕು ಕಾರ್ಮಿಕ ಸಂಹಿತೆಗಳಾದ ವೇತನ ಸಂಹಿತೆ 2019, ಕೈಗಾರಿಕಾ ಸಂಬಂಧ ಸಂಹಿತೆ 2020, ಸಾಮಾಜಿಕ ಭದ್ರತಾ ಸಂಹಿತೆ 2020, ಮತ್ತು ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಸ್ಥಿತಿ ಸಂಹಿತೆ 2020 ಈಗಾಗಲೇ ಜಾರಿಗೆ ತಂದಿದೆ. ವೇತನ ಸಂಹಿತೆ ಪ್ರಕಾರ ಇನ್ನು ಮುಂದೆ ಪ್ರತಿ ತಿಂಗಳ ಏಳನೇ ತಾರೀಕಿನೊಳಗೆ ಕನಿಷ್ಠ ವೇತನ ಪಾವತಿ ಕಡ್ಡಾಯ. ಯಾವುದೇ ರಾಜ್ಯದಲ್ಲಿ ಕೇಂದ್ರ ಸರಕಾರ ನಿಗದಿಪಡಿಸಿದ ಕನಿಷ್ಠ ವೇತನಕ್ಕಿಂತ ಕಡಿಮೆ ವೇತನ ನಿಗದಿ ಮಾಡುವಂತಿಲ್ಲ. ಗ್ರ್ಯಾಚುಟಿ ಪಡೆಯಲು ಇನ್ನು ಐದು ವರ್ಷ ಕಾಯಬೇಕಿಲ್ಲ. ಒಂದು ವರ್ಷ ಸೇವೆ ಸಲ್ಲಿಸಿದವರೂ ಗ್ರ್ಯಾಚುಟಿ ಪಡೆಯಲು ಅರ್ಹರಾಗುತ್ತಾರೆ. ಒಟ್ಟು ಸಂಬಳದಲ್ಲಿ ಶೇ.50ರಷ್ಟು ಮೊತ್ತವನ್ನು ವೇತನ ಎಂದು ಪರಿಗಣಿಸುವುದರಿಂದ ಇದಕ್ಕೆ ತಕ್ಕಂತೆ ಭವಿಷ್ಯನಿಧಿ, ಗ್ರ್ಯಾಚ್ಯುಟಿ ಮತ್ತು ಪಿಂಚಣಿ ಮೊತ್ತವನ್ನು ನಿಗದಿ ಮಾಡಬೇಕಾಗುತ್ತದೆ. ವೇತನಕ್ಕೆ ಸಂಬಂಧಿಸಿದ ಈ ನಿಯಮಗಳಿಗೆ ಕಾರ್ಮಿಕ ಸಂಘಟನೆಗಳಿಂದ ಆಕ್ಷೇಪ ಬಂದಿಲ್ಲ.

ಆದರೆ ಕೈಗಾರಿಕಾ ಸಂಬಂಧಗಳ ಸಂಹಿತೆಯಲ್ಲಿ ಹೇಳಲಾದ ಕೆಲವು ಅಂಶಗಳು ಕಾರ್ಮಿಕ ಸಂಘಟನೆಗಳ ವಿರೋಧಕ್ಕೆ ಕಾರಣವಾಗಿದೆ. ಇನ್ನು ಮುಂದೆ ನೌಕರರ ನೇಮಕ, ವಜಾ, ಸಂಪು ಮತ್ತು ಕಾರ್ಮಿಕ ಸಂಘಟನೆಗಳ ನಿಯಮಗಳು ಬದಲಾಗಲಿವೆ. ಈ ಮೊದಲು 100 ಅಥವಾ ಅದಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಉದ್ದಿಮೆ ಘಟಕಗಳನ್ನು ಸರಕಾರದ ಅನುಮತಿ ಇಲ್ಲದೆಯೇ ಮುಚ್ಚಬಹುದಿತ್ತು. ಕಾರ್ಮಿಕರನ್ನು ಮನೆಗೆ ಕಳುಹಿಸಬಹುದಿತ್ತು. ಇನ್ನು ಮುಂದೆ 300 ಉದ್ಯೋಗಿಗಳವರೆಗಿನ ಕಂಪನಿಗಳು ಕೂಡ ಸರಕಾರದ ಅನುಮತಿ ಪಡೆಯದೇ ನೌಕರರನ್ನು ವಜಾಗೊಳಿಸಬಹುದು. ಲಾಕ್‌ಡೌನ್ ಘೋಷಿಸಬಹುದು. ಒಂದು ವೇಳೆ ನೌಕರರು ಮುಷ್ಕರ ಹೂಡುವುದಾದರೆ 60 ದಿನಗಳ ಮೊದಲು ನೋಟಿಸ್ ನೀಡಬೇಕು. ಈ ಮೊದಲು ಒಂದೂವರೆ ತಿಂಗಳ ಮುಂಚೆ ನೋಟಿಸ್ ನೀಡಬೇಕಿತ್ತು. ಈ ಎರಡು ಅಂಶಗಳ ಬಗ್ಗೆ ಕಾರ್ಮಿಕ ವಲಯದಿಂದ ತೀವ್ರ ಆಕ್ಷೇಪವಿದೆ.

ಸದ್ಯದ ಅಂದಾಜು ಪ್ರಕಾರ ದೇಶದಲ್ಲಿ ಸುಮಾರು 56.4 ಕೋಟಿ ಜನರು ವಿವಿಧ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ. ಇವರಲ್ಲಿ ಶೇ. 40ಕ್ಕಿಂತ ಹೆಚ್ಚು ಮಂದಿ ಅಸಂಘಟಿತ ವಲಯದ ಅರೆಕಾಲಿಕ ಉದ್ಯೋಗಿಗಳು. ಶೇ.26ರಷ್ಟು ಜನ ಕೈಗಾರಿಕಾ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಶೇ.50ರಷ್ಟು ಉದ್ದಿಮೆಗಳಲ್ಲಿ ಇರುವ ಸರಾಸರಿ ಉದ್ಯೋಗಿಗಳ ಸಂಖ್ಯೆ ಕೇವಲ 20. ಅಂದರೆ ನಮ್ಮ ಉದ್ದಿಮೆಗಳಲ್ಲಿರುವ ನೌಕರರ ಸರಾಸರಿ ಸಂಖ್ಯೆ 86ರಷ್ಟಿದೆ. ಅಂದರೆ ಹೊಸ ಕೈಗಾರಿಕಾ ಸಂಹಿತೆ ಪ್ರಕಾರ ಬಹುತೇಕ ಉದ್ದಿಮೆಗಳಿಗೆ ಯಾವುದೇ ಕ್ಷಣದಲ್ಲಿ ಬೀಗ ಮುದ್ರೆ ಘೋಷಿಸಿ ನೌಕರರನ್ನು ಕೈ ಬಿಡಬಹುದು. ಇದಕ್ಕೆ ಸರಕಾರದ ಅನುಮತಿ ಬೇಕಿಲ್ಲ.

ಕಾರ್ಮಿಕ ಕಾಯಿದೆಯ ಮುಖ್ಯ ಉದ್ದೇಶವೇ ನೌಕರರ ಉದ್ಯೋಗ ಭದ್ರತೆ. ಇದಕ್ಕೆ ಒತ್ತು ನೀಡದೇ ಹೋದರೆ ಸರಕಾರದ ಯಾವುದೇ ಸಂಹಿತೆಯನ್ನು ಕಾರ್ಮಿಕರ ಪರ ಎಂದು ಹೇಳಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಸರಕಾರ ಉದ್ಯೋಗದಾತರ ಒತ್ತಡಕ್ಕೆ ಮಣಿದಿದೆ ಎನ್ನುವುದು ಸಿಐಟಿಯು ಸೇರಿದಂತೆ ಪ್ರತಿಪಕ್ಷ ಬೆಂಬಲಿತ ಕಾರ್ಮಿಕ ಸಂಘಟನೆಗಳ ಆರೋಪ. ಹೂಡಿಕೆಯನ್ನು ಆಕರ್ಷಿಸುವುದು ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಸುಗಮ ವಾತಾವರಣ ನಿರ್ಮಿಸುವುದು ಈ ಸಂಹಿತೆಗಳ ಪ್ರಮುಖ ಗುರಿಯಾಗಿದ್ದು, ಈ ಪ್ರಕ್ರಿಯೆಯಲ್ಲಿ ಕಾರ್ಮಿಕರ ಹಕ್ಕುಗಳು ದುರ್ಬಲಗೊಂಡಿವೆ. ಈ ಸಂಹಿತೆಗಳಿಂದ ಕಾರ್ಮಿಕರಿಗೆ ಆಗುವ ಸಣ್ಣ ಲಾಭಗಳು, ಉದ್ಯೋಗದಾತರಿಗೆ ಸಿಗುವ ದೊಡ್ಡ ಅನುಕೂಲಗಳ ಮುಂದೆ ನಗಣ್ಯ ಎನ್ನುವುದು ಹೆಚ್ಚಿನವರ ಅಭಿಪ್ರಾಯ.

ಅನುಕೂಲದ ದೃಷ್ಟಿಯಿಂದ ನೋಡಿದರೆ ಅಸಂಘಟಿತ ವಲಯದ ಕಾರ್ಮಿಕರತ್ತ ಸಂಹಿತೆ ಹೆಚ್ಚಿನ ಕೃಪಾದೃಷ್ಟಿ ತೋರಿಸಿದೆ. ಇನ್ನು ಮುಂದೆ ಯಾವುದೇ ಘಟಕವಾದರೂ ಕಾರ್ಮಿಕರಿಗೆ ನೇಮಕ ಪತ್ರಗಳನ್ನು ನೀಡುವುದು ಕಡ್ಡಾಯ. ಮೊದಲ ಬಾರಿಗೆ, ಗಿಗ್ ಕಾರ್ಮಿಕರು, ಪ್ಲಾಟ್‌ಫಾರ್ಮ್ ಕಾರ್ಮಿಕರು ಮತ್ತು ಅಸಂಘಟಿತ ವಲಯದ ಉದ್ಯೋಗಿಗಳನ್ನು ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ತರಲಾಗಿದೆ. ಇನ್ನು ಮುಂದೆ ಈ ನೌಕರರಿಗೂ ಇಪಿಎಫ್, ಇಎಸ್‌ಐಸಿ, ವಿಮೆ, ಹೆರಿಗೆ ರಜೆ ಮತ್ತು ಪಿಂಚಣಿಯಂತಹ ಪ್ರಯೋಜನಗಳು ಲಭ್ಯವಾಗಲಿವೆ. ಎಲೆಕ್ಟ್ರಾನಿಕ್ ಮಾಧ್ಯಮದ ಪತ್ರಕರ್ತರು, ಡಬ್ಬಿಂಗ್ ಕಲಾವಿದರು ಮತ್ತು ಸ್ಟಂಟ್ ವ್ಯಕ್ತಿಗಳು ಸೇರಿದಂತೆ ಡಿಜಿಟಲ್ ಮತ್ತು ಆಡಿಯೋ–ವಿಶುವಲ್ ಕೆಲಸಗಾರರು ಇನ್ನು ಮುಂದೆ ಕಾರ್ಮಿಕರ ವ್ಯಾಪ್ತಿಗೆ ಬರಲಿದ್ದು ಈ ಕಾಯಿದೆಯಡಿಯಲ್ಲಿ ಪ್ರಯೋಜನಗಳನ್ನು ಪಡೆಯಲಿದ್ದಾರೆ. ಕಟ್ಟುನಿಟ್ಟಾಗಿ ಜಾರಿಯಾದರೆ ಕಡ್ಡಾಯ ನೇಮಕಾತಿ ಪತ್ರ, ದೃಢೀಕೃತ ವೇತನ ಚೀಟಿ ಮತ್ತು ಪಾವತಿಸಿದ ವಾರ್ಷಿಕ ರಜೆಯಂತಹ ನಿಯಮಗಳು ಪ್ರತಿಯೊಬ್ಬ ಕೆಲಸಗಾರನಿಗೆ ಹೆಚ್ಚಿನ ಸ್ಥಿರತೆ, ಘನತೆ ಮತ್ತು ಉದ್ಯೋಗ ಭದ್ರತೆಯನ್ನು ಒದಗಿಸುವುದು ನಿಶ್ಚಿತ.

ಫುಡ್ ಮತ್ತು ದಿನಸಿ ಸಾಮಾನುಗಳನ್ನು ಡೆಲಿವರಿ ಮಾಡುವ ಕಂಪನಿಗಳು ಇನ್ನು ತಮ್ಮ ವಾರ್ಷಿಕ ವಹಿವಾಟಿನ ಶೇ.12ರಷ್ಟು ಮೊತ್ತವನ್ನು ಸಾಮಾಜಿಕ ಭದ್ರತಾ ನಿಧಿಗೆ ನೀಡಬೇಕು. ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ದುಡಿಯುವ ಪರಿಸ್ಥಿತಿಗಳ ಸಂಹಿತೆಯಡಿ ಸುರಕ್ಷಿತ ಕೆಲಸದ ವಾತಾವರಣವನ್ನು ಒದಗಿಸುವುದು ಕಡ್ಡಾಯವಾಗಿದೆ. 40 ವರ್ಷಕ್ಕಿಂತ ಮೇಲ್ಪಟ್ಟ ಕಾರ್ಮಿಕರಿಗೆ ಉಚಿತ ವಾರ್ಷಿಕ ಆರೋಗ್ಯ ತಪಾಸಣೆಗಳನ್ನು ಕಡ್ಡಾಯಗೊಳಿಸಲಾಗಿದೆ. ಹಂಗಾಮಿ ನೌಕರರು, ಗುತ್ತಿಗೆ ಆಧಾರಿತ ನೌಕರರು ಕೂಡ ಇನ್ನು ಮುಂದೆ ಸಂಘಟಿತ ವಲಯದ ಕಾಯಂ ನೌಕರರಂತೆ ರಜೆ, ನಿಶ್ಚಿತ ಕೆಲಸದ ಅವಧಿ, ವೈದ್ಯಕೀಯ ಮತ್ತು ಸಾಮಾಜಿಕ ಭದ್ರತೆಯ ನೆರವು ಪಡೆಯಲಿದ್ದಾರೆ.

ಇನ್ನು ಮುಂದೆ ಮಹಿಳಾ ಕಾರ್ಮಿಕರ ಒಪ್ಪಿಗೆ ಮತ್ತು ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ಗಣಿ ಸೇರಿದಂತೆ ಎಲ್ಲಾ ಕೈಗಾರಿಕೆಗಳಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಿವಾಹಿತ ಮಹಿಳಾ ಉದ್ಯೋಗಿಗಳು ತಮ್ಮ ಕುಟುಂಬದ ವ್ಯಾಖ್ಯೆಯಲ್ಲಿ ಪೋಷಕರನ್ನು ಸೇರಿಸಬಹುದು. ಈ ಮೂಲಕ ಅವರಿಗೂ ವಿಮೆ ಮತ್ತು ಇತರ ಸೌಲಭ್ಯಗಳು ದೊರೆಯಲಿವೆ. ಕೆಲಸದ ಅವಧಿಯನ್ನು ದಿನಕ್ಕೆ 8ರಿಂದ 12 ಗಂಟೆಗಳಿಗೆ ವಿಸ್ತರಿಸಲು ಹೊಸ ಕಾಯಿದೆ ಅವಕಾಶ ಮಾಡಿಕೊಟ್ಟಿದೆ. ಆದರೆ ವಾರಕ್ಕೆ ಒಟ್ಟು 48 ಗಂಟೆಗಳ ಕೆಲಸದ ಅವಧಿಯ ಮಿತಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಅಂದರೆ ಕಡಿಮೆ ಸಿಬ್ಬಂದಿಯೊಂದಿಗೆ ಹೆಚ್ಚು ಕೆಲಸ ತೆಗೆದುಕೊಳ್ಳಲು ಹೊಸ ಸಂಹಿತೆ ಕಂಪನಿಗಳಿಗೆ ಸ್ವಾತಂತ್ರ್ಯ ನೀಡಿದೆ.

ಮುಖ್ಯವಾಗಿ ಸಂಘಟಿತ ಮತ್ತು ಅಸಂಘಟಿತ ವಲಯದ ಪ್ರತಿಯೊಬ್ಬ ಕಾರ್ಮಿಕನಿಗೂ ಕೇಂದ್ರ ಸರಕಾರವು ನಿಗದಿಪಡಿಸಿದ 'ರಾಷ್ಟ್ರೀಯ ಮಟ್ಟದ ಕನಿಷ್ಠ ವೇತನ' ನೀಡುವುದು ಕಡ್ಡಾಯ. ಸದ್ಯ ಕರ್ನಾಟಕದಂತಹ ರಾಜ್ಯಗಳಲ್ಲಿ ಕನಿಷ್ಠ ವೇತನ ಪ್ರಮಾಣ 14 ಸಾವಿರದಿಂದ 20 ಸಾವಿರ ರು. ತನಕ ಇದ್ದು ಉಳಿದ ರಾಜ್ಯಗಳಿಗಿಂತ ಮೇಲ್ಮಟ್ಟದಲ್ಲಿದೆ. ಆದರೆ ಈಶಾನ್ಯ ರಾಜ್ಯಗಳು ಸೇರಿದಂತೆ ಕೆಲವು ರಾಜ್ಯಗಳಲ್ಲಿ ಇದು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಇನ್ನು ಮುಂದೆ ಕನಿಷ್ಠ ವೇತನವನ್ನು ಕೇಂದ್ರವೇ ನಿಗದಿ ಮಾಡಲಿದೆ.

ಪ್ಲಾಂಟೇಷನ್ ಕಾರ್ಮಿಕರನ್ನೂ ಈಗ ಸಾಮಾಜಿಕ ಭದ್ರತಾ ವ್ಯಾಪ್ತಿಗೆ ತರಲಾಗಿದೆ. 10ಕ್ಕಿಂತ ಹೆಚ್ಚು ಕಾರ್ಮಿಕರು ಅಥವಾ 5 ಅಥವಾ ಹೆಚ್ಚಿನ ಹೆಕ್ಟೇರ್‌ಗಳನ್ನು ಹೊಂದಿರುವ ತೋಟಗಳಿಗೆ ಕಾರ್ಮಿಕ ಕಾಯಿದೆ ಅನ್ವಯವಾಗಲಿದೆ. ಈ ಕಾರ್ಮಿಕರು ಮತ್ತು ಅವರ ಕುಟುಂಬಗಳು ಇಎಸ್‌ಐ ವೈದ್ಯಕೀಯ ಸೌಲಭ್ಯ, ರಿಯಾಯಿತಿ ದರದಲ್ಲಿ ಶಿಕ್ಷಣ ಸೌಲಭ್ಯಗಳನ್ನು ಪಡೆಯಬಹುದು. ತೋಟದ ಮಾಲೀಕರು ಇನ್ನು ಮುಂದೆ ರಾಸಾಯನಿಕಗಳನ್ನು ಸಿಂಪಡಿಸಲು, ಸಂಗ್ರಹಿಸಿ ಬಳಸಲು ತರಬೇತಿ ಪಡೆದ ಕಾರ್ಮಿಕರನ್ನಷ್ಟೇ ಬಳಸಿಕೊಳ್ಳಬೇಕಾಗಿದೆ. ಇವರಿಗೆ ತಕ್ಕ ರಕ್ಷಣಾ ಸಾಧನಗಳನ್ನು ಒದಗಿಸುವುದು ಮಾಲೀಕರ ಜವಾಬ್ದಾರಿಯಾಗಲಿದೆ.

ಕಾರ್ಮಿಕ ಕಾನೂನುಗಳ ಖಾತರಿ, ಭರವಸೆಯ ಹೊರತಾಗಿಯೂ ಬಹುತೇಕ ಕಾರ್ಮಿಕರು ಉದ್ಯೋಗ ಉಳಿಸಿಕೊಳ್ಳಲು ಆದ್ಯತೆ ನೀಡುತ್ತಾರೆ. ಕಾನೂನು, ನಿಯಮಗಳ ಉಲ್ಲಂಘನೆಯಾದರೂ ಹೆಚ್ಚಿನವರು ದೂರು ನೀಡಲು ಮುಂದಾಗುವುದಿಲ್ಲ. ಒಂದು ವೇಳೆ ದೂರು ನೀಡಿದರೆ ಉದ್ಯೋಗಕ್ಕೆ ಕುತ್ತಾಗುವ ಇಲ್ಲವೇ ಅನಗತ್ಯ ಕಿರುಕುಳಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚು. ಕಾರ್ಮಿಕ ಸಂಹಿತೆ ಕಾನೂನಿನ ಬೆದರಿಕೆಯಾಗದೆ ಕಾರ್ಮಿಕರು ಮತ್ತು ಉದ್ಯೋಗದಾತರು ವೃತ್ತಿ ಮತ್ತು ವ್ಯಕ್ತಿ ಗೌರವ, ಘನತೆಗಳೊಂದಿಗೆ ಪಾಲಿಸುವ ಸಂಹಿತೆಯಾಗಬೇಕಿದೆ.

ಅರ್ಥಹೀನವಾಗಿ ಬಡಬಡಿಸಿ ಬೂದಿಯಲ್ಲಿ ಹೊರಳಾಡುತ್ತಿರುವ ಜಾಮದಾರರು..!

ಎದುರೇಟು

ರವಿ ಹಂಜ್

vveditoped@gmail.com

ಭಾಗ–2

4. ಜಾಮದಾರರು, ''ಕಾಳಾಮುಖಿಗಳನ್ನು ಕುರಿತು ಹಂಜ ಒಪ್ಪಿಕೊಂಡ ಮೂರು ಅಂಶಗಳೆಂದರೆ: (ಅ) ■ ರಾಮಾನುಜಾಚಾರ್ಯರು ಕಾಳಾಮುಖಿಗಳನ್ನು ಕುರಿತು 'ಕಾಳಾಮುಖಿಗಳು ಸ್ಮಶಾನದಲ್ಲಿ ಸುಟ್ಟ ಹೆಣಗಳ ಬೂದಿಯನ್ನು ತಮ್ಮ ಮುಖಕ್ಕೆ ಬಳಿದುಕೊಳ್ಳುತ್ತಿದ್ದರು' ಎಂದು ಹಂಜ ಅವರೇ ಬರೆದ್ದಾರೆ. ಆದರೆ ಅದು ತಪ್ಪು ಎಂದು ಡೇವಿಡ್ ಲಾರೆಂಜನ್ ಬರೆದಿದ್ದಾರೆಂದು ಹಂಜ ಹೇಳಿದ್ದಾರೆ; ಮುಂದುವರಿದು, ಲಾರೆಂಜನ್ ಹೇಳಿದ್ದು ಸತ್ಯ ಮತ್ತು ರಾಮಾನುಜಾಚಾರ್ಯರು ಹೇಳಿದ್ದು ಸತ್ಯವಲ್ಲ ಎಂದಿದ್ದಾನೆ. ಆ ಬಗ್ಗೆ ನಾನು ಹೇಳುವುದಿಷ್ಟೇ: ರಾಮಾನುಜರು ಹೇಳಿದ್ದು ಹನ್ನೊಂದು–ಹನ್ನೆರಡನೆಯ ಶತಮಾನದಲ್ಲಿ, ಆಗಿನ್ನೂ ಬಹಳಷ್ಟು ಕಾಳಾಮುಖಿ ಮಠಗಳು ಅಸ್ತಿತ್ವದಲ್ಲಿ ಇದ್ದವು. ಅವರನ್ನು ನೋಡಿ ಬರೆದ ರಾಮಾನುಜಾಚಾರ್ಯರ ಮಾತು ಸತ್ಯವೋ ಅಥವಾ ಇತ್ತೀಚೆಗೆ ವಿದೇಶಿ ವಿದ್ವಾಂಸನೊಬ್ಬ ಪುಸ್ತಕಗಳನ್ನು ಓದಿ ಹೇಳಿದ ಮಾತು ಸತ್ಯವೋ ಓದುಗರೇ ನಿರ್ಧರಿಸಲಿ. ನಾನು ಹೇಳಿದ ಮಾತಿಗೆ ರಾಮಾನುಜಾಚಾರ್ಯರ ಅಭಿಪ್ರಾಯವೇ ಆಧಾರವಾಗಿದೆ'' ಎನ್ನುತ್ತಾರೆ.

● ನನ್ನ ಲೇಖನದಲ್ಲಿ, ಕಾಳಾಮುಖರ ಬಗ್ಗೆ ಅಪಾರ ಸಂಶೋಧನೆ ಮಾಡಿರುವ ಡೇವಿಡ್ ಲೊರೆಂಜನ್, 'ರಾಮಾನುಜಾಚಾರ್ಯರು ಕಾಪಾಲಿಕರನ್ನು ಕಾಳಾಮುಖರೆಂದು ಬಗೆದು, ''ಕಾಳಾಮುಖರು ತಲೆಬುರುಡೆಯ ಭಿಕ್ಷಾಪಾತ್ರೆಯಲ್ಲಿ ಮದ್ಯಮಾಂಸಾದಿ ಸೇವನೆ ಮಾಡುವರು. ಮೈತುಂಬಾ ಶವಗಳ ಚಿತಾಭಸ್ಮವನ್ನು ಬಳಿದುಕೊಳ್ಳುವರು'' ಎಂದಿದ್ದಾರೆ. ಈ ಲಕ್ಷಣಗಳೆಲ್ಲವೂ ಕಾಪಾಲಿಕರ ಲಕ್ಷಣಗಳು ಎಂದು ಗ್ರಾಂಥೈತಿಹಾಸಿಕ ಆಕರಗಳಿಂದ ತಿಳಿದು ಬರುತ್ತದೆ. ಅಲ್ಲದೇ ಕರ್ನಾಟಕ, ತಮಿಳುನಾಡು, ಆಂಧ್ರದಲ್ಲೆಲ್ಲಾ ಇರುವ ಶಿಲಾಶಾಸನ, ದತ್ತಿ ಶಾಸನಗಳಲ್ಲಿ ಇಂಥ ಯಾವ ಉಲ್ಲೇಖವೂ ಇಲ್ಲ. ಮೇಲಾಗಿ ಈ ಎಲ್ಲಾ ಶಾಸನಗಳಲ್ಲಿ ಕಾಳಾಮುಖರ ಸಮಾಜಮುಖಿ ಧಾರ್ಮಿಕ ಶಕ್ತಿಕೇಂದ್ರ, ಜ್ಞಾನಕೇಂದ್ರ, ಆಧ್ಯಾತ್ಮಿಕ ಶಾಲೆ, ಮಠ–ಮಾನ್ಯಗಳು ಮತ್ತು ರಾಜಗುರುತ್ವದ ವಿವರಣೆಗಳಿವೆ ಎಂದು ಹಲವಾರು ಶಿಲಾಶಾಸನಗಳನ್ನು ಉಲ್ಲೇಖಿಸಿ ಸ್ಪಷ್ಟವಾಗಿ ದಾಖಲಿಸಿದ್ದಾರೆ. ಹಾಗೆಯೇ ಮುಂದುವರಿಯುತ್ತಾ, ''ಪಂಥ ಶ್ರೇಷ್ಠತೆ ಮತ್ತು ಅಂದಿನ ಪಂಥ ಸ್ಪರ್ಧಾತ್ಮಕ ಸಮಾಜದಲ್ಲಿ ಉದ್ದೇಶಪೂರ್ವಕವಾಗಿ ರಾಮಾನುಜಾಚಾರ್ಯರು, ಕಾಳಾಮುಖರನ್ನು ಹೀಗೆ ಬೇಕೆಂದೇ ಕಾಪಾಲಿಕರನ್ನಾಗಿಸಿ ಅವಹೇಳನ ಮಾಡಿರುವ ಸಾಧ್ಯತೆಯೂ ಇದೆ'' ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಸಕ್ತರು ಡೇವಿಡ್ ಲೊರೆಂಜನ್ ಅವರ The Kapalikas and Kalamukhas: two lost Shaivite sects ಸಂಶೋಧನಾ ಕೃತಿಯನ್ನು ಪರಾಂಬರಿಸಬಹುದು. ಓರ್ವ ಅನ್ಯಪಂಥಿ ಹೇಳಿದ್ದನ್ನೂ ಮತ್ತು ಸಂಶೋಧಕ ಹೇಳಿದ್ದನ್ನೂ ಉಲ್ಲೇಖಿಸಿ ಶಿಲಾಶಾಸನಗಳು ಏನು ಹೇಳಿವೆ ಎಂದಿದ್ದೇನೆ. ಈ ಮೂಲಕ ರಾಮಾನುಜಾಚಾರ್ಯರ ಅಭಿಪ್ರಾಯಕ್ಕೆ ಬೆಂಬಲವಾಗಿ ಯಾವ ಸಾಕ್ಷ್ಯ ಪುರಾವೆಯೂ ಇಲ್ಲ, ಲೊರೆಂಜನ್ ಹೇಳಿರುವುದಕ್ಕೆ ಮಲ್ಲಾಪುರ, ಅರಸೀಕೆರೆ, ನೀಲಗುಂದ, ಹಂಪಿ, ಶಿರಾಳಕೊಪ್ಪ, ಬಳ್ಳಿಗಾವಿ, ಅಲ್ಲದೇ ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶಗಳಲ್ಲಿನ ಅಪರಿಮಿತ ಶಿಲಾಶಾಸನಗಳ ಪುರಾವೆಗಳಿವೆ. ಇವುಗಳ ಹೆಸರನ್ನು ಉಲ್ಲೇಖಿಸಲು ಹತ್ತು ಪುಟಗಳು ಬೇಕಾಗುತ್ತವೆ. ಇವೆಲ್ಲವನ್ನೂ ತಿರಸ್ಕರಿಸಿ ಅನುಕೂಲಸಿಂಧುವಾಗಿ ರಾಮಾನುಜಾಚಾರ್ಯರ ಅರ್ಥವನ್ನು ಶ್ರೀಯುತರು ಪರಿಗಣಿಸುವುದು 'ಬಿದ್ದರೂ ಮೀಸೆ ಮಣ್ಣಾಗಿಲ್ಲ' ಎಂದಾಗುತ್ತದಷ್ಟೇ!

ಇನ್ನು ಕೊಬ್ಬರಿಯ ಮಸಿಯನ್ನು ಭಸ್ಮದೊಂದಿಗೆ ವೀರಶೈವರು ತಮ್ಮ ಹಣೆಗೆ ಹಚ್ಚಿಕೊಳ್ಳುವುದು ವಾಡಿಕೆಯಾಗಿದ್ದರೆ ಅದು ಕಾಳಾಮುಖಿಗಳ/ಕಾಪಾಲಿಕರ ಬಳುವಳಿಯಲ್ಲದೇ ಮತ್ತೇನು? ಎನ್ನುವುದು ಬಾಲಿಶ ಪ್ರಶ್ನೆ. ನಿನ್ನೆ ಮೊನ್ನೆಯಷ್ಟೇ ನಡೆದ ಕಾರ್ತಿಕ ಮಾಸದ ಆಚರಣೆಗಳನ್ನು ಕಂಡರೆ ಈ ಕಪ್ಪಿನ ಮೂಲ ತಿಳಿಯುತ್ತದೆ. ಸಮಾಜವಿಮುಖಿ ಕಾಪಾಲಿಕರ ಬಗ್ಗೆ ಮತ್ತು ಸಮಾಜಮುಖಿ ಕಾಳಾಮುಖರ ಬಗ್ಗೆ ಶ್ರೀಯುತರು ಒಂದಿಂಚು ಕೆದರಿ ಸ್ಪಷ್ಟತೆ ಕಂಡುಕೊಳ್ಳಲಿ.

ಕಾಪಾಲಿಕರು ಮಾಡುತ್ತಿದ್ದ ವಾಮಾಚಾರದ ಲೈಂಗಿಕ ದೌರ್ಜನ್ಯದ ಮಸಿಯನ್ನು ಕಾಳಾಮುಖರಿಗೆ ಬಳಿದಿರುವ ಜಾಮದಾರರು ತಮ್ಮ ಪೂರ್ವಿಕರು ಸೇವೆ ಸಲ್ಲಿಸಿದ ಪೇಶ್ವೆ, ಫಡ್ನವೀಸರ ಲೈಂಗಿಕ ದೌರ್ಜನ್ಯಗಳ ಕಾರಣ ಪುಣೆಯಲ್ಲಿ ಉದಯಿಸಿದ ಬುಧವಾರ ಪೇಟೆ ಕುರಿತು, ದೇಸಾಯಿಗಳು, ಜಾಮದಾರರು, ಪಾಟೀಲರು, ಗೌಡರು ನಡೆಸಿದ ದೌರ್ಜನ್ಯಗಳ ಕಾರಣ ಸವದತ್ತಿಯಲ್ಲಿ ಬೃಹದಾಕಾರವಾಗಿ ಬೆಳೆದ ದೇವದಾಸಿ ಪದ್ಧತಿಯ ಬಗ್ಗೆ ಸ್ವಲ್ಪ ಆತ್ಮಶೋಧನೆ ಮಾಡಿಕೊಳ್ಳಲಿ.

5. ಜಾಮದಾರರು, ''ಕಾಳಾಮುಖಿಗಳು ರಾಜಗುರುಗಳಾಗುತ್ತಿದ್ದರು ಎಂದು ಹಂಜ ಹೇಳಿದ್ದು ಸತ್ಯ. ಅವರ ಒಂದು ಕಾಳಾಮುಖಿ ಮಠ ಕಾಶಿಯಲ್ಲಿತ್ತು. ಆ ಮಠದ ಕ್ರಿಯಾಸಕ್ತಿ ಗುರುಗಳು ವಿಜಯನಗರ ಸಾಮ್ರಾಜ್ಯ ಕಟ್ಟಲು ಹಕ್ಕಬುಕ್ಕರಿಗೆ ಮಾರ್ಗದರ್ಶನ ಮಾಡಿದ್ದೂ ಸತ್ಯ. ಆದರೆ, 'ವಿಜಯ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದರು' ಎನ್ನುವ ಎಷ್ಟು ಜನ ಬ್ರಾಹ್ಮಣ ಇತಿಹಾಸಕಾರರು ಮತ್ತು ಬ್ರಾಹ್ಮಣ ವಿದ್ವಾಂಸರು ರವಿ ಹಂಜ ಅವರ ಮಾತನ್ನು ಒಪ್ಪುತ್ತಾರೆ? ಅವರೇ ಮುಂದಿನ 'ಸಂಶೋಧನೆ' ಮಾಡಲಿ'' ಎನ್ನುತ್ತಾರೆ.

● ಬ್ರಾಹ್ಮಣ, ದಲಿತ, ಬಲಿತ ಯಾವುದೇ ವಿದ್ವಾಂಸರಿರಲಿ, ಅವರೆಲ್ಲರೂ ಐತಿಹಾಸಿಕ ಸಾಕ್ಷ್ಯಗಳನ್ನು ಮಾನ್ಯ ಮಾಡಲೇಬೇಕು. ಇದನ್ನು ಯಾವ ಬ್ರಾಹ್ಮಣ ವಿದ್ವಾಂಸರೂ ಖಂಡಿಸಿಲ್ಲ. ಪಠ್ಯ ಪರಿಷ್ಕರಣೆ ಮಾಡಿದರೆ ಅದನ್ನು ಯಾರೂ ತಳ್ಳಲಾಗದು. ಇಲ್ಲಿ ಅನವಶ್ಯಕವಾಗಿ 'ಬ್ರಾಹ್ಮಣ ವಿದ್ವಾಂಸರು ಒಪ್ಪುವರೇ' ಎನ್ನುವುದು ಕುಚೋದ್ಯವಷ್ಟೇ.

6. ಜಾಮದಾರರು, ''ಲಿಂಗಾಯತರು ಮತ್ತು ವೀರಶೈವರು ಹಣೆಗೆ ಹಚ್ಚಿಕೊಳ್ಳುವ ಬೂದಿ ಸುಟ್ಟ ಹೆಣಗಳದ್ದಲ್ಲ!!'' ಎಂದಿದ್ದಾರೆ.

● ಅಲ್ಲವೆಂದು ಯಾರು ಹೇಳಿದ್ದಾರೆ? ಮೈತುಂಬಾ ಶವಗಳ ಚಿತಾಭಸ್ಮವನ್ನು ಬಳಿದುಕೊಳ್ಳುವರು ಕಾಪಾಲಿಕರು ಎಂಬುದು ಗ್ರಾಂಥೈತಿಹಾಸಿಕ ಆಕರಗಳಿಂದ ತಿಳಿದುಬರುತ್ತದೆ. ಇದು ಕಾಳಾಮುಖ ಆಚರಣೆ ಎನ್ನುವುದು ಸತ್ಯಕ್ಕೆ ದೂರದ ಸಂಗತಿ ಎಂದೇ ನನ್ನ ಲೇಖನದಲ್ಲಿದೆ.

7. ಜಾಮದಾರರು, ''...ವೀರಶೈವರ ಆರಾಧ್ಯ ದೈವ ವೀರಭದ್ರ, ದೇವಸ್ಥಾನದಲ್ಲಿ ನಡೆಯುವ 'ಗುಗ್ಗಳ ಪೂಜೆ', 'ಶಸ್ತ್ರ ಪ್ರಯೋಗ', ಪುರವಂತಿಕೆ ಹಾಗೂ ಬೆಂಕಿಯ ಕೆಂಡದ ಮೇಲೆ ನಡೆಯುವುದನ್ನು ಯಾರು ಮಾಡುತ್ತಾರೆ?'' ಎಂದಿದ್ದಾರೆ.

● ಇದನ್ನು ಜಾಮ್ದಾರರು ನನ್ನನ್ನು ಕೇಳುವುದಕ್ಕಿಂತ ತಮ್ಮದೇ ಬಸವ ವಿಸ್ಮೃತಿ ಯಾತ್ರೆಯಲ್ಲಿ ಪುರವಂತಿಕೆ ವೇಷದ ವೀರಗಾಸೆ ಕುಣಿತವನ್ನು ಕೋಲಾರ, ಚಾಮರಾಜನಗರ, ಮೈಸೂರು ಮುಂತಾದೆಡೆ ಬಸವ ಸಂಸ್ಕೃತಿ ಎಂದು ಏರ್ಪಡಿಸಿದ್ದ ತಮ್ಮ ಬೆಂಬಲಿಗರನ್ನು ಕೇಳಬೇಕು. ಹಾಗೆಯೇ ವೀರಭದ್ರ, ಒಡಪು ಬಳಸಿ ಕೊಪ್ಪಳದಲ್ಲಿ ವಿಸ್ಮೃತಿ ಮೆರೆದ ನಿಜಗುಣಾನಂದ ಎಂಬ ತಮ್ಮ ವಿದೂಷಕ ವಾಗ್ಮಿಗಳನ್ನು ಕೇಳಿ ತಿಳಿದುಕೊಳ್ಳುವುದು ಉಚಿತ. ಅಂದಹಾಗೆ, ವೀರಭದ್ರನಿಗೆ ಕೆಂಡ ಹಾಯುವುದನ್ನು ಪ್ರಶ್ನಿಸುವ ಜಾಮದಾರರು ಪ್ರತಿ ವರ್ಷ ತಮ್ಮ ಊರಾದ ತೊರಗಲ್ಲಿನ ಹಿಂದೂ ದುರ್ಗಮ್ಮನ ಜಾತ್ರೆಗೆ ಹೋಗಿ ಭಕ್ತಿ ಸಮರ್ಪಿಸಿ ಅಲ್ಲಿ ದೇವರು ಮೈಮೇಲೆ ಬರುವ ಕಾಶೆವ್ವ ಪೂಜಾರಿ ಮಹಿಳೆಯ ಕಾಲಿಗೆ ಬಿದ್ದು ಶಾಸ್ತ್ರ ಕೇಳುತ್ತಾರೆ. ಅಲ್ಲಿ ದುರ್ಗಮ್ಮನ ಕೆಂಡ ಹಾಯುವುದನ್ನು ನೋಡಿ ಭಕ್ತಿಯಿಂದ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುತ್ತಾರೆ. ಇದು ಸೋಜಿಗದಲ್ಲಿ ಸೋಜಿಗ!! ತಾವು ಮಾಡಿದರೆ ಪ್ರೇಮ, ಅವರು ಮಾಡಿದರೆ ಬಲಾತ್ಕಾರ!

8. ಜಾಮದಾರರು, ''ಮರಣ ಸಂಸ್ಕಾರದಲ್ಲಿ ಹಂಜನ ಗುಂಪಿಗೆ ಸೇರಿದ ಅಯ್ಯನವರು ಹೆಣದ ತಲೆಯ ಮೇಲೆ ಮತ್ತು ತೊಡೆಯ ಮೇಲೆ ಏಕೆ ಕಾಲಿಡುತ್ತಾರೆ, ನೂತನ ವಟುಗಳಿಗೆ ದೀಕ್ಷೆ ನೀಡುವಾಗ ಅವರ ತಲೆಯ ಮೇಲೆ ದೀಕ್ಷೆ ನೀಡುವ ಅಯ್ಯನವರು ಏಕೆ ಕಾಲು ಇಡುತ್ತಾರೆ? ಹಾಗೂ ಸ್ಥಾವರಲಿಂಗ ಪೂಜೆ ಮಾಡುವಾಗ, ಆ ಲಿಂಗದ ಮೇಲೆ ಅಯ್ಯನವರು ತಮ್ಮ ಕಾಲು ಏಕೆ ಇಡುತ್ತಾರೆ ಹಾಗೂ ಅವರ ಕಾಲು ತೊಳೆದ ನೀರಿನಿಂದ ಸ್ಥಾವರಲಿಂಗದ ಪೂಜೆಯನ್ನು ಏಕೆ ಮಾಡುತ್ತಾರೆ ಎಂಬ ಬಗ್ಗೆ ಹಂಜ ಉತ್ತರಿಸಲಿ'' ಎಂದಿದ್ದಾರೆ.

● ಹಿಂದೂ ಸಂಸ್ಕೃತಿಯಲ್ಲಿ ''ಗುರುರ್ಬ್ರಹ್ಮ... ತಸ್ಮೈ ಶ್ರೀ ಗುರವೇ ನಮಃ'' ಎನ್ನುವಂತೆ ವೀರಶೈವ ಲಿಂಗವಂತರಲ್ಲಿಯೂ ಗುರುವಿಗೆ ಮಹತ್ತರ ಸ್ಥಾನವಿದೆ. ಈ ಕುರಿತು ಅಲ್ಲಮಪ್ರಭುವೇ ಹೀಗೆ ಹೇಳಿದ್ದಾನೆ: ''ಶ್ರೀಗುರುವೆ ಎನಗೆ ಕಾಯವು, ಶ್ರೀಗುರುವೆ ಎನಗೆ ಪ್ರಾಣವು, ಶ್ರೀಗುರುವೆ ಎನಗೆ ಇಹವು, ಶ್ರೀಗುರುವೆ ಎನಗೆ ಪರವು, ಶ್ರೀಗುರುವೆ ಎನಗೆ ಗತಿಯು, ಶ್ರೀಗುರುವೆ ಎನಗೆ ಮತಿಯು, ಶ್ರೀಗುರುಪಾದವೆ ಎನಗೆ ಘನತರ ಮುಕ್ತಿಗೆ ಕಾರಣವು. ಗುಹೇಶ್ವರ ಗುಹೇಶ್ವರಾ, ನಿಮ್ಮಾಣೆ ಇದು ಸತ್ಯ''.

ಅದೇ ರೀತಿ ಸಿದ್ಧರಾಮೇಶ್ವರನು, '' ಗುರುಪಾದೋದಕದಿಂದ ಲಿಂಗಮಜ್ಜನ ಮಾಡಬಹುದಲ್ಲದೆ, ಬರಿಯುದಕದಿಂದೆರೆಯಬಹುದೆ ಕರಸ್ಥಲದ ತೇಜವ? ಮೀರಿದ ಮೀರಿದ ಮಾರ್ಗ ಹೇಳಿದರಯ್ಯಾ, ಎನ್ನ ಗುರುಗಳು. ಅನ್ನಜಲವನೆರೆದೆನಾದಡೆ, ತಲೆ–ತಲೆದಂಡ ಕಪಿಲಸಿದ್ಧಮಲ್ಲಿಕಾರ್ಜುನ'' ಎಂದಿದ್ದಾನೆ.

ಇವೆರಡು ವಚನಗಳು ಜಾಮ್ದಾರರಿಗೆ ಅರ್ಥವಾದರೆ ಅವರ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಅರ್ಥವಾಗಿ ದೀಕ್ಷೆ ಪಡೆದು ನಿಜ ಲಿಂಗವಂತರಾಗಲಿಚ್ಛಿಸಿದರೆ ಎನಗಿಂತ ಗುರು ಅವರಿಗೆ ಸಿಕ್ಕಲಾರ! ಸಚಿವ ಶಾಮನೂರು ಮಲ್ಲಿಕಾರ್ಜುನರ ಕೈಗೆ ಪಾದ ಕೊಟ್ಟು ತೊಳೆಸಿಕೊಂಡು ಕುಡಿಸಿದ ಸಾಣೆಹಳ್ಳಿ ಶ್ರೀ, ಮರಣ ಸಂಸ್ಕಾರದಲ್ಲಿ ತಲೆಯ ಮೇಲೆ ಕಾಲಿಟ್ಟು ಹಲವಾರು ಬಾರಿ ಸಂಸ್ಕಾರ ಮಾಡಿದ ಹಂದಿಗುಂದ ಶ್ರೀ ಮತ್ತು ಅಥಣಿ ಮೋಟಗಿ ಮಠದ ಶ್ರೀ, ದೀಕ್ಷಾ ಸಮಯದಲ್ಲಿ ಕಾಲಿಟ್ಟ/ಇರಿಸಿಕೊಂಡ ಭಾಲ್ಕಿ ಪಟ್ಟದ್ದೇವರು ಇವರದೇ ಒಕ್ಕೂಟಿಗರಾಗಿ ಈ ಕ್ರಿಯಾವಿಧಿಗಳನ್ನು ಸದಾ ಆಚರಿಸುತ್ತಿದ್ದರೂ ಈವರೆಗೆ ಅವರನ್ನು ಜಾಮದಾರರು ಏಕೆ ಪ್ರಶ್ನಿಸಿಲ್ಲ? ಏಕೆಂದರೆ ಜಾಮದಾರರಿಗೆ ಇವರೆಲ್ಲ ಢೋಂಗಿಗಳು ಎಂದು ಮನವರಿಕೆಯಾಗಿದೆ. ಹಾಗಾಗಿಯೇ ನಿಜಗುರು ರವಿ ಹಂಜಗಿಮಠನ ಪಾದವನ್ನು ಬಯಸಿದ್ದಾರೆ ಎಂದು ಅವರ ಸುಪ್ತ ಮನಸ್ಸನ್ನು ಅರಿತು ಅವರ ಶಿಷ್ಯತ್ವವನ್ನು ಅಂಗೀಕರಿಸುತ್ತೇನೆ.

9. ಜಾಮದಾರರು, ''... 'ಅಯೋನಿಜ' ಶಬ್ದದ ಬಗ್ಗೆ ಹೊಸ ಸಿದ್ಧಾಂತವನ್ನೇ ದಾವಣಗೆರೆ ಮೂಲದ ಈಗಿನ ಶಿಕಾಗೋವಾಸಿ ರವಿ ಹಂಜಗೀಮಠ ಸೃಷ್ಟಿಸಿದ್ದಾರೆ. ಅದಕ್ಕೆ ಅವರು ಶರಣರ ಕೆಲವು ವಚನಗಳನ್ನು ಉದ್ಧರಿಸಿ ಅಮಾಯಕ ಓದುಗರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡಿದ್ದಾರೆ. 'ಅಯೋನಿಜ' ಅರ್ಥವನ್ನು ಮೂರು ತರಹದ ಮಲಗಳಿಂದ (ಅನವ, ಮಾಯಾ ಮತ್ತು ಕಾರ್ಮಿಕ) ಮುಕ್ತರಾಗುವ ಕ್ರಿಯೆಗಳಿಂದ ಶುದ್ಧರಾದವರಿಗೆ ವೀರಶೈವರು 'ಅಯೋನಿಜ' ಎನ್ನುವುದು ಒಂದು ವಿಚಿತ್ರ ವಿವರಣೆ. ಅದನ್ನು ತಾರ್ಕಿಕವಾಗಿ ಅರ್ಥೈಸುವುದು ಸರಿಯೆನಿಸುವುದಿಲ್ಲ'' ಇತ್ಯಾದಿಯಾಗಿ ಹೇಳಿದ್ದಾರೆ.

● ಮಲತ್ರಯಗಳನ್ನು ಕಳೆದುಕೊಂಡವ ಆಯೋನಿಜನಾಗುತ್ತಾನೆ ಎನ್ನುವುದು ವೀರಶೈವ ಕ್ರಿಯಾವಿಧಿಯ ಒಂದು ನಿಯಮ. ಹಾಗಾಗಿಯೇ ಸ್ವಾಮಿಯಾದವರಿಗೆ ಹುಟ್ಟಿನ ಹೆಸರನ್ನು ಅಳಿಸಿ ಹೊಸ ಹೆಸರನ್ನು ಕೊಡುವುದು. ಈ ಬಗ್ಗೆ ಶ್ರೀಯುತರು, ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನ ವಚನೇತರ ಗ್ರಂಥಗಳನ್ನು ಓದಬೇಕು. ಆಗದಿದ್ದರೆ ನನ್ನ ಹಿಂದಿನ ಲೇಖನಗಳನ್ನು ತಮ್ಮ ಕಾರಕೂನರಿಂದ ಓದಿಸದೆ ಖುದ್ದು ತಾವೇ ಓದಬೇಕಾಗಿ ವಿನಂತಿಸುತ್ತೇನೆ. ಮೇಲಿನ ಪ್ರಶ್ನೆಯಲ್ಲಿ ತಮ್ಮ ಕಾರಕೂನ ಬರೆದುಕೊಟ್ಟ ವಚನಾರ್ಥವನ್ನು ಬಳಸಿ ಜಾಮದಾರರು ತಮ್ಮನ್ನು ಮತ್ತಷ್ಟು ಬೆತ್ತಲಾಗಿಸಿಕೊಂಡಿದ್ದಾರಷ್ಟೇ. ಅವರು ಉಲ್ಲೇಖಿಸಿರುವ ಅಲ್ಲಮನ ಈ ವಚನದ ಪೂರ್ಣಪಾಠ ಹೀಗಿದೆ: ''ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳಳಿದು ನಿರ್ಮಲನಾದ ಶಿಷ್ಯ; ಕಾಯಜೀವದ ಭ್ರಾಂತುಸೂತಕ ಹಿಂಗಿ ನಿಶ್ಯಂಕನಾದ ಗುರು ಈ ಉಭಯ ಭಾವದೊಳಗೆ ಆವುದು ಮುಂದು ಆವುದು ಹಿಂದೆಂದರಿಯಬಪ್ಪುದು? ಕರಸ್ಥಲಕ್ಕೆ ಕಾರುಣ್ಯವ ಮಾಡಿದಡೆ ಮನಸ್ಥಲಕ್ಕೆ ಹಂಗಿಲ್ಲ. ಮನಸ್ಥಲದಲ್ಲಿ ಸೆರಗೊಡ್ಡಿ ಬೇಡಿರ್ದಡೆ ಕರಸ್ಥಲದ ಲಿಂಗ ಕೈಸಾರಿತ್ತು! ಗುರುಸ್ಥಲದ ನಿಲವು ಪರಸ್ಥಲದಲಡಗಿದರೆ ಭಾವ ಬಳಲಿತ್ತಿದೇನೊ (ಬೆರಗಾಯಿತ್ತು?) ಗುಹೇಶ್ವರಾ?''

ಈ ವಚನದ ಒಳಹೊರ ಬೆಡಗನ್ನೆಲ್ಲ ಸೋಸಿದರೂ ಇದರರ್ಥದಲ್ಲಿ ಯೋನಿಜ ಅಯೋನಿಜಕ್ಕೂ ಸಂಬಂಧವೇ ಇಲ್ಲ. 'ಸಂತೆಗೆ ಮೂರು ಮೊಳ ನೇಯ್ದಂತೆ' ಮಲತ್ರಯದ ಒಂದು ವಚನ ಹಾಕಿ ಏನೇನೋ ಬಡಬಡಿಸಿದಂತಿದೆ.

10. ಜಾಮದಾರರು, ''....ಬಸವಣ್ಣನವರ ಇಪ್ಪತ್ತ ನಾಲ್ಕು ವಚನಗಳಲ್ಲಿ ವೇದ ಶಾಸ್ತ್ರ ಪುರಾಣಗಳ ಕತೆಗಳನ್ನೇ ಬಸವಣ್ಣ ಬಳಸಿ ವೈದಿಕರ ವಾದವನ್ನು ತಿರಸ್ಕರಿಸಿದ್ದು ಸ್ಪಷ್ಟವಾಗಿದೆ. ಅವು ಒಂದು ತರಹದ ವಿಡಂಬನೆಯ ರೂಪದ ವಚನಗಳಾಗಿವೆ. ಅವುಗಳಲ್ಲಿಯ ವಿಡಂಬನೆಗಳನ್ನು ಬದಿಗಿಟ್ಟು ಅವೇ ಸಾಕ್ಷಿಗಳೆಂದು ಭಾವಿಸಿ ಶರಣರು ವೇದಗಳನ್ನು ಮತ್ತು ವೈದಿಕರ ಪುರಾಣ, ಶಾಸ್ತ್ರಗಳನ್ನು ನಂಬಿದರೆಂದು ಹಂಜರು ವಾದಿಸುವುದರ ಹಿಂದಿರುವ ದುರುದ್ದೇಶವು ಸರಳವಾಗಿ ಅರ್ಥವಾಗುತ್ತದೆ. ಅದು ಅವರ ಪಾಂಡಿತ್ಯದ ಆಳ ವಿಸ್ತಾರಗಳ ಹುಸಿಯನ್ನೇ ತೋರಿಸುತ್ತದೆ'' ಎನ್ನುತ್ತಾರೆ.

● ಮತ್ತೊಮ್ಮೆ 'ಸಂತೆಗೆ ಮೂರು ಮೊಳ'ದ ಕಾರಕೂನ ವ್ಯಾಖ್ಯಾನ. ಕಾಯವೇ ಕೈಲಾಸವಾದ ಕಾರಣ ಕಾಯದ ಯಾವ ಯಾವ ಅಂಗದಲ್ಲಿ ರುದ್ರನಿದ್ದಾನೆ ಎಂದು ವರ್ಣಿಸುತ್ತ ಇದನ್ನರಿಯಿರಿ ಎಂದಿದ್ದಾನೆ. ಜಾಮ್ದಾರರು ಕೊಟ್ಟಿರುವ ವಚನದ ಕೊನೆಯ ಸಾಲುಗಳು ಹೀಗಿವೆ: '' ಇಂತೀ ರುದ್ರರುಗಳು ತಮ್ಮ ... ತಮ್ಮಸ್ಥಾನಂಗಳೊಳಗಿಪ್ಪರಾಗಿ; ಇದನರಿಯದೆ ವಿಭೂತಿಯ ಧರಿಸಿದಡೆ ಕತ್ತೆ ಬೂದಿಯಲ್ಲಿ ಹೊರಳಿದಂತೆ ಕಾಣಾ ಕೂಡಲಚೆನ್ನಸಂಗಮದೇವಾ''. ಅಂದರೆ ಶ್ರೀಯುತರು ಹೀಗೆಲ್ಲ ಏನೇನೋ ಅರ್ಥಹೀನವಾಗಿ ಬಡಬಡಿಸಿ ಬೂದಿಯಲ್ಲಿ ಹೊರಳಾಡುತ್ತಿದ್ದಾರೆ ಎನ್ನಬಹುದಷ್ಟೇ.

11. ಜಾಮದಾರರು, ''ನಾನು ಸುವರ್ಣ ಟಿ.ವಿ.ಗೆ ನೀಡಿದ ಒಂದು ಗಂಟೆಯ ದೀರ್ಘ ಸಂದರ್ಶನದಲ್ಲಿ ಹೇಳಿದ ಕೆಲ ಸಂಗತಿಗಳನ್ನು ಹಂಜ ಹೇಗೆ ತಿರುಚಿದ್ದಾನೆಂಬುದನ್ನು ಆ ಸಂದರ್ಶನವನ್ನು ವೀಕ್ಷಿಸಿದ ನಾಲ್ಕು ಲಕ್ಷಕ್ಕೂ ಹೆಚ್ಚು ಜನರೇ ಹೇಳಬಲ್ಲರು. ಪ್ರತಿಯೊಬ್ಬ ಭಾರತೀಯ ನಿವಾಸಿಗೆ, ತನಗೆ ಸರಿಯೆನಿಸಿದ ಯಾವುದೇ ಧರ್ಮವನ್ನು ಆಚರಿಸುವ ಅಥವಾ ಯಾವುದೇ ಧರ್ಮವನ್ನು ಆಚರಿಸದಿರುವ ಹಾಗೂ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಧರ್ಮಾಂತರಗೊಳ್ಳುವ ಮೂಲಭೂತ ಹಕ್ಕನ್ನು ನೀಡಲಾಗಿದೆ. ಆ ಧರ್ಮವನ್ನು ಆಚರಿಸುವ, ಅದನ್ನು ಬೆಳೆಸುವ ಹಕ್ಕನ್ನೂ ನೀಡಲಾಗಿದೆ. ಅದನ್ನು ತನಗೆ ಬೇಕಾದಂತೆ ತಿರುಚಿ ಬರೆದು ಜನರನ್ನು ಎತ್ತಿಕಟ್ಟುವ ದುಷ್ಟ ಪ್ರಯತ್ನವು ಈ ಹಂಜ ಎಂಬ ಪೇಪರ ಟೈಗರ್‌ನದ್ದು. 1945ರಿಂದ ಈವರೆಗೆ 80 ವರ್ಷಗಳಿಂದ ಕರ್ನಾಟಕ ಮತ್ತು ಮಹಾರಾಷ್ಟ್ರದ ಲಿಂಗಾಯತರು ನಡೆಸುತ್ತಿರುವ ಹೋರಾಟಗಳು ಅಲ್ಪ ಸಂಖ್ಯಾತ ಧರ್ಮದ ಹೋರಾಟಗಳೇ ಆಗಿವೆ ಎಂದು ನಾನು ಆ ಸಂದರ್ಶನದಲ್ಲಿ ಹೇಳಿದ್ದನ್ನು ಈ ದುಷ್ಟ ಹೇಗೆ ತಿರುಚಿದ್ದಾನೆ ನೋಡಿ'' ಎಂದು ಅಲವತ್ತುಕೊಂಡಿದ್ದಾರೆ.

● ಈ ಕುರಿತ ನನ್ನ ಲೇಖನದ ಭಾಗ: ''ಕನ್ನಡದ ಟಿವಿ ಮಾಧ್ಯಮದ ಅದೇ ಸಂವಾದದಲ್ಲಿ ಮುಂದುವರಿದು ಶ್ರೀ ಜಾಮ್ದಾರರು, 'ನಮ್ಮದು 'ಲಿಂಗಾಯತ ಸ್ವತಂತ್ರ ಧರ್ಮ'ಕ್ಕಾಗಿ ನಡೆಸುತ್ತಿರುವ ಹೋರಾಟವಲ್ಲ, ಇದು ಮೈನಾರಿಟಿ ಸ್ಟೇಟಸ್ಸಿಗಾಗಿ ನಡೆಸುತ್ತಿರುವ ಹೋರಾಟ ಎಂದರು'' ಎಂದಿದ್ದೇನೆ. ಅದನ್ನೇ ಮೇಲೆ ಜಾಮದಾರರು ಅನುಮೋದಿಸಿದ್ದಾರೆ. ನಂತರದ ಭಾಗ ದಲ್ಲಿ ನಾನು, ''ಕಳೆದ ಬಾರಿಯ ಕಾಂಗ್ರೆಸ್ ಸರಕಾರದ ಅವಧಿಯಿಂದಲೂ 'ಲಿಂಗಾಯತ ಸ್ವತಂತ್ರ ಧರ್ಮ' ಎಂದೇ ಕಿಂದರಿ ಊದುತ್ತಾ ಹೋರಾಟ ಕಟ್ಟಿಕೊಂಡು ಬಂದ 'ಕಿವಿಯೂದುವ ಕಾಯಕವಾಹಿ ಅನುವಂಶೀಯತೆ'ಯ ಜಾಮ್ದಾರರು, ಈಗ ಇದ್ದಕ್ಕಿದ್ದಂತೆ ಒಂದು ಟಿವಿ ಸಂವಾದ/ ಸಂದರ್ಶನದಲ್ಲಿ ತಮ್ಮ ಹೋರಾಟಗಾರರನ್ನೆಲ್ಲಾ ಕೈಬಿಟ್ಟು, ''ನಮ್ಮದು ಸ್ವತಂತ್ರ ಧರ್ಮಕ್ಕಾಗಿ ನಡೆಸುತ್ತಿರುವ ಹೋರಾಟವಲ್ಲ, ಏಕೆಂದರೆ ಸ್ವತಂತ್ರ ಧರ್ಮ ಎನ್ನುವುದು ಸಾಂವಿಧಾನಿಕವಾಗಿ ಎಂದೆಂದಿಗೂ ಸಾಧ್ಯವಿಲ್ಲ, ಹಾಗಾಗಿ ನಮ್ಮದು ಮೈನಾರಿಟಿ ಸ್ಟೇಟಸ್ಸಿಗಾಗಿ ನಡೆಸುತ್ತಿರುವ ಹೋರಾಟ!'' ಎಂದರು. ಈ ವಾಕ್ಯವನ್ನು ''ಅಖಂಡ ವೀರಶೈವ ಲಿಂಗವಂತ ಸಮಾಜವು ನಾಲ್ಕು ಇಂಚು ಆಳಕ್ಕಿಳಿದು ನೋಡಿದಾಗ ಗೋಚರಿಸುವುದು, ಕೇವಲ ಮತ್ತು ಕೇವಲ, ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದವತ್ತತ್ತ, ಬ್ರಹ್ಮಾಂಡದಿಂದವತ್ತತ್ತದ, ಅಗಮ್ಯ ಅಗೋಚರ ಅಪ್ರತಿಮ ಧರ್ಮದ್ರೋಹ! ಪ್ರಜಾಪತಿ ಕೊಟ್ಟ ಗುರಿ ತಲುಪಿದನ್ನಕ್ಕ, ಚುಳುಕಾದ ಲಿಂಗಾಯತ ಪ್ರತ್ಯೇಕ ಧರ್ಮ!'' ಎಂದಿದ್ದೇನೆ. ಇದರಲ್ಲಿ ಯಾವುದನ್ನು ತಿರುಚಿದ್ದೇನೆ? ಮೊನ್ನೆಯ ಸಂದರ್ಶನದವರೆಗೆ ಶ್ರೀಯುತರು ಲಿಂಗಾಯತ ಪ್ರತ್ಯೇಕ ಧರ್ಮ ಎಂದು ಹೋರಾಡಿಲ್ಲವೇ?! ಇದು 'ಅರವತ್ತಕ್ಕೆ ಅರುಳು ಮರುಳು' ಎನ್ನಬೇಕಷ್ಟೇ. ಇನ್ನು ಪೇಪರ್ ಟೈಗರ್ ಎಂದಿರುವ ಶ್ರೀಯುತರಿಗೆ ತಮ್ಮ ಲಾಟ್ ಫೂಟ್ ಇಂಗ್ಲಿಷ್ ಸಾಹೇಬರ A pen is mightier than a sword ಎಂಬ ಆಪ್ಯಾಯಮಾನ ಗಾದೆಮಾತು ತಿಳಿಯದೇ?! ನನ್ನನ್ನು ಅಸಲಿ ಟೈಗರ್ ಆಗಿಯೇ ನೋಡಬೇಕೆನಿಸಿದರೆ ಅದೇನೂ ನನಗೆ ಹೊಸತಲ್ಲ, ನಾನು ಅಪ್ಪಟ ಗಂಡುಮೆಟ್ಟಿನ ನಡುನಾಡಿನ ದಾವಣಗೆರೆಯವನು. ಅಮೆರಿಕೆ ಯಲ್ಲಿ ಮೂವತ್ತು ವರ್ಷ ಕಳೆದಿದ್ದರೂ ನನ್ನ ಅಪ್ಪಟ ದೇಸಿ ಸೊಗಡಿನ ಜನಪದ ಭಾಷೆಯನ್ನು ನಿರರ್ಗಳವಾಗಿ ಬಳಸಬಲ್ಲೆ, ಹಾಗೆ ನನ್ನನ್ನು ಮಾತನಾಡಲು ವೃಥಾ ಪ್ರಚೋದಿಸಿ ಹುಲಿಯ ವತಾರವನ್ನು ಜಾಮದಾರರ ತುಮಕೂರಿನ ಶಿಷ್ಯನೊಬ್ಬ ಧ್ವನಿಮುದ್ರಿಸಿಕೊಂಡು ಯುಟ್ಯೂಬಿನಲ್ಲಿ ಬಿಟ್ಟಿದ್ದಾನೆ. ಘನಸರಕಾರದ ತೊದಲು ಕನ್ನಡದ ಪ್ರಸ್ತುತ ಗೊಂದಲ, ಮಾನಸಿಕ ತುಮುಲ, ಬೇಗುದಿ, ಪರಿತ್ಯಕ್ತ ಭಾವ ಇವೆಲ್ಲದರಿಂದ ಬಳಲುತ್ತಿರುವ ಶ್ರೀಯುತರು ಕೇಳಿಸಿಕೊಂಡು ಆನಂದಿಸಲಿ ಎಂದು ಹಾರೈಸುತ್ತೇನೆ.

12. ಜಾಮದಾರರು, ''ಮೂರು ಸಲ ಅತ್ಯಂತ ದುಃಖಿಮಯ ಕನಿಕರ ಪ್ರಸಂಗಗಳಲ್ಲಿ ನಾನು ಮೂರು ಜನ ಮಹಿಳಾ ತಹಸೀಲ್ದಾರರ ಮನೆಗೆ ಹೋಗಿ ಸಾಂತ್ವನ ಹೇಳಿಬಂದಿದ್ದನ್ನು ತಿರುಚಿ, ನನ್ನ ಚಾರಿತ್ರ್ಯಹರಣ ಮಾಡುವಂತೆ ಬರೆದಿದ್ದನ್ನು ಖಂಡಿಸುತ್ತೇನೆ. ಅಂಥದೇ ಅನೇಕ ಪ್ರಸಂಗಗಳಲ್ಲಿ ಹತ್ತಾರು ಪುರುಷ ತಹಸೀಲ್ದಾರರುಗಳ ಮತ್ತು ಇತರ ಕೆಳಮಟ್ಟದ ಅಧಿಕಾರಿಗಳ ಮನೆಗಳಿಗೆ ಹೋಗಿ ಸಾಂತ್ವನ ಹೇಳಿ ಬಂದಿದ್ದನ್ನು ಏಕೆ ಈ ದುಷ್ಟ ಹೇಳಲಿಲ್ಲ? ಈ ರೀತಿಯ ಲೇಖನಗಳಿಗೆ ಅವಕಾಶವನ್ನು ಏಕೆ ಶ್ರೀ ವಿಶ್ವೇಶ್ವರ ಭಟ್ಟರು ನೀಡುತ್ತಿದ್ದಾರೆ ಎಂಬುದೇ ಸೋಜಿಗವಾಗಿದೆ'' ಎಂದು ಸೋಜಿಗಗೊಂಡಿದ್ದಾರೆ.

● ಈ ಕುರಿತಾದ ನನ್ನ ಲೇಖನದ ಭಾಗ: ''ಶ್ರೀಯುತರು ಕಂದಾಯ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾಗ ಕಾರ್ಯನಿಮಿತ್ತ ಉತ್ತರ ಕರ್ನಾಟಕದ ಕಡೆ ಹೋದಾಗ ಮಹಿಳಾ ತಹಸೀಲ್ದಾರರಿದ್ದರೆ ಅವರನ್ನು ಕಚೇರಿಯಲ್ಲಿ ಭೇಟಿ ಮಾಡದೆ ಸರಕಾರಿ ನಡವಳಿಕೆ ಸಂಹಿತೆ ಬಾಹಿರವಾದರೂ ಸರಿಯೇ, ಹೆಣ್ಣುಮಕ್ಕಳನ್ನು ಅವರ ನೆಮ್ಮದಿತಾಣವಾದ ಅವರವರ ಮನೆಗಳಲ್ಲಿ ಭೇಟಿ ಮಾಡಿ ಚರ್ಚಿಸುತ್ತಿದ್ದರೆಂಬ ಸಾಮಾಜಿಕ ಕಳಕಳಿಗೆ ಹೆಸರುವಾಸಿಯಾಗಿದ್ದರು. ಕಾರ್ಯನಿಮಿತ್ತವಾಗಿ ಮನೆಗಳಿಗೆ ಹೋಗುವಷ್ಟು ಸಮಯಾವಕಾಶವಿಲ್ಲದಾಗ ಶ್ರೀಯುತರು ಮಹಿಳಾ ಅಧಿಕಾರಿಗಳನ್ನು ತಾವು ಉಳಿದುಕೊಂಡ ಸರಕಾರಿ ಪ್ರವಾಸಿ ಮಂದಿರಗಳಿಗೆ ಕರೆಸಿ ಆಪ್ತತೆಯಿಂದ ಪಕ್ಕದಲ್ಲೇ ಕೂರಿಸಿಕೊಂಡು ಕಚೇರಿಯ ಕಾರ್ಯಗಳ ಬಗ್ಗೆ ಸಲಹೆ ಸೂಚನೆ ನೀಡುತ್ತಿದ್ದರು ಎಂಬ ವಿಶಿಷ್ಟ ಮಹಿಳಾ ಕಾಳಜಿಗೆ ಖ್ಯಾತರಾಗಿದ್ದರು. ಇದಿಷ್ಟು ಅವರ ಎದ್ದುಗಾಣುವ ಮುಕುಟಮಣಿ ವ್ಯಕ್ತಿತ್ವವಾದ ಕಾರಣ ಇಲ್ಲಿ ಉಲ್ಲೇಖಿಸಲಾಗಿದೆಯಷ್ಟೇ'' ಎಂದಿದ್ದೇನೆ. ಇಲ್ಲಿ ಚಾರಿತ್ರ್ಯಹರಣ ಮಾಡುವಂಥ ವಿಷಯ ಏನಿದೆ? ಕುಂಬಳಕಾಯಿ ಎನ್ನದೇನೇ ಹೆಗಲು ಏಕೆ ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ, ದೇಸಾಯಿ ಕಂ ಜಾಮ್ದಾರ ಕಾಯಕವಾಹಿ ಅನುವಂಶೀಯ ಸಾಹೇಬರು? ಅಂದಹಾಗೆ ಜಾಮ್ದಾರ ಸಾಹೇಬರು ಅಪರಾಧಶಾಸ್ತ್ರದಲ್ಲಿ ಪದವಿ ಪಡೆದವರು! ಕಲಿತ ವಿದ್ಯೆಗೆ ಹೀಗೆ ಕುಂಬಳಕಾಯಿ ನೈವೇದ್ಯ ಮಾಡಿಬಿಟ್ಟರೆ ಹೇಗೆ, ದೇಸಾಯಿಗಳೇ!

ಅಂದಹಾಗೆ ವಿಸ್ಮೃತಿ ಅಭಿಯಾನದ ಸಮಾರೋಪ ಸಮಾರಂಭದ ವೇದಿಕೆ ಮೇಲಿದ್ದ ಲೈಂಗಿಕಾಸಕ್ತ ವಿರಕ್ತರಲ್ಲದೆ ಪರಸತಿಯರನ್ನೇ ಬಯಸುವ ಧನ್ನೂರ, ಬಾಯಲ್ಲಿ ಬಸವ ಎನ್ನುತ್ತ ಮನದಲ್ಲಿ ಮೆಕ್ಕಾ ನೆನೆಯುತ್ತ ಹೆಂಗಳೆಯರ ಇನ್‌ಬಾಕ್ಸಿಗೆ ಹೋಗಿ ಗಂಡನಿಂದ ತೃಪ್ತಿ ಸಿಕ್ಕಿದೆಯೇ ಎಂದು ಕೇಳುವ ಬಿಜಾಪುರಿ ಮುರ್ಗಾ (ನನ್ನ ಬಳಿ ಸ್ಕ್ರೀನ್ ಶಾಟ್ ಸಾಕ್ಷಿ ಇದೆ), ಗದುಗಿನ ಗಣೇಶ ಹಾಸ್ಟೆಲ್ಲಿನಲ್ಲಿದ್ದಾಗ ಅಪ್ರಾಪ್ತ ವಯಸ್ಸಿನ ಯುವತಿಗೆ ಲೈಂಗಿಕ ಕಿರುಕುಳ ಕೊಟ್ಟು ಹಿಗ್ಗಾಮುಗ್ಗಾ ತದುಕಿಸಿಕೊಂಡಿದ್ದ ನಿಮ್ಮ ಮಾಧ್ಯಮ ಸಂಚಾಲಕ (ಪ್ರತ್ಯಕ್ಷದರ್ಶಿಗಳು ನನ್ನ ಸಂಪರ್ಕದಲ್ಲಿದ್ದಾರೆ).... ಒಬ್ಬರೇ ಇಬ್ಬರೇ? ಎಲ್ಲರೂ ಅವರೇ! ಅವರಂತೆಯೇ ನೀವೂ ಎಂದುಕೊಂಡರೇಕೆ?

ಒಂದು ವೇಳೆ, ಜಾಮದಾರರು ರಾಯಚೂರಿನ ಜಿಲ್ಲಾ ಪಂಚಾಯತ್ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್ಲುಗಳಲ್ಲಿ ಅಡುಗೆ ಮಾಡುವ ಆಯ್ದ ದಲಿತ ಹಿಂದುಳಿದ ವರ್ಗಗಳ ಹಂಗಾಮಿ ಮಹಿಳಾ ಸಿಬ್ಬಂದಿಯನ್ನು ಕಕ್ಕುಲಾತಿಯಿಂದ ಒಬ್ಬಂಟಿಯಾಗಿರುತ್ತಿದ್ದ ತಮ್ಮ ಮನೆಗೆ ಅಡುಗೆ ಮಾಡಲು ಕರೆಸಿಕೊಳ್ಳುತ್ತಿದ್ದರು ಎನ್ನುವ 'ಕುಂಬಳ 'ಕಾಯಿ' ಆರೋಪ ಮಾಡಿದರೆ ಇನ್ನೇನೇನು ಮುಟ್ಟಿ ತಟ್ಟಿ ನೋಡಿಕೊಳ್ಳುವಿರಿ? ರಾಯಚೂರಿನಲ್ಲಿ ಕೇವಲ ನಾಲ್ಕು ತಿಂಗಳ ಕಾಲವಿದ್ದೇ ಅಲ್ಲಿನ ಡಿಎಸ್‌ಎಸ್ ತುಂಬಾ ಮಹಿಳಾ ಕಕ್ಕುಲಾತಿಗೆ ಖ್ಯಾತರಾಗಿದ್ದರು ಎಂದರೆ...ಬಸವಾ ಬಸವಾ! ಹಂಗಾಮಿ ನೌಕರಿ ಕಾಯಂ ಆದೀತೆಂದೋ ಮಗದೊಂದೋ ಆಶೆಯಿಟ್ಟುಕೊಂಡು ಅಡುಗೆ ಬಡಿಸಿದವರ ಪಾಡೆಂತೋ! ಇದು ಕಕ್ಕುಲಾತಿಯೋ ಅಧಿಕಾರ ದುರುಪಯೋಗವೋ, ರಾಯಚೂರು ನರಸಪ್ಪನೇ ಬಲ್ಲ!

ಅಂದ ಹಾಗೆ ಈ ಬಗ್ಗೆ 'ಕಕ್ಕುಲಾತಿ ಜಮಾವಣೆಗಳು' ಎಂಬ ಗ್ರಂಥವನ್ನೇ ಬರೆಯುವಷ್ಟು ಸಾಕ್ಷಿಭೂತ ಮಾಹಿತಿ ನನ್ನಲ್ಲಿದೆ.

ಪ್ರಸ್ತುತ ವರ್ತಮಾನದಲ್ಲಿ ನಿಷ್ಪಕ್ಷಪಾತ ಪತ್ರಿಕಾ ಧರ್ಮವನ್ನು ಆಚರಿಸುತ್ತ ವಸ್ತುನಿಷ್ಠ, ಸತ್ಯನಿಷ್ಠ, ಸಮಾಜಮುಖಿ ಲೇಖನಗಳನ್ನು ಕೊಡುತ್ತಿರುವ ಪತ್ರಿಕೆ, 'ವಿಶ್ವವಾಣಿ'. ವಿಶ್ವವಾಣಿಯ ಕಾರಣವಾಗಿಯೇ ಇಂದು ಅಖಂಡ ವೀರಶೈವ ಲಿಂಗವಂತ ಸಮಾಜವು ಒಗ್ಗೂಡಿದೆ. ಯಾವ ಮಠ–ಮಾನ್ಯಗಳು, ಮಹಾಸಭಾಗಳು ಮಾಡದ ಧರ್ಮರಕ್ಷಣಾ ಕಾರ್ಯವನ್ನು ಮಾಡಿದೆ. ಹಾಗಾಗಿ ಶ್ರೀಯುತ ಜಾಮದಾರರು ತಮ್ಮಲ್ಲಿ ಆತ್ಮಲಿಂಗವನ್ನೇನಾದರೂ ಹೊಂದಿದ್ದರೆ ತಮ್ಮ ಭಂಜಕ ಪ್ರವೃತ್ತಿಯನ್ನು ತಕ್ಷಣಕ್ಕೆ ಖೈದು ಮಾಡಿ 'ವಿಶ್ವವಾಣಿ' ಸಂಪಾದಕರಾದ ವಿಶ್ವೇಶ್ವರ ಭಟ್ಟರಿಗೆ ಋಣಿಯಾಗಿರಬೇಕು...

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:315

ಶ್ರೀರಾಮಮಂದಿರ ಪೂರ್ಣ: ಧರ್ಮಧ್ವಜಾರೋಹಣ

ಮಂಗಳವಾರ ಮಧ್ಯಾಹ್ನ 12ರ ಅಭಿಜಿತ್ ಲಗ್ನದಲ್ಲಿ ತ್ರಿಕೋನಾಕೃತಿ ಧ್ವಜ ಆರೋಹಣ | ಪ್ರಧಾನಿ ನರೇಂದ್ರ ಮೋದಿ, ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾಗಿ | 500 ವರ್ಷಗಳ ಕನಸು ನನಸಾದ ಕ್ಷಣ, ಧ್ವಜಕ್ಕೆ ಕೈಮುಗಿದು ನಿಂತ ಮೋದಿ ಭಾವುಕ

ಅಯೋಧ್ಯೆ: 500 ವರ್ಷಗಳ ಕನಸು ನನಸಾಗಿದೆ, ಭಾರತದ ಪ್ರತಿಷ್ಠೆ, ಸಂಸ್ಕೃತಿಯ ಹಿರಿಮೆಯ ಪುನರ್ ಸ್ಥಾಪನೆಯಾಗಿದೆ. ಅಯೋಧ್ಯೆಯಲ್ಲಿನ ಶ್ರೀರಾಮ ಜನ್ಮಭೂಮಿಯಲ್ಲಿ ಭವ್ಯ ಶ್ರೀರಾಮ ಮಂದಿರದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಅದನ್ನು ವಿಶಾಲ ಕೇಸರಿ ಧ್ವಜದ ಆರೋಹಣದ ಮೂಲಕ ಇಡೀ ಜಗತ್ತಿಗೇ ಮಂಗಳವಾರ ಮಧ್ಯಾಹ್ನ ದೊಡ್ಡದಾಗಿ ಸಾರಿ ಹೇಳಲಾಗಿದೆ. ಶ್ರೀರಾಮಚಂದ್ರ ಭಗವಾನರ ಶೌರ್ಯದ ಸಂಕೇತವಾಗಿ ತ್ರಿಕೋನಾಕೃತಿಯ ಕೇಸರಿ ಧ್ವಜ ಶ್ರೀರಾಮ ಮಂದಿರದ ಶಿಖರದ ಮೇಲೆ 191 ಅಡಿಗಳಷ್ಟು ಎತ್ತರದಲ್ಲಿ ರಾರಾಜಿಸಲಾರಂಭಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರೇ ಖುದ್ದಾಗಿ ಶ್ರೀರಾಮ ಮಂದಿರದಲ್ಲಿ ಹಾಜರಿದ್ದು, ಮಂಗಳವಾರ ಮಧ್ಯಾಹ್ನ 12ರ ವೇಳೆ ಅಭಿಜಿತ್ ಮುಹೂರ್ತದಲ್ಲಿ ಧ್ವಜಾರೋಹಣ ಕಾರ್ಯವನ್ನು ನೆರವೇರಿಸಿ, ಭಕ್ತಿಭಾವದಿಂದ ಕೈಮುಗಿದರು.

ಕೇಸರಿ ಧ್ವಜವನ್ನು ಶ್ರೀರಾಮ ಮಂದಿರದ ಗರ್ಭಗೃಹದ ಬಲು ಎತ್ತರದ ಗೋಪುರದ ಮೇಲೆ ಹಾರಾಡುವಂತೆ ಮಾಡಿದರು. ಕೆಲವು ನಿಮಿಷಗಳ ಕಾಲ ತಲೆ ಎತ್ತಿ, ಆಕಾಶದತ್ತ ಮುಖಮಾಡಿ, ತುಸು ಹೆಚ್ಚೇ ಎನ್ನುವಂತೆ ಭಾವುಕರಾಗಿ ನಿಂತು ಧ್ವಜವನ್ನೇ ದಿಟ್ಟಿಸುತ್ತಾ ನಿಂತರು. 500 ವರ್ಷಗಳ ದಾಸ್ಯದ ಭಾವ ಇಂದಿಗೆ ಕೊನೆಗೊಂಡಿದೆ. ಭಾರತೀಯರು ಹೆಮ್ಮೆಯಿಂದ ತಲೆ ಮೇಲೆತ್ತಿ ನಿಲ್ಲುವಂತಾಗಿದೆ. ಮುಂದಿನ 10 ವರ್ಷಗಳಲ್ಲಿ ಪ್ರಗತಿಯೆಡೆಗೆ ಹೆಜ್ಜೆ ಹಾಕುತ್ತಾ ವೇಗವಾಗಿ ಸಾಗಬೇಕಿದೆ ಎಂದು ಹೇಳಿದರು.

ಬೃಹತ್ ಕೇಸರಿ ಧ್ವಜವನ್ನು ಶ್ರೀರಾಮಲಲ್ಲಾ ಗರ್ಭಗೃಹದ ಶಿಖರಕ್ಕೇರಿಸಿದ ಬಳಿಕ ಭಕ್ತಿಭಾವದಿಂದ ಕೈಮುಗಿದು ನಿಂತ ಪ್ರಧಾನಿ ಮೋದಿ.

2047 ಭಾರತ ಮಾತೆಯ ಸ್ವಾತಂತ್ರ್ಯದ 100 ವರ್ಷ. ಅಷ್ಟರೊಳಗೆ ಭಾರತ ದೇಶದ ಸಂಪೂರ್ಣ ಅಭಿವೃದ್ಧಿ ಹೊಂದಿದ ದೇಶವಾಗಬೇಕಿದೆ ಎಂಬ ಸಂಕಲ್ಪ ತೊಡುವಂತೆ ದೇಶವಾಸಿಗಳಿಗೆ ಕರೆ ನೀಡಿದರು.

ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು, ಶ್ರೀರಾಮಮಂದಿರದ ಆವರಣದಲ್ಲೇ ಹೊಸದಾಗಿ ನಿರ್ಮಾಣಗೊಂಡಿರುವ ಸಪ್ತ ಋಷಿಗಳು, ಶೇಷನಾಗ(ಲಕ್ಷ್ಮಣ), ಶಬರಿ ಮಾತೆ, ನಿಷಾದ ರಾಜರ ಮಂದಿರಗಳಿಗೆ ತೆರಳಿ ಪುಷ್ಪಾರ್ಚನೆ ಮಾಡಿ ಕೈಮುಗಿದು ನಮಿಸಿದರು. ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರೂ ಎಲ್ಲಾ ಧಾರ್ಮಿಕ ವಿಧಿವಿಧಾನಗಳಲ್ಲಿ ಭಾಗಿಯಾಗಿದ್ದರು. ನೂರಾರು ಸಂಖ್ಯೆಯಲ್ಲಿ ಸಾಧು-ಸಂತರು, ಸಾವಿರಾರು ಸಂಖ್ಯೆಯಲ್ಲಿ ಶ್ರೀರಾಮ ಭಕ್ತರು ಧ್ವಜಾರೋಹಣ ಕಾರ್ಯಕ್ರಮವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಭಾವೋದ್ವೇಗ: ಮೋದಿ ಕೈ ನಡುಕ

ಅಯೋಧ್ಯೆ: ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಹಾಜರಿದ್ದವರೆಲ್ಲರಲ್ಲಿ ಭಾವನೆಗಳ ಮಹಾಪೂರವೇ ಹರಿಯಿತು. ಪ್ರಧಾನಿ ನರೇಂದ್ರ ಮೋದಿ ಅವರು ರಾಮ ಮಂದಿರದ ಶಿಖರದ ಮೇಲೆ 'ಧರ್ಮಧ್ವಜ' ಹಾರಿಸಿ, 'ಮಂದಿರದ ನಿರ್ಮಾಣ ಕಾರ್ಯ ಇಂದಿಗೆ ಪೂರ್ಣವಾಯಿತು' ಎಂದು ಜಗತ್ತಿಗೆ ಸಾರಿದರು. ಜನರೂ ಭಕ್ತಿಭಾವದಲ್ಲಿ ಮಿಂದೆದ್ದರು. ಪ್ರಧಾನಿ, ಆರ್‌ಎಸ್‌ಎಸ್ ಪ್ರಮುಖ, ಸಿಎಂ ಯೋಗಿ, ಸಾಧು-ಸಂತರು, ಭಕ್ತಗಣರನ್ನು ಸೆರೆಹಿಡಿಯುತ್ತಿದ್ದ ಕ್ಯಾಮೆರಾಗಳನ್ನು ಹೆಚ್ಚು ಸೆಳೆದಿದ್ದು ಧ್ವಜಾರೋಹಣದ ಆ ನಿರ್ದಿಷ್ಟ ಕ್ಷಣ. ಧ್ವಜಾರೋಹಣ ಪ್ರಧಾನಿ ಮೋದಿ ಅವರು ಶಿಖರದಲ್ಲಿ ಪಟಪಟಿಸುತ್ತಿದ್ದ ಕೇಸರಿ ಧ್ವಜವನ್ನೇ ದಿಟ್ಟಿಸುತ್ತಾ ಕೈ ಮುಗಿದು ನಿಂತಿದ್ದಾಗ ಅವರ ಕೈಗಳು ಲಘುವಾಗಿ ಕಂಪಿಸುತ್ತಿದ್ದುದನ್ನು ಕ್ಯಾಮೆರಾಗಳು ದಾಖಲಿಸಿಕೊಂಡವು.

ವಿಶ್ವದ ಅತಿ ಶಕ್ತಿಶಾಲಿ ನಾಯಕ ಎಂದೇ ವಿವಿಧ ದೇಶಗಳ ನಾಯಕರಿಂದ, ಮಾಧ್ಯಮಗಳಿಂದ ಗುರುತಿಸಿಕೊಂಡಿರುವ ಪ್ರಧಾನಿ ಮೋದಿ ಅವರು ಶ್ರೀರಾಮನ ಜನ್ಮಸ್ಥಳದ ಆ ನೆಲದಲ್ಲಿ ನಿಂತು ಕ್ಷಣ ಮಗುವಿನಂತೆ ಭಾವುಕರಾದರು. ಕಣ್ಣುಗಳಲ್ಲಿ ಭಕ್ತಿ, ಮಂದಿರದ ಕನಸು ಈಡೇರಿದ್ದಕ್ಕೆ ಮನಸ್ಸು ತುಂಬಿ ಬಂದ ಕ್ಷಣ, ಧರ್ಮಧ್ವಜದತ್ತ ನಮಿಸುತ್ತಾ ಇದ್ದ ಪ್ರಧಾನಿ ಮೋದಿ ಅವರ ಕೈಗಳು ಕ್ಷಣ ಭಾವೋದ್ವೇಗದಿಂದ ಕಂಪಿಸಿದವು.

ಜತೆಯಾಗಿ ಆರತಿ ಬೆಳಗಿದ ಮೋದಿ-ಭಾಗವತ್

ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಸರಸಂಘಚಾಲಕ್ ಮೋಹನ್ ಭಾಗವತ್ ಅವರೂ ಮುಂಜಾನೆಯಿಂದಲೇ ಆಯೋಧ್ಯೆ ಶ್ರೀರಾಮ ಮಂದಿರದಲ್ಲಿದ್ದು, ಎಲ್ಲಾ ಪೂಜಾ ವಿಧಿವಿಧಾನಗಳು, ಧ್ವಜಾರೋಹಣ ಮೊದಲಾದ ಕಾರ್ಯಗಳಲ್ಲಿ ಭಾಗಿಯಾದರು. ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೂಡಿ ಶ್ರೀರಾಮಲಲ್ಲಾ ಮೂರ್ತಿಗೆ ಆರತಿಯನ್ನೂ ಬೆಳಗಿದರು.

ಶ್ರೀರಾಮಮಂದಿರದ ನಿರ್ಮಾಣಕ್ಕಾಗಿ ತಮ್ಮ ತನುಮನಧನವನ್ನೂ, ಅಷ್ಟೇ ಅಲ್ಲ, ತಮ್ಮ ಅಮೂಲ್ಯ ಜೀವವನ್ನೂ ತ್ಯಾಗ ಮಾಡಿದವರ ಆತ್ಮಗಳಿಗೆ ಇಂದು ಶಾಂತಿ ದೊರೆತಿರುತ್ತದೆ. ಮುಖ್ಯವಾಗಿ ವಿಶ್ವಹಿಂದೂ ಪರಿಷತ್ ಅನ್ನು ದಶಕಗಳ ಕಾಲ ಮುನ್ನಡೆಸಿದ ಅಶೋಕ್ ಸಿಂಘಾಲ್ ಜಿ, ಮಹಂತ ರಾಮಚಂದ್ರದಾಸ್ ಜಿ, ದಾಲ್ಮಿಯಾ ಜಿ ಅವರ ಆತ್ಮಗಳೂ ಈಗ ಚಿರಶಾಂತಿಯನ್ನು ಹೊಂದಿರುತ್ತವೆ ಎಂದು ಮೋಹನ್ ಭಾಗವತ್ ಹೇಳಿದರು.ಅಷ್ಟೇ ಅಲ್ಲದೇ, ನೂರಾರು ಸಂತಗಣ, ಶ್ರೀರಾಮ ಭಕ್ತಗಣ, ಗೃಹಸ್ತರು, ವಿದ್ಯಾರ್ಥಿಗಳೂ ಕೂಡಾ ಈ ಶ್ರೀರಾಮಚಂದ್ರನ ಭವ್ಯ ಮಂದಿರ



ಪ್ರಧಾನಿ ಮೋದಿ, ಮೋಹನ್ ಭಾಗವತ್ ಜತೆಯಾಗಿ ಶ್ರೀರಾಮಲಲ್ಲಾನಿಗೆ ಆರತಿ ಬೆಳಗಿ ನಮಿಸಿದರು.

ಶ್ರೀರಾಮನ ಜನ್ಮಸ್ಥಳದಲ್ಲೇ ನಿರ್ಮಾಣಗೊಳ್ಳಬೇಕು ಎಂದು ಕನಸು ಕಂಡವರು, ಹೋರಾಟ ನಡೆಸಿದರು ಇದ್ದಾರೆ. ಅವರಲ್ಲಿ ಹಲವರಿಗೆ ಈಗ ಈ ಭವ್ಯ ಮಂದಿರ ಪೂರ್ಣಗೊಂಡಿರುವುದನ್ನು ಕಣ್ಣಾರೆ ಕಾಣಲಾಗದೇ ಇರಬಹುದು. ಆದರೆ, ಅವರ ಆತ್ಮಗಳಿಗೆ ಶಾಂತಿಯಂತೂ ದೊರೆಯುತ್ತದೆ ಎಂದರು. ಶ್ರೀರಾಮ ಮಂದಿರದ ಕನಸು ಕಂಡವರೆಲ್ಲರಿಗೂ ಇದು ಸಂತಸ, ಸಮಾಧಾನ, ಸಂಭ್ರಮ ತರುವ ದಿನವಾಗಿದೆ ಎಂದು ಬಣ್ಣಿಸಿದರು.

ಶ್ರೀರಾಮಚಂದ್ರರ ಶೌರ್ಯ, ತ್ಯಾಗದ ಸಂಕೇತ ಕೇಸರಿ ಧ್ವಜ

ಪ್ರಕಾಶಮಾನ ಸೂರ್ಯನ ಚಿತ್ರ, ಅದರೊಳಗಡೆಗೆ ಪವಿತ್ರ ಓಂ ಸಂಕೇತ ಮತ್ತು ಪಕ್ಕದಲ್ಲೇ ಕೋವಿದಾರ ವೃಕ್ಷದ ಚಿತ್ರವನ್ನು ಒಳಗೊಂಡಿರುವ 10 ಅಡಿ ಅಗಲ ಮತ್ತು 20 ಅಡಿ ಉದ್ದದ ತ್ರಿಕೋನಾಕಾರದ ಧ್ವಜ ಆಕಾಶದಲ್ಲಿ ಹೆಮ್ಮೆಯಿಂದ ಪಟಪಟಿಸಲಾರಂಭಿಸಿದೆ.ಪ್ಯಾರಾಚ್ಯೂಟ್‌ಗೆ ಬಳಸುವಂತಹ ಶ್ರೇಷ್ಠ ದರ್ಜೆಯ ರೇಷ್ಮೆದಾರಗಳಿಂದ ನೇಯ್ಗೆ ಮಾಡಿರುವ ವಸ್ತ್ರದಿಂದಲೇ ಧ್ವಜವನ್ನು ಸಿದ್ಧಪಡಿಸಲಾಗಿದೆ. ಹೊಲಿಗೆ ಯಂತ್ರ ಬಳಸದೇ ಕೈಗಳಿಂದಲೇ ಪೂರ್ಣವಾಗಿ ಸಿದ್ಧಪಡಿಸಲಾಗಿದೆ. ಸೂರ್ಯ, ಓಂ ಚಿಹ್ನೆ, ಕೋವಿದಾರ ವೃಕ್ಷದ ಚಿತ್ರವನ್ನೂ ಕುಶಲಕಲೆಯಂತೆ ಕೈಗಳಿಂದಲೇ ರಚಿಸಲಾಗಿದೆ. 60 ಕಿಮೀ ವೇಗದಲ್ಲಿ ಗಾಳಿ ಬೀಸಿದರೂ ತಡೆದುಕೊಳ್ಳಬಲ್ಲ, ಪ್ರಖರ ಸೂರ್ಯ ಬಿಸಿಲನ್ನೂ ವರ್ಷಗಳ ಕಾಲ ಸಹಿಸಿಕೊಳ್ಳಬಲ್ಲ, ವರ್ಷಧಾರೆಗೂ ತೋಯ್ದು ಬಣ್ಣ ಕಳೆದುಕೊಳ್ಳದಂತೆಯೇ ಬಲು ಜಾಗ್ರತೆಯಿಂದ ಕೇಸರಿ ಧ್ವಜವನ್ನು ಸಿದ್ಧಪಡಿಸಲಾಗಿದೆ.

ವರ್ಷಗಳ ಕಾಲ ನಿರ್ಮಾಣ ಕಾರ್ಯ ನಡೆದು ಕಡೆಗೂ ಪೂರ್ಣಗೊಂಡ ಶ್ರೀರಾಮ ಮಂದಿರದ ಭವ್ಯ ನೋಟಕ್ಕೆ ಪುಷ್ಪಗಳ ಅಲಂಕಾರ ಮಂಗಳವಾರ ವಿಶೇಷ ಮೆರಗು ತಂದಿದೆ.

ವಿಶಿಷ್ಟ ರೀತಿಯಲ್ಲಿ ಧ್ವಜಾರೋಹಣ

ಬೃಹತ್ ಕೇಸರಿ ಧ್ವಜವನ್ನು ಆರೋಹಣ ಮಾಡುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ರಿಮೋಟ್ ಸ್ವಿಚ್ ಅಥವಾ ಹಗ್ಗವನ್ನು ಬಳಸಲಿಲ್ಲ. ಮಂಗಳವಾರದ ಈ ಧ್ವಜಾರೋಹಣ ವಿಧಾನ ವಿಶಿಷ್ಟವಾಗಿತ್ತು. ಪುರೋಹಿತರು ವೈದಿಕ ಆಚರಣೆಗಳನ್ನು ಮಾಡಿದ ನಂತರ ಪ್ರಧಾನಿ ಮೋದಿ ಮತ್ತು ಮೋಹನ್ ಭಾಗವತ್ ಅವರು ಮಡಿಸಿಟ್ಟಿದ್ದ ಕೇಸರಿ ಧ್ವಜದ ಪಕ್ಕದಲ್ಲಿ ಇರಿಸಲಾಗಿದ್ದ, 'ನಮಸ್ಕಾರ' ಭಂಗಿಯಲ್ಲಿ ಕೈಯಿಂದ ವಿನ್ಯಾಸಗೊಳಿಸಲಾಗಿದ್ದ ವೇದಿಕೆಯತ್ತ ಸಾಗಿದರು. ಕೈಯನ್ನು ಧ್ವಜದ ಕಡೆಗೆ ಸಾಂಕೇತಿಕವಾಗಿ ಸರಿಸುವ ಮೂಲಕ ಇಬ್ಬರೂ ಗಣ್ಯರು ಕೇಸರಿ ಧ್ವಜವು ಶ್ರೀರಾಮಲಲ್ಲಾ ಮಂದಿರದ ಗರ್ಭಗೃಹದ ಶಿಖರದ ಮೇಲೆ ಹಾರಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ಎನ್‌ಸಿಬಿ, ಇ.ಡಿ.ಗೆ ಬೇಕಿರುವ ಪವನ್ ಠಾಕೂರ್

ಬೃಹತ್ ಮಾದಕದ್ರವ್ಯ ಜಾಲ ಸೂತ್ರಧಾರ ದುಬೈನಲ್ಲಿ ಸೆರೆ

ದೆಹಲಿ: 2024ರ ನವೆಂಬರ್‌ನಲ್ಲಿ ದೆಹಲಿಯಲ್ಲಿ ವಶಪಡಿಸಿಕೊಳ್ಳಲಾದ 2500 ಕೋಟಿ ರು. ಮೌಲ್ಯದ 82 ಕಿಲೊ ಕೊಕೇನ್ ಮಾದಕ ದ್ರವ್ಯದ ಕಳ್ಳಸಾಗಣೆ

ಹಿಂದಿನ ಪ್ರಮುಖ ಸೂತ್ರ ಧಾರ ಪವನ್ ಠಾಕೂರ್ ಕಡೆ ಗೂ ದುಬೈ ನಲ್ಲಿ ಸೆರೆ ಸಿಕ್ಕಿದ್ದಾನೆ. ಆತನನ್ನು ಭಾರತಕ್ಕೆ ಗಡಿಪಾರು ಮಾಡುವ ಪ್ರಕ್ರಿಯೆಯೂ ಆರಂಭಗೊಂಡಿದೆ ಎಂದು ಭಾರತದಲ್ಲಿನ ತನಿಖಾಧಿ ಕಾರಿಗಳು ಮಂಗಳವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ದುಬೈನಿಂದ ಸಮುದ್ರ ಮಾರ್ಗವಾಗಿ ಭಾರತದ ಬಂದರು ತಲುಪಿದ 82 ಕಿಲೊ ತೂಕದ ಕೊಕೈನ್ ಪೊಟ್ಟಣಗಳು ಟ್ರಕ್ ಮೂಲಕ ದೆಹಲಿಗೆ ಮುಟ್ಟಿವೆ. ದೆಹಲಿಯಲ್ಲಿ ಒಂದೆಡೆ ಅಡಗಿಸಿಟ್ಟು ಸಣ್ಣ ಸಣ್ಣ ಪೊಟ್ಟಣಗಳಾಗಿ ವಿಂಗಡಿಸಿ ಮಾರಾಟಕ್ಕೆ ಬಿಡಬೇಕು ಎಂದುಕೊಂಡಿರುವಾಗಲೇ ಮಾದಕ ದ್ರವ್ಯ ನಿಗ್ರಹ ಪಡೆಗೆ 2024ರ ನವೆಂಬರ್‌ನಲ್ಲಿ ಸಿಕ್ಕಿಬಿದ್ದಿತ್ತು. ಈ ಪ್ರಕರಣದಲ್ಲಿ ಪವನ್ ಠಾಕೂರನೇ ಪ್ರಮುಖ ಸೂತ್ರಧಾರ ಎಂಬುದು ತನಿಖಾಧಿಕಾರಿಗಳ ಹೇಳಿಕೆಯಾಗಿದೆ.ಠಾಕೂರ್ ಬಂಧನಕ್ಕಾಗಿ ನಾರ್ಕೋಟಿಕ್ ಕಂಟ್ರೋಲ್ ಬ್ಯೂರೊ (ಎನ್‌ಸಿಬಿ) ಸೆಪ್ಟೆಂಬರ್‌ನಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಿಲ್ವರ್ ನೋಟಿಸ್ ಜಾರಿಗೊಳಿಸಿತ್ತು.

ಇ.ಡಿ. ವಿಚಾರಣೆಗೂ ಠಾಕೂರ್ ಬೇಕಿದೆ

ಇದಿಷ್ಟೇ ಅಲ್ಲದೇ, 681 ಕೋಟಿ ರು. ಮೌಲ್ಯದ ರಫ್ತು-ಆಮದು ವಹಿವಾಟಿನ ನಕಲಿ ದಾಖಲೆಗಳ ಸೃಷ್ಟಿಯಲ್ಲಿಯೂ ಠಾಕೂರ್ ಪಾತ್ರವಿದೆ. ಕ್ರಿಪ್ಟೊ ಕರೆನ್ಸಿ ವರ್ಗಾವಣೆ, ಸುಳ್ಳು ಫೈನಾನ್ಷಿಯಲ್ ಸ್ಟೇಟ್‌ಮೆಂಟ್‌ಗಳ ಸೃಷ್ಟಿಯಲ್ಲಿಯೂ ಠಾಕೂರ್ ಜಾಲವಿದೆ. ಈ ಪ್ರಕರಣಗಳಲ್ಲಿ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದ್ದು, 'ಇ.ಡಿ'ಗೂ ಪವನ್ ಠಾಕೂರ್ ವಿಚಾರಣೆ ನಡೆಸಬೇಕಿದೆ. ಈ ಪ್ರಕರಣಗಳಲ್ಲಿ ಇ.ಡಿ ಕೋರಿಕೆ ಮೇರೆಗೆ ಪಟಿಯಾಲ್ ಹೌಸ್ ಕೋರ್ಟ್ ಜಾಮೀನು ರಹಿತ ಬಂಧನ ವಾರಂಟ್‌ಗಳನ್ನು ಹೊರಡಿಸಿದೆ.

ಹೈಲಿ ಗುಬ್ಬಿ ಸಿಡಿದಿದ್ದಕ್ಕೆ ಭೂಕಂಪನದ ಅನುಭವ| ಬೂದಿಯಿಂದ ಮುಚ್ಚಿಹೋದ ಹಲವು ಗ್ರಾಮಗಳು

12 ಸಾವಿರ ವರ್ಷ ಬಳಿಕ ಆಫ್ರಿಕಾ ಜ್ವಾಲಾಮುಖಿ ಸ್ಫೋಟ

ದೆಹಲಿ: ಆಫ್ರಿಕಾ ಖಂಡದ ಇಥಿಯೋಪಿಯ ದೇಶದಲ್ಲಿರುವ ಜ್ವಾಲಾಮುಖಿ 'ಹೈಲಿ ಗುಬ್ಬಿ' ಭಾನುವಾರ ಬೆಳಗ್ಗೆ 8.30ರ ವೇಳೆ ಹಠಾತ್ ಸ್ಫೋಟಗೊಂಡಿದೆ. ಈ ಸ್ಫೋಟದ ಪರಿಣಾಮದ ತೀವ್ರತೆಗೆ 14 ಕಿಮೀಗಳಷ್ಟು ಎತ್ತರದವರೆಗೂ ಅದರ ಬೂದಿ ಆಕಾಶದತ್ತ ಚಿಮ್ಮಿದೆ.

12 ಸಾವಿರ ವರ್ಷಗಳಿಂದ ನಿದ್ರಾವಸ್ಥೆಯಲ್ಲಿದ್ದ ಇಥಿಯೋಪಿಯ ದೇಶದ ಅಫಾರ್ ಪ್ರಾಂತ್ಯದಲ್ಲಿನ 'ಹೈಲಿ ಗುಬ್ಬಿ' ಜ್ವಾಲಾಮುಖಿ ಏಕಾಏಕಿ ಸಿಡಿದಿದೆ. ಅದು ಸ್ಫೋಟಗೊಂಡ ಪರಿಣಾಮ, ಸುತ್ತಮುತ್ತ ಹಲವು ಕಿಮೀಗಳಷ್ಟು ಪ್ರದೇಶದಲ್ಲಿ ಭೂಕಂಪನದ ಅನುಭವವಾಗಿದೆ. ಸಮೀಪದ ಕೆಲವು ಗ್ರಾಮಗಳು ಬೂದಿಹೊಗೆಯಿಂದ ಮುಚ್ಚಿ ಹೋಗಿವೆ. ಕೆಂಪು ಸಮುದ್ರ ದಾಟಿ, ಪಕ್ಕದ ಯೆಮೆನ್, ಒಮಾನ್ ಮತ್ತು ಅರಬ್ಬಿ ಸಮುದ್ರದವರೆಗೂ ಬೂದಿ ಹೊಗೆ ಆಕಾಶದಲ್ಲಿ ಚದುರಿದೆ.

ಗಂಟೆಗೆ 100 ಕಿಮೀ ವೇಗದಲ್ಲಿ ತೂರಿ ಬರುತ್ತಿರುವ ಹೈಲಿ ಗುಬ್ಬಿ ಜ್ವಾಲಾಮುಖಿಯ ಬೂದಿ ಮಿಶ್ರಿತ ಹೊಗೆ ಅಫ್ಘಾನಿಸ್ತಾನ, ಪಾಕಿಸ್ತಾನ, ಭಾರತದವರೆಗೂ ಹರಡಿಕೊಂಡಿದೆ. ಹಾಗೆಯೇ ಮುಂದುವರಿಯುತ್ತಿರುವ ಹೊಗೆ ಹಿಮಾಲಯ ಪರ್ವತವನ್ನು ದಾಟಿ ನೇಪಾಳ, ಚೀನಾದತ್ತಲೂ ಸಾಗುತ್ತಿದೆ ಎಂದು ವರದಿಯಾಗಿದೆ.

'ಹೈಲಿ ಗುಬ್ಬಿ' ಜ್ವಾಲಾಮುಖಿಯ ಬೂದಿ ಮಿಶ್ರಿತ ಹೊಗೆ ಭಾರತಕ್ಕಷ್ಟೇ ಅಲ್ಲ, ಹಿಮಾಲಯ ಪರ್ವತ ಶ್ರೇಣಿವರೆಗೂ ಸಾಗಿ ಭೂತಾನ್ ವರೆಗೂ ವ್ಯಾಪಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಟಿಸಿದೆ.

ಭಾರತ ಆಕಾಶದಲ್ಲೂ ಬೂದಿ: ವಿಮಾನಗಳ ಹಾರಾಟಕ್ಕೆ ಅಡ್ಡಿ

ದೆಹಲಿ: ದೂರದ ದೇಶದಲ್ಲಾದ ಅಗ್ನಿಪರ್ವತದ ಸ್ಫೋಟ ಭಾರತದ ಮೇಲೆಯೂ ಪರಿಣಾಮ ಬೀರಿದೆ. ಇಥಿಯೋಪಾದಲ್ಲಿನ 'ಹೈಲಿ ಗುಬ್ಬಿ' ಜ್ವಾಲಾಮುಖಿ ಸ್ಫೋಟವಾಗಿದ್ದರಿಂದ ಹೊರ ಚಿಮ್ಮಿದ ಬೂದಿ ಮತ್ತು ಹೊಗೆ, ಉತ್ತರ ಭಾರತದ ಆಕಾಶದತ್ತ ತೂರಿಬಂದಿದೆ. ಪರಿಣಾಮ, ಉತ್ತರ ಭಾರತದಲ್ಲಿ ವಿಮಾನಗಳ ಹಾರಾಟಕ್ಕೆ ಅಡ್ಡಿಯಾಗಿದೆ. ಜ್ವಾಲಾಮುಖಿಯ ಬೂದಿ ಮತ್ತು ಹೊಗೆ ಆಕಾಶದಲ್ಲಿ ಹರಡಿಕೊಂಡಿರುವುದರಿಂದಾಗಿ ಉತ್ತರ ಭಾರತದ ಆಗಸದಲ್ಲಿ ಗೋಚರತೆ ಪ್ರಮಾಣ ಕಡಿಮೆಯಾಗಿದೆ. ಪರಿಣಾಮವಾಗಿ ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ದೆಹಲಿ-ಎನ್‌ಸಿಆರ್ ಮತ್ತು ಪಂಜಾಬ್ ಭಾಗದ ಆಕಾಶದಲ್ಲಿ ವಿಮಾನಗಳ ಹಾರಾಟಕ್ಕೆ ಅಡ್ಡಿ ಉಂಟು ಮಾಡಿದೆ. ಹಾಗಾಗಿಯೇ ಏರ್ ಇಂಡಿಯ, ಆಕಾಶ್ ಏರ್ ಸೇರಿದಂತೆ ಭಾರತದ ಹಲವು ವಿಮಾನಯಾನ ಸಂಸ್ಥೆಗಳು ಕೊಲ್ಲಿ ರಾಷ್ಟ್ರಗಳಿಗೆ ವಿಮಾನ ಸಂಚಾರ ಸೇವೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿವೆ. ಡಿಜಿಸಿಎ ಸಲಹೆ ಮೇರೆಗೆ ಏರ್ ಇಂಡಿಯ ಸೋಮವಾರದಿಂದಲೇ 13 ವಿಮಾನಗಳ ಸಂಚಾರವನ್ನು ರದ್ದುಗೊಳಿಸಿದೆ. ದೆಹಲಿ ವಿಮಾನ ನಿಲ್ದಾಣದಲ್ಲಿ 7 ಅಂತಾರಾಷ್ಟ್ರೀಯ ವಿಮಾನಗಳ ಆಗಮನ-ನಿರ್ಗಮನ ಸೇರಿದಂತೆ ಒಟ್ಟು 12 ವಿಮಾನಗಳ ಸಂಚಾರದಲ್ಲಿ ವಿಳಂಬವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದೆಹಲಿಗೆ ಹೊಗೆ: ಈಗಾಗಲೇ

ವಾಹನಗಳ ಹೊಗೆ, ನೆರೆಯ ಪಂಜಾಬ್-ಹರಿಯಾಣ ರಾಜ್ಯಗಳಲ್ಲಿ ಕೃಷಿ ತ್ಯಾಜ್ಯಕ್ಕೆ ಬೆಂಕಿ ಹಾಕುವುದರಿಂದ ತೇಲಿಬರುವ ಹೊಗೆಯ ರಾಶಿಯಿಂದಾಗಿ ಹದಗೆಟ್ಟಿರುವ ದೆಹಲಿ ಮತ್ತು ಎನ್‌ಸಿಆರ್ ಪ್ರದೇಶದ ಮೇಲೆ 'ಹೈಲಿ ಗುಬ್ಬಿ' ಜ್ವಾಲಾಮುಖಿಯ ಬೂದಿಯೂ ಸೇರಿಕೊಳ್ಳುವುದರಿಂದ ದೆಹಲಿಯಲ್ಲಿನ ಗಾಳಿಯ ಗುಣಮಟ್ಟ ಮತ್ತಷ್ಟು ಕುಸಿಯುವ ಭೀತಿ ಎದುರಾಗಿದೆ.

'ಮತ ಕಳವು' ಕಾಂಗ್ರೆಸ್ ರ್‍ಯಾಲಿಗೆ 'ಇಂಡಿ' ಗೈರು

ದೆಹಲಿ: ನಿರಂತರ 'ಮತ ಕಳವು' ಆರೋಪ ಮಾಡುತ್ತಿರುವ ಕಾಂಗ್ರೆಸ್, ಭಾರತೀಯ ಚುನಾವಣಾ ಆಯೋಗದ(ಇಸಿಐ) ವಿರುದ್ಧ ಡಿ.14ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಹಮ್ಮಿಕೊಂಡಿರುವ ಬೃಹತ್ ರ್‍ಯಾಲಿಯಿಂದ 'ಇಂಡಿ' ಒಕ್ಕೂಟದ



ಪಾಲುದಾರ ಪಕ್ಷಗಳೆಲ್ಲವೂ ದೂರ ಉಳಿಯಲಿವೆ ಎಂದು ತಿಳಿದುಬಂದಿದೆ.

ರ್‍ಯಾಲಿ ಪೂರ್ಣ ಕಾಂಗ್ರೆಸ್ ವಿಷಯವಾಗಿದೆ. ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ನಡೆಯುತ್ತಿರುವ 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿನ ಪಕ್ಷದ ಪ್ರಮುಖ ಪದಾಧಿಕಾರಿಗಳ ಜತೆಗೆ ಕಳೆದ ವಾರ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನೇತೃತ್ವದಲ್ಲಿ ಎಐಸಿಸಿ ಪರಿಶೀಲನಾ ಸಭೆ ನಡೆಸಲಾಗಿದೆ.

ಈ ಸಭೆಯಲ್ಲಿ ಡಿ.14ರ ರ್‍ಯಾಲಿಯನ್ನು ಏಕಾಂಗಿಯಾಗಿಯೇ ಸಂಘಟಿಸುವ ಬಗ್ಗೆ ಕಾಂಗ್ರೆಸ್ ನಿರ್ಧರಿಸಿದೆ. ರ್‍ಯಾಲಿ ಪೂರ್ಣವಾಗಿ ಕಾಂಗ್ರೆಸ್ ಪ್ರದರ್ಶನವಾಗಿರಲಿದೆ ಎಂದು ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಸ್ಪಷ್ಟಪಡಿಸಿದ್ದಾರೆ.

ಚುನಾವಣಾ ಆಯೋಗ ಪಕ್ಷಪಾತ ನಡೆಸುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳಿಗೆ ಸಮಾನ ಕ್ಷೇತ್ರ ಸಿಗಬೇಕಾದ ಪರಿಕಲ್ಪನೆಯನ್ನೇ ನಾಶಪಡಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಎಸ್‌ಸಿ/ಎಸ್‌ಟಿ ಕಾಯಿದೆ ರದ್ದು: ರಾಮಭದ್ರಾಚಾರ್ಯ

ದೆಹಲಿ: 'ಅವರ್ಣ' ಅಥವಾ 'ಸವರ್ಣ' ಎಂದು ವೇದಗಳಲ್ಲಿ ಹೇಳಲಾಗಿಲ್ಲ. ಜಾತಿ ಆಧಾರಿತ ವ್ಯತ್ಯಾಸಗಳಿಗೆ ವೈದಿಕ ಪಠ್ಯಗಳ ಬೆಂಬಲವಿಲ್ಲ. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಕಾನೂನು ರಕ್ಷಣೆ ನೀಡುವ ಎಸ್‌ಸಿ/ಎಸ್‌ಟಿ ಕಾಯಿದೆ

ರದ್ದಾಗಬೇಕು ಎಂದು ಜಗದ್ಗುರು ರಾಮಭದ್ರಾಚಾರ್ಯರು ಮಂಗಳವಾರ ಆಗ್ರಹಿಸಿದ್ದಾರೆ. ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, ಅವರ್ಣರು- ಸವರ್ಣರು ಎಂಬುದನ್ನು ರಾಜಕೀಯ ನಾಯಕರು ಪ್ರಾರಂಭಿಸಿದ್ದು. ಜಾತಿ ಆಧಾರಿತ ಮೀಸಲು ಸೌಲಭ್ಯ ಇರಬಾರದು ಎಂಬುದು ನನ್ನ ಅಭಿಪ್ರಾಯವಾಗಿದೆ ಎಂದು ಹೇಳಿದ್ದಾರೆ.ಬಿಹಾರದ ಜನರು ಜಾತಿ ರಾಜಕೀಯವನ್ನು ಮೀರಿ ಬೆಳೆದಿದ್ದಾರೆ. ಈಗ ಅವರು ಏನು ಮಾಡಬೇಕು ಮತ್ತು ಯಾರು ಮಾಡಬೇಕು ಎಂಬುದನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ಅಭ್ಯೈಸಿದ ಶ್ರೀಗಳು, 2027ರಲ್ಲಿ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಆಡಳಿತ ಪಕ್ಷವೇ ಗೆಲ್ಲುತ್ತದೆ ಎಂದು ಭವಿಷ್ಯ ನುಡಿದಿದ್ದಾರೆ.ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಎಸ್‌ಪಿ ಮುಖಂಡ ಅಖಿಲೇಶ್ ಯಾದವ್ ಅವರಂತಹ ನಾಯಕರು ಆಯೋಧ್ಯೆಯ ಶ್ರೀರಾಮನ ದರ್ಶನಕ್ಕೆ ಹೋಗದೇ ಇರುವುದು ದುರದೃಷ್ಟಕರ ಎಂದು ಸುದ್ದಿಸಂಸ್ಥೆ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ.

ಗಾರ್ಗ್ ಸಹಜ ಸಾವಲ್ಲ, ಕೊಲೆ: ಅಸ್ಸಾಂ ಸಿಎಂ

ಗುವಾಹಟಿ: ಸಿಂಗಾಪುರದಲ್ಲಿ ಸೆ.19ರಂದು ಶಂಕಾಸ್ಪದ ರೀತಿ ಸಾವಿಗೀಡಾದ ಖ್ಯಾತ ಗಾಯಕ ಜುಬೀನ್ ಗಾರ್ಗ್(52) ಅವರದ್ದು ಸಹಜ ಸಾವಲ್ಲ, ಅದೊಂದು ಕೊಲೆಯಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ಅಸ್ಸಾಂ ವಿಧಾನಸಭೆಗೆ ತಿಳಿಸಿದರು.

ಪ್ರಾಥಮಿಕ ತನಿಖೆಯ ಬಳಿಕ ಇದು ಸಹಜ ಸಾವಲ್ಲ, ಕೊಲೆ ಎಂಬುದು ಅಸ್ಸಾಂ ಪೊಲೀಸರಿಗೆ ಖಚಿತವಾ ಯಿತು.

ಹಾಗಾಗಿಯೇ ಕೃತ್ಯ ನಡೆದ 3 ದಿನಕ್ಕೆಲ್ಲಾ ಪ್ರಕರಣಕ್ಕೆ ಬಿಎನ್‌ಎಸ್ ಸೆಕ್ಷನ್ 103 ಸೇರಿಸಿದರು ಎಂದು ಶರ್ಮಾ ಸದನದಲ್ಲಿ ಹೇಳಿಕೆ ಸಲಿಸಿದರು.

ಸಿಐಡಿಯಿಂದ ರಚನೆಯಾಗಿರುವ 'ವಿಶೇಷ ತನಿಖಾ ತಂಡ'(ಎಸ್‌ಐಟಿ) ಈವರೆಗೆ ಗಾರ್ಗ್ ಕೊಲೆ ಪ್ರಕರಣದಲ್ಲಿ 7 ಜನರನ್ನು ಬಂಧಿಸಿದೆ, 252 ಸಾಕ್ಷಿಗಳನ್ನು ಪರಿಶೀಲಿಸಿದೆ ಮತ್ತು 29 ವಸ್ತುಗಳನ್ನು ವಶಪಡಿಸಿಕೊಂಡಿದೆ. ಡಿಸೆಂಬರ್‌ನಲ್ಲಿ ಆರೋಪಪಟ್ಟಿ ಸಲ್ಲಿಸಲಾಗುವುದು. ಐವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗುವುದು. ಒಬ್ಬ ಆರೋಪಿ ಗಾರ್ಗ್‌ರನ್ನು ಕೊಲೆ ಮಾಡಿದ್ದರೆ, ಉಳಿದವರು ಕೃತ್ಯಕ್ಕೆ ಸಹಕಾರ ನೀಡಿದ್ದಾರೆ ಎಂದು ಶರ್ಮಾ ಹೇಳಿದ್ದಾರೆ.

ಅರುಣಾಚಲ ಪ್ರದೇಶ ನಮ್ಮದೇ ಭೂ ಭಾಗ: ಮತ್ತೆ ಚೀನಾ ತಂಟೆ

ಬೀಜಿಂಗ್: ಲಂಡನ್ ನಿವಾಸಿಯಾದ ಅರುಣಾಚಲ ಪ್ರದೇಶದ ಮಹಿಳೆಗೆ ಶಾಂಘೈ ವಿಮಾನ ನಿಲ್ದಾಣದಲ್ಲಿ ಕಿರುಕುಳ ನೀಡಲಾಗಿದೆ ಎಂಬ ಆರೋಪವನ್ನು

ಚೀನಾ ನಿರಾಕರಿಸಿದೆ. ಚೀನಾ ವಲಸೆ ಅಧಿಕಾರಿಗಳು ಕೈಗೊಂಡ ಕ್ರಮಗಳು ನಿಯಮಗಳ ಪ್ರಕಾರವೇ ಇವೆ ಎಂದು ವಾದಿಸಿದೆ.

ಅಲ್ಲದೇ, ಚೀನಾ 'ಝುಂಗ್ನಾನ್'(ದಕ್ಷಿಣ ಟಿಬೆಟ್) ಎಂದು ಕರೆಯುವ ಅರುಣಾಚಲ ಪ್ರದೇಶದ ಭೂಭಾಗದ ಮೇಲಿನ ತನ್ನ ಹಕ್ಕುಗಳನ್ನು ಇದೇ ವೇಳೆ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಪುನರುಚ್ಚರಿಸಿದ್ದಾರೆ. ಝುಂಗ್ನಾನ್ ಚೀನಾದ ಭಾಗವಾಗಿದೆ. ಭಾರತ ಅಕ್ರಮವಾಗಿ ಅರುಣಾಚಲ ಪ್ರದೇಶ ಎಂದು ಕರೆಯುತ್ತಿದೆ. ಆದರೆ, ಚೀನಾ ಎಂದೂ ಅದನ್ನು ಭಾರತದ ಭಾಗ ಎಂದು ಗುರುತಿಸಿಲ್ಲ ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರೆ ಮಾವೋ ನಿಂಗ್ ಹೇಳಿದ್ದಾರೆ. ನ.21ರಂದು ಲಂಡನ್‌ನಿಂದ ಜಪಾನ್‌ಗೆ ಪ್ರಯಾಣಿಸುತ್ತಿದ್ದ ಬ್ರಿಟನ್ ನಿವಾಸಿ ಭಾರತೀಯ ಪ್ರಜೆ ಪೆಮಾ ವಾಂಗ್ಜೋಮ್ ಥೋಂಗ್ಡಾಕ್ ಪಾಸ್‌ಪೋರ್ಟ್‌ನಲ್ಲಿ ಜನ್ಮಸ್ಥಳ ಭಾರತದ ಅರುಣಾಚಲ ಪ್ರದೇಶ ಎಂದು ನಮೂದಾಗಿದ್ದಕ್ಕೆ ಶಾಂಘೈ ವಿಮಾನ ನಿಲ್ದಾಣದಲ್ಲಿದ್ದ ಚೀನಾದ ವಲಸೆ ವಿಭಾಗದ ಅಧಿಕಾರಿಗಳು, ಅರುಣಾಚಲ ಚೀನಾದ ಭಾಗವಾಗಿದೆ. ಹಾಗಾಗಿ, ಈ ಪಾಸ್‌ಪೋರ್ಟ್ ಅಮಾನ್ಯ ಎಂದು ಘೋಷಿಸಿದ್ದರು. ಪೆಮಾರನು 3 ತಾಸು ಒಂದೆಡೆ ಕುಳ್ಳಿರಿಸಿ ಜಪಾನ್ ಪ್ರಯಾಣಕ್ಕೆ ತಡೆಒಡ್ಡಿದ್ದರು ಎಂಬ ದೂರಿನ ಬಗ್ಗೆ ಪ್ರಶ್ನೆ ಮಾಡಿದ್ದಕ್ಕೆ, ಯಾರನ್ನೂ ಬಂಧಿಸಿಲ್ಲ, ಕಿರುಕುಳವನ್ನೂ ನೀಡಿಲ್ಲ. ವಿಮಾನಯಾನ ಸಂಸ್ಥೆ ವಿಶ್ರಾಂತಿಗೆ, ಲಘುಪಾನೀಯ ಮತ್ತು ಆಹಾರಕ್ಕೆ ಸ್ಥಳಾವಕಾಶ ಮಾಡಿಕೊಟ್ಟಿದೆ ಎಂದೇ ಮಾವೋ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಶ್ರೀ ರಾಮಮಂದಿರಕ್ಕೆ ಕನ್ನಡಿಗನ ಲೈಟಿಂಗ್

ಅಯೋಧ್ಯೆ: ಅಯೋಧ್ಯೆಯ ಭವ್ಯ ಶ್ರೀರಾಮ ಮಂದಿರದ ನಿರ್ಮಾಣ ಪೂರ್ಣಗೊಂಡಿದ್ದು, ಕೇಸರಿ ಧರ್ಮಧ್ವಜಾರೋಹಣ ಮಂಗಳವಾರ ಬೆಳಗ್ಗೆ 11.58ರ ವೇಳೆಯಿಂದ ಮಧ್ಯಾಹ್ನ 1 ಗಂಟೆವರೆಗಿನ ಮಧ್ಯದ ಶುಭ ಅಭಿಜಿತ್ ಲಗ್ನದಲ್ಲಿ ನೆರವೇರಿದೆ. ಭಕ್ತಿಭಾವದಲ್ಲಿ ಮುಳುಗೆದ್ದ ಈ ಭವ್ಯ ಸಮಾರಂಭದಲ್ಲಿ ಶ್ರೀರಾಮಮಂದಿರಕ್ಕೆ ವಿದ್ಯುತ್ ದೀಪಾಲಂಕಾರ ಮಾಡಿದವರು ಕರ್ನಾಟಕದ ರಾಜೇಶ್ ಶೆಟ್ಟಿ. ಧರ್ಮ ಧ್ವಜಾರೋಹಣ ಕಾರ್ಯಕ್ರಮಕ್ಕೆ ಬಂದ ನರೇಂದ್ರ ಮೋದಿ ಸೇರಿದಂತೆ ಇತರೆ ಗಣ್ಯರಿಗೆ ಆಹಾರದ ವ್ಯವಸ್ಥೆ ಮಾಡಿರುವುದು ಸಹ ಕನ್ನಡಿಗರೇ ಎಂಬುದು ಗಮನಾರ್ಹ. ಕರ್ನಾಟಕ ಶೈಲಿಯ ಆಹಾರ ಪದಾರ್ಥಗಳನ್ನು ಗಣ್ಯರಿಗೆ ಶ್ರೀ ರಾಮಮಂದಿರದಲ್ಲಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಕನ್ನಡಿಗ ಸುರೇಂದ್ರ ಕಾಂಚನ್ ನೇತೃತ್ವದ ಬಾಣಸಿಗರ ತಂಡ ಉಣಬಡಿಸಿದೆ ಎಂಬುದು ಉಲ್ಲೇಖಾರ್ಹ.

ಅಯೋಧ್ಯೆ ಸ್ವಾಗತ

ಅಯೋಧ್ಯೆ: 2024ರ ಜನವರಿ 22ರಂದು ಅಯೋಧ್ಯೆಯಲ್ಲಿ ಶ್ರೀರಾಮಮಂದಿರದಲ್ಲಿ ಪ್ರಾಣಪ್ರತಿಷ್ಠೆ ನಡೆದಿತ್ತು. ಈಗ ನ.25ರ ಮಂಗಳವಾರ ಧರ್ಮಧ್ವಜಾರೋಹಣವನ್ನೂ 2ನೇ ಅತಿದೊಡ್ಡ ಕಾರ್ಯಕ್ರಮವಾಗಿ ಆಯೋಜಿಸಲಾಗಿತ್ತು. ಹಾಗಾಗಿ ಇದು ಶ್ರೀರಾಮ ಭಕ್ತರು, ಅಯೋಧ್ಯೆ ಜನರ ಪಾಲಿಗೆ ಐತಿಹಾಸಿಕ ದಿನವಾಗಿದೆ. ಕೇಸರಿ ಧ್ವಜಾರೋಹಣಕ್ಕಾಗಿ ಅಯೋಧ್ಯೆಗೆ ಆಗಮಿಸಿದ ಪ್ರಧಾನಿ ಮೋದಿ ಅವರು ಬೆಳಗ್ಗೆ 10 ಗಂಟೆಗೂ ಮುನ್ನವೇ ಆಗಮಿಸಿ ಬೃಹತ್ ರೋಡ್ ಶೋ ನಡೆಸಿದರು. ಈ ವೇಳೆ ಅಯೋಧ್ಯೆಯ ಜನರು ತ್ರಿವರ್ಣ ಧ್ವಜಗಳನ್ನು ಹಿಡಿದು, ಹೂಮಳೆ ಸುರಿಸುತ್ತಾ ಪ್ರಧಾನಿ ಮೋದಿ ಅವರನ್ನು ಪ್ರೀತಿಯಿಂದ, ಜೈಕಾರಗಳೊಂದಿಗೆ ಸ್ವಾಗತಿಸಿದರು.

ಭಾರತ ಅಕ್ರಮ ಪ್ರವೇಶ: ಚೀನಾ ಪ್ರಜೆ ಬಂಧನ

ಲಖನೌ: ಭಾರತಕ್ಕೆ ಅಕ್ರಮವಾಗಿ ಪ್ರವೇಶಿರುವುದೂ ಅಲ್ಲದೇ, ಗಡಿ ಭಾಗದಲ್ಲಿನ ಸೂಕ್ಷ್ಮ ಪ್ರದೇಶಗಳನ್ನು

ಕ್ಯಾಮೆರಾದಲ್ಲಿ ಚಿತ್ರೀಕರಿಸುತ್ತಿದ್ದ ಚೀನಾ ದೇಶದ ಒಬ್ಬ ಪ್ರಜೆಯನ್ನು ಉತ್ತರ ಪ್ರದೇಶದಲ್ಲಿ ಬಂಧಿಸಲಾಗಿದೆ.ಉತ್ತರ ಪ್ರದೇಶದ ಬಹ್ರೈಚ್ ಜಿಲ್ಲೆಯ ರುಪೈದಿಹಾ ಚೆಕ್ ಪೋಸ್ಟ್‌ನಲ್ಲಿ ಚೀನಾದ ಹುನಾನ್ ಪ್ರಾಂತ್ಯದ 49 ವರ್ಷದ ಲಿಯು ಕುನ್ಜಿಂಗ್ ಎಂಬಾತನನ್ನು ಸೋಮವಾರ ಎಸ್‌ಎಸ್‌ಬಿಯ 42ನೇ ಬೆಟಾಲಿಯನ್ ಸಿಬ್ಬಂದಿ ಬಂಧಿಸಿದ್ದಾರೆ.ಲಿಯು ಕುನ್ಜಿಂಗ್ ಭಾರತದೊಳಕ್ಕೆ ನುಸುಳುವುದಕ್ಕೂ ಮುನ್ನ ಪಾಕಿಸ್ತಾನಕ್ಕೆ ತೆರಳಿದ್ದ. ಆತನ ಬಳಿ ಪಾಕಿಸ್ತಾನ ಮತ್ತು ನೇಪಾಳಿ ಕರೆನ್ಸಿಗಳು ಇದ್ದವು ಎಂದು ಸಶಸ್ತ್ರ ಸೀಮಾ ಬಲ್(ಎಸ್‌ಎಸ್‌ಬಿ) ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.ನೇಪಾಳ ಭಾಗದಿಂದ ಭಾರತಕ್ಕೆ ಅಕ್ರಮ ಪ್ರವೇಶ ಮಾಡಿ, ಭಾರತದ ಗಡಿ ಭಾಗದಲ್ಲಿನ ಸೂಕ್ಷ್ಮ ಪ್ರದೇಶಗಳ ಚಿತ್ರೀಕರಣ ಮಾಡುತ್ತಿದ್ದ. ಇದನ್ನು 42ನೇ ಬೆಟಾಲಿಯನ್ ಅಧಿಕಾರಿ ಗಮನಿಸಿ ಪ್ರಶ್ನಿಸಿದ್ದಾರೆ. ಆತನ ಬಳಿ ಭಾರತ ಪ್ರವೇಶಕ್ಕೆ ಅನುಮತಿ ಪತ್ರ, ದಾಖಲೆಗಳು ಇರಲಿಲ್ಲ. ಬಂಧಿತ ಚೀನಾ ಪ್ರಜೆಯಿಂದ ಮೂರು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಒಂದು ಮೊಬೈಲ್‌ಫೋನ್‌ನಲ್ಲಿ ಭಾರತದಲ್ಲಿನ ಹಲವು ಸಂರಕ್ಷಿತ ಪ್ರದೇಶಗಳ ವಿಡಿಯೊಗಳಿವೆ. ಖುಂಜಿಂಗ್ ಕೇವಲ ಸನ್ನೆಗಳ ಮೂಲಕ ಸಂವಹನ ನಡೆಸುತ್ತಿದ್ದ. ತನಗೆ ಇಂಗ್ಲಿಷ್, ಹಿಂದಿ ಅರ್ಥವಾಗದು ಎಂದು ಹೇಳಿದ ಆತನ ಬಳಿ ಇಂಗ್ಲಿಷ್‌ನಲ್ಲಿ ಮುದ್ರಿತ ನೇಪಾಳ ನಕ್ಷೆ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಬಂಧಿತನನ್ನು ಸ್ಥಳೀಯ ರುಪೈದಿಹಾ ಪೊಲೀಸ್ ಠಾಣೆ ವಶಕ್ಕೆ ಒಪ್ಪಿಸಲಾಗಿದೆ. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭದ್ರತೆ ಕಾರಣ ಬೆಂಜಮಿನ್ ಭಾರತ ಪ್ರವಾಸ ಮುಂದಕ್ಕೆ

ದೆಹಲಿ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಭಾರತ ಭೇಟಿ ಮತ್ತೆ ಮುಂದೆ ಹೋಗಿದೆ. ವರ್ಷಾಂತ್ಯದಲ್ಲಿ ದೆಹಲಿಯಲ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ಉದ್ದೇಶಿಸಿದ್ದರು.ನ.10ರಂದು ದೆಹಲಿ ಕೆಂಪುಕೋಟೆ ಮೆಟ್ರೊ ನಿಲ್ದಾಣ ಸಮೀಪದ ಟ್ರಾಫಿಕ್ ಸಿಗ್ನಲ್ ಬಳಿ ಹುಂಡೈ ಐ20 ಕಾರನ್ನು ಸ್ಫೋಟಿಸಿದ ಆತ್ಮಹತ್ಯಾ ಬಾಂಬರ್ ಡಾ.ಉಮರ್ ನಡೆಸಿದ ಭಯೋತ್ಪಾದಕ ದಾಳಿ ನಂತರ ಭದ್ರತೆಯ ಕಾರಣಗಳಿಂದಾಗಿ ಇಸ್ರೇಲ್ ಪ್ರಧಾನಿ ಭಾರತ ಪ್ರವಾಸ ಕಾರ್ಯಕ್ರಮದಲ್ಲಿ ಬದಲಾವಣೆಗಳಾಗಿವೆ ಎಂದು ತಿಳಿದುಬಂದಿದೆ. ನೆತನ್ಯಾಹು ಈ ಮೊದಲು 2018ರ ಜನವರಿಯಲ್ಲಿ ಭಾರತಕ್ಕೆ ಆಗಮಿಸಿದ್ದರು. ಇಸ್ರೇಲ್ ಪ್ರಧಾನಿಯ ಭಾರತ ಭೇಟಿ ಮುಂದೂಡಿಕೆ ಆಗುತ್ತಿರುವುದು ಇದು 3ನೇ ಬಾರಿ. ಇದಕ್ಕೂ ಮುನ್ನ ಸೆ.9ರಂದು ಭಾರತಕ್ಕೆ ಅವರು 1 ದಿನದ ಭೇಟಿಗೆ ಬರಬೇಕಿತ್ತು. ಏಪ್ರಿಲ್ ಚುನಾವಣೆಗೆ ಮುನ್ನವೂ ಭೇಟಿ ರದ್ದುಗೊಳಿಸಿದ್ದರು. ಪ್ರಧಾನಿ ಮೋದಿ 2017ರಲ್ಲಿ ಟೆಲ್‌ಅವೀವ್‌ಗೆ ತೆರಳುವ ಮೂಲಕ ಯಹೂದಿಗಳ ದೇಶಕ್ಕೆ ಭೇಟಿ ನೀಡಿದ ಮೊದಲ ಭಾರತದ ಪ್ರಧಾನಿ ಎನಿಸಿಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ತೇಜ್ ಬಹದ್ದೂರ್ ಸತ್ಯದ ರಕ್ಷಕ: ಮೋದಿ

ಕುರುಕ್ಷೇತ್ರ: ಸತ್ಯ, ನ್ಯಾಯ ಹಾಗೂ ನಂಬಿಕೆಯ ರಕ್ಷಣೆಯೇ ತನ್ನ ಧರ್ಮ ಎಂಬುದಾಗಿ ಗುರು ತೇಜ್ ಬಹದ್ದೂರ್ ಪರಿಗಣಿಸಿದ್ದರು. ಈ ಉದ್ದೇಶಕ್ಕಾಗಿಯೇ ಅವರು ತಮ್ಮ ಪ್ರಾಣತ್ಯಾಗ ಮಾಡಿದರು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು. ಸಿಖ್ ಧರ್ಮದ 9ನೇ ಗುರು ಆಗಿರುವ ಗುರು ತೇಜ್ ಬಹದ್ದೂರ್ ಅವರ 350ನೇ ಹುತಾತ್ಮ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ನೇತೃತ್ವದ ಸರಕಾರ ಕೂಡ ಈ ಗುರು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲಿದೆ ಎಂದರು. ಇದೇ ವೇಳೆ ಮೋದಿ, ಗುರು ತೇಜ್ ಬಹದ್ದೂರ್ ಅವರ 350ನೇ ಹುತಾತ್ಮ ದಿನದ ಅಂಗವಾಗಿ ಹೊರತಂದಿರುವ ವಿಶೇಷ ನಾಣ್ಯ ಹಾಗೂ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. ರಾಮ ಮಂದಿರ ಕುರಿತು ಸುಪ್ರೀಂ ಕೋರ್ಟ್ ತೀರ್ಪು 2019ರ ನವೆಂಬರ್ 9ರಂದು ಪ್ರಕಟವಾಯಿತು. ಆ ದಿನ ನಾನು ಪಂಜಾಬ್‌ನಲ್ಲಿರುವ ದೇರಾ ಬಾಬಾ ನಾನಕ್‌ಗೆ ಹೋಗಿದ್ದೆ, ಕರ್ತಾರಪುರ ಕಾರಿಡಾರ್ ಉದ್ಘಾಟನೆ ನೆರವೇರಿಸಿದ್ದೆ' ಎಂದೂ ಮೋದಿ ಸ್ಮರಿಸಿದರು.

ದೆಹಲಿಯಲ್ಲಿ ಬೂದಿ ಮಾಲಿನ್ಯ ವ್ಯಾಪಕ

ದೆಹಲಿ: ಇಥಿಯೋಪಿಯಾದ ಜ್ವಾಲಾಮುಖಿಯ ಸ್ಫೋಟದಿಂದ ಉಂಟಾಗಿರುವ ಬೂದಿಯು ದೆಹಲಿಯ ಮಾಲಿನ್ಯ ಮಟ್ಟವನ್ನು ಮತ್ತಷ್ಟು ಹದಗೆಡಿಸಬಹುದೆಂಬ ಆತಂಕದ ನಡುವೆ, ಮಂಗಳವಾರ ದೆಹಲಿಯಾದ್ಯಂತ ಬೂದಿಯ ಮೋಡಗಳು ಆವರಿಸಿದ್ದವು. ನಗರದ ಗಾಳಿಯ ಗುಣಮಟ್ಟವೂ ತುಂಬಾ ಕಳಪೆಯಾಗಿದೆ. ಇಥಿಯೋಪಿಯಾದ ಅಫಾರ್ ವಲಯದಲ್ಲಿ ಹೈಲಿ ಗುಬ್ಬಿ ಜ್ವಾಲಾಮುಖಿ ಭಾನುವಾರ ಸ್ಫೋಟಗೊಂಡು, ಸುಮಾರು 14 ಕಿ.ಮೀ (45,000 ಅಡಿ) ಎತ್ತರಕ್ಕೆ ಹಾರಿ ಕೆಂಪು ಸಮುದ್ರದಾದ್ಯಂತ ಪೂರ್ವಕ್ಕೆ ವ್ಯಾಪಿಸಿತು. ಬೂದಿಯ ಮೋಡಗಳು ಚೀನಾದ ಕಡೆಗೆ ಚಲಿಸುತ್ತಿದೆ. ಮಂಗಳವಾರ ಸಂಜೆ 7.30ರ ವೇಳೆಗೆ ಭಾರತದಿಂದ ದೂರ ಸರಿಯಲಿವೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ. ಗುಜರಾತ್, ದೆಹಲಿ-ಎನ್‌ಸಿಆರ್, ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣದಲ್ಲೂ ಈ ಬೂದಿಯು ಪರಿಣಾಮ ಬೀರಬಹುದು ಎಂದು ಮಂಗಳವಾರ ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ವಿದ್ಯಾಭವನದಲ್ಲಿ ಇಂದು ರಾಜ್ಯೋತ್ಸವ

ಬೆಂಗಳೂರು: ಶಕ್ತಿ ವಾಹಿನಿ ಕನ್ನಡ ಬಳಗ ಹಾಗೂ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವತಿಯಿಂದ ನ.26ರಂದು ಮ.1ಗಂಟೆಗೆ ನಗರದ ರೇಸ್‌ಕೋರ್ಸ್ ರಸ್ತೆಯ ಭಾರತೀಯ ವಿದ್ಯಾ ಭವನದ ಖಿಂಚಾ ಸಭಾಂಗಣದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಆಯೋಜಿಸಲಾಗಿದೆ. ಈ ವೇಳೆ ಕಾರ್ಯಕ್ರಮದಲ್ಲಿ ಸರಕಾರದ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೇಂದ್ರ ಸಾಹಿತ್ಯ ಅಕಾಡಮಿಯ ಮಾಜಿ ಸಚಿವ ಅಗ್ರಹಾರ ಕೃಷ್ಣಮೂರ್ತಿ, ಆರ್. ನಾಗರಾಜ್, ಎಸ್.ಕೃಷ್ಣಮೂರ್ತಿ, ಡಾ. ಆಶಾ ಎಸ್ ಸೇರಿದಂತೆ ಇನ್ನಿತರರು ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಗೋಟ್ಟಯ್ಯನ್ ಟಿವಿಕೆಗೆ ಸೇರ್ಪಡೆ?

ಚೆನ್ನೈ: ಮಾಜಿ ಸಚಿವ ಮತ್ತು ಉಚ್ಚಾಟಿತ ಎಐಎಡಿಎಂಕೆ ಹಿರಿಯ ನಾಯಕ ಕೆ.ಎ ಸೆಂಗೋಟ್ಟಯ್ಯನ್ ಅವರು ಗುರುವಾರ ನಟ, ರಾಜಕಾರಣಿ ವಿಜಯ್

ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷ ಸೇರುವ ಸಾಧ್ಯತೆ ಇದೆ. ಗೋಬಿಚೆಟ್ಟಿಪಾಳಯಂ ಶಾಸಕರಾಗಿರುವ ಸೆಂಗೋಟ್ಟೈಯನ್ ಅವರು ಬುಧವಾರ ವಿಜಯ್ ಅವರನ್ನು ಭೇಟಿ ಮಾಡಿ, ಟಿವಿಕೆ ಸೇರುವ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಅವರು ಶೀಘ್ರದಲ್ಲೇ ಟಿವಿಕೆ ಸೇರಲಿದ್ದಾರೆ. ಬುಧವಾರ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆ. ಅವರು ಪ್ರಸ್ತುತ ಚೆನ್ನೈನಲ್ಲಿದ್ದಾರೆ ಎಂದು ಸಂಗೋಟ್ಟಯ್ಯನ್ ಅವರ ಆಪ್ತರೊಬ್ಬರು ತಿಳಿಸಿದ್ದಾರೆ.1977ರಲ್ಲಿ ಎಐಎಡಿಎಂಕೆ ಅಧಿಕಾರಕ್ಕೆ ಬಂದಾಗ ಸತ್ಯಮಂಗಲಂನಿಂದ ಮೊದಲ ಬಾರಿಗೆ ಗೆದ್ದು, ಒಂಬತ್ತು ಬಾರಿ ಶಾಸಕರಾಗಿರುವ ಸೆಂಗೋಟ್ಟಯ್ಯನ್, ಮಾಜಿ ಮುಖ್ಯಮಂತ್ರಿಗಳಾದ ಎಂ.ಜಿ ರಾಮಚಂದ್ರನ್ ಮತ್ತು ಜೆ.ಜಯಲಲಿತಾ ಅವರ ಕಟ್ಟಾ ಬೆಂಬಲಿಗ ಎಂದು ದೀರ್ಘಕಾಲದಿಂದ ಗುರುತಿಸಿಕೊಂಡಿದ್ದಾರೆ.

ಎಸ್‌ಐಆರ್ ವಿರುದ್ಧ ಪ್ರತಿಭಟನೆ: ಮಮತಾ

ಕೊಲ್ಕತ್ತಾ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದು, ಬಿಜೆಪಿ ಚುನಾವಣಾ ಆಯೋಗವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ ಎಂದು ಆರೋಪಿಸಿದ್ದಾರೆ.



ಮುಂಬರುವ ಎಸ್‌ಐಆರ್ ಕಾರ್ಯದಲ್ಲಿ ಪಟ್ಟಿಯಿಂದ ಯಾವುದೇ ನಿಜವಾದ ಮತದಾರರನ್ನು ಅಳಿಸಲು ತಂತ್ರ ರೂಪಿಸಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಬಿಜೆಪಿಯ ಬಿಹಾರ ಚುನಾವಣಾ ಪ್ರಚಾರದ ವಿರುದ್ಧ ಕಿಡಿ ಕಾರಿದ ಮಮತಾ, ಬಿಹಾರದಲ್ಲಿ ಆಗಿದ್ದು, ಬಂಗಾಳದಲ್ಲಿ ಆಗುವುದಿಲ್ಲ ಎಂದು ಹೇಳಿದ್ದಾರೆ. ಬಂಗಾಳದಲ್ಲಿ ತನ್ನನ್ನು ಅಥವಾ ತನ್ನ ಜನರನ್ನು ಗುರಿಯಾಗಿ ಸಿಕೊಂಡರೆ ದೇಶಾದ್ಯಂತ ಬೀದಿಗಿಳಿದು ಇಡೀ ರಾಷ್ಟ್ರವನ್ನು ಅಲ್ಲಾಡಿಸುತ್ತೇನೆ ಎಂದು ಅವರು ಬಿಜೆಪಿಗೆ ಎಚ್ಚರಿಕೆ ನೀಡಿದರು.

ಅನ್ಯ ಯುವತಿಯೊಂದಿಗೆ ಪಾಲಾಶ್ ಚ್ಯಾಟ್ ಮಾಡಿದ್ದು ವೈರಲ್

ಸ್ಮೃತಿಗೆ ವಂಚಿಸಿದ್ರಾ ಗಾಯಕ ಪಾಲಾಶ್?

ಮುಂಬೈ: ಟೀಂ ಇಂಡಿಯಾ ಕ್ರಿಕೆಟ್ ಆಟಗಾರ್ತಿ ಸ್ಮೃತಿ ಮಂಧಾನಾ ಹಾಗೂ ಸಂಗೀತ ನಿರ್ದೇಶಕ ಪಾಲಾಶ್ ಮುಚ್ಚಲ್ ಮದುವೆ ಮುಂದೂಡಿಕೆಯಾಗುತ್ತಿದ್ದಂತೆ, ಬೇರೆ ಯುವತಿಯ ಜೊತೆ ಪಾಲಾಶ್ ಚಾಟ್ ಮಾಡಿರುವ ಚಿತ್ರ ಸಾಮಾಜಿಕ ತಾಣದಲ್ಲಿ ವೈರಲ್ ಆಗಿದ್ದು, ಭಾರೀ ಚರ್ಚೆಗೆ ಗ್ರಾಸವಾಗಿದೆ.

ನ.23ಕ್ಕೆ ನಡೆಯಬೇಕಿದ್ದ ಮದುವೆ ದಿಢೀರ್ ರದ್ದು, ಮುಂದೆ ನಡೆಯುವುದು ಅನುಮಾನ

ನ.23ರಂದು ನಿಗದಿಯಂತೆ ಮದುವೆ ನಡೆಯಬೇಕಿದ್ದಾಗಲೇ, ಸ್ಮೃತಿ ತಂದೆಗೆ ಹೃದಯಘಾತವಾಗಿದ್ದು, ಈ ಹಿನ್ನೆಲೆಯಲ್ಲಿ ಮದುವೆ ಮುಂದೂಡಿಕೆಯಾಗಿದೆ ಎನ್ನಲಾಗಿತ್ತು. ಆದರೆ ಮುಂದೂಡಿಕೆ ಯಾಗುತ್ತಿದ್ದಂತೆ ಸ್ಮೃತಿ ಮಂಧಾನಾ ತನ್ನ ಇನ್ಸ್ಟಾಗ್ರಾಮ್ ಖಾತೆಯಿಂದ ಪಾಲಾಶ್ ಹಾಗೂ ವಿವಾಹಕ್ಕೆ ಸಂಬಂಧಿಸಿದ ಎಲ್ಲಾ ಫೋಟೋ ಹಾಗೂ ವಿಡಿಯೋಗಳನ್ನು ಅಳಿಸಿದ್ದಾರೆ.

ಇದರ ಮಧ್ಯೆ ಸ್ಮೃತಿ ಜೊತೆ ಮದುವೆ ನಿಶ್ಚಯವಾಗಿದ್ದರೂ ಪಾಲಾಶ್ ಮುಚ್ಚಲ್ ಮೇರಿ ಡಿಕೋಸ್ಟಾ ಎಂಬ ಯುವತಿ ಜೊತೆ ಚಾಟ್ ಮಾಡಿದ್ದಾರೆ ಎನ್ನಲಾದ ಸ್ಕ್ರೀನ್ ಶಾಟ್ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಸಂದೇಶಗಳಲ್ಲಿ ಪಾಲಾಶ್ ಯುವತಿಗೆ ಈಜಾಡಲು

ಬರುವಂತೆ ಕರೆದಿದ್ದಾರೆ. ಜೊತೆಗೆ ಸ್ವಾಗೆ ಜೊತೆಯಲ್ಲಿಯೇ ಹೋಗೋಣ, ಮುಂಬೈನ ವರ್ಸೋವಾ ಬೀಚ್‌ಗೆ ಹೋಗೋಣ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಮೇರಿ ಜೊತೆ ಫ್ಲರ್ಟ್ ಮಾಡುವ ರೀತಿ ಮೆಸೇಜ್ ಮಾಡಿದ್ದಾರೆ.

ಇನ್ನೂ ಮೆಸೇಜ್‌ನಲ್ಲಿ ಪಾಲಾಶ್ ನಮ್ಮಿಬ್ಬರದ್ದು 'ಬಹಳ ದೂರದ ಸಂಬಂಧ' ಎಂದು ಹೇಳಿಕೊಂಡಿದ್ದಾರೆ. ಜೊತೆಗೆ ಮೇರಿ ಕೂಡ ನೀವು ಸ್ಮೃತಿಯನ್ನು ಪ್ರೀತಿಸುತ್ತೀರಾ ಎಂದು ಕೇಳಿದ್ದಾರೆ. ಇನ್ನೂ ಮೇರಿ, ನಾನು ಈವರೆಗೂ ಪಾಲಾಶ್‌ನನ್ನು ಭೇಟಿಯಾಗಿಲ್ಲ ಎಂದು ಸ್ಟೋರಿ ಹಾಕಿಕೊಂಡಿದ್ದಾರೆ. ಪಾಲಾಶ್ ಮೋಸ ಮಾಡಿದ್ದಾರೆ ಎಂಬ ವಿಷಯ ಗೊತ್ತಾಗಿ ಸ್ಮೃತಿ ತಂದೆಗೆ ಹೃದಯಾಘಾತವಾಗಿರಬಹುದು ಎನ್ನಲಾಗಿದೆ.

ಈ ನಡುವೆ ಪಾಲಾಶ್ ಸಹೋದರಿ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿ, ಹರಿದಾಡುತ್ತಿರುವ ಸುದ್ದಿಗಳೆಲ್ಲವೂ ಸುಳ್ಳು. ಸದ್ಯ ನಾವೆಲ್ಲರೂ ತುಂಬಾ ದಿಗ್ಭ್ರಾಂತಗೊಂಡಿದ್ದೇವೆ. ದಯವಿಟ್ಟು ನಮ್ಮ ಖಾಸಗಿ ವಿಷಯಗಳನ್ನು ಗೌರವಿಸಿ ಎಂದು ಬರೆದುಕೊಂಡಿದ್ದಾರೆ.

2019ರಿಂದ ಪ್ರೀತಿಯಲ್ಲಿರುವ ಮಂಧಾನಾ ಮತ್ತು ಪಾಲಾಶ್ ಮುಚ್ಚಲ್ 2024ರಲ್ಲಿ ತಮ್ಮ ಪ್ರೀತಿಯನ್ನು ಬಹಿರಂಗಪಡಿಸಿದ್ದರು. ಇತ್ತೀಚಿಗೆ ಮುಂಬೈ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ಪಾಲಾಶ್ ಸ್ಮೃತಿಗೆ ಪ್ರಪೋಸ್ ಕೂಡ ಮಾಡಿದ್ದರು. ಸದ್ಯ ಸ್ಮೃತಿ ಮಂಧಾನಗೆ ಪಾಲಾಶ್ ಮೋಸ ಮಾಡಿದ್ದಾರಾ? ಇದೇ ವಿಷಯಕ್ಕೆ ಮದುವೆ ಮನೆಯಲ್ಲಿ ರಾದ್ಧಾಂತವಾಗಿರಬಹುದಾ? ಎಂಬ ಚರ್ಚೆ ಜೋರಾಗಿದೆ. ಇನ್ನೂ ಮೇರಿ ಡಿ ಕೋಸ್ಟಾ ಜೊತೆ ಚಾಟ್ ಮಾಡಿದ್ದ ವೈರಲ್ ಫೋಟೋಗಳ ಬಗ್ಗೆ ಸ್ಮೃತಿ ಹಾಗೂ ಪಾಲಾಶ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

---

2 ತಿಂಗಳಲ್ಲಿ ಮರಿ ಹುಲಿ ಸೇರಿ 16 ಹುಲಿ ಸೆರೆ

ಸರಗೂರಿನಲ್ಲಿ ಮತ್ತೊಂದು ಹುಲಿ ಸೆರೆ ಕಾರ್ಯಾಚರಣೆ

ಮೈಸೂರು: ಜಿಲ್ಲೆಯ ಸರಗೂರು ತಾಲೂಕಿನಲ್ಲಿ ಮತ್ತೊಂದು ಹುಲಿ ಅರಣ್ಯ ಇಲಾಖೆಯ ಬಲೆಗೆ ಬಿದ್ದಿದೆ. ಸೋಮವಾರ ಬೆಳಗಿನ ಜಾವ ಸುಮಾರು 4 ಗಂಟೆಯ ಸುಮಾರಿಗೆ ದೇವಲಾಪುರ ಗ್ರಾಮದ ಅಳಗಂಚಿ ಅರಣ್ಯದ ಅಂಚಿನಲ್ಲಿ ಈ ಗಂಡು ಹುಲಿಯನ್ನು ಯಶಸ್ವಿಯಾಗಿ ಸೆರೆಹಿಡಿಯಲಾಗಿದೆ.

ಕಳೆದ ಕೆಲ ವಾರಗಳಿಂದ ಹಂಚೀಪುರ, ಸಾಗರೆ, ದೇವಲಾಪುರ ಸುತ್ತಮುತ್ತಲಿನ ಜಮೀನಿನಲ್ಲಿ ಹುಲಿ ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಭಯದ ವಾತಾವರಣ ಉಂಟಾಗಿತ್ತು. ಹಲವು ದಿನಗಳ ಕಾರ್ಯಾಚರಣೆ ನಂತರ ಇಂದು ಬೆಳಗ್ಗೆ ಹುಲಿಯನ್ನು ಸೆರೆ ಹಿಡಿದ ಪರಿಣಾಮ, ಸ್ಥಳೀಯರು ನೆಮ್ಮದಿಯ ಬಿಟ್ಟಿದ್ದಾರೆ.

ಬೆಂಬಿಡದ ಆತಂಕ: ಅರಣ್ಯಾಧಿಕಾರಿಗಳು ಸರಗೂರಿನಲ್ಲಿ ಕಳೆದ ಎರಡು ತಿಂಗಳಲ್ಲಿ ಸುಮಾರು 16 ಹುಲಿಗಳನ್ನು ಸೆರೆಹಿಡಿದಿದ್ದಾರೆ.ಇಷ್ಟಾದರೂ ಇಲ್ಲಿನ ನಿವಾಸಿಗಳ ಆತಂಕ ದೂರವಾಗಿಲ್ಲ. ಇದೇ ತಿಂಗಳ ಮೊದಲ ವಾರ ತಾಲೂಕಿನ ಹಳೇಹೆಗ್ಗೂಡಿಲು ಗ್ರಾಮದಲ್ಲಿ ಜಮೀನಿಗೆ ತೆರಳುತ್ತಿದ್ದ ರೈತನ ಮೇಲೆ ಹುಲಿ ದಾಳಿ ಮಾಡಿ, ದಂಡನಾಯ್ಕ ಅಲಿಯಾಸ್ ಸ್ವಾಮಿ (58ವ) ಅವರ ಸಾವಿಗೆ ಕಾರಣವಾಗಿತ್ತು. ಇದರ ಬೆನ್ನಿಗೇ ಇನ್ನಿಬ್ಬರು ಹುಲಿಗೆ ಆಹಾರವಾಗಿದ್ದರು. ಪದೇ ಪದೇ ಹುಲಿ ದಾಳಿ ಹಿನ್ನೆಲೆಯಲ್ಲಿ ಕಾಡಂಚಿನ ಗ್ರಾಮದ ನಿವಾಸಿಗಳು ಕಂಗಾಲಾಗಿದ್ದು, ಕೆಲಸಕ್ಕೆ ಹೋಗಲೂ ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ. ಸಮೀಪದ ನಂಜನಗೂಡಿನಲ್ಲೂ ಹುಲಿ ದಾಳಿ ನಡೆದಿತ್ತು.

ನವೆಂಬರ್ ಮೊದಲ ವಾರದಿಂದ ಆರಂಭವಾದ ಹುಲಿ ಸೆರೆ ಕಾರ್ಯಾಚರಣೆ ಇನ್ನೂ ಮುಂದುವರಿದಿದೆ. ತಾಲ್ಲೂಕಿನ ಕಂದಲಿಕೆ ಹೋಬಳಿ ಹೊಸಕೋಟೆ ಗ್ರಾಮದ ಟ್ರೆಂಚ್ ಬಳಿ 11ರಿಂದ 12 ವರ್ಷ ವಯಸ್ಸಿನ ಗಂಡು ಹುಲಿಯನ್ನು ಸೆರೆ ಹಿಡಿದು ಮೈಸೂರು ತಾಲ್ಲೂಕಿನ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು.

ಸಫಾರಿ ಸ್ಥಗಿತ: ಬಂಡೀಪುರ ಮತ್ತು ನಾಗರಹೊಳೆಯ ಅರಣ್ಯದಂಚಿನಲ್ಲಿ ಹುಲಿಗಳು ಮನುಷ್ಯರ ಮೇಲೆ ಮತ್ತು ಜಾನುವಾರುಗಳ ಮೇಲೆ ದಾಳಿ ಮಾಡುವ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ ಬಂಡೀಪುರ ಮತ್ತು ನಾಗರಹೊಳೆಯ ಸಫಾರಿ ಸ್ಥಗಿತಗೊಳಿಸಿ, ಅಲ್ಲಿನ ಸಿಬ್ಬಂದಿಯನ್ನು ಹುಲಿ ಸೆರೆ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ಬಂಡೀಪುರ ಮತ್ತು ನಾಗರಹೊಳೆಯ ವಿವಿಧ ವಲಯಗಳ ಅಧಿಕಾರಿಗಳ ಜೊತೆಗೆ ಇತರ ವಲಯಗಳ ಅಧಿಕಾರಿ ಮತ್ತು ಸಿಬ್ಬಂದಿಯೂ ಹುಲಿ ಸೆರೆ ಕಾರ್ಯಾಚರಣೆಲ್ಲಿ ಭಾಗಿಯಾಗಿದ್ದಾರೆ. ವನ್ಯಜೀವಿ ವಿಭಾಗದ ಎ.ಪಿ.ಸಿ.ಸಿ.ಎಫ್ ಮತ್ತು ಹುಲಿ ಯೋಜನೆಯ ನಿರ್ದೇಶಕರಿಗೆ ವಸತಿ ಪ್ರದೇಶಗಳ ಬಳಿ ಹುಲಿಗಳ ಸಂಚಾರ ಇರುವ ಸ್ಥಳದಲ್ಲಿಯೇ ಮೊಕ್ಕಾಂ ಹೂಡಿ, ಈ ಹುಲಿಯಲ್ಲದೆ ಬೇರೆ ಯಾವುದಾದರೂ ಹುಲಿಗಳು ಜನ, ಜಾನುವಾರಗಳ ಮೇಲೆ ದಾಳಿ ಮಾಡಿದೆಯೇ ಎಂಬ ಪರಿಶೀಲನೆ ಮಾಡಿ ಕಾರ್ಯಾಚರಣೆ ನಡೆಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಬಂಡೀಪುರ: ಹುಲಿ ದಾಳಿಗೆ ಮಹಿಳೆ ಬಲಿ

ಚಾಮರಾಜನಗರ: ಗಡಿ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಸೋಮವಾರ ಹುಲಿ ದಾಳಿಗೆ ಮಹಿಳೆ ಮೃತಪಟ್ಟಿದ್ದಾರೆ.

ತಮಿಳುನಾಡಿನ ನೀಲಗಿರಿ (ಊಟಿ) ಜಿಲ್ಲೆಯ ಗೂಡ್ಲೂರು ತಾಲ್ಲೂಕಿನ ಮಾವನಹಳ್ಳ ಗ್ರಾಮದ ನಾಗಿಯಮ್ಮ (61) ಮೃತರು. ಮೇಕೆ ಮೇಯಿಸುವಾಗ ಹುಲಿ ಮಹಿಳೆಯನ್ನು ಎಳೆದೊಯ್ದಿದೆ. ಸಾರ್ವಜನಿಕರು ಕೂಗಿಕೊಂಡರೂ ಬಿಡದೆ ಆಕೆಯನ್ನು ಸುಮಾರು 100 ಮೀಟರ್‌ನಷ್ಟು ದೂರ ಇರುವ ಹಳ್ಳಕ್ಕೆ ಎಳೆದೊಯ್ದಿದೆ. ಮಹಿಳೆ ಮೃತದೇಹ ರುಂಡ ಬೇರ್ಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದೆ. ಇದೇ ಸ್ಥಳದಲ್ಲಿ 5 ತಿಂಗಳ ಹಿಂದೆ 2 ಹಸುಗಳನ್ನು ಹುಲಿ ಕೊಂದಿತು. ಇದೇ ಹುಲಿ ಮನುಷ್ಯರ ಮೇಲೆ ದಾಳಿ ಮಾಡಿದೆ ಎಂದು ಹೇಳಲಾಗಿದೆ.

ಹೆಣ್ಣೆಂದು ಎಂದು ಜನ್ಮವಿತ್ತ ಕೂಸನ್ನು ಕೊಂದ ತಾಯಿ

ರಾಮದುರ್ಗ: ನಾಲ್ಕನೇ ಬಾರಿಯೂ ಹೆಣ್ಣು ಮಗು ಜನಿಸಿದೆ ಎಂದು ಕೋಪಗೊಂಡ ತಾಯಿ, ತಾನು ಹೆತ್ತ ಮಗುವೆಂದು ಲೆಕ್ಕಿಸದೇ ಕತ್ತು ಹಿಸುಕಿ ಕೊಲೆ ಮಾಡಿದ ಹೃದಯ ವಿದ್ರಾವಕ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ತಾಲೂಕಿನ ಹಿರೇಮೂಲಂಗಿ ಗ್ರಾಮದ ಅಶ್ವಿನಿ ಹಳಕಟ್ಟಿ ಎಂಬ ಮಹಿಳೆ ಸತತವಾಗಿ ಮೂರು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ್ದಾಳೆ. ನಾಲ್ಕನೇ ಗಂಡು ಮಗುವಿಗೆ ಜನ್ಮ ನೀಡಲಿದ್ದೇನೆ ಎಂಬ ನಿರೀಕ್ಷೆಯಲ್ಲಿದ್ದಳು. ಆದರೆ ಮುದಕವಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನ.23 ರಂದು ಮತ್ತೆ ಹೆಣ್ಣು ಮಗು ಜನಿಸಿದೆ ಎಂಬ ಕೋಪದಲ್ಲಿ ಹೆತ್ತ ಮಗುವೆಂದು ಲೆಕ್ಕಿಸದೇ 3 ದಿನಗಳ ನಂತರ ಕತ್ತು ಹಿಸುಕಿ ಉಸಿರು ಗಟ್ಟಿಸಿ, ಸಾಯಿಸಿದ್ದಾಳೆ. ನಂತರ ಮಗು ಉಸಿರಾಡುತ್ತಿಲ್ಲ ಎಂಬ ನಾಟಕವಾಡಿ, ತಾಲೂಕು ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದಾಗ, ವೈದ್ಯಾಧಿಕಾರಿಗಳು ಮಗು ಉಸಿರುಗಟ್ಟಿ ಸಾವನ್ನಪ್ಪಿದೆ ಎಂದು ಸಂಶಯ ಬಂದಾಗ, ಸ್ಥಳೀಯ ಪೊಲೀಸರಿಗೆ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ನವೀನ ನಿಜಗುಲಿ ಮಾಹಿತಿ ನೀಡಿದ್ದಾರೆ.

ಅಶ್ವಿನಿ ತಾಯಿ ರೇಣುಕಾ ಸುರೇಬಾನ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ಕೊಲೆ ಪ್ರಕರಣವನ್ನು ದಾಖಲು ಮಾಡಲಾಗುತ್ತದೆ. ಅಶ್ವಿನಿ ಬಾಣಂತಿಯಾಗಿರುವುದರಿಂದ ವೈದ್ಯರ ಸಲಹೆ ಪಡೆದು ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು.
-ಡಾ.ಭೀಮಾಶಂಕರ ಗುಳೇದ್, ಎಸ್‌ಪಿ

ಶಿಂಧೆ ಬಣದ ವಿರುದ್ಧ ಬಿಜೆಪಿ ಸಚಿವೆ ಆರೋಪ

ಮಹಾಯುತಿಯಲ್ಲಿ ಮತ್ತೆ ಭಿನ್ನಮತ

ದೆಹಲಿ: ಮಹಾರಾಷ್ಟ್ರದ ಮಹಾಯುತಿ ಸರಕಾರದಲ್ಲಿ ಮತ್ತೆ ಬಿರುಕು ಉಂಟಾಗಿದ್ದು, ಶಿಂಧೆ ಬಣದ ಶಿವಸೇನೆ ಕಾರ್ಯಕರ್ತರು ಗೂಂಡಾಗಳಂತೆ ವರ್ತಿಸುತ್ತಿದ್ದಾರೆ ಎಂದು ಬಿಜೆಪಿ ಸಚಿವೆಯೊಬ್ಬರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸಚಿವೆ ಮತ್ತು ಭಾರತೀಯ ಜನತಾ ಪಕ್ಷದ ಸಂಸದೆ ರಕ್ಷಾ ಖಾಡ್ಸೆ ಮಂಗಳವಾರ ಜಲಗಾಂವ್ ಜಿಲ್ಲೆಯ ಮುಕ್ತೈ ನಗರ ವಿಧಾನಸಭಾ ಕ್ಷೇತ್ರದಲ್ಲಿ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಯ ಕಾರ್ಯಕರ್ತರು ಜನರನ್ನು ಬೆದರಿಸುತ್ತಿದ್ದಾರೆ ಎಂದು ಆರೋಪಿಸಿಸುವ ಮೂಲಕ ಮಹಾಯುತಿಯಲ್ಲಿ ಎರಡು ಮಿತ್ರಪಕ್ಷಗಳ ನಡುವಿನ ಉದ್ವಿಗ್ನತೆಯನ್ನು ಮತ್ತೊಮ್ಮೆ ಬಹಿರಂಗಪಡಿಸಿದೆ.

'ಡಿಸಿಎಂ ಶಿಂಧೆ ನೇತೃತ್ವದ ಶಿವಸೇನೆಯ ಕಾರ್ಯಕರ್ತರನ್ನು ನೋಡಿ. ಅವರು ಜನರ ಮೇಲೆ ಒತ್ತಡ ಹೆಚ್ಚಿಸುತ್ತಿದ್ದಾರೆ. ಅದರ ವಿರುದ್ಧ ಧ್ವನಿ ಎತ್ತುವುದು ನನ್ನ ಜವಾಬ್ದಾರಿ' ಎಂದು ಖಡ್ಸೆ ವರದಿಗಾರರಿಗೆ ಹೇಳಿಕೆ ನೀಡಿದ್ದಾರೆ. ಅವರು ಗೂಂಡಾಗಳಂತೆ ವರ್ತಿಸುತ್ತಿದ್ದಾರೆ, ಜನರ ಮೇಲೆ ಒತ್ತಡ ಹೆಚ್ಚಿಸುತ್ತಿದ್ದಾರೆ. ನನ್ನ ಮಗಳು ಸಹ ಅವರ ಗೂಂಡಾ ವರ್ತನೆಯಿಂದ ಬಳಲುತ್ತಿದ್ದಾಳೆ' ಎಂದು ಕ್ರೀಡಾ ಮತ್ತು ಯುವ ವ್ಯವಹಾರಗಳ ಖಾತೆ ರಾಜ್ಯ ಸಚಿವೆ ಹೇಳಿದ್ದಾರೆ.

ಮುಕ್ತೈ ನಗರ ವಿಧಾನಸಭಾ ಕ್ಷೇತ್ರವು ಸಾಂಪ್ರದಾಯಿಕವಾಗಿ ಬಿಜೆಪಿಯ ಭದ್ರಕೋಟೆಯಾಗಿತ್ತು, ಆದರೆ ಈಗ ಅದು ಶಿಂಧೆ ಶಿಬಿರಕ್ಕೆ ಹೋಗಿದೆ ಎಂದು ಅವರು ಹೇಳಿದರು. ತನ್ನ ಮಾವ ಏಕನಾಥ್ ಖಾಡ್ಸೆ ಅವರು ಬಿಜೆಪಿ ಸದಸ್ಯರಾಗಿದ್ದಾಗ ಹಲವಾರು ಬಾರಿ ಈ ಸ್ಥಾನವನ್ನು ಗೆದ್ದಿದ್ದರು ಎಂದು ಖಾಡ್ಸೆ ನೆನಪಿಸಿಕೊಂಡರು. 2024ರ ಚುನಾವಣೆಯಲ್ಲಿ ಶಿವಸೇನಾ ಅಭ್ಯರ್ಥಿ ಚಂದ್ರಕಾಂತ್ ಪಾಟೀಲ್ ಮುಕ್ತೈ ನಗರ ವಿಧಾನಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು.

ಇಂಥ ವ್ಯಕ್ತಿ ಭಾರತ ಸೇನೆಯಲ್ಲಿರಲು ಅನರ್ಹ: ಸುಪ್ರೀಂ ಕಿಡಿನುಡಿ

ಕ್ರೈಸ್ತ ಸೇನಾಧಿಕಾರಿ ವಜಾ ಸರಿ

ದೆಹಲಿ: ಕರ್ತವ್ಯದಲ್ಲಿದ್ದಾಗ ಹಿರಿಯ ಅಧಿಕಾರಿ ಆದೇಶಿಸಿದರೂ ತನ್ನ ಕ್ರೈಸ್ತ ಧರ್ಮದ ಕಾರಣಕ್ಕೆ ಸಿಖ್ಖರ ಪವಿತ್ರ ಕ್ಷೇತ್ರ ಗುರುದ್ವಾರ ಪ್ರವೇಶಿಸಲು ನಿರಾಕರಿಸಿದ ಸೇನಾಧಿಕಾರಿ ಭಾರತದ ಸೈನ್ಯದಲ್ಲಿರುವುದಕ್ಕೇ ಅನರ್ಹ ಎಂದಿರುವ ಸುಪ್ರೀಂ ಕೋರ್ಟ್, ಸೇನಾಧಿಕಾರಿಯನ್ನು ವಜಾಗೊಳಿಸಿದ ಭಾರತೀಯ ಸೇನೆಯ ಕ್ರಮವನ್ನು ಮಂಗಳವಾರ ಎತ್ತಿಹಿಡಿದಿದೆ. ಸೈನ್ಯವು ಒಂದು ಸಂಸ್ಥೆಯಾಗಿ ಜಾತ್ಯತೀತವಾಗಿದೆ ಮತ್ತು ಅದರ ಶಿಸ್ತಿನಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದೂ ನೂತನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ನೇತೃತ್ವದ ಪೀಠ ಸ್ಪಷ್ಟವಾಗಿ ಹೇಳಿದೆ.

3ನೇ ಕ್ಯಾವಲ್ರಿ ರೆಜಿಮೆಂಟ್‌ನಲ್ಲಿ ಲೆಫ್ಟಿನೆಂಟ್ ಆಗಿದ್ದ ತನ್ನನ್ನು ಕೆಲಸದಿಂದ ವಜಾಗೊಳಿಸಿದ ಭಾರತೀಯ ಸೇನೆಯ ಕ್ರಮವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ ಸ್ಯಾಮ್ಯುಯೆಲ್ ಕಮಲೇಶನ್, 'ನಾನು ಕ್ರೈಸ್ತ ಧರ್ಮೀಯ, ಏಕದೇವೋಪಾಸಕ. ಗುರುದ್ವಾರ ಪ್ರವೇಶಿಸಲು ಒತ್ತಾಯಿಸುವುದು ನನ್ನ ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸಿದಂತೆ' ಎಂದು ವಾದಿಸಿದ್ದರು. ಆದರೆ ಪೀಠ, ಸೇನಾಧಿಕಾರಿಯ ನಡವಳಿಕೆ ಹಿರಿಯ ಅಧಿಕಾರಿಯ ಕಾನೂನುಬದ್ಧ ಆದೇಶಕ್ಕೆ ತೋರಿದ ಅವಿಧೇಯತೆ, ಅಶಿಸ್ತು ಎಂದು ಹೇಳಿದೆ.

'ಇಂಥ ಸೇನಾಧಿಕಾರಿ ಯಾವ ಸಂದೇಶವನ್ನು ದೇಶಕ್ಕೆ ರವಾನಿಸಲು ಇಚ್ಛಿಸುತ್ತಿದ್ದಾರೆ?' ಎಂದು ಪ್ರಶ್ನೆ ಮಾಡಿದ ಪೀಠ, ಅಶಿಸ್ತು ತೋರಿಸಿದ ಈ ಸೇನಾಧಿಕಾರಿಯನ್ನು ವಜಾಗೊಳಿಸಿದ ಕ್ರಮ ಸರಿಯಾಗಿಯೇ ಇದೆ. ಇಂಥ ನಕಾರಾತ್ಮಕ, ಅಶಿಸ್ತಿನ ವ್ಯಕ್ತಿ ಸೇನೆಯಲ್ಲಿರಲು ಅನರ್ಹ ಎಂದು ಹೇಳಿದ ಪೀಠ, ಸ್ಯಾಮ್ಯುಯಲ್ ಅರ್ಜಿಯನ್ನು ವಜಾಗೊಳಿಸಿತು.ಸ್ಯಾಮ್ಯುಯಲ್ ಅತ್ಯುತ್ತಮ ಸೇನಾಧಿಕಾರಿಯೇ ಆಗಿರಬ ಹುದು. ಆದರೆ ಭಾರತೀಯ ಸೈನ್ಯದಲ್ಲಿರಲು ಅರ್ಹರಲ್ಲ. ಈ ಸಮಯದಲ್ಲಿ ನಮ್ಮ ಸೇನಾಪಡೆಗಳು ಎಂಥ ಜವಾಬ್ದಾರಿಗಳನ್ನು ಹೊಂದಿವೆ ಎಂಬುದರ ಅರಿವಿರಬೇಕಿತ್ತು ಎಂದು ಪೀಠ ಅರ್ಜಿದಾರರನ್ನೇ ತರಾಟೆಗೆ ತೆಗೆದುಕೊಂಡಿತು. ಸ್ಯಾಮ್ಯುಯಲ್ ಮೇಲಧಿಕಾರಿಯ ಕಾನೂನುಬದ್ಧ ಆದೇಶವನ್ನು ಪಾಲಿಸಲು ಧಿಕ್ಕರಿಸಿದ್ದಾರೆ. ಕರ್ತವ್ಯಪಾಲನೆಗಿಂತ ತನ್ನ ಧರ್ಮದ ಆಚರಣೆಯೇ ಮುಖ್ಯ ಎಂದಿದ್ದಾರೆ.

ವಕೀಲರ ವಾದ ಒಪ್ಪದ ಪೀಠ

ಅರ್ಜಿದಾರ ಸ್ಯಾಮ್ಯುಯಲ್ ಪರ ವಕಾಲತು ವಹಿಸಿದ್ದ ಹಿರಿಯ ವಕೀಲ ಶಂಕರನಾರಾಯಣನ್, ಸೇನೆಗೆ ಸೇರಿದ ಕಾರಣಕ್ಕೇ ಒಬ್ಬ ವ್ಯಕ್ತಿಗೆ ಆತನ ಧರ್ಮದ ಆಚರಣೆಗಳನ್ನು ಬಿಡಲು ಹೇಳಲಾಗದು. ಸಂವಿಧಾನವೇ ಪ್ರತಿಪ್ರಜೆಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ ಎಂದು ವಾದಿಸಿದರು. ಆದರೆ ಪೀಠ ಅವರ ಈ ವಾದವನ್ನು ಒಪ್ಪಲಿಲ್ಲ.

ನಮ್ಮ ಬೇರು ಅರಬ್, ಟರ್ಕಿಯದ್ದಲ್ಲ: ಸಿಂಧ್ ನಾಗರಿಕರ ಹೇಳಿಕೆ

ರಾಜನಾಥ್ ಹೇಳಿಕೆಗೆ ಸಿಂಧ್‌ನಲ್ಲಿ ಬೆಂಬಲ

ದೆಹಲಿ/ಸಿಂಧ್: 'ಪಾಕಿಸ್ತಾನದ ಸಿಂಧ್ ಪ್ರಾಂತ್ಯಕ್ಕೂ ಭಾರತದ ನಾಗರಿಕತೆಗೂ ಬಹಳ ಹಳೆಯ ನಂಟಿದೆ. ಹಾಗಾಗಿ ಸದ್ಯೋಭವಿಷ್ಯದಲ್ಲಿ ಸಿಂಧ್ ಪ್ರಾಂತ್ಯ



ಭಾರತದೊಂದಿಗೆ ಸೇರಬಹುದಾಗಿದೆ. ದೇಶದ ಗಡಿಗಳು ಶಾಶ್ವತವೇನಲ್ಲ, ಅವು ಬದಲಾಗುವ ಅವಕಾಶವಿರುತ್ತದೆ, ಖಂಡಿತಾ ಬದಲಾಗಲಿವೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಕ್ಕೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಉತ್ತಮ ಬೆಂಬಲ ವ್ಯಕ್ತವಾಗಿದೆ.

'ಸಿಂಧ್' ಪ್ರಾಂತ್ಯದ ಪ್ರಮುಖ ನಾಯಕ ಹಾಗೂ 'ಜೇ ಸಿಂಧ್ ಮುತ್ತಹಿದಾ ಮಹಾಜ್'(ಜೆಎಸ್‌ಎಂಎಂ) ಅಧ್ಯಕ್ಷ ಶಾಫಿ ಬರ್ಫತ್, ರಾಜನಾಥ್ ಸಿಂಗ್ ಅವರ ಹೇಳಿಕೆ ಸ್ವಾಗತಿಸುತ್ತೇವೆ. ಐತಿಹಾಸಿಕ ಹಾಗೂ ಭಾರೀ ಒಳನೋಟವುಳ್ಳ ಹೇಳಿಕೆ ಅದಾಗಿದೆ. ಸಿಂಧ್ ಪ್ರಾಂತ್ಯದ ಹೋರಾಟಕ್ಕೆ ಪ್ರೇರಕವಾಗಿವೆ' ಎಂದಿದ್ದಾರೆ.



ಸಿಂಗ್ ಅವರ ನಿಲುವನ್ನು ಸಿಂಧ್ ಪ್ರಾಂತ್ಯ ಬಲವಾಗಿ ಅಂಗೀಕರಿಸುತ್ತದೆ ಮತ್ತು ಪ್ರಶಂಸಿಸುತ್ತದೆ. ಇದು ಸಿಂಧೂ ಪ್ರದೇಶದ ದೀರ್ಘಕಾಲದ ಸ್ವಾತಂತ್ರ್ಯದ ಆಕಾಂಕ್ಷೆ ಮತ್ತು ಭಾರತದೊಂದಿಗಿನ ಸಂಭಾವ್ಯ ಒಕ್ಕೂಟ ಸಂಬಂಧಕ್ಕೆ ನೈತಿಕ ಮತ್ತು ರಾಜಕೀಯ ಉತ್ತೇಜನ ನೀಡುವಂತಹುದಾಗಿ ಎಂದು ಶಾಫಿ ವ್ಯಾಖ್ಯಾನಿಸಿದ್ದಾರೆ. ಸಿಂಧ್ ಮತ್ತು ಭಾರತ ಒಂದೇ ನಾಗರಿಕತೆ ಹಂಚಿಕೊಂಡಿರುವ ಸ್ಥಳಗಳು. ಸಿಂಧಿ ಜನರ ಐತಿಹಾಸಿಕ ಬೇರುಗಳು ಅರಬ್ ಅಥವಾ ಟರ್ಕಿಯಲ್ಲಿಲ್ಲ, ಭಾರತದ ಸಪ್ತ ಸಿಂಧೂ ದೇಶದ ಭೂಮಿಯಲ್ಲಿವೆ ಎಂದೂ ಹೇಳಿದ್ದಾರೆ.

ರಾಜನಾಥ್ ಸಿಂಗ್ ಹೇಳಿದ್ದು...

ವಿಶ್ವ ಸಿಂಧ್ ಫೌಂಡೇಶನ್ ಕಾರ್ಯಕ್ರಮದಲ್ಲಿ ರಾಜನಾಥ್ ಸಿಂಗ್, ದೇಶ ವಿಭಜನೆಯ ಹೊರತಾಗಿಯೂ ಭಾರತ ಮತ್ತು ಸಿಂಧ್ ಪ್ರಾಂತ್ಯದ ನಡುವಿನ ನಾಗರಿಕತೆ ನಿರಂತರವಾಗಿದೆ ಎಂದು ಹೇಳಿದ್ದರು. ಅಲ್ಲದೇ, ಬಿಜೆಪಿ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರ ಮಾತುಗಳನ್ನು ನೆನಪಿಸಿದರು. 'ಸಿಂಧ್ ಪ್ರಾಂತ್ಯದಲ್ಲಿರುವ ಹಿಂದೂಗಳು, ವಿಶೇಷವಾಗಿ ಅಡ್ವಾಣಿ ಜಿ ಅವರ ಪೀಳಿಗೆಯವರು, ಭಾರತದಿಂದ ಸಿಂಧ್ ಬೇರ್ಪಡಿಸುವುದನ್ನು ಈವರೆಗೂ ಒಪ್ಪಿಲ್ಲ. ಸಿಂಧ್ ಸದ್ಯ ಭಾರತದ ಭಾಗವಾಗಿಲ್ಲದಿರಬಹುದು. ಆದರೆ ನಾಗರಿಕತೆ ದೃಷ್ಟಿಯಿಂದ ಸಿಂಧ್ ಸದಾ ಭಾರತದ ಭಾಗವೇ ಆಗಿದೆ. ಭೌಗೋಳಿಕವಾಗಿ ಗಡಿಗಳು ಬದಲಾಗಬಹುದು. ನಾಳೆ ಸಿಂಧ್ ಪ್ರಾಂತ್ಯ ಭಾರತಕ್ಕೆ ಸೇರಬಹುದು ಎಂದು ರಾಜನಾಥ್ ಸಿಂಗ್ ಹೇಳಿದ್ದರು.

ಕನ್ನಡ ನಾಡು ನುಡಿಹಬ್ಬ | ವಿವಿಧ ಕ್ಷೇತ್ರದ ಸಾಧಕರಿಗೆ ಕರುನಾಡ ರತ್ನ ಪ್ರಶಸ್ತಿ

ಪ್ರಾಮಾಣಿಕ ಬದುಕನ್ನು ರೂಢಿಸಿ: ಸಂತೋಷ್ ಹೆಗ್ಡೆ

ಬೆಂಗಳೂರು: ಬದುಕಿನಲ್ಲಿ ಎಷ್ಟೇ ಆಕಾಂಕ್ಷೆಗಳಿದ್ದರೂ, ಯಾವುದೇ ಚೌಕಟ್ಟನ್ನು ಮೀರದೆ ಸಮಾಜದಲ್ಲಿ ಪ್ರಾಮಾಣಿಕ ಬದುಕನ್ನು ಮುನ್ನಡೆಸಲು ಎಲ್ಲರೂ ರೂಢಿಸಿಕೊಳ್ಳಲು ಮುಂದಾಗಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಅವರು ನಾಗರಭಾವಿಯ ಶ್ರೀ ಸರ್ವಜನಾ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್, ರಾಜ್ಯೋತ್ಸದ ಅಂಗವಾಗಿ ಆಯೋಜಿಸಿದ್ದ 'ಕನ್ನಡ ನಾಡು ಹಬ್ಬ' ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು. ಇಂದಿನ ಬದುಕಿನಲ್ಲಿ ಮಾನವೀಯತೆಯ ಮೌಲ್ಯ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ, ಹಾಗಾಗಿ ನಿಸ್ವಾರ್ಥವಾಗಿ ಯೋಚಿಸಿ ಒಗ್ಗಟ್ಟಿನಿಂದ ಬಾಳಲು ಎಲ್ಲರೂ ಮುಂದಾಗಬೇಕು. ಇಂದಿನ ಮಕ್ಕಳು ತಮ್ಮ ಭವಿಷ್ಯದ ಬಗ್ಗೆ ಯೋಚಿಸದೆ ಸಾಮಾಜಿಕ ಜಾಲತಾಣದತ್ತ ಮಿತಿ ಇಲ್ಲದೆ ಮಾರುಹೋಗಿದ್ದಾರೆ. ಅವರಲ್ಲಿ ನೀತಿಪಾಠವನ್ನು ಕಲಿಸುವ ಪ್ರಕ್ರಿಯೆಗೆ ಹೆತ್ತವರು ಮುಂದಾಗಬೇಕು ಎಂದೂ ಅವರು ಹೇಳಿದರು.

ಸಮಾರಂಭದ ವೇದಿಕೆಯಲ್ಲಿ ಬಾಗಲಕೋಟೆಯ ಶಿವಕುಮಾರ ಮಹಾಸ್ವಾಮಿ, ಗಂಗಾವತಿಯ ಅನ್ನಪೂರ್ಣ ಸಿಂಗ್, ಕೆಂಚನೂರು ಶಂಕರ್, ಸಂಸ್ಥೆಯ ಅಧ್ಯಕ್ಷೆ ಲಕ್ಷಿತಾ ಗಂಗಾವತಿ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಖ್ಯಾತ ವೈದ್ಯ ಡಾ. ವೆಂಕಟರಾಮ್ ಶೆಟ್ಟಿ, ಸಿನಿಮಾ ನಟಿ ಕು.ಅಂಕಿತಾ ಜಯರಾಮ್, ಪತ್ರಕರ್ತ ನರೇಂದ್ರ, ಪಾರೆಕಟ್, ಸಮಾಜಸೇವಕಿ ವಿದ್ಯಾ ವೀರರಾಜ್ ಶೆಟ್ಟಿ ಮುಂತಾದ ಹಲವಾರು ಸಾಧಕರಿಗೆ ಕರುನಾಡ ರತ್ನ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಮೊಟ್ಟೆಯ ಚಿಲ್ಲರೆ ಬೆಲೆ 7.50-8 ರು. | ವಿದೇಶಗಳಿಗೆ ದಿನಕ್ಕೆ ಸರಾಸರಿ 50 ಲಕ್ಷ ಮೊಟ್ಟೆ ರಫ್ತು

ಮೊಟ್ಟೆ ಬೆಲೆಯಲ್ಲಿ ಭಾರೀ ಏರಿಕೆ

ಹೂವಪ್ಪ.ಐ ಹೆಚ್

ಬೆಂಗಳೂರು: ಮೊದಲೇ ತರಕಾರಿ ಬೆಲೆ ಹೆಚ್ಚಾಗಿದ್ದು, ಅದರ ನಡುವೆ ಮೊಟ್ಟೆ ಬೆಲೆಯೂ ದಿಢೀರನೆ ಹೆಚ್ಚಾಗಿದೆ. ಮೀನು, ಮಟನ್, ಚಿಕನ್‌ಗಿಂತ ಜನರಿಗೆ ಕೈಗೆಟುಕುವ ಬೆಲೆಯಲ್ಲಿ ಸಿಗುತ್ತಿದ್ದ ಮೊಟ್ಟೆಯನ್ನು ಇದೀಗ ಬಡವರು ಖರೀದಿಸಿ ತಿನ್ನುವುದು ಕಷ್ಟವಾಗಿಬಿಟ್ಟಿದೆ.

ಉತ್ಪಾದನೆಯಲ್ಲಿ ಶೇ.10ರಷ್ಟು ಕಡಿಮೆಯಾಗಿರುವ ಕಾರಣವಲ್ಲದೆ ದುಬೈ, ಒಮಾನ್ ದೇಶಗಳಿಗೆ ದಿನಕ್ಕೆ ಅಂದಾಜು 50-60 ಲಕ್ಷ ಮೊಟ್ಟೆ ರಫ್ತಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೊಟ್ಟೆ ಬೆಲೆ ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎನ್ನಲಾಗಿದೆ. ಹೆಚ್ಚು ಎಂದರೆ ಮೊಟ್ಟೆ ಬೆಲೆ 6 ರಿಂದ 6.50 ರು. ಇತ್ತು, ಆ ಕಾರಣದಿಂದಲೇ ನೂರಾರು ರೂಪಾಯಿ ಕೊಟ್ಟು ಮಾಂಸ ಖರೀದಿ ಮಾಡುವ ಬದಲು ಹಲವರು ಮೊಟ್ಟೆ ಖರೀದಿ ಮಾಡುತ್ತಿದ್ದಾರೆ. ಕಳೆದ ಎರಡು ವಾರದ ಹಿಂದೆ ಎನ್‌ಇಸಿಸಿ ಸಗಟು ಬೆಲೆ 100ಕ್ಕೆ 575 ರು. ಇದ್ದ ಬೆಲೆ ಇದೀಗ 675 ರು. ಆಗಿದೆ, 12ಕ್ಕೆ 70 ರು. ಇದ್ದ ಬೆಲೆ 84 ರು.ಗೆ ಏರಿಕೆಯಾಗಿದೆ. ಚಿಲ್ಲರೆ ದರದಲ್ಲಿ 1 ಮೊಟ್ಟೆಗೆ 7 ರು. ಗಡಿ ದಾಟುತ್ತಿದ್ದು, 7.50 ರು.ನಿಂದ 8 ರು.ವರೆಗೆ ಮಾರಾಟವಾಗುತ್ತಿದೆ, ಹೀಗಾಗಿ ಜನಸಾಮಾನ್ಯರಿಗೆ ಮೊಟ್ಟೆ ಕೈಗೆಟುಕದಂತಾಗಿದೆ.

ಕಾರ್ತಿಕ ಮಾಸದಲ್ಲಿ ಬೆಲೆ ಏರಿಕೆ: ಸಾಮಾನ್ಯವಾಗಿ ಕಾರ್ತಿಕ ಮಾಸದ ಸಂದರ್ಭದಲ್ಲಿ ಕೋಳಿ, ಮೀನು, ಮೊಟ್ಟೆ ಬೆಲೆ ಕಡಿಮೆ ಇರುತ್ತದೆ, ಈ ಕಾಲಾವಧಿಯಲ್ಲಿ ಹಲವರು ಮಾಂಸವೂ ಸೇರಿದಂತೆ ಮೊಟ್ಟೆಯನ್ನೂ ಸೇವಿಸುವುದಿಲ್ಲ, ಈ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಮೊಟ್ಟೆ ಬೆಲೆ ಕಡಿಮೆಯಾಗುತ್ತದೆ. ಆದರೆ ಈ ತಿಂಗಳಿನಲ್ಲಿ ತರಕಾರಿ ಬೆಲೆ ಏರಿಕೆಯೊಂದಿಗೆ ಮೊಟ್ಟೆ ಬೆಲೆಯೂ ಹೆಚ್ಚಳವಾಗಿದೆ, ಹಾಗಾಗಿ ಪ್ರಸಕ್ತ ವರ್ಷ ಮೊಟ್ಟೆ ಬೆಲೆ ಗಗನವನ್ನು ಮುಟ್ಟುತ್ತಿದೆ.

ಮೊಟ್ಟೆ ಬೆಲೆ ಬಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದರಿಂದ ಗ್ರಾಹಕರು ಖರೀದಿ ಕಡಿಮೆ ಮಾಡುತ್ತಿದ್ದಾರೆ. 12 ಮೊಟ್ಟೆ ಖರೀದಿಸುವ ಗ್ರಾಹಕರು 6 ಮೊಟ್ಟೆ ಸಾಕು ಎನ್ನುತ್ತಿದ್ದಾರೆ, ಅದರಲ್ಲೂ ಬಡ ಗ್ರಾಹಕರು ಮೊಟ್ಟೆ ಬೆಲೆ ಕೇಳಿ ಮೌನಕ್ಕೆ ಜಾರುತ್ತಾರೆ, ಹೀಗಾಗಿ ವ್ಯಾಪಾರ ಕಡಿಮೆಯಾಗಿದೆ.
ತ್ರಿಲೋಕ್, ಬೆಂಗಳೂರು, ಚಿಲ್ಲರೆ ಮೊಟ್ಟೆ ವ್ಯಾಪಾರಿ

ವಿದೇಶಕ್ಕೆ ಮೊಟ್ಟೆ ರಫ್ತು ಆಗುತ್ತಿದೆ, ಉತ್ಪಾದನೆ ಕಡಿಮೆಯಾಗಿದೆ, ಜತೆಗೆ ಉತ್ತರಭಾರತದಲ್ಲಿ ಚಳಿ ಜಾಸ್ತಿ ಇರುವುದರಿಂದ ಮೊಟ್ಟೆಗೆ ಬೇಡಿಕೆ ಹೆಚ್ಚಿದೆ. ಕೇರಳ, ಆಂಧ್ರಪ್ರದೇಶದಲ್ಲೂ ಬೇಡಿಕೆ ಇದೆ, ಹಾಗಾಗಿ ಮೊಟ್ಟೆ ಬೆಲೆ ಏರಿಕೆಯಾಗಿದೆ.
ರವಿ, ಯಶವಂತಪುರ ಸಗಟು ಮೊಟ್ಟೆ ಪೂರೈಕೆದಾರರು.

ಮತ್ತೆ ಏರಿಕೆಯಾಗುತ್ತಾ ಮೊಟ್ಟೆ ಬೆಲೆ: ಕೆಲವು ದಿನಗಳಲ್ಲಿ ಕ್ರಿಸ್ಮಸ್ ಹಬ್ಬ, ಹೊಸವರ್ಷ ಬರುತ್ತಿರುವ ಹಿನ್ನೆಲೆಯಲ್ಲಿ ಮೊಟ್ಟೆ ಬೆಲೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ವ್ಯಾಪಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅಲ್ಲದೇ ಈ ಸಂದರ್ಭದಲ್ಲಿ ಕೇಕ್‌ಗಳಲ್ಲಿ ಮೊಟ್ಟೆ ಹೆಚ್ಚು ಬಳಕೆಗೆ ಬರುವ ಹಿನ್ನೆಲೆಯಲ್ಲಿ ಅವುಗಳ ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇದೆ.

ಮೊಟ್ಟೆ ಬೇಡಿಕೆಗೆ ಕಾರಣ: ಅಂಗನವಾಡಿ, ಶಾಲೆಗಳಲ್ಲಿ ಮೊಟ್ಟೆ ಬಳಕೆ, ಈ ತಿಂಗಳಲ್ಲಿ ಮದುವೆ ಸೀಸನ್ ಆರಂಭವಾಗುವುದರಿಂದ ಇನ್ನಷ್ಟು ಬೇಡಿಕೆಯ ನಿರೀಕ್ಷೆಯಿದೆ. ಚಳಿಗಾಲದಲ್ಲಿ ಯುವಕರು, ಮಹಿಳೆಯರು, ಮಕ್ಕಳು ಬೇಡಿಕೆ ತಿಂಡಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ ಎನ್ನಲಾಗಿದೆ. ಅದೇ ಕಾರಣದಿಂದ ಮೊಟ್ಟೆ ಬೆಲೆ ಸಾಮಾನ್ಯಕ್ಕಿಂತಲೂ ಏರಿಕೆ ಕಂಡಿದೆ ಎಂದು ಮೊಟ್ಟೆ ಮಾರಾಟಗಾರಾದ ತ್ರಿಲೋಕ್ ಹೇಳುತ್ತಾರೆ.

ಬೆಲೆ ಏರಿಕೆಗೆ ಕಾರಣ: ಫಾರಂ ಕೋಳಿಗಳಿಗೆ ಆಹಾರವಾಗಿ ಮೆಕ್ಕೆ ಜೋಳಗಳನ್ನು ನೀಡಲಾಗುತ್ತದೆ, ಆದರೆ ಇದೀಗ ಜೋಳದ ದರ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ, ಜತೆಗೆ ವಿದೇಶಕ್ಕೆ ಹೆಚ್ಚು ರಫ್ತುಗುತ್ತಿದೆ. ಕೋಳಿ ಆಹಾರದ ಬೆಲೆಯಲ್ಲೂ ಭಾರೀ ಏರಿಕೆಯಾಗಿರುವುದರಿಂದ ಅದೆಷ್ಟೋ ಫಾರ್ಮ್‌ಗಳು ಸಹ ನಷ್ಟದಿಂದ ಮುಚ್ಚಿವೆ ಎಂದು ವರದಿಯಾಗಿದೆ. ಇದೇ ಕಾರಣದಿಂದ ಇದೀಗ ಮೊಟ್ಟೆ ಉತ್ಪಾದನಾ ಪ್ರಮಾಣ ಇಳಿಕೆಯಾಗಿದ್ದು, ಪೂರೈಕೆಯಲ್ಲೂ ವಿಳಂಬವಾಗುತ್ತಿದೆ. ಅದೇ ಕಾರಣದಿಂದಲೂ ಮೊಟ್ಟೆ ಬೆಲೆ ಏರಿಕೆಯಾಗಿದೆ ಎನ್ನಲಾಗಿದೆ.

ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರಕ್ಕೆ ದಿನಂಪ್ರತಿ 40 ಲಕ್ಷ ರವಾನೆಯಗುತ್ತದೆ ಎನ್ನುತ್ತಾರೆ ಸಗಟು ಮೊಟ್ಟೆ ಪೂರೈಕೆದಾರ ರೆಡ್ಡಿ. ಇನ್ನು ಮುಂಬರುವ ತಿಂಗಳುಗಳಲ್ಲಿ ಉತ್ಪಾದನಾ ಪ್ರಮಾಣ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆ ಇದೆ.

ಸಮಾಚಾರ ಸಣ್ಣದಲ್ಲ

ಅಸ್ಸಾಂ: ಬಹುಪತ್ನಿತ್ವ ನಿಷೇಧಕ್ಕೆ ಮಸೂದೆ



ಗುವಾಹಟಿ: ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮಂಗಳವಾರ ವಿಧಾನಸಭೆಯಲ್ಲಿ ಬಹುಪತ್ನಿತ್ವ ನಿಷೇಧ ಮಸೂದೆಯನ್ನು ಮಂಡಿಸಿದ್ದಾರೆ. ಅಸ್ಸಾಂನ ಜನಪ್ರಿಯ ಗಾಯಕಿ ಜುಬೀನ್ ಗರ್ಗ್ ಅವರ ಸಾವಿನ ಕುರಿತಾದ ಚರ್ಚೆಯ ಬೆನ್ನಲ್ಲೇ ವಿರೋಧ ಪಕ್ಷಗಳಾದ ಕಾಂಗ್ರೆಸ್, ಸಿಪಿಐ(ಎಂ) ಶಾಸಕರು ಸಭಾತ್ಯಾಗ ಮಾಡಿದ್ದರು. ವಿಪಕ್ಷಗಳ ಶಾಸಕರ ಅನುಪಸ್ಥಿತಿಯಲ್ಲಿ ಶರ್ಮಾ, ಅಸ್ಸಾಂ ಬಹುಪತ್ನಿತ್ವ ನಿಷೇಧ ಮಸೂದೆ-2025 ಅನ್ನು ಮಂಡಿಸಿದ್ದಾರೆ. ಚಳಿಗಾಲದ ಅಧಿವೇಶನದ ಮೊದಲ ದಿನದಂದು ಮಸೂದೆಯನ್ನು ಮಂಡಿಸಲಾಗಿದ್ದು, ಮಸೂದೆಗೆ ಅಂಗೀಕಾರ ಸಿಕ್ಕ ಬಳಿಕ ಚರ್ಚೆ ನಡೆಸಲಾಗುತ್ತದೆ. ಹಾಗೆಯೇ ಬಹುಪತ್ನಿತ್ವ ನಿಷೇಧದ ಕಾರಣಕ್ಕೆ ಸಂತ್ರಸ್ತರಾಗುವವರಿಗೆ ನೆರವು ಕಲ್ಪಿಸಲು ಪ್ರತ್ಯೇಕ ಹಣಕಾಸು ನಿಧಿ ಸ್ಥಾಪಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ನವೆಂಬರ್ 10ರಂದು ಬಹುಪತ್ನಿತ್ವ ನಿಷೇಧ ಮಸೂದೆಗೆ ಅಸ್ಸಾಂ ಸಚಿವ ಸಂಪುಟ ಸಭೆ ಅನುಮೋದನೆ ದೊರಕಿತ್ತು. ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರ ನಿಯಮ ಉಲ್ಲಂಘಿಸಿ, ಬಹುಪತ್ನಿತ್ವ ಅನುಸರಿಸುವವರಿಗೆ ಏಳು ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸಲಾಗುವುದು.

ಯಾರಿಗೆ ಬಲ ಹೆಚ್ಚಿದೆ ಹೈಕಮಾಂಡ್ ತೀರ್ಮಾನಿಸಲಿ | ಶಾಸಕರ ಸಂಖ್ಯೆಗಿಂತ ಹೈಕಮಾಂಡ್ ಮಾತೇ ಅಂತಿಮ ಎಂದ ಡಿಕೆ ಬಣ

ನಂಬರ್ ಗೇಮ್‌ಗೆ ಸಿದ್ದು ಆಪ್ತರ ಪಟ್ಟು

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕ್ಷಿಪ್ರ ಬೆಳವಣಿಗೆ ನಡುವೆ ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ ನಂಬರ್ ಗೇಮ್ ಶುರು ಮಾಡಿದ್ದು, ಯಾವುದೇ ಬದಲಾವಣೆಗೂ ಮೊದಲು ಶಾಸಕರ ಅಭಿಪ್ರಾಯ ಸಂಗ್ರಹಿಸಿ ಎನ್ನುವ ಬೇಡಿಕೆ ಮುಂದಿಟ್ಟಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ನಡೆಯುತ್ತಿರುವ ಕುರ್ಚಿ ಕಾದಾಟ ಅಂತಿಮ ಹಂತಕ್ಕೆ ಬಂದಿರುವ ಹೊತ್ತಿನಲ್ಲಿಯೇ, ನಾಯಕತ್ವ ಬದಲಾವಣೆಗೂ ಮೊದಲು ಶಾಸಕಾಂಗ ಪಕ್ಷದ ಸಭೆ ಕರೆದು, ಯಾರಿಗೆ ಹೆಚ್ಚು ಬಲವಿದೆಯೋ ಅವರನ್ನು 'ಪಟ್ಟ'ದಲ್ಲಿ ಕೂರಿಸಿ ಎನ್ನುವ ಒತ್ತಡವನ್ನು ರಾಹುಲ್ ಗಾಂಧಿ ಅವರ ಮೇಲೆ ಹೇರಿದ್ದಾರೆ. ಆದರೆ ಇದಕ್ಕೆ ಪ್ರತಿಯಾಗಿ ಡಿ.ಕೆ.ಶಿವಕುಮಾರ್ ಬಣದವರು, ಶಾಸಕರ ಸಂಖ್ಯೆ ಬಲದ ಜತೆಜತೆಗೆ ಹೈಕಮಾಂಡ್ ತೀರ್ಮಾನವೇ ಅಂತಿಮವಾಗಲಿದೆ. ಆದ್ದರಿಂದ ಪಕ್ಷದ ಹೈಕಮಾಂಡ್ ಚುನಾವಣೆಯ ಬಳಿಕ ನೀಡಿರುವ ಭರವಸೆಯನ್ನು ಉಳಿಸಿಕೊಳ್ಳಬೇಕು ಎನ್ನುವ ಒತ್ತಡವನ್ನು ಹೇರಲು ತೀರ್ಮಾನಿಸಿದ್ದಾರೆ.

ನಂಬರ್ ಗೇಮ್‌ಗೆ ಆಗ್ರಹಿಸಿದ್ದು ಏಕೆ?: 2023ರ ಫಲಿತಾಂಶದ ಬಳಿಕ ಹೈಕಮಾಂಡ್ ಮಧ್ಯಸ್ಥಿಕೆಯಲ್ಲಿ ನಡೆದಿರುವ ಒಪ್ಪಂದ ಏನಾಗಿದೆ ಎನ್ನುವ ಗೊಂದಲದ ಹೊರತಾಗಿಯೂ, ಈಗಲೂ ಸಿದ್ದರಾಮಯ್ಯ ಅವರಿಗೆ ಶಾಸಕರ ಸಂಖ್ಯಾಬಲ ಹೆಚ್ಚಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಹಲವು ಶಾಸಕರು ಕಾಣಿಸಿಕೊಂಡಿದ್ದರೂ, ಗಟ್ಟಿಯಾಗಿ ನಿಲ್ಲುತ್ತಿಲ್ಲ ಎನ್ನುವ ಮಾತಿದೆ. ಇದಕ್ಕೆ ಪೂರಕವಾಗಿ, ಕೆಲ ದಿನಗಳ ಹಿಂದೆ ದೆಹಲಿ ಪ್ರವಾಸ ನಡೆಸಿದ್ದ ಕೆಲ ಶಾಸಕರು ಹೋಗಿದ್ದು ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಒತ್ತಡ ಹೇರುವುದಕ್ಕೆ. ಆದರೆ ಸಾರ್ವಜನಿಕವಾಗಿ, ಮಾಧ್ಯಮದಲ್ಲಿ ಚರ್ಚೆ ಹೆಚ್ಚಾಗುತ್ತಿದ್ದಂತೆ ತಾವು ಹೋಗಿದ್ದು ಮುಖ್ಯಮಂತ್ರಿ ಬದಲಾವಣೆ ವಿಷಯದ ಬಗ್ಗೆ ಚರ್ಚಿಸುವುದಕ್ಕೆ ಅಲ್ಲ. ಬದಲಿಗೆ ತಮ್ಮ ತಮ್ಮ ವೈಯಕ್ತಿಕ ಕಾರಣಗಳಿಗಾಗಿ ಎನ್ನುವ ಹೇಳಿಕೆಗಳನ್ನು ನೀಡುವ ಮೂಲಕ ಇಡೀ ಪ್ರವಾಸದ ಗಂಭೀರತೆಯನ್ನು ಕಳೆಯುವಂತೆ ಮಾಡಿದ್ದಾರೆ. ಈ ಕಾರಣಕ್ಕಾಗಿಯೇ 'ಬಲ' ಪ್ರದರ್ಶನಕ್ಕೆ ಶಾಸಕಾಂಗ ಪಕ್ಷದ ಸಭೆಗೆ ಡಿಕೆ ಬಣ ಒಪ್ಪುತ್ತಿಲ್ಲ. ಸಿದ್ದರಾಮಯ್ಯ ಬಣಕ್ಕೆ ಡಿ.ಕೆ.ಶಿವಕುಮಾರ್ ಅವರೊಂದಿಗೆ ಶಾಸಕರ ಬಲವಿಲ್ಲದಿರುವುದು ಖಚಿತವಾಗಿರುವುದರಿಂದ, ಶಾಸಕರ ತಲೆ ಎಣಿಕೆಗೆ ಆಗ್ರಹಿಸುತ್ತಿದ್ದಾರೆ. ಆದರೆ ಇಬ್ಬರನ್ನು ಕಳೆದುಕೊಳ್ಳಲು ಸಿದ್ಧವಿಲ್ಲದ ಹೈಕಮಾಂಡ್, 'ತಟಸ್ಥ' ಸೂತ್ರವೇನಾದರೂ ಇದೆಯೇ ಎನ್ನುವ ಹುಡುಕಾಟದಲ್ಲಿದ್ದಾರೆ ಎನ್ನಲಾಗುತ್ತಿದೆ.

ಸಂಧಾನಕ್ಕೆ ಮುಂದಾಗಿರುವ ಹೈಕಮಾಂಡ್

ಈ ನಡುವೆ ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರು ಇದೀಗ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ತಟಸ್ಥ ಬಣದಲ್ಲಿರುವ ನಾಯಕರುಗಳನ್ನು ಕರೆಸಿಕೊಂಡು ಮಾತನಾಡುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಸೋಮವಾರ ಬಿ.ಕೆ. ಹರಿಪ್ರಸಾದ್ ಜತೆ ಮಾತನಾಡಿದ್ದ ರಾಹುಲ್ ಗಾಂಧಿ, ಮಂಗಳವಾರ ಸಚಿವ ಪ್ರಿಯಾಂಕ್ ಖರ್ಗೆ ಜತೆ ಚರ್ಚಿಸಿದ್ದಾರೆ. ಈ ವೇಳೆ ರಾಜ್ಯದಲ್ಲಿ ಎದ್ದಿರುವ ಈ ಬಣ ಬಡಿದಾಟವನ್ನು ತಣ್ಣಗಾಗಿಸಲು ಇರುವ 'ಸೂತ್ರ'ವೇನು ಎನ್ನುವ ಬಗ್ಗೆ ವರದಿ ಪಡೆದುಕೊಂಡಿದ್ದಾರೆ ಎನ್ನಲಾಗಿದೆ. ಪ್ರಿಯಾಂಕ್ ಖರ್ಗೆ ಅವರೊಂದಿಗಿನ ಚರ್ಚೆಯ ವೇಳೆ, ನಾಯಕತ್ವ ಬದಲಾವಣೆ ಮಾಡಲೇಬೇಕಾದ ಅನಿವಾರ್ಯತೆ ಇದೆಯೇ? ಕೆಲ ದಿನ ತಟಸ್ಥ ಧೋರಣೆಯಲ್ಲಿ ಹೋಗಲು ಸಾಧ್ಯವಿಲ್ಲವೇ? ಒಂದು ಬದಲಾವಣೆ ಅನಿವಾರ್ಯವಾದರೆ ಯಾವ ರೀತಿಯಲ್ಲಿ ಮಾಡಬಹುದು ಎನ್ನುವ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯ ಆಪ್ತರ ವಾದವೇನು?

- ಶಾಸಕಾಂಗ ಪಕ್ಷದ ಸಭೆಯಲ್ಲಿಯೇ ಮುಖ್ಯಮಂತ್ರಿ ಆಯ್ಕೆಯಾಗಲಿ
- ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧ; ಶಾಸಕರ ಅಭಿಪ್ರಾಯ ಸಂಗ್ರಹಿಸಿ
- ನಾಯಕತ್ವ ಬದಲಾವಣೆಯಾದರೆ ಸಿದ್ದರಾಮಯ್ಯ ಪಾತ್ರವೇನು?

ಡಿ.ಕೆ.ಶಿವಕುಮಾರ್ ಆಪ್ತರ ವಾದವೇನು?

- ಶಾಸಕರ ಅಭಿಪ್ರಾಯಕ್ಕಿಂತ ಹೈಕಮಾಂಡ್ ನೀಡಿರುವ ಮಾತು ಮುಖ್ಯ
- ಫಲಿತಾಂಶದ ಬಳಿಕ ಪಕ್ಷದ ಹೈಕಮಾಂಡ್ ನೀಡಿದ್ದ ಮಾತಿನಂತೆ ನಡೆದುಕೊಳ್ಳಲಿ
- ರಾಜ್ಯ ಕಾಂಗ್ರೆಸ್ ಸಂಘಟನೆ ಬಲಪಡಿಸಲು ಡಿಕೆಶಿ ಶ್ರಮಕ್ಕೆ, ಈಗ ಪ್ರತಿಫಲ ನೀಡಿ

ತಟಸ್ಥ ಶಾಸಕರೇ ನಿರ್ಣಾಯಕ

138 ಸಂಖ್ಯಾಬಲದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವರಿಗಿಂತ ಸಿದ್ದರಾಮಯ್ಯ ಬಣದಲ್ಲಿ ಶಾಸಕರ ಸಂಖ್ಯೆ ದೊಡ್ಡದಾಗಿದೆ. ಆದರೆ ಈ ಎರಡು ಬಣವನ್ನು ಮೀರಿ ಹೈಕಮಾಂಡ್ ಸೂಚಿಸುವ ನಾಯಕನಿಗೆ ನಮ್ಮ ಬೆಂಬಲ ಎನ್ನುವ ಶಾಸಕರ ಬಲ ದೊಡ್ಡಪ್ರಮಾಣದಲ್ಲಿದೆ. ಆದ್ದರಿಂದ ಒಂದು ವೇಳೆ ತಲೆ ಎಣಿಕೆ ಮುನ್ನೆಲೆಗೆ ಬಂದರೆ, ಈ ತಟಸ್ಥ ಗುಂಪು ಯಾರೊಂದಿಗೆ ನಿಲ್ಲಲಿದೆ ಎನ್ನುವುದೇ ಈಗಿರುವ ಬಹುದೊಡ್ಡ ಪ್ರಶ್ನೆಯಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಫನ್‌ತರಂಗ

- ರಘುಪತಿ ಶೃಂಗೇರಿ -

ಈ ವಾರ ತೆರೆಗೆ 'ನಾಯಿ ಇದೆ ಎಚ್ಚರಿಕೆ' ಚಲನಚಿತ್ರ

ಸುದ್ದಿ



ವಿಶೇಷ ಪೂಜೆ ಬಳಿಕ ಬಾಗಿಲು ಮುಚ್ಚಿದ ಬದರಿನಾಥ ದೇಗುಲ

ಚಾರ್‌ಧಾಮ್ ಯಾತ್ರೆ ಮುಕ್ತಾಯ

ಗೋಪೇಶ್ವರ: ಚಳಿಗಾಲ ಆರಂಭವಾದ ಕಾರಣ ಉತ್ತರಾ ಖಂಡದ ಬದರಿನಾಥ ದೇಗುಲದ ಬಾಗಿಲನ್ನು ಮುಚ್ಚಲಾಗಿದೆ. ಈ ಮೂಲಕ ಈ ವರ್ಷದ ಚಾರ್‌ಧಾಮ್ ಯಾತ್ರೆ ಮಂಗಳವಾರ ಮುಕ್ತಾಯವಾಗಿದೆ.

ವಿಶೇಷ ಪೂಜೆ ಬಳಿಕ ಬದರಿನಾಥ ದೇಗುಲವನ್ನು ಮಧ್ಯಾಹ್ನ 2.56ಕ್ಕೆ ಮುಚ್ಚಲಾಗಿದೆ ಎಂದು ಬದರಿನಾಥ- ಕೇದಾರನಾಥ ದೇಗುಲ ಸಮಿತಿ ಹೇಳಿದೆ. ಈ ವೇಳೆ ಚಳಿಯ ವಾತಾವರಣದ ನಡುವೆಯೂ ದೇಶ- ವಿದೇಶಗಳಿಂದ ಬಂದಿದ್ದ ಭಕ್ತರು ಹಾಜರಿದ್ದರು ಎಂದೂ ಸಮಿತಿ ತಿಳಿಸಿದೆ.

ದೇವಾಲಯವನ್ನು ಹಳದಿ ಮತ್ತು ಕೇಸರಿ ಬಣ್ಣದ ಚೆಂಡುಹೂವಿನಿಂದ ಅಲಂಕರಿಸಲಾಗಿತ್ತು. ದೇಗುಲದ ಎದುರು ಬೆಳಗ್ಗೆಯಿಂದಲೇ ಜಾನಪದ ನೃತ್ಯ, ಭಜನೆ, ಕೀರ್ತನೆಗಳು ನಡೆಯುತ್ತಿದ್ದವು.

ಕೇದಾರನಾಥ, ಯಮುನೋತ್ರಿ ಮತ್ತು ಗಂಗೋತ್ರಿ ಧಾಮಗಳು ಕಳೆದ ತಿಂಗಳು ಬಾಗಿಲು ಮುಚ್ಚಿತ್ತು. ಈಗ ಬದರಿನಾಥ ದೇಗುಲದ ಬಾಗಿಲು ಮುಚ್ಚುವ ಮೂಲಕ ಚಾರ್‌ಧಾಮ್ ಯಾತ್ರೆ ಮುಕ್ತಾಯಗೊಂಡಿದೆ. ಪ್ರತಿ ವರ್ಷ ತೀವ್ರ ಚಳಿ ಮತ್ತು ಭಾರಿ ಹಿಮಪಾತವಾಗುವ ಕಾರಣ ಪ್ರತಿ ವರ್ಷ ಅಕ್ಟೋಬರ್-ನವೆಂಬರ್‌ನಲ್ಲಿ ಹಿಮಾಲಯದಲ್ಲಿರುವ ಈ ದೇಗುಲಗಳ ಬಾಗಿಲನ್ನು ಮುಚ್ಚಲಾಗುತ್ತದೆ. ಏಪ್ರಿಲ್-ಮೇ ತಿಂಗಳಲ್ಲಿ ಬಾಗಿಲು ತೆರೆಯಲಾಗುತ್ತದೆ.

51 ಲಕ್ಷ ಭಕ್ತರು ಭಾಗಿ

ಈ ವರ್ಷ ಮೇ ತಿಂಗಳಿನಿಂದ ಆರಂಭವಾದ ಯಾತ್ರೆಯಲ್ಲಿ ದೇಶ-ವಿದೇಶಗಳಿಂದ 51 ಲಕ್ಷ ಭಕ್ತರು ಪಾಲ್ಗೊಂಡಿದ್ದರು. 6.44 ಲಕ್ಷ ಯಮುನೋತ್ರಿಗೆ, 7.58 ಲಕ್ಷ ಗಂಗೋತ್ರಿ, 17.68 ಲಕ್ಷ ಕೇದಾರನಾಥ ಮತ್ತು 16.52 ಲಕ್ಷ ಭಕ್ತರು ಬದರಿನಾಥಕ್ಕೆ ಭೇಟಿ ನೀಡಿದ್ದಾರೆ.

ಜನರ ಶ್ರಮದ ಫಲದಿಂದ ರಾಮ ಮಂದಿರ ಪೂರ್ಣ: ಶಿಲ್ಪಿ ಅರುಣ್ ಯೋಗಿರಾಜ್

ರಾಮಮಂದಿರದಲ್ಲಿ ಧರ್ಮ ಧ್ವಜದ ಸ್ಥಾಪನೆಯಾಗಿದೆ

ಮೈಸೂರು: ರಾಮಮಂದಿರ ನಿರ್ಮಾಣಕ್ಕೆ ಎಷ್ಟು ಕಷ್ಟಪಟ್ಟಿದ್ದೇವೆ ಎಂಬುದು ನಮ್ಮೆಲ್ಲರಿಗೂ ಗೊತ್ತು. ಜನರ ಶ್ರಮದ ಫಲವಾಗಿ ಇಂದು ರಾಮ ಮಂದಿರ ಸಂಪೂರ್ಣವಾಗಿ ನಿರ್ಮಾಣಗೊಂಡಿದೆ. ಧರ್ಮ ಧ್ವಜದ ಸ್ಥಾಪನೆ ಆಗಿದೆ. ಇದು ಬಹಳ ಸಂತೋಷದ ಸಮಯ ಎಂದು ಶಿಲ್ಪಿ ಅರುಣ್ ಯೋಗಿರಾಜ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ಸಾವಿರಾರು ಶಿಲ್ಪಿಗಳು ಪೂಜೆಯ ರೀತಿ ಕೆಲಸ ಮಾಡುತ್ತಿದ್ದರು. ಅದೇ ರೀತಿ ನಾವೂ ಸಹ ಈ ಕೆತ್ತನೆಯನ್ನು ಮಾಡುತ್ತಿದ್ದೆವು. ಶಿಲ್ಪಗಳಿಗೆ ಕೈ ತುಂಬಾ ಕೆಲಸವಿರುತ್ತೆ. ಆದರೆ, ರಾಮಂದಿರ ನಿರ್ಮಾಣದ ವಿಚಾರ ಬಂದಾಗ ತಮ್ಮ ಕೆಲಸವನ್ನು ಬಿಟ್ಟು ಇಲ್ಲಿಗೆ ಬಂದು ತಮ್ಮಲ್ಲಿನ ನೈಪುಣ್ಯದೊಂದಿಗೆ ಕೆಲಸ ಮಾಡಿದ್ದಾರೆ. ಇದರ ನಿರ್ಮಾಣದ ಹಿಂದಿರುವ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದ್ದಾರೆ. ರಾಮಮಂದಿರ ನಿರ್ಮಾಣದ ಭೂಮಿ ಪೂಜೆ, ಬಾಲ ರಾಮ ಮೂರ್ತಿಯ ಪ್ರತಿ ಷ್ಠಾಪನೆ ಹಾಗೂ ಧರ್ಮ ಧ್ವಜಸ್ಥಾಪನೆಯವರೆಗೆ ಪ್ರಧಾನಿ ನರೇಂದ್ರ ಮೋದಿಯವರು ಕೆಲಸವನ್ನು ಮಾಡಿಕೊಟ್ಟಿದ್ದಾರೆ. ಈ ಮುಖಾಂತರ ನಮ್ಮ ದೇಶ ರಾಮ ರಾಜ್ಯವಾಗಲಿ ಎಂದು ಆಶಿಸುತ್ತೇನೆ ಎಂದರು.



ಶಿಲ್ಪ ಗುರುಕುಲ ಸ್ಥಾಪನೆ

ಮೈಸೂರಿನ ಹೊರ ವಲಯದಲ್ಲಿ ಶಿಲ್ಪಕಲೆ ಕಲಿಯುವ ವಿದ್ಯಾರ್ಥಿಗಳಿಗಾಗಿ ಗುರುಕುಲ ಮಾದರಿಯ ಶಿಲ್ಪ ಕಲಾ ಶಿಕ್ಷಣಕ್ಕಾಗಿ ಶಿಲ್ಪ ಗುರುಕುಲ ಸ್ಥಾಪನೆ ಮಾಡಲಾಗುತ್ತಿದೆ. ಇಲ್ಲಿ ಶಿಲ್ಪಕಲೆಯಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗಾಗಿ ಶಿಲ್ಪ ಕಲೆಯನ್ನ ಆಧುನಿಕ ತಂತ್ರಜ್ಞಾನದ ಮೂಲಕ ಕಲಿಸುವ ಕೆಲಸ ಮಾಡಲಾಗುತ್ತದೆ. ಇದಕ್ಕಾಗಿ ಈಗಾಗಲೇ ಸ್ಟುಡಿಯೊ ನಿರ್ಮಾಣದ ಕೆಲಸ ಶೇ. 80 ರಷ್ಟು ಮುಗಿದಿದ್ದು, ಶೀಘ್ರವೇ ಈ ಬಗ್ಗೆ ಮಾಹಿತಿ ನೀಡುತ್ತೇನೆ ಎಂದು ಶಿಲ್ಪಿ ಅರುಣ್ ಯೋಗಿರಾಜ್ ಹೇಳಿದರು.

ಖಾಸಗಿ ವಾಣಿಜ್ಯ ಬಂದರು ನಿರ್ಮಾಣಕ್ಕೆ ವಿರೋಧ

ಅಂಕೋಲಾ: ಜೆಎಸ್‌ಡಬ್ಲ್ಯು ಕಂಪೆನಿಯ ಅಣಕು ಶವಯಾತ್ರೆ

ಖಾಸಗಿ ಬಂದರು ನಿರ್ಮಾಣ ವಿರೋಧಿಸಿ ಜೆಎಸ್‌ಡಬ್ಲ್ಯು ಕಂಪೆನಿ ವಿರುದ್ಧ ಅಂಕೋಲಾದಲ್ಲಿ ಹೋರಾಟ ನಡೆಸಲಾಯಿತು.

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಅಂಕೋಲದ ಕೇಣಿಯಲ್ಲಿ ಜೆ.ಎಸ್. ಡಬ್ಲ್ಯು ಕಂಪೆನಿಯ ಖಾಸಗಿ ವಾಣಿಜ್ಯ ಬಂದರು ನಿರ್ಮಾಣ ವಿರೋಧಿಸಿ ಕೇಣಿ ಬಂದರು ವಿರೋಧಿ ಹೋರಾಟ ಸಮಿತಿ ಅಂಕೋಲ ಬಂದ್‌ಗೆ ಕರೆಕೊಟ್ಟಿದೆ.

ಮಂಗಳವಾರ ಅಂಕೋಲದ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಬಂದ್‌ಗೆ ವ್ಯಾಪಾರಿಗಳು ಹಾಗೂ ವಿವಿಧ ಸಂಘಟನೆಗಳು ಬೆಂಬಲ ನೀಡಿದರು. ಇದರಿಂದಾಗಿ ಅಂಕೋಲ ನಗರ ಸಂಪೂರ್ಣ ಬಂದ್ ಆಗಿದೆ.

ಇನ್ನು ಕೇಣಿ ವಾಣಿಜ್ಯ ಬಂದರು ವಿರೋಧಿ ಹೋರಾಟ ಸಮಿತಿಯಿಂದ ನಗರದ ವಿವಿಧ ಭಾಗದಲ್ಲಿ ಮೆರವಣಿಗೆ ಮೂಲಕ ಜೆಎಸ್‌ಡಬ್ಲ್ಯು ಕಂಪೆನಿಯ ಅಣಕು ಶವಯಾತ್ರೆ ಕೈಗೊಂಡು ಜೈ ಹಿಂದ್ ಸರ್ಕಲ್ ಬಳಿ ಸೇರಿದ ಪ್ರತಿಭಟನಾಗಾರರು ಸರಕಾರ ಹಾಗೂ ಖಾಸಗಿ ಸಂಸ್ಥೆ ವಿರುದ್ಧ ಆಕ್ರೋಶ ಹೊರಹಾಕಿದರು.

ಕೇಣಿಯಲ್ಲಿ ಯಾವುದೇ ಕಾರಣಕ್ಕೂ ವಾಣಿಜ್ಯ ಬಂದರು ನಿರ್ಮಾಣವಾಗಬಾರದು.

ಮೀನು ಗಾರರ ಹಿತವನ್ನು ಸರಕಾರ ಕಾಪಾಡಬೇಕು. ಮೀನುಗಾರರ ನೆಲೆಗೆ ಧಕ್ಕೆಯಾಗುತಿದ್ದು, ಈಗಾಗಲೇ ಹಲವು ಜಾಗವನ್ನು ಬಂದರಿಗಾಗಿ ಬಿಟ್ಟುಕೊಡಲಾಗಿದೆ. ಹೀಗಾಗಿ ಮತ್ತೆ ಮೀನುಗಾರರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡಬಾರದು ಎಂದು ಪ್ರತಿಭಟನಾ ನಿರತ ಮೀನುಗಾರರು ಆಗ್ರಹಿಸಿದರು.

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಛೇರಿ
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ, ಮಡಿಕೇರಿ, ಕೊಡಗು ಜಿಲ್ಲೆ-571201.
ದೂರವಾಣಿ -80272-223445 ಇಮೇಲ್-dskodagu@gmail.com

ಸಂ:ಎಆರ್‌ಟಿ:181 : 2025-26 ದಿನಾಂಕ: 21.11.2025

ಪ್ರಕಟಣೆ

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಮಡಿಕೇರಿಯಲ್ಲಿ ಎ.ಆರ್.ಟಿ ಕೇಂದ್ರಕ್ಕೆ ವೈದ್ಯಾಧಿಕಾರಿ ಹುದ್ದೆಗೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ, ಮಾಡುವ ಸಲುವಾಗಿ ಈ ಕೆಳಕಾಣಿಸಿದ ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಬೆಳಗ್ಗೆ 9.00 ಗಂಟೆಯಿಂದ 4.00 ಗಂಟೆಯೊಳಗೆ ಈ ಕಚೇರಿಯಲ್ಲಿ ಪಡೆಯಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳ ಸಹಿದಾರರನ್ನು ಸಂಪರ್ಕಿಸಬಹುದು.

ಕ್ರ ಸಂ	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ವಿದ್ಯಾರ್ಹತೆ	ಮಾಸಿಕ ವೇತನ
1.	ವೈದ್ಯಾಧಿಕಾರಿ	1	ಎಂ.ಬಿ.ಬಿ.ಎಸ್	ರೂ.72000/-

ಅರ್ಜಿ ವಿತರಿಸುವ ದಿನಾಂಕ : 24-11-2025
ಅರ್ಜಿ ವಿತರಿಸಲು ಕೊನೆಯ ದಿನಾಂಕ : 03-12-2025
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 09-12-2025

ಅರ್ಹತೆಗಳು: ಎಂ.ಬಿ.ಬಿ.ಎಸ್ ವಿದ್ಯಾರ್ಹತೆ ಆಗಿರಬೇಕು, ಅಂಕಗಳು ಸರಿಸಮನಾದಲ್ಲಿ ಸರ್ಕಾರದ ಆದೇಶ ಹಾಗೂ ಮಾನದಂಡಗಳಂತೆ ನಿರ್ಧರಿಸಲಾಗವುದು, ನೇಮಕಾತಿ ಆಯ್ಕೆಯು ಸರ್ಕಾರದ ಆದೇಶದಂತೆ ಹಾಗೂ ಶೇಕಡವಾರು ಅಂಕಗಳ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು., ಕೆ.ಎಂ.ಸಿ. ನೋಂದಣಿ ಕಡ್ಡಾಯವಾಗಿರುತ್ತದೆ, ವಯೋಮಿತಿ 70ವರ್ಷ ಆಗಿರಬೇಕು, ಅಭ್ಯರ್ಥಿಗೆ ಕನಿಷ್ಠ ಕಂಪ್ಯೂಟರಿನ ಜ್ಞಾನವನ್ನು ಹೊಂದಿರಬೇಕು, ಸಂಬಂಧಿಸಿದ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು, ಹಾಗೂ ನೇಮಕಾತಿ ಅಧಿಕಾರವು ಸಂಪೂರ್ಣವಾಗಿ ಈ ಕೆಳಸಹಿದಾರರದ್ದು ಆಗಿರುತ್ತದೆ..

ಜಿಲ್ಲಾ ಶಸ್ತ್ರಚಿಕಿತ್ಸಕರು,
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ, ಮಡಿಕೇರಿ.

ವಿಶ್ವದಲ್ಲಿರುವ ಏಳು ಖಂಡಗಳಲ್ಲಿ ಅಂಟಾರ್ಟಿಕ ಹೊರತುಪಡಿಸಿ ಇನ್ನುಳಿದ ಆರು ಖಂಡಗಳಲ್ಲಿ ಕನ್ನಡ ಒಕ್ಕೂಟಗಳಿರುವುದು ಕನ್ನಡಿಗರ ಶಕ್ತಿಯನ್ನು ತೋರಿಸುತ್ತದೆ. ಅಮೆರಿಕದಲ್ಲಿಯೇ ಅತಿಹೆಚ್ಚು ಕನ್ನಡ ಸಂಘಟನೆಗಳಿದ್ದು, ಬಳಿಕ ಯುರೋಪ್‌ನಲ್ಲಿ ಹೆಚ್ಚು ಸಂಘಟನೆಗಳಿವೆ. 70ನೇ ಕರ್ನಾಟಕ ರಾಜ್ಯೋತ್ಸವದ ಈ ಸಮಯದಲ್ಲಿ ವಿದೇಶಿ ನೆಲದಲ್ಲಿ ಕನ್ನಡ ಸೇವೆಯಲ್ಲಿ ತೊಡಗಿರುವ ಸಂಘಟನೆಗಳ ಮಾಹಿತಿ ಇಲ್ಲಿದೆ.

ವಿದೇಶದಲ್ಲಿ ಕನ್ನಡ ಕಲರವ

ಕರ್ನಾಟಕ ಸಂಘ ಕತಾರ್

ಬೆಂಕಿ ಬಸಣ್ಣ
ನ್ಯೂಯಾರ್ಕ್

ಮಧ್ಯಪ್ರಾಚ್ಯದ ತೈಲಸಿರಿ ಸಂಪತ್ತಿನ ವಿಶ್ವದ ಮೊದಲ ಹತ್ತು ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾಗಿರುವ ದ್ವೀಪ ರಾಷ್ಟ್ರ ಕತಾರ್, ಸಹಸ್ರಾರು ಕನ್ನಡಿಗರಿಗೆ ಉದ್ಯೋಗ, ಸ್ವಂತ ಉದ್ಯಮ, ಆಶ್ರಯವನ್ನು ನೀಡಿದೆ. ಅದು 1999ರ ಮಧ್ಯಭಾಗ. ಮಾತೃಭೂಮಿಯ ಮಣ್ಣಿನ ಕಂಪನ್ನು ಸ್ಮರಿಸುತ್ತ ಎಲ್ಲ ಕನ್ನಡಿಗರು ಒಂದೆಡೆ ಸೇರಿ ಕನ್ನಡ ನಾಡಿನ ಹಬ್ಬ ಸಮಾರಂಭಗಳನ್ನು ಆಚರಿಸಲಾ ಗುತ್ತಿಲ್ಲವೆಂಬ ಕೊರಗು ಹಲವಾರು ಹಿರಿಯ ಕನ್ನಡಿಗರಲ್ಲಿ ಕಾಡುತ್ತಿತ್ತು. ಕನ್ನಡಿಗರಿಗಾಗಿ ಸಂಘ ಸ್ಥಾಪನೆ ಮಾಡಿದರೆ ಕತಾರ್ ಕನ್ನಡಿಗರು ಒಂದೇ ವೇದಿಕೆಯಲ್ಲಿ ಸೇರಬಹುದು. ಕನ್ನಡದ ಕಲರವವನ್ನು ಕಡಲಾಚೆಗಿನ ದೇಶ ಕತಾರ್‌ನಲ್ಲಿ ಸಂಭ್ರಮಿಸಬಹುದೆಂಬ ಒಂದು ಯೋಚನೆ, ಸಂಘದ ಹುಟ್ಟಿಗೆ ಕಾರಣವಾಯಿತು!ಕತಾರಿನಲ್ಲಿ ಅಂದು ವಿವಿಧ ಹುದ್ದೆಗಳಲ್ಲಿದ್ದ ಕನ್ನಡದ ಮನಸುಗಳ ಪ್ರಯತ್ನದ ಫಲವಾಗಿ ಕನ್ನಡಿಗರ ಸಂಘವೊಂದು 1999ರ ನ.12ರಂದು ಭಾರತೀಯ ಸಾಂಸ್ಕೃತಿಕ ಹಾಗೂ ಮನೋರಂಜನಾ ಕೇಂದ್ರದ ಭವ್ಯ ಸಭಾಂಗಣದಲ್ಲಿ ಕರ್ನಾಟಕ ಸಂಘ ಕತಾರ್, ಎಂಬ ಹೆಸರಿನೊಂದಿಗೆ, ಹಿರಿಯ ಸಾಹಿತಿ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿಯವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡಿತು. ಸಂಘ ಸ್ಥಾಪನೆಯ ದಿನದಂದೇ ಕರ್ನಾಟಕ ರಾಜ್ಯೋತ್ಸವದ ಸಂಭ್ರಮಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಭಾಂಗಣದಲ್ಲಿ ಸೇರಿದ್ದ ಕನ್ನಡ ಜನತೆಯ ಕನಸು ಸಾಕಾರಗೊಂಡು ಭಾಗವಹಿಸಿದ ಕನ್ನಡಿಗರಲ್ಲಿ ಸಾರ್ಥಕ ಭಾವ ಮೂಡಿಸಿತು. ಕನ್ನಡ ರಾಜ್ಯೋತ್ಸವ ವಸಂತೋತ್ಸವದಂತಹ ಅದ್ದೂರಿ ಕಾರ್ಯಕ್ರಮಗಳ, ಕ್ರೀಡೆ ಮನೋರಂಜನಾ ಸ್ಪರ್ಧೆಗಳ ಮೂಲಕ ಸಂಘ ಭಾರತೀಯ ಸಾಂಸ್ಕೃತಿಕ ಕೇಂದ್ರದ ಕಾರ್ಯಕ್ರಮಗಳಲ್ಲಿ ವಿಭಿನ್ನ ರೀತಿಯ ಸಾಂಸ್ಕೃತಿಕ ಕಲರವವನ್ನು ನೀಡುತ್ತಾ, ಜೊತೆಗೆ ಐಇಆರೂನ ಕಷ್ಟದಲ್ಲಿರುವ ಭಾರತೀಯರಿಗೆ ಸಹಾಯ ಹಸ್ತವನ್ನು ನೀಡುವ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕರ್ನಾಟಕ ಸಂಘ ಕತಾರ್ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಕತಾರಿನ ಕನ್ನಡ ಕುಟುಂಬದ ಮಕ್ಕಳಿಗೆ ವಾರಾಂತ್ಯದ ಉಚಿತ ಕನ್ನಡ ಕಲಿಕೆಯ ತರಗತಿಗಳನ್ನು ಕಳೆದ ಹತ್ತಾರು ವರ್ಷಗಳಿಂದ ನಿರಂತರವಾಗಿ ನಡೆಸುತ್ತಾ ಬಂದಿರುವುದು ಸಂಘದ ಕನ್ನಡ ಸೇವಾಕಾರ್ಯಗಳಲ್ಲಿ ಪ್ರಮುಖವಾದುದು.

ನೂರಾರು ಮಕ್ಕಳು ಈ ಕನ್ನಡ ತರಗತಿಯ ಲಾಭವನ್ನು ಪಡೆಯುತ್ತಿದ್ದಾರೆ. ಕೇವಲ ಕನ್ನಡದ ಅಭಿಮಾನದಿಂದ ಸ್ವಯಂಪ್ರೇರಿತರಾಗಿ ಸಂಘದ ಅನೇಕ ಹಿರಿಯ ಸದಸ್ಯರು ಮಕ್ಕಳಿಗೆ ಕನ್ನಡ ಕಲಿಸುವ ತರಗತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ನಮ್ಮ ಸಂಘದ ವತಿಯಿಂದ ಪ್ರತಿರಾಜ್ಯೋತ್ಸವದ ಸಮಾರಂಭಕ್ಕೆ ಪ್ರಕಟಗೊಂಡು, ಬಿಡುಗಡೆಯಾಗುವ ಹೆಮ್ಮೆಯ ಶ್ರೀಗಂಧ ಸ್ಮರಣ ಸಂಚಿಕೆ, ಕತಾರ್ ಕನ್ನಡಿಗರ ಸಾಹಿತ್ಯದ ಅಭಿರುಚಿಯ ದ್ಯೋತಕವಾಗಿದೆ. ಕಳೆದ ಎರಡೂವರೆ ದಶಕಗಳ ಪಯಣದಲ್ಲಿ ನಾಡಿನ ಹೆಸರಾಂತ ಕಲಾವಿದರು, ತಾರೆಯರು.

ಪತ್ರಿಕೋದ್ಯಮಿಗಳು ಮತ್ತು ಸಾಮಾಜಿಕ ಧುರೀಣರು ಸಂಘದ ವಿವಿಧ ಕಾರ್ಯಕ್ರಮ, ಸಮಾರಂಭಗಳಲ್ಲಿ ಅತಿಥಿಗಳಾಗಿ ಅವರ ಪ್ರತಿಭೆಯಿಂದ ಕತಾರ್ ಕನ್ನಡಿಗರನ್ನು ರಂಜಿಸಿರುವುದು ಉಲ್ಲೇಖನೀಯ. ಪ್ರಾರಂಭವಾದಾಗ ಕೇವಲ ಬೆರಳೆಣಿಕೆಯಷ್ಟು ಸಕ್ರಿಯ ಸದಸ್ಯರನ್ನು ಹೊಂದಿದ್ದ ಸಂಘ, ಇಂದು ಸಾವಿರಾರು ಸಂಖ್ಯೆಯ ನೋಂದಾಯಿತ ಸದಸ್ಯರನ್ನು ಹೊಂದಿ ಬೃಹದಾಕಾರವಾಗಿ ಬೆಳೆದಿದೆ. ನಾಡು, ನುಡಿ, ಕನ್ನಡ ಸಂಸ್ಕೃತಿ, ಸಾಮಾಜಿಕ, ಇತಿಹಾಸ ಹಾಗೂ ಪರಂಪರೆಗಳನ್ನು ಕಾಪಾಡುವ, ಬೆಳೆಸುವ, ಉಳಿಸುವ ಕೈಂಕರ್ಯದಲ್ಲಿ ಸಂಘ, ಕತಾರಿನ ಕನ್ನಡ ಸಮುದಾಯದೊಂದಿಗೆ ಹಾಸುಹೊಕ್ಕಾಗಿದೆ. ಸಂಘದ ರಜತ ಸಂಭ್ರಮಾಚರಣೆಯನ್ನು 2024ರ ರಾಜ್ಯೋತ್ಸವ ಕಾರ್ಯಕ್ರಮದೊಂದಿಗೆ ಅತ್ಯಂತ ಅದ್ದೂರಿಯಾಗಿ ಆಚರಿಸಿದ ಹೆಮ್ಮೆಯ ಭಾವ ಸಮಸ್ತ ಕನ್ನಡಿಗರಲ್ಲಿ ಮನೆ ಮಾಡಿದೆ. ಕತಾರ್ ಕನ್ನಡಿಗರಿಗೆ ಅತ್ಯಂತ ಆಪ್ತವಾಗಿ, ಭಾವನಾತ್ಮಕವಾಗಿ ಬೆಸುಗೆಯಾಗಿರುವ ನಮ್ಮ ಸಂಘ, ಸಮುದಾಯದ ಪ್ರತಿನಿಧಿಯಾಗಿ ಸದಾ ಸ್ಪಂದಿಸಿ, ಜನ್ಮಭೂಮಿ ಕರ್ಮಭೂಮಿಗಳಲ್ಲಿನ ಸಾಧನೆಗಳಿಗೆ ಕೀರ್ತಿದಾಯಕವಾಗಿದೆ.

ಕನ್ನಡ ಸಂಘ ಸಿಂಗಾಪುರ

ಸಿಂಗಾಪುರವು ಈಗಿನ ಬೆಂಗಳೂರಿಗಿಂತ ಚಿಕ್ಕದಾದ, ಒಂದು ಪುಟ್ಟ ದ್ವೀಪ ರಾಷ್ಟ್ರ. ಆದಿಯಲ್ಲಿ ಸಿಂಗಾಪುರವು ಒಂದು ಬೆಸ್ತರ ಹಳ್ಳಿಯಾಗಿತ್ತು. ತದನಂತರ ಇಲ್ಲಿಗೆ ವಲಸೆ ಬಂದ ಚೀನೀಯರು, ಮಲಯರು ಹಾಗೂ ಭಾರತೀಯರು ಸಿಂಗಾಪುರವನ್ನು ಒಂದು ಆಧುನಿಕ ಪಟ್ಟಣವನ್ನಾಗಿ ಮಾರ್ಪಡಿಸಿದರು. ಇಂಗ್ಲೀಷ್, ಮಲಯ್, ಮ್ಯಾಂಡರಿನ್ ಹಾಗು ತಮಿಳು ಸಿಂಗಾಪುರದ ಅಧಿಕೃತ ಭಾಷೆಗಳಾಗಿದ್ದರೂ ಇಂಗ್ಲೀಷ್ ಭಾಷೆ ಸಾರ್ವಜನಿಕ ಮಾನ್ಯತೆ ಪಡೆದಿದೆ.

ದ್ವಿತೀಯ ಜಾಗತಿಕ ಮಹಾಯುದ್ಧದ ತರುವಾಯ ಬ್ರಿಟಿಷ್ ಸೈನ್ಯವು ಸಿಂಗಾಪುರವನ್ನು ಜಪಾನಿಯರಿಂದ ವಶಪಡಿಸಿಕೊಂಡಿತು. ಪ್ರಾಯಶಃ ಬ್ರಿಟಿಷ್ ಸೈನ್ಯದಲ್ಲಿದ್ದ ಜನರಲ್ ತಿಮ್ಮಯ್ಯನವರೇ ಇಲ್ಲಿಗೆ ಕಾಲಿಟ್ಟ ಮೊದಲ ಕನ್ನಡಿಗರೆಂದು ಹೇಳಬಹುದೇನೋ! 90ರ ದಶಕದಲ್ಲಿ ನಡೆದ ವಿದ್ಯುನ್ಮಾನ ಹಾಗೂ ಗಣಕ ಕ್ಷೇತ್ರಗಳಲ್ಲಾದ ಕ್ರಾಂತಿಯಿಂದ ಸಿಂಗಾಪುರಕ್ಕೆ ಬಂದ ಕನ್ನಡಿಗರ ಸಂಖ್ಯೆ ಗಣನೀಯವಾಗಿ ಹೆಚ್ಚಾಯಿತು. ಇಂದು ಸಿಂಗಪುರದಲ್ಲಿ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ, ಕಲೆ ಕ್ಷೇತ್ರಗಳಲ್ಲಿ ಕನ್ನಡಿಗರು ಪ್ರತಿನಿಧಿಸಿದ್ದಾರೆ. ಸಿಂಗಾಪುರ ಬೆಂಗಳೂರಿನ ನಡುವೆ ನೇರ ವಿಮಾನಯಾನ ಆರಂಭವಾದಾಗಿನಿಂದ ಈ ಎರಡು ತಾಂತ್ರಿಕ ನಗರಗಳ ನಡುವೆ ಓಡಾಡುವ ವೃತ್ತಿನಿರತರ ಹಾಗೂ ಪ್ರವಾಸಿಗರಿಗೆ ಸಂಚಾರ ಸುಗಮವಾಯಿತು. ಈಗಂತೂ ಕಡಿಮೆ ದರದ ವಿಮಾನಯಾನದ ಸೌಲಭ್ಯವಿರುವುದರಿಂದ ಜನಸಾಮಾನ್ಯ ಕನ್ನಡಿಗರಿಗೂ ಸಿಂಗಾಪುರದ ಪ್ರವಾಸ ಸಾಧ್ಯವಾಗಿದೆ.

ಸಿಂಗಾಪುರದ ಕನ್ನಡಿಗರಿಗೆ ಯುಗಾದಿ ಹಾಗೂ ಕನ್ನಡ ನಾಟಕ ಕಾರ್ಯಕ್ರಮಗಳು 1988 ರಿಂದಲೂ ಮನೆಮಾತು. ಯುಗಾದಿ ಹಬ್ಬವನ್ನು ಕೆಲವರ ಮನೆಯಲ್ಲಿ ಆಚರಿಸಿದರೆ, ಕನ್ನಡ ನಾಟಕಗಳು 'ಕಸ್ತೂರಿ ಕಂಪು' ಎಂಬ ಹೆಸರಿನಲ್ಲಿ ವರುಷಕ್ಕೊಮ್ಮೆ ನಡೆಯುತ್ತಿತ್ತು. 70-80ರ ದಶಕದಲ್ಲಿ ಸುಮಾರು 20 ಕುಟುಂಬಗಳಿದ್ದರೆ 90 ರ ದಶಕದಲ್ಲಿ ಬೆಳೆದ ಕನ್ನಡಿಗರ ಗಣನೀಯ ಸಂಖ್ಯೆ ಕನ್ನಡ ಸಂಘದ ಹುಟ್ಟಿಗೆ ಕಾರಣೀಭೂತವಾಯಿತು. 1 ಸೆಪ್ಟೆಂಬರ್ 1996 ರಂದು ಇಲ್ಲಿಯ ರಿಜಿಸ್ಟ್ರಾರ್ ಆಫ್ ಸೊಸೈಟಿಯಲ್ಲಿ ನೊಂದಾಯಿಸುವ ಮೂಲಕ ಇಂದಿನ ಕನ್ನಡ ಸಂಘ ಉದಯವಾಯಿತು. ಮೊದಲ ಕೆಲವು ವರ್ಷಗಳಲ್ಲಿ ಸಂಘದ ಕಾರ್ಯಕಲಾಪಗಳಿಗೆ ರೂಪು-ರೇಷೆಯನ್ನು ಮೂಡಿಸಲು. ಆಧಾರ ಸ್ಥಂಭಗಳನ್ನು ರೂಪಿಸಲು ಹೆಚ್ಚು ಒತ್ತು ಕೊಡಲಾಗಿತ್ತು. ಕಾರ್ಯಕ್ರಮಗಳ ಗುಣಮಟ್ಟ, ವೈವಿಧ್ಯತೆ ಹಾಗೂ ಸದಸ್ಯತ್ವ ಸಂಖ್ಯೆಯನ್ನು ಹೆಚ್ಚಿಸುವ ಯತ್ನ ನಿರಂತರವಾಗಿ ನಡೆದಿತ್ತು. ಆಗ ಕನ್ನಡಿಗರಿಗೆ, ಕನ್ನಡ ಸಂಘಕ್ಕೆ ಎಲ್ಲವೂ ಹೊಸತು.

ಸಂಘದ ಪ್ರಾರಂಭದ ದಿನಗಳಲ್ಲಿ ಯುಗಾದಿ, ದೀಪಾವಳಿ, ನಾಟಕ ಹೀಗೆ ವರ್ಷಕ್ಕೆ 3-4 ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿತ್ತು. ಇದೇ ಸಮಯದಲ್ಲಿ ಕನ್ನಡ ಸಂಘವು ಉಚಿತ ಯೋಗ ಶಿಬಿರವನ್ನು ಪ್ರಾರಂಭಿಸಿತು. ಸಾಹಿತ್ಯ, ಜಾನಪದ ನೃತ್ಯ, ವೇಷ-ವೈವಿಧ್ಯ ಸ್ಪರ್ಧೆಗಳನ್ನು ಆರಂಭಿಸಿದ ಸಂಘವು 1999ರಲ್ಲಿ ಮೊದಲ ಬಾರಿಗೆ ನೃತ್ಯಾಲಯದ ಆಯೋಜನೆಯಲ್ಲಿ ನಡೆದ ನಾಟಕ ಮೇಳದಲ್ಲಿ ಭಾಗವಹಿಸಿ ಬೆಕ್ಕುಬಾವಿ ನಾಟಕವನ್ನು ಪ್ರದರ್ಶಿಸಿತು ಹೊರಾಂಗಣ ಕ್ರೀಡೆ, ಸಂಗೀತ, ನೃತ್ಯ, ನಾಟಕ, ಚಲನಚಿತ್ರಗಳು, ಹಾಸ್ಯ, ಅರಿವು ಮುಂತಾದ ಹತ್ತಾರು ಕಾರ್ಯಕ್ರಮಗಳು, ಪ್ರತಿಭಾನ್ವೇಷಣೆ ಹಾಗೂ ಸ್ಥಳೀಯರಿಗೆ ಪ್ರತಿಭೆ ಪ್ರದರ್ಶಿಸಲು ಅವಕಾಶ ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಂಘವು ಕಳೆದ ಎರಡು ದಶಕಗಳಿಂದ ತಪ್ಪದೇ ನಡೆಸಿಕೊಂಡು ಬಂದಿದೆ. 2001ರಲ್ಲಿ ಮೊದಲ ಬಾರಿಗೆ ಕ್ರೀಡಾಪ್ರಿಯರಿಗಾಗಿ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ನಡೆಸಿ, ಜನಪ್ರಿಯತೆಯ ಆಧಾರದ ಮೇಲೆ ಅದನ್ನು ವಾರ್ಷಿಕ ನಿಯಮಿತ ಕಾರ್ಯಕ್ರಮವನ್ನಾಗಿ ಮಾಡಲಾಯಿತು.

ಮನೆಗಳಲ್ಲಿ ಪ್ರಾರಂಭವಾದ ಪುರಂದರ ದಾಸರ ಆರಾಧನೆ ಕಾರ್ಯಕ್ರಮವನ್ನು 2001ದಿಂದ ಸಂಘದ ವತಿಯಿಂದ, ಭಾಗ್ಯ ಮೂರ್ತಿ ಅವರ ನಿರ್ದೇಶನದಲ್ಲಿ ಪ್ರತೀ ವರ್ಷ ತಪ್ಪದೇ ನಡೆಸಿಕೊಂಡುಬರಲಾಗುತ್ತಿದೆ.

ಬದುಕು ನೀಡುವ ಬದಲಿ ಜೋಡಣೆ

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಬದುಕು ನೀಡುವ ಬದಲಿ ಜೋಡಣೆ' ಈ ಮಾತಿನಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ. ಇಂದು ನಾವು ಒಬ್ಬ ಮನುಷ್ಯನ ಅಂಗವನ್ನು ಹೊರತೆಗೆದು, ಅದನ್ನು ಮತ್ತೊಬ್ಬ ಮನುಷ್ಯನಿಗೆ ಬದಲಿ ಜೋಡಿಸುವುದು ಸಾಧ್ಯವಾಗಿವೆ. ಹೀಗೆ ಜೋಡಿಸಬಹುದಾದ ಅಂಗಗಳನ್ನು ನಾಲ್ಕು ರೀತಿ ವರ್ಗೀಕರಿಸಬಹುದು. ಮೊದಲನೆಯ ಪ್ರಧಾನ ಜೀವಾದಾಯಕ ಷಷ್ಟಾಂಗಗಳು. ಹೃದಯ, ಶ್ವಾಸಕೋಶ, ಯಕೃತ್ತು, ಮೂತ್ರಪಿಂಡ, ಮಾಂಸಲಿ (ಪ್ಯಾನ್‌ಕ್ರಿಯಾಸ್) ಮತ್ತು ಕರುಳು. ಎರಡನೆಯ ವರ್ಗದಲ್ಲಿ ಯಶಸ್ವಿಯಾಗಿರುವ ಆದರೆ ಅಪರೂಪಕ್ಕೆ ನಡೆಸುವ ಬದಲಿಜೋಡಣೆಗಳು- ಗರ್ಭಕೋಶ, ಜಠರ ಮತ್ತು ಥೈಮಸ್ ಗ್ರಂಥಿ. ಮೂರನೆಯ ವರ್ಗದಲ್ಲಿ ಸಂಯುಕ್ತ ಅಂಗಗಳನ್ನು (ಒಂದಕ್ಕಿಂತ ಹೆಚ್ಚು ಅಂಗಗಳನ್ನು) ಬದಲಿಜೋಡಿಸುವುದುಂಟು- ಕೈ ಅಥವಾ ಬಾಹು, ಮುಖ, ಶಿಶ್ನ, ಧ್ವನಿಪೆಟ್ಟಿಗೆ ಹಾಗೂ ವಾಯುನಾಳ (ಟ್ರೇಕಿಯ). ನಾಲ್ಕನೆಯ ವರ್ಗದಲ್ಲಿ ಇಡೀ ಅಂಗವನ್ನು ಬದಲಿಜೋಡಿಸುವ ಬದಲು, ಆ ಅಂಗದ ಕೆಲವು ಭಾಗಗಳನ್ನು ಮಾತ್ರ ಕಸಿಯಲ್ಲಿ ಬಳಸುವುದುಂಟು. ಕಣ್ಣಿನ ಕಾರ್ನಿಯ, ಚರ್ಮ, ಹೃದಯ ಕವಾಟ, ಅಸ್ಥಿಮಜ್ಜೆ, ಧಮನಿ ಮತ್ತು ಸಿರೆಗಳು. ಮನುಷ್ಯನ ತಲೆಯನ್ನು ಬದಲಿ ಜೋಡಿಸಿದ ದಿನ, ಅವನು ಭಗವಂತನೇ ಆಗಿಬಿಡುತ್ತಾನೆ. ಆದರೆ ಆ ದಿನ ಸದ್ಯಕ್ಕೆ ಕಾಣುತ್ತಿಲ್ಲ.

ಮನುಷ್ಯನ ದೇಹದ ಮೊತ್ತ ಮೊದಲ ಯಶಸ್ವಿ ಕಸಿಯೆಂದರೆ ಕಣ್ಣಿನ ಪಾರಪಟಲ ಇಲ್ಲವೇ ಕಾರ್ನಿಯ ಕಸಿ. ಈ ಪ್ರಯೋಗವು ಮೊದಲ ಬಾರಿಗೆ 1905ರಲ್ಲಿ ಯಶಸ್ವಿಯಾಯಿತು. ಆದರೆ ಇತರ ಅಂಗಗಳ ಬದಲಿ ಜೋಡಣೆ ಯಶಸ್ವಿಯಾಗಲಿಲ್ಲ. ಹಾಗೆಂದು ವಿಜ್ಞಾನಿಗಳು ತಮ್ಮ ಪ್ರಯತ್ನವನ್ನು ಬಿಡಲಿಲ್ಲ. ವೈದ್ಯರು, ಸಂಶೋಧಕರು ಹಾಗೂ ರೋಗಿಗಳ ನಿರಂತರ ಪ್ರಯತ್ನ ಹಾಗೂ ತ್ಯಾಗದಿಂದ ಮನುಕುಲವು ಎರಡು ಮಹಾನ್ ಬದಲಿ ಅಂಗಜೋಡಣೆಯ ಯಶಸ್ಸನ್ನು ಕಂಡಿತು. ಮೊದಲನೆಯದು 1954ರಲ್ಲಿ ಯಶಸ್ವಿಯಾದ ಮೂತ್ರಪಿಂಡ ಬದಲಿಜೋಡಣೆ ಹಾಗೂ 1967ರಲ್ಲಿ ಯಶಸ್ವಿಯಾದ ಹೃದಯ ಬದಲಿ ಜೋಡಣೆಯ ಶಸ್ತ್ರಚಿಕಿತ್ಸೆ. ಈ ಯಶಸ್ಸಿನ ಗಾಥೆ ರಾಜ ಮಾರ್ಗವಾಗಿರಲಿಲ್ಲ. ವಿಜ್ಞಾನಿಗಳು ಹಲವು ಪ್ರಮುಖ ಅಡ್ಡಿ ಆತಂಕಗಳನ್ನು ಎದುರಿಸಬೇಕಾಯಿತು. ಇವೆಲ್ಲವನ್ನು ಸಮರ್ಥವಾಗಿ ಎದುರಿಸಿದರು ವಿಜ್ಞಾನಿಗಳು. ಇಂದು ಜಗತ್ತಿನಲ್ಲಿ ಪ್ರತಿವರ್ಷ ಸುಮಾರು 1,50,000 ಯಶಸ್ವಿ ಬದಲಿ ಹೃದಯ ಶಸ್ತ್ರಚಿಕಿತ್ಸೆಗಳು ನಡೆಯುತ್ತಿವೆ ಎಂದರೆ ಈ ಯಶಸ್ಸಿನ ಶಿಖರವನ್ನು ಕಲ್ಪಿಸಿಕೊಳ್ಳಬಹುದು. ವಿಜ್ಞಾನಿಗಳು ಎದುರಿಸಿದ ಮುಖ್ಯವಾದ ಕೆಲವು ಅಡೆತಡೆಗಳನ್ನು ಹಾಗೂ ಅವುಗಳನ್ನು ವಿಜ್ಞಾನಿಗಳು ಹೇಗೆ ಎದುರಿಸಿದರು ಎನ್ನುವುದನ್ನು ಸ್ಥೂಲವಾಗಿ ಗಮನಿಸೋಣ.

- **ಎಂಬ್ರಾಯ್ಡರಿ:** ವಿಜ್ಞಾನಿಗಳು ಎದುರಿಸಿದ ಮೊದಲ ಸಮಸ್ಯೆ ಎಂದರೆ, ದಾನಿಯ ಹೃದಯವನ್ನು ಗ್ರಾಹಿಗೆ ಜೋಡಿಸಬೇಕಾದರೆ, ರಕ್ತನಾಳಗಳನ್ನು ನಿಖರವಾಗಿ ಜೋಡಿಸುವುದು. ಕ್ರಿ.ಶ.1900ರ ಅವಧಿಯಲ್ಲಿ ಒಂದು ರಕ್ತನಾಳವನ್ನು ಮತ್ತೊಂದು ರಕ್ತನಾಳಕ್ಕೆ ಹೇಗೆ ಹೊಲಿಯಬೇಕೆಂದು ಶಸ್ತ್ರವೈದ್ಯರಿಗೆ ತಿಳಿದಿರಲಿಲ್ಲ. ಅವರು ಹಲವು ರೀತಿಯಲ್ಲಿ ಹೊಲಿಗೆ ಹಾಕಿದರೂ, ರಕ್ತನಾಳಗಳ ಒಳಗೆ ರಕ್ತವು ಗರಣೆಕಟ್ಟಿಕೊಂಡು ರಕ್ತ ಸಂಚಾರವು ಸ್ಥಗಿತವಾಗುತ್ತಿತ್ತು. ಮಾಡಿದ ಎಲ್ಲ ಪ್ರಯತ್ನಗಳು ನಿರರ್ಥಕವಾಗುತ್ತಿದ್ದವು. ಅಲೆಕ್ಸಿಸ್ ಕ್ಯಾರೆಲ್ (1873-1944) ಎಂಬ ಫ್ರೆಂಚ್ ಶಸ್ತ್ರವೈದ್ಯನಿದ್ದ. ಇವನು ಸಹ ರಕ್ತನಾಳಗಳನ್ನು ಹೇಗೆ ಹೊಲಿಯಬೇಕು ಎಂದು ಯೋಚಿಸುತ್ತಿದ್ದ. ಒಂದು ದಿನ ಅವನು ತನ್ನ ಅಮ್ಮ ಹಾಕುತ್ತಿದ್ದ ಕಸೂತಿಯನ್ನು ಗಮನಿಸಿದ. ಕೂಡಲೇ ಆ ಕಸೂತಿಯನ್ನು ಅಮ್ಮನಿಂದ ಪೂರ್ಣ ಹೇಳಿಸಿಕೊಂಡ. ತಾನೂ ಕಸೂತಿಯನ್ನು ಹಾಕಿ ತೋರಿಸಿದ. ಅಮ್ಮನಿಂದ ಶಹಭಾಶ್‌ಗಿರಿ ಪಡೆದ. ಅಮ್ಮನಿಂದ ಕಲಿತ ತಂತ್ರವನ್ನೇ ಉಪಯೋಗಿಸಿಕೊಂಡು ಎರಡು ರಕ್ತನಾಳಗಳನ್ನು ಹೊಲಿದ. ಎರಡು ರಕ್ತನಾಳಗಳು ಆರೋಗ್ಯವಾಗಿದ್ದವು. ರಕ್ತವು ಹರಿಯುತ್ತಿತ್ತು, ಗರಣೆ ಕಟ್ಟಲಿಲ್ಲ. ಇದನ್ನು 'ಟ್ರಯಾಂಗ್ಯುಲೇಶನ್ ಸ್ಯೂಚರಿಂಗ್ ಮೆಥಡ್' ಎಂದು ಕರೆಯುತ್ತಾರೆ. ಇವನನ್ನು ಬದಲಿ ಜೋಡಣಾ ಶಸ್ತ್ರಚಿಕಿತ್ಸೆಯ ಪಿತಾಮಹ (ಫಾದರ್ ಆಫ್ ಟ್ರಾನ್ಸ್‌ಪ್ಲಾಂಟೇಶನ್ ಸರ್ಜರಿ) ಎಂದು ಕರೆದರು. ಅಲೆಕ್ಸಿಸ್ ಕ್ಯಾರೆಲ್ ಅಮ್ಮನಿಂದ ಕಲಿತು ರೂಪಿಸಿದ ಈ ಹೊಲಿಗೆಯ ತಂತ್ರಜ್ಞಾನಕ್ಕಾಗಿ 1912ರ ನೊಬೆಲ್ ಪಾರಿತೋಷಿಕವನ್ನು ಪಡೆದ. ಇಂದು ನಡೆಯುತ್ತಿರುವ ಎಲ್ಲ ರೀತಿಯ ಬದಲಿಜೋಡಣಾ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗುತ್ತಿರುವುದಕ್ಕೆ ಕಾರಣ ಕ್ಯಾರೆಲ್ ರೂಪಿಸಿದ ಹೊಲಿಗೆಯ ವಿಧಾನ.

- **ಮಿಲಿಟರಿ ಪಡೆ:** ರಕ್ತನಾಳಗಳನ್ನು ಬದಲಿಜೋಡಿಸುವ

ಯಶಸ್ವಿ ತಂತ್ರವನ್ನು ರೂಪಿಸಿದ ಮಾತ್ರಕ್ಕೆ ಬದಲಿ ಜೋಡಣಾ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಲಿಲ್ಲ. ವಿಜ್ಞಾನಿಗಳು ಮತ್ತೊಂದು ಸಮಸ್ಯೆಯನ್ನು ಎದುರಿಸಿದರು. ಅದುವೇ ಮಾನವ ದೇಹದ ಮಿಲಿಟರಿ ಪಡೆಯ ರೋಧಕತ್ವ. ನಮ್ಮ ದೇಶವನ್ನು ರಕ್ಷಿಸಲು ಒಂದು ಸೈನ್ಯವಿರುವಂತೆ, ನಮ್ಮ ದೇಹವನ್ನು ರಕ್ಷಿಸಲೂ ಒಂದು ಸೇನೆಯಿರುತ್ತದೆ. ಅದುವೇ ಪ್ರಧಾನವಾಗಿ ಬಿಳಿಯ ರಕ್ತಕಣಗಳಿಂದ ಆಗಿರುವ ರೋಗರಕ್ಷಣಾ ವ್ಯವಸ್ಥೆ ಅಥವಾ ಇಮ್ಯೂನ್ ಸಿಸ್ಟಮ್. ನಮ್ಮ ದೇಶದ ಪ್ರತಿಯೊಬ್ಬರಿಗೂ ಅವರ ಗುರುತು-ಪರಿಚಯವನ್ನು ತಿಳಿಸುವ ಒಂದು ಆಧಾರ್ ಕಾರ್ಡ್ ಇರುವ ಹಾಗೆ, ನಮ್ಮ ದೇಹದ ಪ್ರತಿಯೊಂದು ಜೀವಕೋಶಕ್ಕೂ ಅದರ ಗುರುತು ಪರಿಚಯವನ್ನು ತಿಳಿಸುವ ಒಂದು 'ಆಧಾರ್ ಕಾರ್ಡ್' ಇರುತ್ತದೆ. ಅದುವೇ ಎಚ್‌ಎಲ್‌ಎ ವ್ಯವಸ್ಥೆ (ಹ್ಯೂಮನ್ ಲ್ಯೂಕೋಸೈಟ್ ಆಂಟಿಜೆನ್ ಸಿಸ್ಟಮ್). ಬಿಳಿಯ ರಕ್ತಕಣಗಳಲ್ಲಿ ಕೆಲವು ಸದಾ ದೇಹಾದ್ಯಂತ ಗಸ್ತು ಹೊಡೆಯುತ್ತಿರುತ್ತವೆ. ದಾರಿಯಲ್ಲಿ ಸಿಕ್ಕ ಎಲ್ಲ ಜೀವಕೋಶ/ಕಣ/ರಾಸಾಯನಿಕಗಳು ಆಧಾರ್ ಕಾರ್ಡನ್ನು ಪರೀಕ್ಷಿಸುತ್ತವೆ. ಆಧಾರ್ ಸರಿಯಾಗಿದ್ದರೆ ಮುಂದೆ ಹೋಗಲು ಬಿಡುತ್ತವೆ. ತಪ್ಪಾಗಿದ್ದರೆ ಆ ಅಗಂತುಕನನ್ನು ಶತ್ರುವೆಂದು ಪರಿಗಣಿಸಿ, ಅಲ್ಲಿಯೇ ಅದನ್ನು ನಿರ್ನಾಮ ಮಾಡುತ್ತವೆ. ಒಂದು ಅಂಗವನ್ನು ಬದಲಿ ಜೋಡಿಸಿದಾಗ, ಅವನ ಅಂಗದಲ್ಲಿರುವ ಜೀವಕೋಶಗಳ ಆಧಾರ್ ಕಾರ್ಡ್ ಭಿನ್ನವಾಗಿರುತ್ತದೆ. ಹಾಗಾಗಿ ಬಿಳಿಯ ರಕ್ತಗಳ ದಂಡು ನೋಡನೋಡುತ್ತಿರುವಂತೆ ಬದಲಿ ಅಂಗವನ್ನು ನಾಶಪಡಿಸುತ್ತವೆ. ಇದನ್ನು ಕಸಿ ತಿರಸ್ಕಾರ (ಗ್ರಾಫ್ಟ್ ರಿಜೆಕ್ಷನ್) ಎನ್ನುತ್ತಾರೆ. 1933ರಲ್ಲಿ ಸೋವಿಯತ್ ದೇಶದ ಯುಯು ವೋರೋನೋಯ್ (1895-1961) ಎಂಬ ಶಸ್ತ್ರವೈದ್ಯನು ಜಗತ್ತಿನ ಮೊದಲ ಮೂತ್ರಪಿಂಡ ಬದಲಿ ಜೋಡಣೆಯ ಶಸ್ತ್ರಚಿಕಿತ್ಸೆಯನ್ನು ನಡೆಸಿದ. ಮೃತ ದೇಹದಿಂದ ಮೂತ್ರಪಿಂಡವನ್ನು ಛೇದಿಸಿದ. ಪಾದರಸ ವಿಷದಿಂದ ನರಳುತ್ತಿದ್ದ ಓರ್ವ ಮಹಿಳೆಗೆ ಈ ಮೂತ್ರಪಿಂಡವನ್ನು ಯಶಸ್ವಿಯಾಗಿ ಬದಲಿ ಜೋಡಿಸಿದ. ಅವನು ನೋಡನೋಡುತ್ತಿರುವಂತೆಯೇ ಆಕೆಯ ದೇಹದ ಮಿಲಿಟರಿ ಪಡೆಯು ಬದಲಿ ಜೋಡಿಸಿದ ಮೂತ್ರಪಿಂಡದ ಮೇಲೆ ಆಕ್ರಮಣವನ್ನು ಮಾಡಿತು. ಬದಲಿ ಜೋಡಿಸಿದ ಮೂತ್ರಪಿಂಡ ಕಪ್ಪಾಯಿತು. ಒಡಲಿನಿಂದ ಪ್ರತ್ಯೇಕವಾಯಿತು.

ಪ್ರತಿಯೊಂದು ನಿಯಮಕ್ಕೂ ಒಂದು ವಿನಾಯತಿ ಇರುತ್ತದೆಯಂತೆ. ಎಷ್ಟೇ ಸಮಗ್ರವಾಗಿ ರೂಪಿಸಿದ ಯೋಜನೆಯಲ್ಲೂ ಎಲ್ಲೋ ಒಂದು ಕಡೆ ಒಂದು ಲೋಪವಿರುತ್ತದೆಯಂತೆ. ಮಿಲಿಟರಿ ಪಡೆಯ ಕಾರ್ಯಕ್ಷಮತೆಯಲ್ಲೂ ಒಂದು ಲೋಪವಿತ್ತು. ಈ ಲೋಪವನ್ನು ಗಮನಿಸಿದ ಅಮೆರಿಕದ ಬಾಸ್ಟನ್ನಿನ ಪೀಟರ್ ಬ್ರೆಂಟ್ ಬ್ರಿಘಾಮ್ ಆಸ್ಪತ್ರೆಯ (ಬ್ರಿಘಾಮ್ ಮತ್ತು ಮಹಿಳೆಯರ ಆಸ್ಪತ್ರೆ) ಡಾ. ಜೋಸೆಫ್ ಮುರ್ರೆ (1919-2012) ಎಂಬ ಶಸ್ತ್ರವೈದ್ಯನು ಮೂತ್ರಪಿಂಡ ವೈಫಲ್ಯದ ಬಗ್ಗೆ ಅಧ್ಯಯನವನ್ನು ಮಾಡುತ್ತಿದ್ದ. ಅವನಿಗೆ ಮಿಲಿಟರಿ ಪಡೆಯ ಕಾರ್ಯಸಾಮರ್ಥ್ಯದ ಪರಿಚಯವು ಚೆನ್ನಾಗಿಯೇ ಇತ್ತು. 1954. 23 ವರ್ಷದ ರಿಚರ್ಡ್ ಹೆರ್ರಿಕ್. ತೀವ್ರಸ್ವರೂಪದ ಮೂತ್ರಪಿಂಡ ಉರಿಯೂತದ ಕಾರಣ ಸಾವಿನಂಚಿಗೆ ಬಂದಿದ್ದ. ಇವನಿಗೆ ಒಬ್ಬ ಅವಳಿ ಸೋದರ. ರೊನಾಲ್ಡ್ ಹೆರ್ರಿಕ್. ಅವನು ತನ್ನ ಮೂತ್ರಪಿಂಡವೊಂದನ್ನು ದಾನವಾಗಿ ನೀಡಲು ಒಪ್ಪಿದ. ಇವರಿಬ್ಬರೂ ಅವಳಿ ಮಕ್ಕಳು. ಅವರ ಡಿಎನ್‌ಎ ಸ್ವರೂಪವು ಏಕರೂಪವಾಗಿತ್ತು. ಹಾಗಾಗಿ ಅವರಿಬ್ಬರ ದೇಹದ ಅಂಗಾಂಗಗಳ ಆಧಾರ್ ಕಾರ್ಡ್ ಏಕರೂಪವಾಗಿತ್ತು. ಹಾಗಾಗಿ ರೊನಾಲ್ಡ್ ನೀಡುವ ಮೂತ್ರಪಿಂಡವನ್ನು ಪರಕೀಯ ಎಂದು ಭಾವಿಸಿ, ಅದನ್ನು ನಾಶಮಾಡುವ ಪ್ರಯತ್ನವನ್ನು ರಿಚರ್ಡ್ ಮಿಲಿಟರಿ ಪಡೆಯು ಮಾಡುವುದಿಲ್ಲ ಎನ್ನುವ ಸತ್ಯವು ಮುರ್ರೆಯವರಿಗೆ ತಿಳಿದಿತ್ತು. ಹಾಗಾಗಿ ಬದಲಿಜೋಡಣೆಯನ್ನು ನಡೆಸಲು ಸಿದ್ಧರಾದರು.

ಆಗ ಅನಿರೀಕ್ಷಿತ ಅವಘಡ ಎದುರಾಯಿತು. ಅಮೆರಿಕದ ಜನರು ಹಲವು ನೈತಿಕ ಪ್ರಶ್ನೆಗಳನ್ನು ಎತ್ತಿದರು. ಕೆಲವು ಕ್ರೈಸ್ತರಲ್ಲಿ ಒಬ್ಬ ಅಂಗವನ್ನು ಮತ್ತೊಬ್ಬರಿಗೆ ಬದಲಿ ಜೋಡಿಸುವುದು ನಿಷಿದ್ಧವಿತ್ತು. ಒಬ್ಬ ಮನುಷ್ಯನು ಪೂರ್ಣವಾಗಿ ಸ್ವಸ್ಥನಾಗಿದ್ದಾನೆ. ಅವನ ಮೇಲೆ ಶಸ್ತ್ರಚಿಕಿತ್ಸೆಯನ್ನು ನಡೆಸುವುದು ಅನೈತಿಕ. ಅದು ಗಂಭೀರ ಸ್ವರೂಪದ ಶಸ್ತ್ರಚಿಕಿತ್ಸೆ. ಜೀವಾಪಾಯ ಆಗುವ ಸಾಧ್ಯತೆಯಿತ್ತು. ಅಕಸ್ಮಾತ್ ರೊನಾಲ್ಡ್ ಸತ್ತರೆ ಯಾರು ಹೊಣೆ? ಈ ಶಸ್ತ್ರಚಿಕಿತ್ಸೆಯಿಂದ ರಿಚರ್ಡ್‌ಗೆ ಅನುಕೂಲವಾಗಬಹುದು. ಆದರೆ ರೊನಾಲ್ಡ್ ಸಾಯಬಹುದಲ್ಲವೆ! ಇಂಥ ಶಸ್ತ್ರಚಿಕಿತ್ಸೆಗೆ ಮುಂದಾಗಿರುವ ವೈದ್ಯರ ಗುಂಪನ್ನು 'ಬಂಚ್ ಆಫ್ ಫೂಲ್ಸ್', 'ಗ್ರೇವ್ ರಾಬರ್ಸ್' ಎಂದೆಲ್ಲ ಜರೆದರು. ಪೊಲೀಸರು ಅವರು ನಿಜಕ್ಕೂ ಅವಳಿ ಸೋದರರು ಎನ್ನುವುದನ್ನು ಖಚಿತಪಡಿಸಲು ಅವರ ಬೆರಳಚ್ಚನ್ನು ಪರೀಕ್ಷಿಸಿ ಖಚಿತಪಡಿಸಿಕೊಂಡರು.

ಡಿಸೆಂಬರ್ 23, 1954. ಮುರ್ರೆಯವರು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿಮುಗಿಸಿದ್ದರು. ಮುರ್ರೆಯವರು ಬದಲಿ ಮೂತ್ರಪಿಂಡದ ರಕ್ತನಾಳಕ್ಕೆ ಹಾಕಿದ್ದ ತಡೆಯನ್ನು (ಕ್ಲಾಂಪ್)



ತೆಗೆಯುತ್ತಿರುವಂತೆಯೇ ರಕ್ತಪ್ರವಾಹವು ನುಗ್ಗಿತು. ಪೇಲವವಾಗಿದ್ದ ಮೂತ್ರಪಿಂಡವು ಕೆಂಪಗಾಯಿತು. ಕೂಡಲೇ ಮೂತ್ರೋತ್ಪಾದನೆಯನ್ನು ಆರಂಭಿಸಿತು. ನೋಡನೋಡುತ್ತಿರುವಂತೆಯೇ ಬದಲಿ ಜೋಡಣೆಯು ಯಶಸ್ವಿಯಾಗಿತ್ತು. ನಿರೀಕ್ಷಿಸಿದ್ದಂತೆ ಮಿಲಿಟರಿ ಪಡೆಯು ಯಾವುದೇ ರೀತಿಯಲ್ಲಿ ಹೊಸ ಮೂತ್ರಪಿಂಡವನ್ನು ತಿರಸ್ಕರಿಸಲಿಲ್ಲ. ರಿಚರ್ಡ್ 8 ವರ್ಷಗಳು ಬದುಕಿದ್ದ. ತನಗೆ ಚಿಕಿತ್ಸೆಯನ್ನು ನೀಡುತ್ತಿದ್ದ ನರ್ಸ್ ಓರ್ವಳನ್ನು ಮದುವೆಯಾದ. ಎರಡು ಮಕ್ಕಳನ್ನು ಪಡೆದ. ರೊನಾಲ್ಡ್, 79 ವರ್ಷಗಳ ಕಾಲ ಬದುಕಿದ್ದು 2010ರಲ್ಲಿ ತೀರಿಕೊಂಡ. ಜೋಸೆಫ್ ಮುರ್ರೆ ಅವರಿಗೆ ನೊಬೆಲ್ ಪಾರಿತೋಷಕವು ದೊರೆಯಿತು. ಮಿಲಿಟರಿ ಪಡೆಯನ್ನು ನಿಗ್ರಹಿಸುವ ಕಲೆಯನ್ನು ರೂಢಿಸಿಕೊಂಡರೆ, ಅಂಗಗಳ ಬದಲಿಜೋಡಣೆ ಕಷ್ಟವಲ್ಲ ಎಂದು ವಿಜ್ಞಾನಿಗಳಿಗೆ ಮನವರಿಕೆಯಾಯಿತು.

ಮೂತ್ರಪಿಂಡ ಬದಲಿಜೋಡಣೆಯು ವೈದ್ಯಕೀಯ ಲೋಕದಲ್ಲಿ ರೋಮಾಂಚನವನ್ನು ಉಂಟುಮಾಡಿದರೆ, ಹೃದಯದ ಬದಲಿಜೋಡಣೆಯು ಕೇವಲ ವೈದ್ಯಕೀಯ ರಂಗದಲ್ಲಿ ಮಾತ್ರವಲ್ಲ, ಇಡೀ ಸಮಾಜದಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡಿತು. ಮಾನವ ಜನಾಂಗದಲ್ಲಿ ಹೃದಯಕ್ಕೆ ಮಹತ್ತರವಾದ ಸ್ಥಾನವಿದೆ. ಹೃದಯವು ಭಗವಂತನ ಆವಾಸಸ್ಥಾನ, ಭಾವನೆಗಳ ಆಗರ. ಮಾನವ ಸಂಬಂಧಗಳಿಗೆ ಮಿಡುಕುವ ಅಂಗ. ಅಂದಿನ ದಿನಗಳಲ್ಲಿ ಹೃದಯವು ಮಿಡಿಯುವುದನ್ನು ನಿಲ್ಲಿಸಿದರೆ, ಅವನು ಸತ್ತ ಎಂದೇ ಪರಿಗಣಿಸುತ್ತಿದ್ದರು. ಇಂಥ ಪವಿತ್ರವಾದ ಅಂಗವನ್ನು ಮತ್ತೊಬ್ಬರಿಗೆ ಬದಲಿ ಜೋಡಿಸುವುದು ಅಪವಿತ್ರ, ಅಧಾರ್ಮಿಕ ಹಾಗೂ ಅನೈತಿಕ ಕಾರ್ಯ ಎಂದು ಸಮಾಜವು ಪ್ರತಿಭಟಿಸಿತು.

1960ರ ದಶಕ. ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಡಾ. ನಾರ್ಮನ್ ಶುಮ್ವೇ (1923-2006) ಹೃದಯಗಳನ್ನು ಬದಲಿ ಜೋಡಿಸುವ ಪ್ರಯೋಗಗಳನ್ನು ನಾಯಿಗಳ ಮೇಲೆ ನಡೆಸುತ್ತಿದ್ದರು. ಒಂದು ನಾಯಿಯ ಹೃದಯವನ್ನು ಎಲ್ಲಿ ಹಾಗೂ ಹೇಗೆ ಕತ್ತರಿಸಬೇಕು ಹಾಗೂ ಅದನ್ನು ಇನ್ನೊಂದು ನಾಯಿಗೆ ಹೇಗೆ ಬದಲಿಜೋಡಿಸಬೇಕು ಎನ್ನುವ ತಂತ್ರವನ್ನು ಕರಗತಗೊಳಿಸುತ್ತಿದ್ದರು. ಆದರೆ ಅನಿರೀಕ್ಷಿತವಾಗಿ ದಕ್ಷಿಣ ಆಫ್ರಿಕದ ಡಾ. ಕ್ರಿಶ್ಚಿಯನ್ ಬರ್ನಾರ್ಡ್ ಎನ್ನುವವನು ಜಗತ್ತಿನ ಮೊದಲ ಹೃದಯ ಬದಲಿಜೋಡಣೆಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿದ ಎನ್ನುವ ಸುದ್ದಿಯು ಇಡೀ ಜಗತ್ತನ್ನು ಅಲುಗಾಡಿಸಿತು. ಮನುಷ್ಯನು 'ದೇವರೇ' ಆಗಿಬಿಟ್ಟನೇ ಎಂದು ಕೆಲವರು ಹುಯಿಲಿಟ್ಟರು.

ಕ್ರಿಶ್ಚಿಯನ್ ಬರ್ನಾರ್ಡ್ (1922-2001) ಅಮೆರಿಕದಲ್ಲಿ ಕಲಿತು ದಕ್ಷಿಣ ಆಫ್ರಿಕದಲ್ಲಿ ನೆಲೆಸಿದ್ದ. ಲೂಯಿಸ್ ವಾಷ್ಕಾನ್ಸ್ಕಿ (1912-1967) ಎಂಬ 53 ವರ್ಷದ ಕಿರಾಣಿ ವ್ಯಾಪಾರಿ, ಧೂಮಪಾನಿ ಹಾಗೂ ಜೂಜುಕೋರ. ಇವನು ತನ್ನ ದೇಹದಲ್ಲಿರುವ ವಿವಿಧ ದ್ರವಗಳಲ್ಲಿ 'ಮುಳುಗಿ' ಸಾಯುವ ಸ್ಥಿತಿಯನ್ನು ತಂದುಕೊಂಡಿದ್ದ. ಡೆನಿಸ್ ಡರ್ವಾಲ್ 28 ವರ್ಷದ ಯುವತಿ. ಕೇಕ್ ಕೊಳ್ಳಲು ರಸ್ತೆಯನ್ನು ದಾಟುವಾಗ ಕಾರ್ ಡಿಕ್ಕಿ ಹೊಡೆಯಿತು. ಆಕೆಯ ಮಿದುಳಿಗೆ ತೀವ್ರ ಪೆಟ್ಟಾದ ಕಾರಣ ಮಿದುಳು ಮೃತವಾಯಿತು. ಆದರೆ ಹೃದಯವಿನ್ನೂ ಮಿಡಿಯುತ್ತಿತ್ತು.

ಡಿಸೆಂಬರ್ 7, 1967. ದಕ್ಷಿಣ ಆಫ್ರಿಕದ ಗ್ರೂಟ್ ಶುರ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯು ಆರಂಭವಾಯಿತು. ಆದರೆ ಕಾನೂನು ಮೂಗು ತೂರಿಸಿತು. ಅಂದಿನ ದಿನಗಳಲ್ಲಿ ಹೃದಯವು ನಿಂತರೆ ಮಾತ್ರ, ಸಾವು ಸಂಭವಿಸಿದೆ ಎಂದು ಜನರು ಮಾತ್ರವಲ್ಲ ಕಾನೂನು ಸಹ ನಂಬಿತ್ತು. ಹಾಗಾಗಿ ಬರ್ನಾರ್ಡ್, ವೆಂಟಿಲೇಟರನ್ನು ಸ್ಥಗಿತಗೊಳಿಸಿದರು. ನೋಡನೋಡುತ್ತಿರುವಂತೆಯೇ ಡರ್ವಾಲಳ ಹೃದಯವು ಮಿಡಿಯುವುದನ್ನು ನಿಲ್ಲಿಸಿತು. ತಕ್ಷಣವೇ ಹೃದಯವನ್ನು ಛೇದಿಸಿದ. ಕೂಡಲೇ ಅದನ್ನು 'ಆಕ್ಸಿಜನ್ ಚೇಂಬರ್'ನ ಒಳಗಿಟ್ಟ. ಹೃದಯವು ಚೇತರಿಸಿಕೊಂಡಿತು. ನಂತರ ಅದನ್ನು ವಾಷ್ಕಾನ್ಸ್ಕಿಯ ಎದೆಗೂಡಿನಲ್ಲಿಟ್ಟು ಬದಲಿಜೋಡಣೆಯನ್ನು ಪೂರ್ಣಗೊಳಿಸಿದ.

ವಾಷ್ಕಾನ್ಸ್ಕಿ, 18 ದಿನಗಳ ಕಾಲ ಬದುಕಿದ್ದ. ನಂತರ ಸತ್ತ. ಅವನ ಸಾವಿಗೆ ಕಸಿ ತಿರಸ್ಕಾರ ಕಾರಣವಾಗಿರಲಿಲ್ಲ. ಮಿಲಿಟರಿ ಪಡೆಯನ್ನು ಸಂಪೂರ್ಣವಾಗಿ ನಿಗ್ರಹಿಸಬಲ್ಲ ಔಷಧಗಳನ್ನು ನೀಡಿದರು. ಈ ಔಷಧಗಳು ಬಿಳಿಯ ರಕ್ತಕಣಗಳ ಕಸಿ ತಿರಸ್ಕಾರ ಸಾಮರ್ಥ್ಯವನ್ನು ಕುಗ್ಗಿಸಿದ್ದವು. ಜತೆಯಲ್ಲಿ ಅವನ ಶ್ವಾಸಕೋಶಗಳಲ್ಲಿ ಬೆಳೆಯುತ್ತಿದ್ದ ಅಪಾಯಕಾರಿ ಬ್ಯಾಕ್ಟೀರಿಯಗಳನ್ನು ನಿಗ್ರಹಿಸಲೂ ವಿಫಲವಾದವು. ಹಾಗಾಗಿ ಬ್ಯಾಕ್ಟೀರಿಯಗಳ ಮೇಲುಗೈಯಾಗಿ, ನ್ಯುಮೋನಿಯ ಉಂಟಾಗಿ ವಾಷ್ಕಾನ್ಸ್ಕಿ ಮರಣಿಸಿದ.

ತನ್ನಾವರಣವೇ ಸೆರೆಮನೆಯಾದರೆ ಜೀವಕೆ ಎಲ್ಲಿಯ ಮುಕ್ತಿ?

● ಮಾಯಾ ಬಾಲಚಂದ್ರ

ನಿರಂತರ ಕಾರ್ಯೋನ್ಮುಖರಾಗಿರುವವರು ಸಹ, ಒಂದು ಸೀಮಾರೇಖೆಯ ವಲಯದೊಳಗೆ ತಮ್ಮನ್ನು ಸೀಮಿತಗೊಳಿಸಿಕೊಂಡರೆ, ಅವರೆಷ್ಟೇ ಪರಿಶ್ರಮವಹಿಸಿದರೂ, ಎಷ್ಟೇ ಹೆಚ್ಚಿನ ಅವಧಿಯ ಕೆಲಸ ಮಾಡಿದರೂ, ಹೆಚ್ಚಿನ ಯಶಸ್ಸೇನೂ ದೊರೆಯಲಾರದು. ಪ್ರತಿಫಲವು ಸಹ ಅವರು ಹಾಕಿಕೊಂಡ ಪರಿಮಿತಿಯಷ್ಟೇ ಮಿತವಾಗಿರುತ್ತದೆ.

ಒಂದು ಗಾಜಿನ ಪಾತ್ರೆಯಲ್ಲಿ ಒಂದಿಷ್ಟು ನೊಣಗಳನ್ನು ತುಂಬಿಸಿ, ಅವುಗಳ ಉಸಿರಾಟಕ್ಕೆ ಬೇಕಾಗುವ ಹಾಗೆ ಮಾತ್ರ ಗಾಳಿಯಾಡಲು ಅನುವಾಗುವಂತೆ, ಆದರೆ ಅವುಗಳು ಅದರಿಂದ ಹೊರ ಹೋಗಲಾಗದಂತೆ, ಹಗುರವಾಗಿ ಮುಚ್ಚಳವನ್ನು ಮುಚ್ಚಿಟ್ಟರೆ, ಅವುಗಳು ಸತತವಾಗಿ ಹೊರಬರಲು ಪ್ರಯತ್ನಿಸುತ್ತಾ, ಹಾರಾಡಲಾರಂಭಿಸುತ್ತವೆ. ಕೆಲವು ಗಂಟೆಗಳ ನಂತರ ಆ ಪರಿಸರಕ್ಕೆ ಹೊಂದಿಕೊಳ್ಳುತ್ತವೆ. ಒಂದೈದು ಗಂಟೆಗಳ ನಂತರ ಮುಚ್ಚಳ ತೆರೆದಿಟ್ಟರೂ ಅವು ಹೊರ ಹೋಗದೆ, ಇದುವರೆಗೂ ಹಾರಾಡುತ್ತಿದ್ದಷ್ಟು ವ್ಯಾಪ್ತಿಯಲ್ಲಿಯೇ ತಮ್ಮ ವ್ಯರ್ಥ ಹಾರಾಟವನ್ನು ಮುಂದುವರಿಸಿಕೊಂಡು ಹೋಗುತ್ತವೆ. ಆ ನೊಣಗಳು ಆ ಐದು ಗಂಟೆಗಳಲ್ಲಿ ಕಂಡುಕೊಂಡದ್ದಷ್ಟೇ ತಮ್ಮ ವಿಶ್ವ ಎಂದು ಬಲವಾಗಿ ನಂಬಿಬಿಡುತ್ತವೆ.

ಆಕ್ವೇರಿಯಂಗಳಲ್ಲಿ, ವಿವಿಧ ಪ್ರಭೇದಗಳ ಮೀನುಗಳನ್ನು ಸಾಕುವಾಗ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಬೇರೆ ಬೇರೆ ಪ್ರಭೇದದ ಮೀನುಗಳು ಕಚ್ಚಾಡುವುದು ಸಾಮಾನ್ಯ. ಅದನ್ನು



ತಪ್ಪಿಸಲು ಒಂದೊಂದು ಪ್ರಭೇದದ ಮೀನುಗಳನ್ನು ಪ್ರತ್ಯೇಕಿಸುವಂತೆ, ಮಧ್ಯದಲ್ಲಿ ಗಾಜಿನ ತಡೆಗೋಡೆಯನ್ನು ನಿರ್ಮಿಸುತ್ತಾರೆ. ಆಗ ಒಂದು ಭಾಗದ ಮೀನು ಇನ್ನೊಂದು ಭಾಗಕ್ಕೆ ಬರಲಾರದು. ಕೆಲವು ದಿನಗಳ ಕಾಲದ ಸಂಚಾರದಲ್ಲಿ, ಆ ಗೋಡೆಯ ಉದ್ದಗಲಗಳ ವ್ಯಾಪ್ತಿಯನ್ನು ಆ ಮೀನುಗಳು ತಮ್ಮದಾಗಿಸಿಕೊಳ್ಳುತ್ತವೆ. ಮುಂದೆ, ಸ್ವಲ್ಪ ಸಮಯದ ನಂತರ ಮಧ್ಯದಲ್ಲಿರುವ ತಡೆಗೋಡೆಯನ್ನು ತೆಗೆದರೂ, ಅಲ್ಲಿ ಗೋಡೆಯಿದೆ ಎಂದೇ ಭಾವಿಸುತ್ತಾ, ಆ ಗಡಿಯನ್ನು ದಾಟುವ ಪ್ರಯತ್ನವನ್ನೇ ಮಾಡದೆ, ಹಾಗೆಯೇ ಉಳಿದುಬಿಡುತ್ತವೆ. ಕೆಲವು ಸಮಯದ ಅನುಭವವು, ನಂಬಿಕೆಯ ಸರಪಳಿಯಾಗಿ ಅವುಗಳನ್ನು ಮಿತಿಯೊಳಗೆ ಕಟ್ಟಿಹಾಕಿಬಿಡುತ್ತದೆ. ತನ್ನ ಬಂಧನಕ್ಕೆ ತನ್ನ ನಂಬಿಕೆಯೇ ಕಾರಣವಾಗಿರುವುದು ಅರಿವಿಗೆ ಬಾರದೆ ಹೋಗುತ್ತದೆ ಈ ಜೀವಿಗಳಿಗೆ.

ಮನುಷ್ಯನೂ ಇದಕ್ಕೆ ಹೊರತಲ್ಲ. ಅವ್ಯಾಹತವಾಗಿ ನಡೆಯುವ ಚಟುವಟಿಕೆಗಳಿಂದ ದೊರೆಯುವ ಅನುಭವಗಳು, ನಮ್ಮ ಚಿಂತನೆಗಳಿಗೆ ಒಂದು ಗೋಡೆಯನ್ನು ನಿರ್ಮಿಸಿಬಿಡುತ್ತವೆ. ಅದರಲ್ಲೂ ಬಾಲ್ಯದಲ್ಲಿ ಪಡೆದ ಅನುಭವಗಳು ಗಾಢವಾಗಿ, ಅದರಿಂದ ಪಡೆದ ಗ್ರಹಿಕೆಗಳೇ ಮುಂದಿನ ಜೀವನದ ಮೇಲೆ ಪರಿಣಾಮವನ್ನು ಬೀರುತ್ತವೆ. ಆ ಗ್ರಹಿಕೆಗಳಿಗೆ ತಕ್ಕಂತೆಯೇ ಮಿದುಳಿನಲ್ಲಿ ನರತಂತುಗಳು ಬೆಳೆಯುತ್ತಾ ಹೋಗುತ್ತವೆ. ಮನೋವಿಜ್ಞಾನಿಗಳು ಇದನ್ನು 'ಪ್ರಿಮೆಚೂರ್ ಕಾಗ್ನಿಟಿವ್ ಕಮಿಟ್ಮೆಂಟ್' ಎಂದು ಹೆಸರಿಸಿದ್ದಾರೆ. ಪೂರ್ವದ ಗ್ರಹಿಕೆಗಳಿಗೆ ಕಟ್ಟುಬಿದ್ದು, ಜೀವನವಿಡೀ ಸೀಮಿತ ವ್ಯಾಪ್ತಿಯ ಒಳಗೆ ಜೀವಿಸುವ ಮನಸ್ಥಿತಿ ಇದಾಗಿದೆ. ವಾಸ್ತವಕ್ಕೆ ವ್ಯತಿರಿಕ್ತವಾಗಿ, ಪೂರ್ವದ ಭ್ರಮೆಯನ್ನೇ ಪುಷ್ಟಿಗೊಳಿಸಿಕೊಳ್ಳುವ ದೃಶ್ಯಗಳನ್ನೇ ಕಲ್ಪಿಸಿಕೊಳ್ಳುತ್ತಾ, ಪ್ರಸ್ತುತದಲ್ಲಿಯೂ ಅವುಗಳನ್ನೇ ಅನುಭವಿಸುತ್ತಿರುವಂತೆ ಭ್ರಮಿಸುತ್ತಾ ಸಾಗುವುದೇ ಇಲ್ಲಿನ ಮನಸ್ಥಿತಿ. ನಮ್ಮ ಗ್ರಹಿಕೆಗೆ ಅನುಗುಣವಾಗಿ ಬಯಸುತ್ತಾ, ಅವುಗಳನ್ನೇ ಅನುಭವಿಸುತ್ತಾ ಸಾಗುತ್ತದೆ ಮನಸ್ಸು. ನಮ್ಮ ಸುತ್ತಲಿನ ಪ್ರಪಂಚ ಹೇಗಿದೆಯೋ ಹಾಗೆ ಕಾಣಲಾರದೆ, ನಾವು ಅಂದುಕೊಂಡ ರೂಪದಲ್ಲಿ ಪ್ರಪಂಚವನ್ನು ಕಾಣಲಾರಂಭಿಸಿ ಬಿಡುತ್ತೇವೆ. ಹಾಗಾಗಿಯೇ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಒಬ್ಬೊಬ್ಬರಲ್ಲಿ ಒಂದೊಂದು ರೀತಿಯ ಅನುಭೂತಿಗೆ ಕಾರಣವಾಗುತ್ತವೆ. ಒಂದೇ ಶಬ್ದವನ್ನು ಕೇಳಿದ ಹಲವರಲ್ಲಿ, ಒಂದೇ ರೀತಿಯ ಪ್ರತಿಸ್ಪಂದನೆ ಮೂಡಲಾರದು. ಸ್ಪಂದನೆಗೆ ಅವರವರ ಪೂರ್ವಗ್ರಹಿಕೆ, ಸಂಸ್ಕಾರಗಳು ಕಾರಣವಾಗುತ್ತವೆ. ನೈಜ ಜಗತ್ತಿನಲ್ಲಿ ಬಣ್ಣಗಳೇ ಇಲ್ಲ, ವಾಸನೆಯೂ ಇಲ್ಲ, ಮೃದುತ್ವ- ಕಾಠಿಣ್ಯಗಳು ಇಲ್ಲ. ಅವೆಲ್ಲ ಏನಿದ್ದರೂ ಇರುವುದು ನಮ್ಮ ನಿಮ್ಮ ಮಿದುಳಿನಲ್ಲಿ, ನಮ್ಮ ನಿಮ್ಮ ಜ್ಞಾನದಲ್ಲಿ ಮಾತ್ರ ಎನ್ನುತ್ತಾರೆ ನೊಬೆಲ್ ವಿಜೇತ ನರವಿಜ್ಞಾನಿ ಸರ್ ಜಾನ್ ಐಕಲ್ಸ್. ''ನಮ್ಮದೆಲ್ಲ ಒಂದೇ ಜಗತ್ತು, ವ್ಯತ್ಯಾಸವೆಂದರೆ ನೀನು ಈ ಜಗತ್ತಿನೊಳಗೆ ನಿನ್ನನ್ನು ಕಾಣುತ್ತೀಯ, ನಾನು ನನ್ನೊಳಗೆ ಇಡೀ ಜಗತ್ತನ್ನು ಕಾಣುತ್ತೇನೆ'' ಎಂದು ಗುರುವು ಶಿಷ್ಯನಿಗೆ ಹೇಳುವ ಉಪನಿಷತ್‌ನಲ್ಲಿನ ಸಂಭಾಷಣೆಯು ಸಹ ಇದನ್ನೇ ಸಾರಿದೆ...

ತಾಯಿಯ ಪ್ರೀತಿ ಅತಿ ಶ್ರೇಷ್ಠವಾದದ್ದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಒಂದು ಸಲ ರಾಜನ ಆಸ್ಥಾನಕ್ಕೆ ಇಬ್ಬರು ಮಹಿಳೆಯರು ಒಂದು ಮಗುವಿನ ಜತೆಯಲ್ಲಿ ನ್ಯಾಯಕ್ಕಾಗಿ ಬಂದಿದ್ದರು. ಅವರಲ್ಲಿ ಆ ಮಗು ತನ್ನದೆಂದು ಒಬ್ಬಳು, ತನ್ನದೆಂದು ಇನ್ನೊಬ್ಬಳು ಕಿತ್ತಾಡುತ್ತಿದ್ದರು. ಆ ಇಬ್ಬರು ಮಹಿಳೆಯರ ಗಂಡಂದಿರೂ ರಾಜನಿಗೋಸ್ಕರ ಯುದ್ಧದಲ್ಲಿ ಹೋರಾಡಿ ಮಡಿದಿದ್ದರು. ಇವರಿಗೆ ಇದರ ಬಗ್ಗೆ ಬೇರೆ ಯಾವ ಸಾಕ್ಷಿ ಆಧಾರಗಳೂ ಇರಲಿಲ್ಲ. ರಾಜ ತಮಗೇ ನ್ಯಾಯ ದೊರಕಿಸಿ ಕೊಡಬೇಕೆಂದು ಇಬ್ಬರೂ ಆಸ್ಥಾನಕ್ಕೆ ಬಂದಿದ್ದರು. ರಾಜನಿಗೀಗ ಧರ್ಮಸಂಕಟಕ್ಕೆ ಇಟ್ಟುಕೊಂಡಿತು.

ಸಾಕಷ್ಟು ತಲೆಕೆಡಿಸಿಕೊಂಡರೂ ಅವನಿಗೆ ಪರಿಹಾರ ದೊರೆಯಲಿಲ್ಲ. ರಾಜ ದಿಕ್ಕು ಕಾಣದೆ, ವಯಸ್ಸಾದ ಸಂತರೊಬ್ಬರ ಮೊರೆಹೊಕ್ಕ. ಸಂತರು ಮುಗುಳ್ನಗೆ ಬೀರುತ್ತಾ, ''ಇದು ಬಹಳ ಸುಲಭ, ಮಗುವನ್ನು ಇತ್ತ ಕೊಡಿ'' ಎಂದರು. ಮಗುವನ್ನು ರಾಜನ ಕೈಗೆ ಕೊಟ್ಟು ಸಂತರು, ''ಈ ಮಗುವನ್ನು ಸರಿಯಾಗಿ ಅರ್ಧಕ್ಕೆ ಸೀಳಿ, ಇಬ್ಬರಿಗೂ ಒಂದೊಂದು ಸಮಭಾಗವನ್ನು ಕೊಟ್ಟುಬಿಡಿ'' ಎಂದು ಹೇಳಿದರು. ಗಾಬರಿಯಾದ ರಾಜ, ''ಗುರುಗಳೇ ನೀವು ಇದೇನು ಹೇಳುತ್ತಿರುವಿರಿ?'' ಎಂದು ಕೇಳಲು, ಸಂತರು ''ಇದರಲ್ಲೇನು ಸಮಸ್ಯೆ? ಇಬ್ಬರೂ ಈ ಮಗುವನ್ನು ತಮ್ಮದೆನ್ನುತ್ತಿದ್ದಾರೆ, ಬೇರೆ ಯಾವ ಸಾಕ್ಷಿ ಆಧಾರಗಳೂ ಇಲ್ಲ. ನ್ಯಾಯ ದೊರಕಬೇಕಾದರೆ ಮಗುವನ್ನು ಎರಡು ಭಾಗ ಮಾಡಲೇಬೇಕು'' ಎಂದೆನ್ನುತ್ತಾ, ರಾಜನ ಸೊಂಟದಲ್ಲಿದ್ದ ಕತ್ತಿಯನ್ನು ಹೊರಗೆಳೆದರು.

ಆಶ್ಚರ್ಯಚಕಿತನಾದ ರಾಜ ಚೇತರಿಸಿಕೊಳ್ಳುವಷ್ಟರಲ್ಲಿ, ಒಬ್ಬ ಹೆಂಗಸು ಮುಂದೆ ಬಂದು ಸಂತರನ್ನು ತಡೆಯುತ್ತಾ, ''ದಯವಿಟ್ಟು ಬೇಡ ಸ್ವಾಮಿ, ಆ ಮಗು ನನ್ನದಲ್ಲ. ಅದು ಅವಳದ್ದೇ, ಅವಳಿಗೇ ಕೊಟ್ಟುಬಿಡಿ'' ಎಂದು ಕಣ್ಣೀರಿಡುತ್ತಾ ಸಂತರನ್ನು ತಡೆದಳು. ಆಗ ಸಂತರು ತಮ್ಮನ್ನು ತಡೆದ ಮಹಿಳೆಗೆ ಮಗುವನ್ನು ಕೊಡುತ್ತಾ ''ತೆಗೆದುಕೋ ತಾಯಿ, ಇದು ನಿನ್ನದೇ ಮಗು'' ಎಂದರು.

ನಡೆದುದೆಲ್ಲವನ್ನೂ ಆಶ್ಚರ್ಯದಿಂದ ನೋಡುತ್ತಿದ್ದ ರಾಜ, ''ಗುರುಗಳೇ, ನನಗೊಂದೂ ಅರ್ಥವಾಗುತ್ತಿಲ್ಲ. ಆಕೆ ಆ ಮಗು ತನ್ನದಲ್ಲವೆಂದು ಸ್ಪಷ್ಟವಾಗಿ ಹೇಳಿದ ಮೇಲೂ ಆ ಮಗು ಅವಳದ್ದೇ ಎಂದು ನೀವು ಹೇಗೆ ತೀರ್ಮಾನಿಸಿದಿರಿ?'' ಎಂದು ಕೇಳಿದ.

ಆಗ ಸಂತರು, ''ನಿಜವಾದ ತಾಯಿಯು ತನ್ನ ಮಗುವಿಗೆ ನೋವಾಗುವುದನ್ನು ಎಂದೂ ಸಹಿಸಲಾರಳು. ಆದರೆ ತಾನು ತಾಯಿ ಎಂದು ಸುಳ್ಳು ಹೇಳಿಕೊಳ್ಳುವವಳು ಮಗು ತುಂಡಾಗುತ್ತದೆಯೆಂದು ಗೊತ್ತಾಗಿಯೂ ಸುಮ್ಮನೆ ನಿಂತಿದ್ದಳು. ಮಗುವಿಗೆ ಏನಾದರೂ ಅವಳಿಗೆ ಏನೂ ಚಿಂತೆ ಇಲ್ಲ, ಅವಳು ತುಂಡಾದ ಮಗುವನ್ನು ಕೂಡಾ ಪಡೆಯಲು ತಯಾರಾಗೇ ನಿಂತಿದ್ದಾಳೆ. ಮಗುವಿಗೆ ಏನಾದರೇನು? ಅದು ಹೇಗೂ ಅವಳ ಮಗುವಲ್ಲ! ಆದರೆ ನಿಜವಾದ ತಾಯಿ, ಅದು ಕ್ಷೇಮವಾಗಿದ್ದರೆ ಸಾಕೆಂದು ಅದನ್ನು ಬಿಟ್ಟುಕೊಡಲೂ ತಯಾರಿದ್ದಳು. ಇದರಿಂದಲೇ ಗೊತ್ತಾಗುವುದಿಲ್ಲವೇ, ನಿಜವಾದ ಮಗುವಿನ ತಾಯಿ ಯಾರೆಂದು?'' ಎಂದು ಹೇಳಿದರು.

ನಮಗೆಲ್ಲ ನಮ್ಮ ತಾಯಿಯ ಬೆಲೆ ತಿಳಿಯುವುದು ನಾವು ತಾಯಿಯ ಸ್ಥಾನಕ್ಕೆ ಬಂದಾಗಲೇ. ಮನೆಯಲ್ಲಿ ತಾಯಿ, ನಿಷ್ಠುರವಾಗಿ ಮಾತನಾಡಿ ಹಠ ಹಿಡಿದರೂ ಅದರ ಬೆನ್ನ ಹಿಂದೆಯೇ ಅವಳಿಗೆ ನಮ್ಮ ಬಗ್ಗೆ ಅಪಾರವಾದ ಕಾಳಜಿ ಇರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ನಾವು ಮಾಡುವ ತಪ್ಪುಗಳನ್ನು, ನಮ್ಮ ಸುಳ್ಳುಗಳನ್ನ ಮೊದಲು ಗಮನಿಸಿ ನಮ್ಮನ್ನು ಹಿಡಿಯುವುದೇ ತಾಯಿ. ಅವಳಲ್ಲಿ ನಮ್ಮ ತಪ್ಪುಗಳಿಗೆ ಎಂದಿಗೂ ಮೃದು ಧೋರಣೆ ಇರುವುದಿಲ್ಲ. ದಂಡಿಸಿ ಬೈದು ಬುದ್ಧಿ ಹೇಳಿ ನಮ್ಮನ್ನು ಸಮಾಜಮುಖಿಯಾಗಿಸುವುದರಲ್ಲಿ ತಾಯಿಯ ಪಾತ್ರ ಬಹಳ ದೊಡ್ಡದು. ಅವಳು ನಮ್ಮನ್ನು ಎಷ್ಟೇ ದಂಡಿಸಿದರೂ ಹೊರಗಿನ ಪ್ರಪಂಚದ ಯಾರಾದರೂ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ಗೊತ್ತಾದರೆ ಸಾಕು, ರೌದ್ರರೂಪ ತಾಳಿ ಅವರಿಗೆ ತಕ್ಕ ಶಾಸ್ತಿ ಕಲಿಸಲು ನಮ್ಮ ಬೆನ್ನ ಹಿಂದೆಯೇ ನಿಲ್ಲುತ್ತಾಳೆ. ಇಂಥ ತಾಯಿಯ ನೆರಳು, ಆಶೀರ್ವಾದ ಜೀವನದಲ್ಲಿ ಇರುವವರೆಗೆ ನಮಗೆ ಯಾವ ದುಷ್ಟ ಶಕ್ತಿಯ ಭಯವೂ ಇರುವುದಿಲ್ಲ. ನೂರು ದೇವರುಗಳಿಗಿಂತ, ತಾಯಿದೇವರು ಮೇಲು. ತಾಯಿಯ ಮನಸ್ಸನ್ನು ಎಂದಿಗೂ ನೋಯಿಸಬೇಡಿ. ಅವಳು ನಿಟ್ಟುಸಿರಿಟ್ಟರೆ ನಮಗೆ ಖಂಡಿತ ಒಳ್ಳೆಯದಾಗುವುದಿಲ್ಲ.

ಪ್ರಜ್ಞೆಯಿಂದ ಪರಿಹಾರ

● ಡಾ. ಎನ್. ಜಯರಾಮಶೆಟ್ಟಿ

ಸಮಸ್ಯೆ ಮತ್ತು ಸವಾಲುಗಳು ಬದುಕಿನ ಅವಿಭಾಜ್ಯ ಅಂಗಗಳೇ ಹೌದು. ಸಮಸ್ಯೆಯೆಂದರೆ ಆ ಸಮಯದಲ್ಲಿ ಅದಕ್ಕೊಂದು ಪರಿಹಾರ ಇಲ್ಲದಿರುವುದಲ್ಲ, ನಮ್ಮ ಅರಿವಿಗೆ ಬಾರದಿರುವುದು. ಪರಿಹಾರ ಹೊಳೆದ ತಕ್ಷಣ, ಸಮಸ್ಯೆ ಎಲ್ಲಿಯದು? ಬೀಗಕ್ಕೊಂದು ಬೀಗದ ಕೈ ಇರುವಂತೆ ಪ್ರತಿ ಸಮಸ್ಯೆಗೂ ಪರಿಹಾರ ಎನ್ನುವುದಿದೆ, ಪ್ರತಿ ಪ್ರಶ್ನೆಗೂ ಉತ್ತರ ಇದ್ದೇ ಇದೆ. ಸಮಸ್ಯೆಗೆ ಆಯಸ್ಸು ಕಡಿಮೆಯಂತೆ. ನಿಮ್ಮ ಸಮಸ್ಯೆಯೊಂದಕ್ಕೆ ಉತ್ತರವಿಲ್ಲದೆ ತತ್ತರಿಸಬೇಕಿಲ್ಲ, ಅದಕ್ಕಾಗಿ ಬಹಳ ಎತ್ತರಕ್ಕೂ ಹೋಗಬೇಕಿಲ್ಲ.

ಬೆಂಗಳೂರಿನಂಥ ಪ್ರದೇಶಗಳಲ್ಲಿ ವಾಹನ ದಟ್ಟಣೆಯಿಂದ ಟ್ರಾಫಿಕ್ ಜಾಮ್ ದಿನನಿತ್ಯದ ಗೋಳು; ಆದರೆ ಯಾವುದೇ ಜಾಮ್ ಸರಿಯದೆ ಇನ್ನೂ ಅಲ್ಲೇ ಇರುವುದನ್ನು ನಾನು ನೋಡಿದ್ದಿಲ್ಲ. ಅದೇ ರೀತಿ ಕಗ್ಗಂಟೊಂದು ಸಡಿಲಗೊಳ್ಳಲೇಬೇಕು, ಸಮಸ್ಯೆ ಬಗೆಹರಿಯಲೇಬೇಕು, ಕವಿದಿರುವ ಕತ್ತಲೆ ಕರಗಲೇಬೇಕು.

ಈ ಪ್ರಕರಣವು ಕಪೋಲಕಲ್ಪಿತವಾದದ್ದಿರಬಹುದು. ಆದರೆ ಅದರಲ್ಲಿ ನಮಗೊಂದು ಪಾಠವಿದೆ. ರಾಮ ಮತ್ತು ಸೀತೆಯರ ವಿವಾಹ ಸಂದರ್ಭದ ಘಟನೆಯಿದು. ಸೀತೆ ಹಾರ ಹಿಡಿದು ನಾಚಿಕೊಂಡು ನಿಂತಿದ್ದಾಳೆ. ಆಜಾನುಬಾಹು ರಾಮ ಸೆಟೆದುಕೊಂಡೇ ನಿಂತಿದ್ದ. ಸೀತೆಗೆ ರಾಮನ ಕುತ್ತಿಗೆಯನ್ನು ತಲುಪಲಾಗದ ಅಸಹಾಯಕತೆ, ನಾಚಿಕೆ. ಇದನ್ನು ಗಮನಿಸಿದ ವಸಿಷ್ಠರು ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತು, ಕಣ್ಸನ್ನೆ ಮಾಡಿ ಲಕ್ಷ್ಮಣನನ್ನು ಕರೆದು ಕಿವಿಯಲ್ಲಿ ಏನೋ ಹೇಳಿದರು. ಲಕ್ಷ್ಮಣ ಮಿಂಚಿನಂತೆ ಬಂದು ರಾಮನ ಕಾಲಿಗೆ ಎರಗುತ್ತಾನೆ. ತಮ್ಮನನ್ನು ಆಶೀರ್ವದಿಸಲು ಶ್ರೀರಾಮ ಬಾಗುತ್ತಾನೆ. ಆ ಕ್ಷಣಕ್ಕೆ ಸೀತೆ ರಾಮನ ಕುತ್ತಿಗೆಗೆ ಮಾಲೆ ಹಾಕುತ್ತಾಳಂತೆ!

ಏನೇ ಇರಲಿ, ಏನೇ ಆಗಲಿ, ಸೀತಾದೇವಿ-ಶ್ರೀರಾಮರ ವಿವಾಹ ಯಾವುದೇ ವಿವಾದವಿಲ್ಲದೆ ನಡೆಯಿತಲ್ಲ. ಸಜ್ಜನರು, ಸಾತ್ವಿಕರು ಸಮಸ್ಯೆಯೊಂದನ್ನು ಗೊಂದಲವಿಲ್ಲದೆ ಬಿಡಿಸಿದ ಈ ಉದಾಹರಣೆ ನಮ್ಮೆಲ್ಲರ ಬದುಕಿದಲ್ಲಿ ಆದರ್ಶಪ್ರಾಯವಾಗಿರಲಿ. ಸೀತೆಯೇ ರಾಮನಿಗೆ ತುಸು ಬಾಗುವಂತೆ ಹೇಳಬಹುದಿತ್ತೇ, ವಸಿಷ್ಠರೇ ಹಾಗೆ ಸೂಚಿಸಬಹುದಿತ್ತೇ, ರಾಮನೇ ತಿಳಿಯಬೇಕಿತ್ತೇ? ಈ ಯಾವ ಪ್ರಶ್ನೆಯೂ ಮುಖ್ಯವಲ್ಲ. ಯಾವುದೇ ಮಾತಿಲ್ಲದೆ, ಸಮಸ್ಯೆಯಿಲ್ಲದೆ ಪ್ರಸಂಗವೊಂದು ತಿಳಿಯಾಯಿತಲ್ಲ, ಅದು ಮುಖ್ಯ. ನಾವು ಕೂಡಾ ಹೆಚ್ಚಿನ ಗದ್ದಲವಿಲ್ಲದೆ, ಮಾತುಗಳ ಹದ್ದು ಮೀರದೆ ಸಮಸ್ಯೆಗೊಂದು ಪರಿಹಾರ ಕಂಡುಕೊಳ್ಳಬಹುದಲ್ಲವೆ?

ಮೇಲಿನ ಪ್ರಕರಣವನ್ನು ಗಮನಿಸಿ. ಗುರು ವಸಿಷ್ಠರು ಮದುವೆ ಮಂಟಪದಲ್ಲಿ ಕಂಡಿದ್ದನ್ನು ಅಲ್ಲೇ ಸರಿಪಡಿಸಬಹುದಿತ್ತು, ಅವರ ಮಾತನ್ನು ಯಾರೂ ಅಲ್ಲಗಳೆಯುತ್ತಿರಲಿಲ್ಲ. ಸೂಜಿಯಲ್ಲಿ ತೆಗೆಯಬಹುದಾದುದಕ್ಕೆ ಕೊಡಲಿ ಯಾಕೆ ಬೇಕು ಎಂದು ಅವರು ಉಪಾಯವೊಂದರ ಮೂಲಕ ಎಲ್ಲವನ್ನೂ ತಿಳಿಗೊಳಿಸಿದರು. ನಮ್ಮ ವ್ಯವಹಾರ, ಸಂವಹನ ಅದೇ ರೀತಿ ಸೂಕ್ಷ್ಮವಾಗಿರಬೇಕು, ಸೂಚ್ಯವಾಗಿರಬೇಕು. ಕಳವಳದ ಪರಿಸ್ಥಿತಿಯಲ್ಲಿ ಗಳಗಳ ಮಾತಿನಿಂದೇನು ಲಾಭ? ನಿರುಮ್ಮಳವಾಗಿ ಕಾರ್ಯ ಮುಗಿಸುವ ಸಂಯಮ ಮತ್ತು ಚಾಕಚಕ್ಯತೆ ನಮ್ಮಲ್ಲಿರಬೇಕು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4	■	5
■	■	6			■	7	8	
9			■	10	11	■		■
	■	■	12	■	13			■
14	15	■	16			■	17	18
■	19			■		■	■	
■		■	20	21	■	22		
23		24	■	25			■	■
	■		■		■	26		

ಎಡದಿಂದ ಬಲಕ್ಕೆ

1. ದೇವತೆ ಎನ್ನಲು ಮತ್ತೊಂದು ಪದ (3)
6. ಕಾಡಿನಲ್ಲಿ ಹುಟ್ಟಿದ್ದಲ್ಲ, ನೀರಿನಲ್ಲಿ ಅರಳಿದ ಹೂವು (3)
7. ಮಂದಿ ಭೇಟಿ ಕೊಡುವ ದೇವಸ್ಥಾನ (3)
9. ವನದ ನಡುವೆಯೇ ಇದೆ ಮುಖ (3)
10. ಮೂರಡಿ ಅಳತೆಯನ್ನು ಹೇಳುತ್ತಿದೆ ಆನೆ (2)
13. ವಸ್ತುಗಳ ವ್ಯಾಪಾರಿ (3)
14. ಎರಡಕ್ಷರ ಸಾಕು ಎಳ್ಳು ಎನ್ನಲು (2)
16. ಮತ್ತೊಂದು ಸದ್ದಿನೊಂದಿಗೆ ಬಂದಿರುವ ಆನೆ (3)
17. ಹಣ್ಣು, ಕಾಯಿಗಳ ಸಾರ (2)
19. ಗಾರೆ ಅಥವಾ ಸಿಮೆಂಟಿನ ಮೇಲುಚಾವಣಿ (3)
20. ಬೇಡವಾದ ವಸ್ತು (2)
22. ಅಕ್ಕನಿಗಿರುವ ಪ್ರೀತಿ (3)
23. ಬೆಂಕಿಯಲ್ಲಿ ಸುಡುವಿಕೆ (3)
25. ನಾಶವಾಗು ಎಂದರ್ಥ (3)
26. ಹಿಂತಿರುಗು ಎನ್ನುವುದು ತಿರುಗಿಬಂದಿದೆ (3)

ಮೇಲಿಂದ ಕೆಳಕ್ಕೆ

2. ಜನರ ವೇಗ (3)
3. ಈ ಜಗದಲ್ಲಿ ಇದೊಂದು ಜಾತಿಯ ಹಕ್ಕಿ (3)
4. ಭೈರಪ್ಪನವರ ಕಾದಂಬರಿಯೊಂದು ತಲೆಕೆಳಗಾಗಿದೆ (2)
5. ಮನ್ಮಥ ಎರಡಕ್ಷರದಲ್ಲಿ ಬಂದಿದ್ದಾನೆ (2)
8. ಕೈಯನ್ನು ಕೊನೆಗೆ ಕಟ್ಟಿಕೊಂಡಿರುವ ಸೂರ್ಯ (4)
9. ಕಿವಿ ಕೊಡಲೇಬಾರದಾದ ಗಾಳಿಸುದ್ದಿ (3)
11. ನಾಟಕ ಮುಗಿದಾಗ ಬಿದ್ದಿತು ತೆರೆ (4)
12. ರಸಗಳನ್ನು ಅನುಭವಿಸದವನು (4)
15. ಬಳ್ಳಿಗಳ ಮಂಟಪವಿದು (4)
18. ಬಿಳಿವಿಷವೆಂದೇ ಇದನ್ನು ಹೇಳಲಾಗುತ್ತದೆ (3)
21. ಮತ್ತೊಬ್ಬರಿಗೆ ಮಾಡುವ ನೆರವು (3)
22. ಬೆಂದಿರುವ ಅಕ್ಕಿಯ ಕಾಳಿದು (3)
23. ದಾನವಾಗಿ ಕೊಟ್ಟ ಭೂಮಿ, ಹಣ ಇತ್ಯಾದಿ (2)
24. ಅಭಿನಯಕಾರ್ತಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ

[illegible]

ಮೇಲಿಂದ ಕೆಳಕ್ಕೆ

[illegible]

ಸಮಾಚಾರ ಸಣ್ಣದಲ್ಲ

ಕಾಮನ್‌ವೆಲ್ತ್: ಭಾರತದ ಆತಿಥ್ಯ ಘೋಷಣೆ ಇಂದು

ದೆಹಲಿ: ಒಂದು ತಿಂಗಳ ಹಿಂದೆಯೇ ಆತಿಥ್ಯ ವಹಿಸಿಕೊಳ್ಳುವ ಹಕ್ಕುಗಳು ಖಚಿತವಾಗಿದ್ದರೂ, 2030ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಭಾರತದ ಬಿಡ್ ಅನ್ನು ಬುಧವಾರ (ನ. 26) ಗ್ಲಾಸ್ಗೋದಲ್ಲಿ ನಡೆಯುವ ಕಾಮನ್‌ವೆಲ್ತ್ ಕ್ರೀಡಾ ಸಾಮಾನ್ಯ ಸಭೆಯಲ್ಲಿ ಔಪ ಚಾರಿಕವಾಗಿ ಅನುಮೋದಿಸಲಾಗುತ್ತದೆ. ಭಾರತ ಕೊನೆಯ ಬಾರಿಗೆ 2010ರಲ್ಲಿ ದೆಹಲಿಯಲ್ಲಿ ಕ್ರೀಡಾ ಕೂಟವನ್ನು ಆಯೋಜಿಸಿತ್ತು, ಈ ಬಾರಿ ಅಹಮದಾ ಬಾದ್‌ನಲ್ಲಿ ನಡೆಯಲಿದೆ. ಬುಧವಾರದ ಸಾಮಾನ್ಯ ಸಭೆಯಲ್ಲಿ ಕಾಮನ್‌ವೆಲ್ತ್ ಕ್ರೀಡಾ ಮಂಡಳಿಯು ಈಗಾಗಲೇ ಶಿಫಾರಸು ಮಾಡಿರುವ ನಿರ್ಧಾರಕ್ಕೆ ಅನುಮೋದನೆಯ ಮುದ್ರೆ ಹಾಕುವ ಔಪಚಾರಿಕ ಪ್ರಕ್ರಿಯೆ ನಡೆಯಲಿದೆ. 2030ರ ಕಾಮನ್‌ವೆಲ್ತ್ ಬಿಡ್‌ಗಾಗಿ, ಭಾರತವು ನೈಜೀರಿಯಾದ ಅಬುಜಾ ನಗರದಿಂದ ಸ್ಪರ್ಧೆಯನ್ನು ಎದುರಿಸಿತ್ತು.

ಇಂದು ಕರ್ನಾಟಕ - ಉತ್ತರಾಖಂಡ ಪಂದ್ಯ

ಅಹಮದಾಬಾದ್: ಮಯಾಂಕ್ ಅಗರ್ವಾಲ್ ನಾಯಕತ್ವದ ಕರ್ನಾಟಕ ತಂಡವು ಬುಧವಾರ ಆರಂಭವಾಗಲಿರುವ ಸೈಯದ್ ಮುಸ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ಕಣಕ್ಕಿಳಿಯಲಿದೆ. 2018-19 ಮತ್ತು 2019-20ರಲ್ಲಿ ಪ್ರಶಸ್ತಿ ಗೆದ್ದಿದ್ದ ಕರ್ನಾಟಕ ತಂಡವು ಮೂರನೇ ಕಿರೀಟದ ಮೇಲೆ ಈ ಸಲ ಕಣ್ಣಿಟ್ಟಿದೆ. 2021-22ರ ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಮನೀಷ್ ಪಾಂಡೆ ನಾಯಕತ್ವದ ತಂಡವು ಸೋತಿತ್ತು, ಇದೀಗ ಮಯಾಂಕ್ ಬಳಗವು ಉತ್ತಮ ಲಯದಲ್ಲಿದೆ. ಈಚೆಗಷ್ಟೇ ಮುಗಿದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಹಂತದಲ್ಲಿ ಕರ್ನಾಟಕ ತಂಡವು ಎಲೈಟ್-ಬಿ ಗುಂಪಿನಲ್ಲಿ ಒಟ್ಟು 21 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಆಡಿರುವ ಐದು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿ, ಮೂರರಲ್ಲಿ ಡ್ರಾ ಮಾಡಿಕೊಂಡಿದೆ, ಅದರಿಂದಾಗಿ ಮಯಾಂಕ್ ಪಡೆ ಅಪಾರ ಆತ್ಮವಿಶ್ವಾಸದಲ್ಲಿದೆ. 'ಡಿ' ಗುಂಪಿನಲ್ಲಿ ಆಡುತ್ತಿರುವ ಕರ್ನಾಟಕ ತಂಡದಲ್ಲಿ ಉತ್ತಮ ಲಯದಲ್ಲಿರುವ ನಾಯಕ ಮಯಾಂಕ್ ಅಗರ್ವಾಲ್, ಅನುಭವಿ ಬ್ಯಾಟರ್ ಕರುಣ್ ನಾಯರ್, ಸ್ಮರಣ್ ರವಿಚಂದ್ರನ್, ಟಿ20 ಪರಿಣತ ಬ್ಯಾಟರ್ ಅಭಿನವ್ ಮನೋಹರ್, ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರ ಮೇಲೆ ಭರವಸೆ ನೆಟ್ಟಿವೆ.

ಇಂದು 2ನೇ ಟೆಸ್ಟ್ ಅಂತಿಮ ದಿನ | ಹರಿಣ ಪಡೆಗೆ 548 ರನ್‌ಗಳ ಮುನ್ನಡೆ

ವೈಟ್‌ವಾಶ್ ಭೀತಿಯಲ್ಲಿ ಭಾರತ

ಗುವಾಹಟಿ: ಭಾರತ ವಿರುದ್ಧದ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ಪ್ರವಾಸಿ ದಕ್ಷಿಣ ಆಫ್ರಿಕಾ ತಂಡ 2ನೇ ಟೆಸ್ಟ್ ಗೆಲ್ಲುವ ಹುರುಪಿನಲ್ಲಿದೆ. 548 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿ ಡಿಕ್ಲೇರ್ ಘೋಷಿಸಿದ್ದು, ದ್ವಿತೀಯ ಇನ್ನಿಂಗ್ಸ್ ಆರಂಭಿ ಸಿದ ಭಾರತ, ಮಂಗಳವಾರದ ದಿನದಾಟದ ಅಂತ್ಯಕ್ಕೆ 27ರನ್‌ಗೆ 2 ವಿಕೆಟ್ ಕಳೆದುಕೊಂಡು ಇನ್ನೂ 522 ರನ್ ಹಿನ್ನಡೆಯಲ್ಲಿದೆ. ಬುಧವಾರ ಅಂತಿಮ ದಿನವಾಗಿದ್ದು ಭಾರತ ವೈಟ್ ವಾಶ್ ಭೀತಿಯಲ್ಲಿದ್ದು, ಅದನ್ನು ತಪ್ಪಿಸಲು ಡ್ರಾ ಮಾಡಿಕೊಳ್ಳುವ ಹರಸಾಹಸ ಪಡಬೇಕಿದೆ.

ದ್ವಿತೀಯ ಇನ್ನಿಂಗ್ಸ್‌ನಲ್ಲಿ 3ನೇ ದಿನ ವಿಕೆಟ್ ನಷ್ಟವಿಲ್ಲದೆ 26 ರನ್ ಗಳಿಸಿದ್ದ ದಕ್ಷಿಣ ಆಫ್ರಿಕಾ, 4ನೇ ದಿನ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿ, 5 ವಿಕೆಟ್‌ಗೆ 260 ರನ್ ಬಾರಿಸಿ ಡಿಕ್ಲೇರ್ ಘೋಷಿಸಿತು. ಆರಂಭಿಕರಾದ ರಿಕಲ್ಟನ್(35) ಮತ್ತು ಮಾರ್ಕ್ರಮ್(29) ತಂಡಕ್ಕೆ ಉತ್ತಮ ಅಡಿಪಾಯ ಒದಗಿಸಿದ್ದರು. ಈ ಜೋಡಿ ಮೊದಲ ವಿಕೆಟ್‌ಗೆ 59 ರನ್‌ಗಳ ಜತೆಯಾಟ ನಡೆಸಿತು, ಬಳಿಕ ಬಂದ

ಶತಕ ವಂಚಿತ ಟ್ರಿಸ್ಟನ್ ಸ್ಟಬ್ಸ್.

ಸ್ಟಬ್ಸ್ 180 ಎಸೆತ ಎದುರಿಸಿ, 9 ಬೌಂಡರಿ ಮತ್ತು ಒಂದು ಸಿಕ್ಸರ್ ನೆರವಿನಿಂದ 90 ರನ್ ಬಾರಿಸಿದರು. ಶತಕದತ್ತ ದಾಪುಗಾಲಿಡುತ್ತಿದ್ದ ಅವರನ್ನು ಆಲ್‌ರೌಂಡರ್ ರವೀಂದ್ರ ಜಡೇಜಾ ಕ್ಲೀನ್ ಬೌಲ್ಡ್ ಮಾಡಿದರು. ನಾಯಕ ಟೆಂಬ ಬವುಮಾ ಅವರ ಆಟ ಹೆಚ್ಚು ಹೊತ್ತು ನಡೆಯಲಿಲ್ಲ. ಕೇವಲ 3 ರನ್‌ಗೆ ವಿಕೆಟ್ ಕಳೆದುಕೊಂಡು ನಿರಾಸೆ ಮೂಡಿಸಿದರು. ಟೋನಿ ಡಿ ಜೋರ್ಜಿ 49 ರನ್ ಬಾರಿಸಿ ವಿಕೆಟ್ ಕಳೆದುಕೊಳ್ಳುತ್ತಿದ್ದಂತೆ ದಕ್ಷಿಣ ಆಫ್ರಿಕಾ ಇನ್ನಿಂಗ್ಸ್ ಡಿಕ್ಲೇರ್ ಘೋಷಿಸಿತು. ಮಲ್ಡರ್ ಅಜೇಯ 35ರನ್ ಗಳಿಸಿದರು.

ಭಾರತದ ಪರ ರವೀಂದ್ರ ಜಡೇಜಾ ಹೊರತು ಪಡಿಸಿ ಉಳಿದ ಬೌಲರ್‌ಗಳು ಯಶಸ್ಸು ಕಾಣಲಿಲ್ಲ. ಜಡೇಜಾ 62 ರನ್‌ಗೆ 4 ವಿಕೆಟ್ ಪಡೆದರು. ಇದೇ ವೇಳೆ ಅವರು ದ.ಆಫ್ರಿಕಾ ವಿರುದ್ಧ ಟೆಸ್ಟ್‌ನಲ್ಲಿ 50ಕ್ಕಿಂತ ಹೆಚ್ಚು ವಿಕೆಟ್ ಕಲೆ ಹಾಕಿದ 5ನೇ ಭಾರತೀಯ ಬೌಲರ್ ಎನಿಸಿಕೊಂಡರು. ವಾಷಿಂಗ್ಟನ್ ಸುಂದರ್ ಒಂದು ವಿಕೆಟ್ ಗಳಿಸಿದರು. ತನ್ನ ಎರಡನೇ ಇನ್ನಿಂಗ್ಸ್ ಆರಂಭಿಸಿದ ಭಾರತಕ್ಕೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಮೊತ್ತ ಕೇವಲ 17 ರನ್ ಇದ್ದಾಗ 13 ರನ್ ಗಳಿಸಿದ್ದ ಯಶಸ್ವಿ ಜೈಸ್ವಾಲ್ ಔಟ್ ಆದರು. ಆ ಬಳಿಕ ತಂಡದ ಮೊತ್ತ 21 ರನ್ ಆದಾಗ 6 ರನ್ ಗಳಿಸಿದ್ದ ಕೆಎಲ್ ರಾಹುಲ್ ಕೂಡಾ ತಮ್ಮ ವಿಕೆಟ್ ಒಪ್ಪಿಸಿದರು.

ದಿನದಾಂತ್ಯಕ್ಕೆ ಸಾಯಿ ಸುದರ್ಶನ್ 2 ರನ್ ಮತ್ತು ಕುಲ್ದೀಪ್ ಯಾದವ್ 4 ರನ್ ಗಳಿಸಿ ಬುಧವಾರಕ್ಕೆ ತಮ್ಮ ವಿಕೆಟ್ ಕಾಯ್ದುಕೊಂಡಿದ್ದಾರೆ. ಭಾರತದ ಬಳಿ ಇನ್ನು 8 ವಿಕೆಟ್ ಮಾತ್ರ ಬಾಕಿ ಇದ್ದು, ದ.ಆಫ್ರಿಕಾ ತಂಡ ಬುಧವಾರ ಈ ಟೆಸ್ಟ್ ಗೆಲ್ಲುವ ನಿರೀಕ್ಷೆಯಲ್ಲಿದೆ.

ಎಲೈಟ್ ಪಟ್ಟಿಗೆ ಜಡೇಜಾ

ಮಂಗಳವಾರ ಪಂದ್ಯದಲ್ಲಿ ರವೀಂದ್ರ ಜಡೇಜಾ ಎರಡು ವಿಕೆಟ್ ಪಡೆಯುತ್ತಿದ್ದಂತೆ ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಕ್ರಿಕೆಟ್‌ನಲ್ಲಿ 50 ವಿಕೆಟ್ ಪೂರ್ತಿಗೊಳಿಸಿದರು, ಆ ಮೂಲಕ ಕುಂಬ್ಳೆ, ಜಾವಗಲ್ ಶ್ರೀನಾಥ್, ಹರ್ಭಜನ್ ಸಿಂಗ್ ಮತ್ತು ಅಶ್ವಿನ್ ನಂತರ ಟೆಸ್ಟ್‌ನಲ್ಲಿ ಕನಿಷ್ಠ 50 ದ.ಆಫ್ರಿಕಾದ ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದ ಐದನೇ ಭಾರತೀಯ ಬೌಲರ್ ಎನಿಸಿದರು. ಅತೀ ಹೆಚ್ಚು ವಿಕೆಟ್ ಪಡೆದ ದಾಖಲೆ ಕುಂಬ್ಳೆ ಹೆಸರಿನಲ್ಲಿದೆ. ಅವರು ದ.ಆಫ್ರಿಕಾ ವಿರುದ್ಧ 21 ಟೆಸ್ಟ್ ಪಂದ್ಯಗಳನ್ನು ಆಡಿ 84 ವಿಕೆಟ್‌ಗಳನ್ನು ಪಡೆದಿದ್ದಾರೆ. 64 ವಿಕೆಟ್ ಪಡೆದಿರುವ ಜಾವಗಲ್ ಶ್ರೀನಾಥ್ ಎರಡನೇ ಸ್ಥಾನದಲ್ಲಿದ್ದಾರೆ. ಹರ್ಭಜನ್ ಸಿಂಗ್ (60) ಮೂರನೇ ಸ್ಥಾನದಲ್ಲಿದ್ದಾರೆ. ಅಶ್ವಿನ್ 57 ವಿಕೆಟ್ ಪಡೆದಿದ್ದಾರೆ.



2026 ಐಸಿಸಿ ಟಿ20 ವಿಶ್ವಕಪ್ ವೇಳಾಪಟ್ಟಿ ಪ್ರಕಟ

ಫೆ.15: ಭಾರತ-ಪಾಕ್ ಪಂದ್ಯ

ದೆಹಲಿ: ಬಹುನಿರೀಕ್ಷಿತ ಟಿ20 ವಿಶ್ವಕಪ್ ಫೆಬ್ರವರಿ 7ರಿಂದ ಆರಂಭವಾಗಲಿದೆ. ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸಲಿರುವ ಈ ಟೂರ್ನಿಯಲ್ಲಿ ಒಟ್ಟು 20 ತಂಡಗಳು ಕಣಕ್ಕಿಳಿಯಲಿವೆ. ಈ ತಂಡಗಳನ್ನು 4 ಗ್ರೂಪ್‌ಗಳಾಗಿ ವಿಂಗಡಿಸಲಾಗಿದೆ.

ನಾಲ್ಕು ಪಂದ್ಯಗಳ ಬಳಿಕ ಟೀಮ್ ಇಂಡಿಯಾ ಸೂಪರ್-8 ಸುತ್ತಿನಲ್ಲಿ ಕಣಕ್ಕಿಳಿಯಲಿದೆ, ಅಂದರೆ 4 ಗ್ರೂಪ್‌ಗಳ ಅಂಕಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ಅಲಂಕರಿಸುವ ತಂಡಗಳು ಮುಂದಿನ ಹಂತಕ್ಕೆ ಅರ್ಹತೆ ಪಡೆಯಲಿವೆ. ಅದರಂತೆ ಮೊದಲ ಸುತ್ತಿನ ಬಳಿಕ ಸೂಪರ್-8 ಹಂತದ ಮುಖಾಮುಖಿ ಆರಂಭವಾಗ ಲಿದೆ. ಸೂಪರ್-8 ಅಂಕಪಟ್ಟಿಯಲ್ಲಿ ಟಾಪ್-4ನಲ್ಲಿ ಕಾಣಿಸಿಕೊಳ್ಳುವ ನಾಲ್ಕು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿದೆ. ಗ್ರೂಪ್-1ರಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಕಾಣಿಸಿಕೊಂಡಿದ್ದು, ಹೀಗಾಗಿ ಮೊದಲ ಸುತ್ತಿನಲ್ಲೇ ಬದ್ಧ ವೈರಿಗಳ ಮುಖಾಮುಖಿಯನ್ನು ವೀಕ್ಷಿಸಬಹುದು.

2024ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಹಾಗೂ ಪಾಕಿಸ್ತಾನ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿದ್ದವು. ಆ ವೇಳೆ ಭಾರತದ ಎದುರು ಪಾಕಿಸ್ತಾನ ಸೋಲು ಅನುಭವಿಸಿತ್ತು, ನಂತರ ಎರಡನೇ ಸುತ್ತಿಗೆ ಪಾಕ್ ಅರ್ಹತೆ ಪಡೆದಿರಲಿಲ್ಲ. ರೋಹಿತ್ ಶರ್ಮಾ ನಾಯಕತ್ವದಲ್ಲಿ ಭಾರತ ಆಗ ಚಾಂಪಿಯನ್ ಆಗಿತ್ತು.

ಈ ಸಲದ ಟಿ20 ವಿಶ್ವಕಪ್‌ನಲ್ಲಿ ಸೂರ್ಯಕುಮಾರ್ ಯಾದವ್ ಭಾರತ ತಂಡವನ್ನು ಮುನ್ನಡೆಸಿದರೆ, ಪಾಕ್ ತಂಡವನ್ನು ಸಲ್ಮಾನ್ ಆಲಿ ಆಘಾ ಮುನ್ನಡೆಸಲಿದ್ದಾರೆ.

ರೋಹಿತ್ ಬ್ರ್ಯಾಂಡ್ ಅಂಬಾಸಿಡರ್: 2024ರ ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) 2026ರ ಟಿ20 ವಿಶ್ವಕಪ್‌ಗೆ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿದೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ಸಂಪೂರ್ಣ ನಿವೃತ್ತಿ ಘೋಷಿಸದೇ ಇರುವಾಗಲೇ ಟಿ20 ವಿಶ್ವಕಪ್‌ಗೆ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡ ಮೊದಲ ಆಟಗಾರ ಎಂಬ ಗೌರವ ರೋಹಿತ್ ಶರ್ಮಾಗೆ ಲಭಿಸಿದೆ.

ಇದೇ ಶುಕ್ರವಾರದಿಂದ ಡಿಸೆಂಬರ್ 10ರ ವರೆಗೆ ತಮಿಳುನಾಡಿನಲ್ಲಿ ನಡೆಯಲಿರುವ ಪಂದ್ಯಾವಳಿ

ಜ್ಯೂ.ಹಾಕಿ ವಿಶ್ವಕಪ್ ಟ್ರೋಫಿ ಸಿಎಂ ಅನಾವರಣ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಪುರುಷರ ಕಿರಿಯರ ಹಾಕಿ ಪಂದ್ಯಾವಳಿಯ ವಿಶ್ವಕಪ್ ಟ್ರೋಫಿಯನ್ನು ಮಂಗಳವಾರ ಅನಾವರಣಗೊಳಿಸಿದರು. ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಗೋವಿಂದ ರಾಜು, ಪದ್ಮಶ್ರೀ ಪುರಸ್ಕೃತ ಧನಂಜಯ್ ಪಿಳ್ಳೈ, ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಡಾ.ಎ.ಬಿ. ಸುಬ್ಬಯ್ಯ, ಕರ್ನಾಟಕ ಹಾಕಿ ಅಸೋಸಿಯೇಷನ್ ಕಾರ್ಯದರ್ಶಿ ಗಳಾದ ವಿ.ಆರ್. ರಘುನಾಥ್ ಅವರ ಸಮ್ಮುಖದಲ್ಲಿ ಟ್ರೋಫಿಯನ್ನು ಅನಾವರಣಗೊಳಿಸಲಾಯಿತು.

ಜೂನಿಯರ್ ಹಾಕಿ ವಿಶ್ವಕಪ್ ಪಂದ್ಯಾವಳಿ ತಮಿಳುನಾಡಿನಲ್ಲಿ ಇದೇ ಶುಕ್ರವಾರದಿಂದ (ನ.28) ಡಿಸೆಂಬರ್ 10ರ ವರೆಗೆ ನಡೆಯಲಿದೆ. ತಮಿಳುನಾಡಿನ ಮಧುರೈ ಮತ್ತು ಚೆನ್ನೈ ನಗರಗಳು ಆತಿಥ್ಯ ವಹಿಸುತ್ತಿದ್ದು, ಒಟ್ಟು 24 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಭದ್ರತಾ ಕಾಳಜಿಯಿಂದಾಗಿ ಪಾಕಿಸ್ತಾನ ಕೊನೆಯ ಹಂತದಲ್ಲಿ ಪಂದ್ಯಾವಳಿಯಿಂದ ಹಿಂದೆ ಸರಿದಿತ್ತು. ಭಾರತವು ಪೂಲ್-ಬಿಯಲ್ಲಿ ಸ್ಪರ್ಧಿಸಲಿದ್ದು, ಚಿಲಿ, ಸ್ವಿಟ್ಜರ್ಲೆಂಡ್ ಮತ್ತು ಒಮಾನ್ ತಂಡಗಳನ್ನು ಎದುರಿಸಲಿದೆ. ಡಿಫೆಂಡರ್ ಮತ್ತು ಡ್ರ್ಯಾಗ್-ಫ್ಲಿಕರ್ ರೋಹಿತ್ ಸಾರಥ್ಯದಲ್ಲಿ ಭಾರತ ತಂಡ ಕಣಕ್ಕಿಳಿಯಲಿದೆ. ಭಾರತದ ಮಾಜಿ ಗೋಲ್‌ಕೀಪರ್ ಪಿ. ಆರ್. ಶ್ರೀಜೇಶ್ ತಂಡದ ಮಾರ್ಗದರ್ಶಕರಾಗಿದ್ದಾರೆ.

'ಉಚಿತ ಟಿಕೆಟ್‌ಗಳನ್ನು ಹಂಚುವ ಮೂಲಕ ವಿದ್ಯಾರ್ಥಿಗಳು, ಯುವ ಅಥ್ಲೀಟ್‌ಗಳು, ಹಾಕಿ ಅಭಿಮಾನಿಗಳು ಹಾಗೂ ಆಟಗಾರರ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ಪಂದ್ಯ ವೀಕ್ಷಿಸಲು ಅವಕಾಶ ಮಾಡಿಕೊಡುವುದು ನಮ್ಮ ಉದ್ದೇಶ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ್ಯೂ.ಹಾಕಿ ವಿಶ್ವಕಪ್ ಟ್ರೋಫಿ ಅನಾವರಣಗೊಳಿಸಿದ ಸಿಎಂ ಸಿದ್ದರಾಮಯ್ಯ.

ಭಾರತ ತಂಡ

- ಗೋಲ್ ಕೀಪರ್‌ಗಳು: ಬಿಕ್ರಮ್‌ಜಿತ್ ಸಿಂಗ್, ಪ್ರಿನ್ಸ್‌ದೀಪ್ ಸಿಂಗ್.
- ಡಿಫೆಂಡರ್ಸ್: ರೋಹಿತ್, ತಾಲೆಂ ಪ್ರಿಯೊಬರ್ತಾ, ಅನ್ಮೋಲ್ ಎಕ್ಕಾ, ಅಮೀರ್ ಅಲಿ, ಸುನೀಲ್ ಪಾಲಾಕ್ಷಪ್ಪ ಬೆನ್ನೂರು, ಶಾರದಾನಂದ ತಿವಾರಿ.
- ಮಿಡ್‌ಫೀಲ್ಡರ್ಸ್: ಅಂಕಿತ್ ಪಾಲ್, ತೌನೋಜಂ ಇಂಗಲೆಂಬ ಲುವಾಂಗ್, ಅದ್ರೋಹಿತ್ ಎಕ್ಕಾ, ರೋಸನ್ ಕುಜೂರ್, ಮನ್ಮೀತ್ ಸಿಂಗ್, ಗುರ್ಜೋತ್ ಸಿಂಗ್.
- ಫಾರ್ವರ್ಡ್ಸ್: ಅರ್ಷದೀಪ್ ಸಿಂಗ್, ಸೌರಭ್ ಆನಂದ್ ಕುಶ್ವಾಹ, ಅಜೀತ್ ಯಾದವ್, ದಿಲ್ರಾಜ್ ಸಿಂಗ್.

ಬಿಸಿಸಿಐ-ಏಷ್ಯನ್ ಪೇಂಟ್ಸ್ ಒಪ್ಪಂದ

ಬಿಸಿಸಿಐ ಅಧಿಕಾರಿಗಳ ಜತೆ ಏಷ್ಯನ್ ಪೇಂಟ್ಸ್ ಸಂಸ್ಥೆಯ ಮುಖ್ಯಸ್ಥರು.

ಮುಂಬೈ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸುಮಾರು 45 ಕೋಟಿ ರು.ಮೌಲ್ಯದ ಒಪ್ಪಂದದಲ್ಲಿ ಏಷ್ಯನ್ ಪೇಂಟ್ಸ್ ಅನ್ನು ತನ್ನ ಹೊಸ ಅಧಿಕೃತ ಪಾಲುದಾರನನ್ನಾಗಿ ಮಾಡಿಕೊಂಡಿದೆ. ಮಂಗಳವಾರ ಮುಂಬೈನಲ್ಲಿ ಔಪಚಾರಿಕವಾಗಿ ಘೋಷಿಸಲಾದ ಈ ಪಾಲುದಾರಿಕೆಯು, ಮಾರ್ಚ್ 2028ರ ವರೆಗೆ ಭಾರತದಲ್ಲಿ ನಡೆಯುವ ಪುರುಷ ಮತ್ತು ಮಹಿಳಾ ದ್ವಿಪಕ್ಷೀಯ ಪಂದ್ಯಗಳನ್ನು ಪ್ರಾಯೋಜಿಸಲಿದೆ.

ಏಷ್ಯನ್ ಪೇಂಟ್ಸ್ ಕ್ಯಾಂಪಾ, ಎಸ್‌ಬಿಐ, ಐಡಿಎಫ್‌ಸಿ ಬ್ಯಾಂಕ್ ಮತ್ತು ಆಟಂಬರ್ಗ್‌ನೊಂದಿಗೆ ಭಾರತೀಯ ಕ್ರಿಕೆಟ್‌ನ ತವರಿನಲ್ಲಿ ಪ್ರಾಯೋಜಕರಾಗಿ ಸೇರಲಿದೆ. ಅಪೋಲೊ ಟಯರ್ಸ್ ಕೆಲವು ತಿಂಗಳ ಹಿಂದೆ ಪ್ರಧಾನ ಜೆರ್ಸಿ ಪ್ರಾಯೋಜಕತ್ವ ವಹಿಸಿಕೊಂಡಿತ್ತು.

ಈ ಪಾಲುದಾರಿಕೆಯ ಕುರಿತು ಮಾತನಾಡಿದ ಏಷ್ಯನ್ ಪೇಂಟ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಮಿತ್ ಸಿಂಗಲ್, 'ಶತಕೋಟಿ ಹೃದಯಗಳನ್ನು ಕ್ರಿಕೆಟ್ ಒಂದುಗೂಡಿಸುತ್ತದೆ ಮತ್ತು ಉತ್ಸಾಹವನ್ನು ಜೀವಂತಗೊಳಿಸುವ ವೇದಿಕೆಯಲ್ಲಿ ಬಿಸಿಸಿಐ ಜತೆ ಪಾಲುದಾರಿಕೆ ಮಾಡಿಕೊಳ್ಳಲು ನಾವು ರೋಮಾಂಚನಗೊಂಡಿದ್ದೇವೆ. ಏಷ್ಯನ್ ಪೇಂಟ್ಸ್ ಜೊತೆ ಜನರು ಹೇಗೆ ಬದುಕುತ್ತಾರೆ, ಅನುಭವಿಸುತ್ತಾರೆ ಮತ್ತು ತಮ್ಮನ್ನು ತಾವು ಹೇಗೆ ವ್ಯಕ್ತಪಡಿಸು ತ್ತಾರೆ ಎಂಬುದನ್ನು ರೂಪಿಸಲು ಬಣ್ಣದ ಶಕ್ತಿ ಯನ್ನು ನಾವು ಯಾವಾಗಲೂ ನಂಬು ತ್ತೇವೆ' ಎಂದು ಹೇಳಿದರು.

ವಿಟಾಕೀಸ್

ಶಿವರಾತ್ರಿಗೆ ಸ್ವಯಂಭು

ನಟ ನಿಖಿಲ್ ಸಿದ್ಧಾರ್ಥ್ ಮತ್ತೊಂದು ಚಿತ್ರದಲ್ಲಿ ಹಂಚಲು ರೆಡಿಯಾಗಿದ್ದಾರೆ. ಈ ಬಾರಿ ಸ್ವಯಂಭು ಸಿನಿಮಾದ ಮೂಲಕ ಅಬ್ಬರಿಸಲಿದ್ದಾರೆ. ಟೈಟಲ್ ಹಾಗೂ ಮೇಕಿಂಗ್ ಮೂಲಕ ಕುತೂಹಲ ಹೆಚ್ಚಿಸಿರುವ ಈ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಫೆಬ್ರವರಿ 13ರ ಶಿವರಾತ್ರಿ ಹಬ್ಬದಂದು ಸ್ವಯಂಭು ವಿಶ್ವಾದ್ಯಂತ ತೆರೆಗೆ ಬರಲಿದೆ. ಬರೋಬ್ಬರಿ ಎರಡು ವರ್ಷದ ಜರ್ನಿ ಇದಾಗಿದ್ದು, ಬಲು ಅದ್ದೂರಿಯಾಗಿ ಮೂಡಿಬಂದಿದೆ. ಇದು ಸಿದ್ಧಾರ್ಥ್ ಅಭಿನಯದ ಇಪ್ಪತ್ತನೇ ಸಿನಿಮಾ ಎಂಬುದು ಶೇಷ. ಸ್ವಯಂಭು ಎಂದರೆ ಸ್ವಯಂ ಹುಟ್ಟು ಎಂದರ್ಥ, ಸಹಸ್ರಮಾನಗಳ ಹಿಂದಿನ ಕಥೆ ಚಿತ್ರದಲ್ಲಿದ್ದು, ಪೌರಾಣಿಕ ಕಥೆಯೊ ಸಿನಿಮಾದಲ್ಲಿ ಬೆರೆತಿದೆ. ಭರತ್ ಕೃಷ್ಣಮಾಚಾರಿ ಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರದಲ್ಲಿ ನಿಖಿಲ್ ಶೇಷ ಗೆಟಪ್‌ನಲ್ಲಿ ಕಂಗೊಳಿಸಿದ್ದಾರೆ. ಸಂಯುಕ್ತಾ ಮೆನನ್ ನಾಯಕಿಯಾಗಿ ಕಾಣಿಸಿಕೊಂಡಿದ್ದು, ನಭಾ ನಟೇಶ್ ಶೇಷ ಪಾತ್ರದಲ್ಲಿ ಅಭಿನುಸಿದ್ದಾರೆ. ಸ್ವಯಂಭು ಸಿನಿಮಾ ನಿಖಿಲ್ ಸಿದ್ಧಾರ್ಥ್ ವೃತ್ತಿ ಜೀವನದ ಬಿಗ್ ಬಜೆಟ್ ಚಿತ್ರವಾಗಿದೆ. ಕೆ.ಕೆ.ಸೆಂಥಿಲ್ ಕುಮಾರ್ ಛಾಯಾಗ್ರಹಣ, ರ ಬಸ್ರೂರ್ ಸಂಗೀತ ನಿರ್ದೇಶನ, ಜಯ್ ಕಾಸ್ಟೆಟ್ಟಿ ಸಂಭಾಷಣೆ ಈ ಚಿತ್ರಕ್ಕಿದೆ. ತ್ಮರಾಜು ಸಂಕಲನದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಪಿಕ್ಸೆಲ್ ಸ್ಟುಡಿಯೊ ಬ್ಯಾನರ್‌ನಲ್ಲಿ ಭುವನ್ ಹಾಗೂ ಶ್ರೀಕರ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಪ್ರತಿತಂತ್ರ ಹೂಡಿದ ಶಶಿಕಾಂತ

ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ತಂತ್ರ ಕಂಟೆಂಟ್ ಮೂಲಕವೇ ಸದ್ದು ಮಾಡುತ್ತಿದೆ. ಸೈಕಲಾಜಿಕಲ್ ಥ್ರಿಲ್ಲರ್ ಕಥೆಯನ್ನು ಒಳ ಗೊಂಡಿರುವ ಈ ಚಿತ್ರವನ್ನು ವಿಶ್ವನಾಥ್ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸಿಲ್ವರ್ ಸ್ಕೈ ಪ್ರೊಡಕ್ಷನ್ ಶಶಿಕಾಂತ ನಾಟಿಕರ್ ಚಿತ್ರ ನಿರ್ಮಾಣ ಮಾಡುವ ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಸಂಶೋಧನಾ ತಂಡ ವೊಂದು ಭೂತ ಪ್ರೇತ ಕುರಿತು ತನಿಖೆ ಪ್ರಾರಂಭ ಮಾಡುತ್ತದೆ. ಆದರೆ ಅವರಿಗೆ ಎದುರಾಗುವ ಅಪರಿಚಿತ ತಂತ್ರ ಶಕ್ತಿ, ಭಯಾನಕ ಅತೀಂದ್ರಿಯ ಅನುಭವಗಳು ಸಂಕಷ್ಟಕ್ಕೆ ಸಿಲುಕಿಸುತ್ತದೆ. ಮುಂದೆ ಒಬ್ಬ ಅಘೋರಿ ಸಹಾಯದಿಂದ ಅಲ್ಲಿ ಬಂಧಿತರಾಗುವ ಆತ್ಮಗಳನ್ನು ಪತ್ತೆ ಹಚ್ಚಿದಂತೆ ಚಿತ್ರವು ಮತ್ತೊಂದು ಗಂಭೀರ ತಿರುವನ್ನು ಪಡೆದುಕೊಳ್ಳುತ್ತದೆ. ನಂತರ ಏನಾಗುತ್ತದೆಂದು ಎಂಬುದೇ ಸಿನಿಮಾದ ಸಸ್ಪೆನ್ಸ್, ಅದನ್ನು ತೆರೆಯಲ್ಲಿ ನೋಡಿಯೇ ತಿಳಿಯಬೇಕು ಎನ್ನುತ್ತಾರೆ ನಿರ್ದೇಶಕರು.

ವಿಕ್ರಾಂತ್, ಸೌಜನ್ಯಾ, ಪಾರು ದಾವಣಗೆರೆ, ಸಂತೋಷ್ ಕೆರಿ ಮುಂತಾದವರು ತಾರಾಗಣದಲ್ಲಿದ್ದಾರೆ. ಸಂಗೀತ ರಮೇಶ್ ಕೃಷ್ಣ, ಛಾಯಾಗ್ರಹಣ ರೋಹನ್ ದೇಸಾ-ವರ್ಧನ್ ಬಾಗಲಕೋಟೆ ಅವರದಾಗಿದೆ. ಈ ಚಿತ್ರದ ಜಾತ್ರಿ ಹೊಂಟೈತಿ.. ಹಾಡು ಈಗಾಗಲೇ ಸಂಗೀತ ಪ್ರಿಯರ ಮನಗೆದ್ದಿದ್ದು, ಬಿಗ್ ಬಾಸ್ ಖ್ಯಾತಿಯ ಮಾಳು ನಿಪನಾಳ ದನಿಯಲ್ಲಿ ಮೂಡಿಬಂದಿದೆ. ಅದರ ಜತೆಗೆ ರಾಜೇಶ್ ಕೃಷ್ಣನ್ ದನಿಯಲ್ಲಿ ಮೂಡಿ ಬಂದಿರುವ ಓಂ ನಮೋ... ಸಾಂಗ್ ಜನಪ್ರಿಯವಾಗಿರುವುದು ಶೇಷ. ಬೆಳಗಾಯ ಸುತ್ತ ಮುತ್ತ ಚಿತ್ರೀಕರಣ ನಡೆಸಲಾಗುತ್ತಿದೆ. ಬಹುತೇಕ ಸಿನಿಮಾದ ಶೂಟಿಂಗ್ ಮುಗಿಸಿರುವ ಚಿತ್ರತಂಡ ಶೀಘ್ರದಲ್ಲಿಯೇ ತಂತ್ರವನ್ನು ತೆರೆಗೆ ತರಲು ಸಿದ್ಧತೆ ನಡೆಸಿದೆ.

ಗುಳಿಗನ ಹಾಡಿಗೆ ಮೆಚ್ಚುಗೆ

ಕೊರಗಜ್ಜ ಚಿತ್ರದ ಗುಳಿಗಾ...ಗುಳಿಗಾ.. ಹಾಡು ಜನಮೆಚ್ಚುಗೆ ಗಳಿಸಿದ್ದು ದಾಖಲೆಯ ವೀಕ್ಷಣೆ ಕಂಡಿದೆ. ಜಾವೆದ್ ಆಲಿ ಮತ್ತು ಸುಧೀರ್ ಅತ್ತಾವರ್ ಹಾಡಿರುವ, ಗೋಪಿ ಸುಂದರ್ ಸಂಗೀತ ಮತ್ತು ಸುಧೀರ್ ಅತ್ತಾವರ್ ಸಾತ್ಯದ ಗುಳಿಗಾ... ಕಿರುಬೆರಳಿನಿಂದ ಅವರ ರಕ್ತವನ್ನೆಲ್ಲ ೀರಿದ...ಎನ್ನುವ ಜನಪದ ಕಥೆ ಗುಳಿಗನ ಹುಟ್ಟಿನ ಕುರಿತಾಗಿದೆ. ಇಂತಹ ಘೋರ ಗುಳಿಗನ ಕೋಲ ಸೇವೆಯೂ ಘನ ಘೋರ ರೂಪದಲ್ಲಿ ತುಳುನಾಡಿನಾದ್ಯಂತ ಆಚರಿಸಲ್ಪಡುತ್ತಿದೆ. ರುದ್ರಭಯಂಕರ ಗುಳಿಗ ದೈವ ಪಂಜುರ್ಲಿ ಜತೆ ಸೇರಿ ಕೊರಗಜ್ಜನನ್ನು

ಗುಳಿಗಾ...ಎಲ್ಲೆಡೆ ಸದ್ದು ಮಾಡುತ್ತಿದೆ. ಭಯಂಕರ ಉಗ್ರ ರೂಪದ ಕಾರಣಿಕದ ಗುಳಿಗ ದೈವ ಈ ಹಾಡಿನಿಂದ ಕೊಗಜ್ಜನ ಮಮೆ ಸಾರಿದಂತಾಗಿದೆ ಎಂದು ನಿರ್ದೇಶಕರು ಸಂತಸ ವ್ಯಕ್ತಪಡಿಸಿದ್ದಾರೆ. ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಗೋಪಿಸುಂದರ್ ಸಂಗೀತ ಸಂಯೋಜನೆಯಲ್ಲಿ ಈ ಹಾಡು ಮೂಡಿಬಂದಿದೆ. ನೆಲವುಲ್ಲ ಸಂಕೆಯ ಇಪ್ಪತ್ತ ನಾಲ್ಕನೆಯು ಮಗನಾಗಿ ಹುಟ್ಟಿದ ಗುಳಿಗ ಹುಟ್ಟುವಾಗಲೇ ಭಯಂಕರ ಹಸಿನಿಂದಾಗಿ ಸಾರ ಕೋಳಿ, ಸಾರ ಕುದುರೆಯ ರಕ್ತ ಹೀರಿದರೂ ಹಸಿವು ನಿಲ್ಲದಿದ್ದಾಗ, ಶ್ರೀಮನ್ನಾರಾಯಣ ದೇವರ ಭೇಟಿಯಾಗುವ ಸನ್ನಿವೇಶವು ಚಿತ್ರದಲ್ಲಿ ಮೂಡಿಬರಲಿದೆ. ಗುಳಿಗ ದೈವದ ರಣ ಭಯಂಕರ ನರ್ತನವನ್ನು ಹಾಲಿ ವುಡ್-ಬಾಲಿವುಡ್‌ನ ಕೊರಿಯೋ ಗ್ರಾಫರ್ ಸಂದೀಪ್ ಸೋಪರ್ಕರ್ ನಿರ್ವಸಿದ್ದು, ಪಂಜುರ್ಲಿಯಾಗಿ ಸರ್ದಾರ್ ಸತ್ಯ ಕಾಣಿಸಿಕೊಂಡಿದ್ದಾರೆ. ಈ ಸನ್ನಿವೇಶವನ್ನು ಮಂಗಳೂರಿನ ಸೋಮೇಶ್ವರ ಕಡಲ ಕಿನಾರೆಯಲ್ಲಿ ಸೆರೆಡಿಯಲಾಗಿದೆ. ತ್ರಿಕ್ರಮ ಸಿನೆಮಾಸ್ ಮತ್ತು ಸಕ್ಸಸ್ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಕೊಗಜ್ಜ ಪ್ಯಾನ್ ಇಂಡಿಯಾ ಮಟ್ಟದಲ್ಲಿ ತೆರೆಗೆ ಬರಲಿದೆ. ಜನವರಿಯಲ್ಲಿ ವಿಶ್ವಾದ್ಯಂತ ಕೊರಗಜ್ಜನ ದರ್ಶನವಾಗಲಿದೆ.

ಬರಲಿದೆ ಸು ಫ್ರಮ್ ಸೋ 2

ಈ ವರ್ಷದ ಸೂಪರ್ ಹಿಟ್ ಸಿನಿಮಾಗಳಲ್ಲಿ ಸು ಫ್ರಮ್ ಸೋ ಕೂಡ ಒಂದು. ಕಾಮಿಡಿ ಹಾರರ್ ಬೆರೆತ ಈ ಸಿನಿಮಾ ಭರ್ಜರಿ ಯಶಸ್ಸು ಕಂಡಿತು. ಗಲ್ಲಾಪೆಟ್ಟಿಗೆ ಕೊಳ್ಳೆ ಹೊಡೆಯಿತು. ಕನ್ನಡದಲ್ಲಿಯೇ ನಿರ್ಮಾಣವಾದ ಸು ಫ್ರಮ್ ಸೋ ಪ್ಯಾನ್ ಇಂಡಿಯಾ ಸಿನಿಮಾಗಿ ಭಾರತೀಯ ಚಿತ್ರದಲ್ಲಿ ಹೊಸ ದಾಖಲೆಯನ್ನೇ ಬರೆಯಿತು. ಜೆಪಿ ತುಮ್ಮಿನಾಡು ಈ ಸಿನಿಮಾದ ಕಥೆ ಬರೆದು ನಿರ್ದೇಶನ ಮಾಡುವುದರ ಜತೆಗೆ ಪ್ರಮುಖ ಪಾತ್ರದಲ್ಲಿಯೂ ನಟಿಸಿದರು. ಸು ಫ್ರಮ್ ಸೋ , ಜೆಪಿಗೆ ಪ್ರಸಿದ್ಧಿ ತಂದುಕೊಟ್ಟಿತು. ಸು ಫ್ರಮ್ ಸೋ ಚಿತ್ರವನ್ನು ಪರಭಾಷೆಯ ಸ್ಟಾರ್ ನಟರೂ ಕೂಡ ಮೆಚ್ಚಿಕೊಂಡಾಡಿದರು. ಈ ಸಿನಿಮಾದ ಬಳಿಕ ಸು ಫ್ರಮ್ ಸೋ 2 ಚಿತ್ರ ತೆರೆಗೆ ಬರಬಹುದೆ ಎಂಬ ಕುತೂಹಲವೂ ಇದೆ. ಹೌದು ಮುಂದೆ ಇದೇ ಸಿನಿಮಾದ ಸೀಕ್ವೆಲ್ ತೆರೆಗೆ ಬರಲಿದೆ. ಆದರೆ ಅದು ಸದ್ಯಕ್ಕಿಲ್ಲ ಎನ್ನುತ್ತಾರೆ ಜೆಪಿ. ಸು ಫ್ರಮ್ ಸೋ ನನಗೆ ಭರ್ಜರಿ ಯಶಸ್ಸು ತಂದುಕೊಟ್ಟಿತು. ಆ ಖುಷಿ ನನಗಿದೆ. ಸಿನಿಮಾದ ಮುಂದುವರಿದ ಭಾಗ ತೆರೆಗೆ ಬರಬಹುದೆ ಎಂದು ಎಲ್ಲರೂ ಕೇಳುತ್ತಿದ್ದಾರೆ. ಆದರೆ ಅದು ಸದ್ಯಕ್ಕಿಲ್ಲ. ಈಗ ಬೇರೆ ಕಥೆಯನ್ನು ಹೆಣೆಯುತ್ತಿದ್ದೇನೆ. ಇದರ ಜತೆಗೆ ಹಲವು ಸಿನಿಮಾಗಳಲ್ಲಿ ಅಭಿನಯಿಸುವ ಅವಕಾಶಗಳು ಬರುತ್ತಿವೆ. ಕನ್ನಡ ಮಾತ್ರವಲ್ಲ ಪರಿಭಾಷೆ ಯಲ್ಲಿಯೂ ಆಫರ್‌ಗಳು ಬರುತ್ತಿವೆ. ನಾನೊಂದಷ್ಟು ಕಥೆಗಳನ್ನು ಕೇಳಿ ಮೆಚ್ಚಿದ್ದೇನೆ ಎನ್ನುತ್ತಾರೆ ಜೆಪಿ. ಅಂತು ಜೆಪಿ ಅವರನ್ನು ಸು ಫ್ರಮ್ ಸೋ ಬಳಿಕ ಹೊಸ ಸಿನಿಮಾಗಳಲ್ಲಿಯೂ ಕಣ್ತುಂಬಿಕೊಳ್ಳಬಹುದಾಗಿದೆ.

ಕರಾವಳಿಯಲ್ಲಿ ಸುಶ್ಮಿತಾ

ಪ್ರಜ್ವಲ್ ದೇವರಾಜ್ ಅಭಿನಯದ ಕರಾವಳಿ ಆರಂಭದಿಂದಲೂ ಕುತೂಹಲ ಮೂಡಿಸುತ್ತಿದೆ. ಗ್ರಾಮೀಣ ನ್ನೆಲೆಯಲ್ಲಿ ಸಾಗುವ ಚಿತ್ರದಲ್ಲಿ ಕಂಬಳದ ಕಥೆಯೂ ಪ್ರಮುಖವಾಗಿದೆ. ಪ್ರಾಣಿ ಮತ್ತು ಮಾನವನ ನಡುನ ಸಂಘರ್ಷದ ಕಥೆಯೂ ಇಲ್ಲಿದೆ. ಗುರುದತ್ ಗಾಣಿಗ ನಿರ್ದೇಶನದ ಈ ಸಿನಿಮಾ ತಾರಾಗಣ ಮೂಲಕವೂ ಕುತೂಹಲ ಮೂಡಿಸುತ್ತಿದೆ. ಪ್ರಜ್ವಲ್ ದೇವರಾಜ್ ಜತೆಗೆ ರಾಜ್.ಬಿ.ಶೆಟ್ಟಿ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಅವರ ಪಾತ್ರದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದ್ದು ರಾಜ್ ಶೆಟ್ಟಿ ಹೊಸ ಗೆಟಪ್‌ನಲ್ಲಿ ಕಂಗೊಳಿಸಿದ್ದಾರೆ. ಇದರ ಜತೆಗೆ ಮಿತ್ರ, ರಮೇಶ್ ಇಂದಿರಾ ಕೂಡ ಅಭಿನುಸುತ್ತಿದ್ದಾರೆ. ಸಂಪದಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಇವರ ಜತೆಗೆ ಈಗ ಚಿತ್ರತಂಡ ಮತ್ತೊಂದು ಪಾತ್ರವನ್ನು ಪರಿಚುಸಿದೆ. ಸುಶ್ಮಿತಾ ಭಟ್ ಕರಾವಳಿ ಸಿನಿಮಾದಲ್ಲಿ ನಟಿಸಿದ್ದು ಅವರ ಪಾತ್ರದ ಫಸ್ಟ್‌ಲುಕ್ ರಿಲೀಸ್ ಮಾಡಿದೆ, ಸುಶ್ಮಿತಾ ಈ ಚಿತ್ರದಲ್ಲಿ ಭೂ ಎಂಬ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಮುಗ್ಧತೆಯ ಹುಡುಗಿಯಾಗಿ ಕಾಣಿಸಿಕೊಂಡಿರುವ ಸುಶ್ಮಿತಾ ಕರಾವಳಿಯಲ್ಲಿ ನಟಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸುತ್ತಾರೆ. ಅವರ ಪಾತ್ರಕ್ಕೆ ಸಾಕಷ್ಟು ಮಹತ್ವವೂ ಇದೆ. ಕರಾವಳಿ ಹೈಬಜೆಟ್ ಸಿನಿಮಾ ವಾಗಿದ್ದು ಹಲವು ದಿನಗಳ ಕಾಲ ಚಿತ್ರದ ಶೂಟಿಂಗ್ ನಡೆಸಲಾಗಿದೆ. ಇದು ಪ್ರಜ್ವಲ್ ದೇವರಾಜ್ ವೃತ್ತಿ ಜೀವನದಲ್ಲಿಯೇ ವಿಭಿನ್ನ ಸಿನಿಮಾ ವಾಗಿದ್ದು, ಪ್ರಜ್ವಲ್‌ಗೆ ಬಿಗ್ ಬ್ರೇಕ್ ನೀಡುವ ನಿರೀಕ್ಷೆಯೂ ಇದೆ.

ಚೋಮನದುಡಿ ನೆನಪಿಸುವ ಬಿಚ್ಚುಗತ್ತಿಯ ಬಂಟ

ಜ್ಞಾನಪೀಠ ಪ್ರಶಸ್ತಿ ಜೇತ ಸಾತಿ ಡಾ. ಶಿವರಾಮಕಾರಂತರ ಚೋಮನದುಡಿ ಕೃತಿ ಸಿನಿಮಾ ರೂಪದಲ್ಲಿಯೂ ತೆರೆಗೆ ಬಂದಿತ್ತು. ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಯನ್ನು ಪಡೆದುಕೊಂಡಿತ್ತು. ಈಗ ಬರೋಬ್ಬರಿ ಐವತ್ತು ವರ್ಷಗಳ ಬಳಿಕ ಇದೇ ಕಥೆಯನ್ನು ನೆನಪಿಸುವ ಬಿಚ್ಚುಗತ್ತಿಯ ಬಂಟನ ಬಲ್ಲರೇನ ಚಿತ್ರವೊಂದು ತೆರೆಗೆ ಬರಲು ಅಣಿಯಾಗಿದೆ. ದುಡಿಯ ಸದ್ದಿಗೆ ಕ್ರಾಂತಿಯ ಎದ್ದಿದೆ ಎಂಬ ಅಡಿಬರಹ ಈ ಚಿತ್ರಕ್ಕಿದೆ. ಇದನ್ನು ಗಮನಿಸಿದರೆ ಸಿನಿಮಾದಲ್ಲಿ ಹೋರಾಟದ ಕಥೆ ಇದೆ ಎಂಬುದು ತಿಳಿಯುತ್ತದೆ. ಅನಿಲ್ ದೋರಸಮುದ್ರ ನಿರ್ದೇಶನ ಮಾಡುವ ಜತೆಗೆ ದೋರಸಮುದ್ರ ಪಿಕ್ಚರ್ಸ್ ಬ್ಯಾನರ್‌ನಲ್ಲಿ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಸದ್ಯ ಈ ಸಿನಿಮಾದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ. ರಿಯ ನಟ ಸುಂದರ್ ರಾಜ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಚೋಮನ ದುಡಿ ಶತಮಾನಗಳು ಕಳೆದರೂ ಮನದಲ್ಲಿ ಉಳಿಯುವ ಸಿನಿಮಾ. ಈಗ ಅದೇ ಕಥೆಯನ್ನು ನೆನೆಪಿಸುವ ಬಿಚ್ಚುಗತ್ತಿಯ ಬಂಟನ ಬಲ್ಲರೇನ ಚಿತ್ರ ತೆರೆಗೆ ಬರುತ್ತಿದೆ. ಇಂದಿನ ತಲೆಮಾರಿಗೆ ಅರ್ಥವಾಗುವಂತೆ ಸಿನಿಮಾ ಮೂಡಿ ಬಂದಿದೆ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ. ಸಿನಿಮಾ ನೋಡಲು ನಾನು ಕಾತರನಾಗಿದ್ದೇನೆ ಎಂದು ಸುಂದರ್‌ರಾಜ್ ಹೇಳಿದರು.

ನಮ್ಮ ಸಿನಿಮಾವು ಚೋಮನದುಡಿಯ ಮುಂದುವರಿದ ಭಾಗ ಎನ್ನಬಹುದು. ಮಂದಗಾು ಚೋಮ ಹೋರಾಟ ಮಾಡಿದರೂ ಭೂು ಸಿಗುವುದಿಲ್ಲ. ಆತನ ಮಗ ಕಾಳ ನ್ಯಾಯಕ್ಕಾಗಿ ತೀವ್ರಗಾುಯಾಗಿ ಬಿಚ್ಚುಗತ್ತಿಯನ್ನು ಉಪಯೋಗಿಸಿದಾಗ ಏನಾಗುತ್ತದೆ. ಅಂತಿಮವಾಗಿ ಅಪ್ಪನ ಆಸೆಯನ್ನು ಕಾಳ ಮತ್ತು ಬೆಳ್ಳಿ ಈಡೇರಿಸಿ ಕೊಳ್ಳುತ್ತಾರಾ ಎಂಬುದನ್ನು ಕರ್ಮಯಲ್ ರೂಪದಲ್ಲಿ ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಕಾರಂತ ಟ್ರಸ್ಟ್‌ನ ಪ್ರಮುಖರು ಸಿನಿಮಾ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾವಗಳ ತೀವ್ರತೆಯನ್ನು ಅಚ್ಚುಕಟ್ಟಾಗಿ ಸೆರೆಡಿಯ ಲಾಗಿದೆ ಎಂದು ನಿರ್ದೇಶಕ ಅನಿಲ್ ದೊರ ಸಮುದ್ರ ಮಾತಿ ನೀಡಿದರು. ಕಾಳನಾಗಿ ಚೆಲುವರಾಜ್ ಗೌಡ ಕಾಣಿಸಿಕೊಂಡಿದ್ದು, ಬಾಸುಮ ಕೊಡಗು, ಸ್ವೀಡಲ್ ಡಿಸೋಜಾ, ಶೈಲೇಶ್ ಕೆಂಗೇರಿ, ತಾರಾನಾಥ ಬೋಳಾರ್, ಪುಣ್ಯಕೊಟ್ಯಾನ್, ಗೋಪಾಲ್ ಮೂಲ್ಯ ಮುಂತಾದವರು ಅಭಿನುಸಿದ್ದಾರೆ. ಪ್ರದ್ಯುಮ್ನ ನರಹಳ್ಳಿ-ದೀಪಕ್ ಕೋಟ್ಯಾನ್ ಸಾತ್ಯದ ಹಾಡುಗಳಿಗೆ ಶ್ರೀಶಾಸ್ತ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಲ್ಯಾಮರಿಂಜ್ ನಿರ್ಮಲ್, ಸಂಕಲನ ಅನಿಲ್, ಮಾನ್ ಜೋಬಲ್ ಪಿಂಟೋ ಅವರದಾಗಿದೆ. ಕಾರ್ಕಳದ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.